● www.prajavani.net

/prajavani.net @prajavani /prajavani http://bit.ly/Prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಸ್ಪರ್ಧಾ ವಾಣಿ
ಗ್ರೂಪ್ 'ಸಿ' ವೃಂದದ ತಾಂತ್ರಿಕೇತರ ಹುದ್ದೆಗಳ ನೇಮಕಕ್ಕಾಗಿ ನಡೆಸುವ ಸ್ಪರ್ಧಾತ್ಮಕ ಪರೀಕ್ಷೆಗೆ 'ಕರ್ನಾಟಕ ಆರ್ಥಿಕತೆ, ಅದರ ಬಲ ಹಾಗೂ ದೌರ್ಬಲ್ಯ' ವಿಷಯದ ಕುರಿತಾದ ಬಹು ಆಯ್ಕೆ ಪ್ರಶ್ನೆಗಳು



ಆಳ-ಅಗಲ
ತೈಲ ದೊರೆಗಳಿಗೆ ಬಿಸಿ ತಾಗಿಸುವ ತಂತ್ರ

ಆರೆಸ್ಸೆಸ್‌ಗೆ ಸೇರಿದವನೆಂಬ ಅಪಪ್ರಚಾರ: ಮಹೇಶ ಜೋಶಿ 6

'ಹೈಕಮಾಂಡ್‌ಗೆ ಹೆದರಿಸುತ್ತಾರೋ, ಹೆದರತಾರೋ' 10

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
58,341 ▼	17,415 ▼	₹48,980 (ಬೆಂಗಳೂರು) ▼	₹64,600 (ಬೆಂಗಳೂರು) ▼	74.40 ▲

15 ಅಧಿಕಾರಿಗಳು, ಸಿಬ್ಬಂದಿ ಮೇಲೆ ಎಸಿಬಿ ದಾಳಿ ● ಇಬ್ಬರು ಅಧಿಕಾರಿಗಳು ವಶಕ್ಕೆ?

ಕೋಟಿ ಕಾಂಚಾಣ, ರಾಶಿ ಬಂಗಾರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೃಷಿ ಇಲಾಖೆಯ ಜಂಟಿ ನಿರ್ದೇಶಕರ ಮನೆಯಲ್ಲಿ ಬೇರೆ ಬೇರೆ ತೂಕದ ಚಿನ್ನದ ಗಟ್ಟಿಗಳ ರಾಶಿ, ಲೋಕೋಪಯೋಗಿ ಇಲಾಖೆಯ ಕಿರಿಯ ಎಂಜಿನಿಯರ್ ಮನೆಯ ಪ್ಲಂಬಿಂಗ್ ಪೈಪ್‌ನಲ್ಲಿ ಅಡಗಿಸಿಟ್ಟ ಕಂತೆ ಕಂತೆ ನೋಟುಗಳು, ಕೆಎಎಸ್ ಅಧಿಕಾರಿ ಮನೆಯ ಕಪಾಟಿನಲ್ಲಿ ಲಕ್ಷಗಟ್ಟಲೆ ನಗದು, ಒಬ್ಬೊಬ್ಬರ ಬಳಿಯೂ ನಾಲ್ಕಾರು ನಿವೇಶನ, ಎಕರೆಗಟ್ಟಲೆ ಕೃಷಿ ಜಮೀನು...

ಆದಾಯಕ್ಕಿಂತ ಹೆಚ್ಚು ಆಸ್ತಿ ಹೊಂದಿರುವ ಆರೋಪದ ಮೇಲೆ ರಾಜ್ಯ ಸರ್ಕಾರದ ವಿವಿಧ ಇಲಾಖೆಗಳ 15 ಮಂದಿ ಅಧಿಕಾರಿಗಳು, ಸಿಬ್ಬಂದಿಯ ಮೇಲೆ ಭ್ರಷ್ಟಾಚಾರ ನಿಗ್ರಹ ದಳ (ಎಸಿಬಿ) ಬುಧವಾರ ನಡೆಸಿದ ದಾಳಿ ವೇಳೆ ಪತ್ತೆಯಾಗಿರುವ ಚರ ಮತ್ತು ಸ್ಥಿರಾಸ್ತಿಯ ಸಂಪತ್ತಿನ ಸಾಮ್ರಾಜ್ಯದ ಸ್ಥೂಲ ನೋಟ. ಸರ್ಕಾರಿ ಸೇವೆಯಿಂದ ಕೆಲವೇ ತಿಂಗಳ ಹಿಂದೆ ನಿವೃತ್ತರಾಗಿರುವ ಇಬ್ಬರ ಮೇಲೂ ದಾಳಿ ನಡೆದಿದೆ.

ರಾಜ್ಯದ 68 ಸ್ಥಳಗಳಲ್ಲಿ ಬುಧವಾರ ಬೆಳಿಗ್ಗೆಯಿಂದ ಸಂಜೆಯವರೆಗೂ ಏಕಕಾಲಕ್ಕೆ ಶೋಧ ನಡೆದಿದೆ. ಆರೋಪಿತರ ಮನೆಗಳು, ಅವರ ನಿಕಟ ವರ್ತಿಗಳ ಮನೆಗಳು ಮತ್ತು ಇತರ ಸ್ಥಳಗಳಲ್ಲಿ ಒಟ್ಟು ₹ 1.53 ಕೋಟಿ ಮೊತ್ತದ ನಗದು, 16.49 ಕೆ.ಜಿ. ಚಿನ್ನ, 58.76 ಕೆ.ಜಿ. ಬೆಳ್ಳಿ ಮತ್ತು ₹ 2.34 ಕೋಟಿ ಮೌಲ್ಯದ ಗೃಹೋಪಯೋಗಿ ವಸ್ತುಗಳನ್ನು ಪತ್ತೆ ಮಾಡಲಾಗಿದೆ ಎಂದು ಎಸಿಬಿ ತಿಳಿಸಿದೆ.

ದಾಳಿಗೊಳಗಾದ ಎಲ್ಲರ ಬಳಿಯಲ್ಲೂ ನಿವೇಶನ, ಮನೆ, ಕೃಷಿ ಜಮೀನು, ವಾಹನ ಹಾಗೂ ಬ್ಯಾಂಕ್ ಖಾತೆಗಳಲ್ಲಿ ಹಣವಿರುವುದು ಪತ್ತೆಯಾಗಿದೆ. ಬೃಹತ್ ಪ್ರಮಾಣದ ದಾಖಲೆಗಳನ್ನು ವಶಪಡಿಸಿಕೊಂಡಿದ್ದು, ಸ್ಥಿರಾಸ್ತಿ, ವಾಹನ ಮತ್ತು ಬ್ಯಾಂಕ್ ಖಾತೆಗಳಲ್ಲಿರುವ ಠೇವಣಿಗೆ ಸಂಬಂಧಿಸಿದ ಖಚಿತ ಮೌಲ್ಯ ಇನ್ನಷ್ಟೇ ಗೊತ್ತಾಗಬೇಕಿದೆ ಎಂದು ತನಿಖಾ ಸಂಸ್ಥೆ ಹೇಳಿದೆ.

ಆದಾಯ ಮೀರಿ ಅಪಾರ ಆಸ್ತಿ ಹೊಂದಿರುವ ಆರೋಪದ ಮೇಲೆ ಶಾಂತಗೌಡ ಬಿರಾದಾರ ಮತ್ತು ರುದ್ರೇಶಪ್ಪ ಅವರನ್ನು ಎಸಿಬಿ ಅಧಿಕಾರಿಗಳು ಬುಧವಾರ ರಾತ್ರಿ ವಶಕ್ಕೆ ಪಡೆದಿದ್ದಾರೆ. ಇಬ್ಬರನ್ನೂ ಬಂಧಿಸುವ ಸಾಧ್ಯತೆ ಇದೆ.

'ಡಿ' ದರ್ಜೆ ನೌಕರನ ಬಳಿ 6 ಮನೆ: ಯಶವಂತಪುರದ ಮಾರಪ್ಪನಪಾಳ್ಯದಲ್ಲಿರುವ ಬಿಬಿಎಂಪಿ ಪ್ರೌಢಶಾಲೆಯ 'ಡಿ' ದರ್ಜೆ ನೌಕರ ಜಿ.ವಿ.ಗಿರಿಯು ನಗರದಲ್ಲಿ ಆರು ಮನೆ ಹೊಂದಿರುವುದು ಪತ್ತೆಯಾಗಿದೆ. ತಲಾ ನಾಲ್ಕು ಕಾರು ಮತ್ತು ದ್ವಿಚಕ್ರ ವಾಹನಗಳೂ ಇವೆ.

ಬಿಬಿಎಂಪಿ ಕೇಂದ್ರ ಕಚೇರಿಯ ಪ್ರಥಮ ದರ್ಜೆ ಸಹಾಯಕ ಮಾಯಣ್ಣ ಬೆಂಗಳೂರಿನಲ್ಲಿ ನಾಲ್ಕು ಮನೆ ಹೊಂದಿದ್ದು, ವಿವಿಧೆಡೆ ಆರು ನಿವೇಶನ, ಕುಣಿಗಲ್‌ನಲ್ಲಿ 2 ಎಕರೆ ಕೃಷಿ ಜಮೀನು ಹೊಂದಿರುವ ದಾಖಲೆಗಳನ್ನು ತನಿಖಾ ತಂಡ ಪತ್ತೆಮಾಡಿದೆ. ಇವರು ಇತ್ತೀಚೆಗೆ ನಡೆದ ಕನ್ನಡ ಸಾಹಿತ್ಯ ಪರಿಷತ್ ಕೇಂದ್ರ ಸಮಿತಿ ಅಧ್ಯಕ್ಷ ಸ್ಥಾನದ ಚುನಾವಣೆಗೆ ಸ್ಪರ್ಧಿಸಿದ್ದರು.

ಕೃಷಿ ಇಲಾಖೆಯ ಗದಗ ಜಿಲ್ಲಾ ಜಂಟಿ ನಿರ್ದೇಶಕ ರುದ್ರೇಶಪ್ಪ ಅವರ ಶಿವಮೊಗ್ಗದ ಮನೆಯಲ್ಲಿ ಬುಧವಾರ ಎಸಿಬಿ ಅಧಿಕಾರಿಗಳು ವಶಪಡಿಸಿಕೊಂಡಿರುವ ಚಿನ್ನಾಭರಣ ಮತ್ತು ಚಿನ್ನದ ಗಟ್ಟಿಗಳು (ಎಡ ಚಿತ್ರ) ಕಲಬುರಗಿಯಲ್ಲಿ ಕಿರಿಯ ಎಂಜಿನಿಯರ್ ಶಾಂತಗೌಡ ಬಿರಾದಾರ ಮನೆಯ ಪೈಪ್ ಕತ್ತರಿಸಿ ₹500ರ ನೋಟುಗಳನ್ನು ಎಸಿಬಿ ಸಿಬ್ಬಂದಿ ಬಕೆಟ್‌ನಲ್ಲಿ ಸಂಗ್ರಹಿಸಿದರು

9.4 ಕೆ.ಜಿ. ಚಿನ್ನಾಭರಣ ಪತ್ತೆ

ಕೃಷಿ ಇಲಾಖೆಯ ಗದಗ ಜಿಲ್ಲೆಯ ಜಂಟಿ ನಿರ್ದೇಶಕ ಟಿ.ಎಸ್. ರುದ್ರೇಶಪ್ಪ ಅವರಿಗೆ ಸೇರಿರುವ ಶಿವಮೊಗ್ಗದ ಚಾಲುಕ್ಯ ನಗರದ ಮನೆಯಲ್ಲಿ 9.4 ಕೆ.ಜಿ. ತೂಕದ ಚಿನ್ನಾಭರಣ ಪತ್ತೆಯಾಗಿದೆ. ಅಧಿಕಾರಿಯ ಮನೆಯಲ್ಲಿ ಚಿನ್ನದ ಗಟ್ಟಿಗಳನ್ನು ಸಂಗ್ರಹಿಸಿಟ್ಟುಕೊಂಡಿರುವುದು ಶೋಧದಲ್ಲಿ ಬಯಲಾಗಿದೆ. ₹15.94 ಲಕ್ಷ ನಗದು ಕೂಡ ಮನೆಯಲ್ಲಿತ್ತು.

ಶೋಧ ನಡೆಸಿರುವ ಮನೆಯ ಮೌಲ್ಯ ₹ 3.5 ಕೋಟಿ ಎಂದು ಅಂದಾಜಿಸಲಾಗಿದೆ. ಶಿವಮೊಗ್ಗದ ಗೋಪಾಳದಲ್ಲಿ ಆರೋಪಿ ಅಧಿಕಾರಿ ಮತ್ತೊಂದು ಮನೆ ಹೊಂದಿದ್ದಾರೆ. ಆದರೆ, ಮನೆಯ ಬಾಗಿಲಿಗೆ ಬೀಗ ಹಾಕಿದ್ದ ಕಾರಣ ಬುಧವಾರ ಶೋಧ ಕಾರ್ಯಾಚರಣೆ ಪೂರ್ಣಗೊಳಿಸಲು ಸಾಧ್ಯವಾಗಿಲ್ಲ ಎಂದು ತನಿಖಾ ತಂಡದ ಮೂಲಗಳು ತಿಳಿಸಿವೆ.

ಕೋಟಿಗಟ್ಟಲೆ ಆಸ್ತಿ

ಮಂಡ್ಯ ಜಿಲ್ಲೆಯ ಹೇಮಾವತಿ ಎಡದಂಡೆ ಕಾಲುವೆ-3ರ ಕಾರ್ಯ ನಿರ್ವಾಹಕ ಎಂಜಿನಿಯರ್ ಶ್ರೀನಿವಾಸ್ ಕೆ. ಮೈಸೂರಿನಲ್ಲಿ ಎರಡು ಮನೆ, ಮೈಸೂರು ಜಿಲ್ಲೆಯಲ್ಲಿ 4 ಎಕರೆ 34 ಗುಂಟೆ ಕೃಷಿ ಜಮೀನು, ನಂಜನಗೂಡಿನಲ್ಲಿ ಫಾರ್ಮ್ ಹೌಸ್ ಹೊಂದಿರುವುದು ಪತ್ತೆಯಾಗಿದೆ.

6ನೇ ಪುಟ ನೋಡಿ

ಪೈಪ್‌ನಲ್ಲಿ ಬಚ್ಚಿಟ್ಟಿದ್ದ ₹ 13 ಲಕ್ಷ !

ಲೋಕೋಪಯೋಗಿ ಇಲಾಖೆಯ ಜೇವರ್ಗಿ ಉಪ ವಿಭಾಗದ ಕಿರಿಯ ಎಂಜಿನಿಯರ್ ಶಾಂತಗೌಡ ಎಂ. ಬಿರಾದಾರ ಮನೆ ಮೇಲೆ ಬೆಳಿಗ್ಗೆ 5.30ಕ್ಕೆ ಎಸಿಬಿ ಅಧಿಕಾರಿಗಳು ದಾಳಿ ಮಾಡಿದ್ದರು. ಮನೆಯಲ್ಲಿದ್ದವರು 20 ನಿಮಿಷ ಬಾಗಿಲು ತೆರೆಯದೇ ಸತಾಯಿಸಿದರು. ಶೋಧ ನಡೆಸುತ್ತಿದ್ದ ವೇಳೆ ಶಾಂತಗೌಡರ ಮಗ ಪ್ಲಂಬಿಂಗ್ ಪೈಪ್ ಒಂದರ ಬಳಿಯೇ ತಿರುಗಾಡುತ್ತಿದ್ದುದು, ತನಿಖಾ ತಂಡದ ಸಂಶಯಕ್ಕೆ ಕಾರಣವಾಯಿತು.

ಪೈಪ್ ಕತ್ತರಿಸಿ ನೋಡಿದಾಗ ₹ 500ರ ನೋಟುಗಳ ಕಂತೆಗಳಿರುವುದು ಪತ್ತೆಯಾಯಿತು. ಒಟ್ಟು ₹ 13 ಲಕ್ಷವನ್ನು ಅದರೊಳಗೆ ಬಚ್ಚಿಡಲಾಗಿತ್ತು. ಪೈಪ್ ಕತ್ತರಿಸಿದ ಎಸಿಬಿ ಸಿಬ್ಬಂದಿ, ಬಕೆಟ್‌ನಲ್ಲಿ ನೋಟಿನ ಕಂತೆಗಳನ್ನು ತುಂಬಿಕೊಂಡರು. ಈ ಹಣವೂ ಸೇರಿದಂತೆ ₹ 54.50 ಲಕ್ಷ ನಗದು ಅವರ ಮನೆಯಲ್ಲಿ ಪತ್ತೆಯಾಗಿದೆ. ಕಲಬುರಗಿಯಲ್ಲಿ ಎರಡು ಮನೆ, ಬೆಂಗಳೂರಿನಲ್ಲಿ ಒಂದು ನಿವೇಶನ, ವಿವಿಧೆಡೆ 36 ಎಕರೆ ಕೃಷಿ ಜಮೀನು ಹೊಂದಿರುವ ದಾಖಲೆಗಳನ್ನೂ ಎಸಿಬಿ ಪತ್ತೆಹಚ್ಚಿದೆ.

ಪೈಪ್ ನಲ್ಲಿ ಸಿಕ್ಕು ಲಕ್ಷ ಲಕ್ಷ..!
ವಿಡಿಯೊ ನೋಡಲು ಕೋಡ್ ಸ್ಕ್ಯಾನ್ ಮಾಡಿ
ಪ್ರಜಾವಾಣಿ ನೋಡಿಯೊ

5 ಕೆ.ಜಿ. ಉಚಿತ ಧಾನ್ಯ ಮಾರ್ಚ್‌ವರೆಗೆ ವಿಸ್ತರಣೆ

ಪ್ರಧಾನ ಮಂತ್ರಿ ಗರೀಬ್ ಕಲ್ಯಾಣ್ ಅನ್ನ ಯೋಜನೆ

ನವದೆಹಲಿ (ಪಿಟಿಐ): ಪ್ರಧಾನ ಮಂತ್ರಿ ಗರೀಬ್ ಕಲ್ಯಾಣ್ ಅನ್ನ ಯೋಜನೆ ಅಡಿಯಲ್ಲಿ, ಪ್ರತೀ ವ್ಯಕ್ತಿಗೆ ಪ್ರತೀ ತಿಂಗಳು ಐದು ಕೆ.ಜಿ. ಆಹಾರ ಧಾನ್ಯವನ್ನು ಉಚಿತವಾಗಿ ನೀಡುವುದನ್ನು 2022ರ ಮಾರ್ಚ್‌ವರೆಗೆ ವಿಸ್ತರಿಸಲಾಗಿದೆ. ಈ ನಿರ್ಧಾರದಿಂದಾಗಿ ಸರ್ಕಾರದ ಬೊಕ್ಕಸಕ್ಕೆ ₹53,344 ಕೋಟಿ ಹೊರೆ ಬೀಳಲಿದೆ. ಈಗಿನ ವಿಸ್ತರಣೆಯಿಂದಾಗಿ ಯೋಜನೆಯ ಒಟ್ಟು ವೆಚ್ಚವು ₹2.6 ಲಕ್ಷ ಕೋಟಿಗೆ ಹೆಚ್ಚಲಿದೆ.

ರಾಷ್ಟ್ರೀಯ ಆಹಾರ ಭದ್ರತೆ ಕಾಯ್ದೆ (ಎನ್‌ಎಫ್‌ಎಸ್‌ಎ) ವ್ಯಾಪ್ತಿಯಲ್ಲಿ ಬರುವ 80 ಕೋಟಿಗೂ ಹೆಚ್ಚು ಜನರಿಗೆ ಯೋಜನೆಯಿಂದ ಅನುಕೂಲ ಆಗಲಿದೆ. ಪ್ರಧಾನಿ ನರೇಂದ್ರ ಮೋದಿ ನೇತೃತ್ವದಲ್ಲಿ ಬುಧವಾರ ನಡೆದ ಕೇಂದ್ರ ಸಚಿವ ಸಂಪುಟ ಸಭೆಯಲ್ಲಿ ಈ ನಿರ್ಧಾರ ತೆಗೆದುಕೊಳ್ಳಲಾಗಿದೆ.

ಕೋವಿಡ್ ಸಾಂಕ್ರಾಮಿಕವು ತೀವ್ರವಾಗಿದ್ದ ಸಂದರ್ಭದಲ್ಲಿ ಸಂಕಷ್ಟಕ್ಕೆ ಒಳಗಾದ ಬಡಜನರಿಗೆ ನೆರವಾಗುವುದಕ್ಕಾಗಿ 2020ರ ಮಾರ್ಚ್‌ನಲ್ಲಿ ಈ ಯೋಜನೆಯನ್ನು ಘೋಷಿಸಲಾಗಿತ್ತು. ಎನ್‌ಎಫ್‌ಎಸ್‌ಎ ಅಡಿಯಲ್ಲಿ ₹2ರಿಂದ ₹3ರ ದರದಲ್ಲಿ ಜನರಿಗೆ ನೀಡಲಾಗುತ್ತಿರುವ ಆಹಾರ ಧಾನ್ಯದ ಜತೆಗೆ ಹೆಚ್ಚುವರಿಯಾಗಿ ಐದು ಕೆ.ಜಿಯನ್ನು ನೀಡಲಾಗುತ್ತಿದೆ.

ಈ ಹಿಂದೆ, ಹಲವು ಬಾರಿ ಈ ಯೋಜನೆ ಅವಧಿ ವಿಸ್ತರಣೆ ನಡೆದಿದೆ.

ಯೋಜನೆಯ ಮೊದಲ ಹಂತವು 2020ರ ಏಪ್ರಿಲ್-ಜೂನ್, ಎರಡನೇ ಹಂತವು 2020ರ ಜುಲೈ-ನವೆಂಬರ್, ಮೂರನೇ ಹಂತವು 2021ರ ಮೇ-ಜೂನ್ ಮತ್ತು ನಾಲ್ಕನೇ ಹಂತವು 2021ರ ಜುಲೈ-ನವೆಂಬರ್‌ವರೆಗೆ ಜಾರಿಯಲ್ಲಿತ್ತು. ಈ ತಿಂಗಳಲ್ಲಿ ಯೋಜನೆಯು ಕೊನೆಯಾಗಬೇಕಿತ್ತು. ಈಗ, ಇನ್ನೂ ನಾಲ್ಕು ತಿಂಗಳಿಗೆ ಯೋಜನೆಯನ್ನು ವಿಸ್ತರಿಸಲಾಗಿದೆ.

ಕಾಯ್ದೆ ರದ್ದು: ಸಂಪುಟ ಅನುಮೋದನೆ

ಕೃಷಿ ಕ್ಷೇತ್ರದ ಸುಧಾರಣೆಯ ಉದ್ದೇಶದಿಂದ ಜಾರಿಗೆ ತಂದಿದ್ದ ಮೂರು ಕಾಯ್ದೆಗಳನ್ನು ಹಿಂದಕ್ಕೆ ಪಡೆಯುವ ಮಸೂದೆಗೆ ಕೇಂದ್ರ ಸಚಿವ ಸಂಪುಟವು ಒಪ್ಪಿಗೆ ನೀಡಿದೆ. ಇದೇ 29ರಿಂದ ಆರಂಭವಾಗಲಿರುವ ಸಂಸತ್ತಿನ ಚಳಿಗಾಲದ ಅಧಿವೇಶನದಲ್ಲಿ ಮಸೂದೆ ಮಂಡನೆ ಆಗಲಿದೆ. ಈ ಮೂರೂ ಕಾಯ್ದೆಗಳನ್ನು ರದ್ದುಪಡಿಸಬೇಕು ಎಂದು ಒತ್ತಾಯಿಸಿ ರೈತರು ಸುಮಾರು ಒಂದು ವರ್ಷದಿಂದ ದೆಹಲಿಯ ಗಡಿಗಳಲ್ಲಿ ಪ್ರತಿಭಟನೆ ನಡೆಸುತ್ತಿದ್ದಾರೆ.

ಕಾಯ್ದೆಗಳನ್ನು ಹಿಂದಕ್ಕೆ ಪಡೆಯಲಾಗುವುದು ಎಂದು ಪ್ರಧಾನಿ ನರೇಂದ್ರ ಮೋದಿ ಅವರು ಇದೇ 19ರಂದು ಘೋಷಿಸಿದ್ದರು. ಕಾಯ್ದೆಗಳ ಬಗ್ಗೆ ರೈತರ ಒಂದು ವರ್ಗಕ್ಕೆ ಮನದಟ್ಟು ಮಾಡಲು ಸಾಧ್ಯವಾಗಲಿಲ್ಲ ಎಂದು ಮೋದಿ ಹೇಳಿದ್ದರು. ಪ್ರತಿಭಟನೆ ಕೊನೆಗೊಳಿಸುವಂತೆಯೂ ಅವರು ರೈತರನ್ನು ಕೋರಿದ್ದರು. ಆದರೆ, ಕಾಯ್ದೆಗಳು ರದ್ದಾಗುವವರೆಗೆ ಮತ್ತು ಇತರ ಬೇಡಿಕೆಗಳು ಈಡೇರುವವರೆಗೆ ಪ್ರತಿಭಟನೆ ನಿಲ್ಲಿಸುವುದಿಲ್ಲ ಎಂದು ರೈತರು ಹೇಳಿದ್ದಾರೆ.

ಕಾನೂನು ವಿ.ವಿ ಪರೀಕ್ಷೆಗೆ ಅಸ್ತು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕ ರಾಜ್ಯ ಕಾನೂನು ವಿಶ್ವವಿದ್ಯಾಲಯ (ಕೆಎಸ್‌ಎಲ್‌ಯು) ವ್ಯಾಪ್ತಿಯಲ್ಲಿನ ಕಾಲೇಜುಗಳಲ್ಲಿ ಐದು ಮತ್ತು ಮೂರು ವರ್ಷದ ಕಾನೂನು ಪದವಿಯ ಸೆಮಿಸ್ಟರ್ ಪರೀಕ್ಷೆ ನಡೆಸಲು ವಿಶ್ವವಿದ್ಯಾಲಯಕ್ಕೆ ಹಸಿರು ನಿಶಾನೆ ತೋರಿಸಿರುವ ಹೈಕೋರ್ಟ್, ಬುಧವಾರ ಈ ಕುರಿತು ಮಧ್ಯಂತರ ಆದೇಶ ಹೊರಡಿಸಿದೆ.

ಪರೀಕ್ಷೆಗಳಿಗೆ ಹೈಕೋರ್ಟ್ ಏಕಸದಸ್ಯ ನ್ಯಾಯಪೀಠ ನೀಡಿದ್ದ ತಡೆಯಾಜ್ಞೆ ತೆರವುಗೊಳಿಸಿರುವ ಮುಖ್ಯ ನ್ಯಾಯಮೂರ್ತಿ ಋತುರಾಜ್ ಅವಸ್ಥಿ ನೇತೃತ್ವದ ವಿಭಾಗೀಯ ನ್ಯಾಯಪೀಠ, 'ಕೋರ್ಟ್ ಅನುಮತಿ ಇಲ್ಲದೇ ಪರೀಕ್ಷಾ ಫಲಿತಾಂಶ ಪ್ರಕಟಿಸಬಾರದು' ಎಂದು ನಿರ್ದೇಶಿಸಿದೆ.

ವಿದ್ಯಾರ್ಥಿ ಎಚ್.ಸಿ. ನವೀನ್ ಕುಮಾರ್ ಸೇರಿದಂತೆ ಒಂಬತ್ತು ಪ್ರತಿವಾದಿಗಳಿಗೆ ನೋಟಿಸ್ ಜಾರಿಗೊಳಿಸಲು ಆದೇಶಿಸಿರುವ ನ್ಯಾಯಪೀಠ, ಒಂದು ವಾರದಲ್ಲಿ ಆಕ್ಷೇಪಣೆ ಸಲ್ಲಿಸುವಂತೆ ನಿರ್ದೇಶಿಸಿ, ವಿಚಾರಣೆಯನ್ನು 2022ರ ಮಾರ್ಚ್ 7ಕ್ಕೆ ಮುಂದೂಡಿದೆ.

ವಿಶ್ವವಿದ್ಯಾಲಯದ ಪರ ವಾದ ಮಂಡಿಸಿದ ಹಿರಿಯ ವಕೀಲ ಉದಯ ಹೊಳ್ಳ ಅವರು, 'ಭಾರತೀಯ ವಕೀಲ ಪರಿಷತ್ ನಿರ್ದೇಶನದ ಅನುಸಾರವೇ ಕೆಎಸ್‌ಎಲ್‌ಯು ಪರೀಕ್ಷೆ ನಡೆಸಬೇಕಿದೆ' ಎಂದು ಹೇಳಿದರು. ಈ ಮಾತನ್ನು ಪರಿಗಣಿಸಿದ ನ್ಯಾಯಪೀಠ, ಪರೀಕ್ಷೆ ನಡೆಸಲು ಅನುಮತಿ ನೀಡಿ ಆದೇಶಿಸಿತು.

ಒಳ ಪುಟಗಳು

ಯಾದಗಿರಿ, ರಾಯಚೂರಿನಲ್ಲಿ ಮಳೆಗೆ ಭತ್ತ ನೀರುಪಾಲು 6

ಜಯಲಲಿತಾ ನಿವಾಸ ಸ್ಮಾರಕ ರದ್ದು: ವಾರಸುದಾರರಿಗೆ ಆಸ್ತಿಯ ಹಕ್ಕು 11

ಚಿನಕುರಳಿ

ಪ್ರಕಾಶ್ ಶೆಟ್ಟಿ

ಕೊಬ್ಬರಿ ವರ್ತಕರ ಮನೆ ಮೇಲೆ ಐಟಿ ದಾಳಿ

ಪ್ರಜಾವಾಣಿ ವಾರ್ತೆ

ತಿಪಟೂರು: ನಗರದ ಎಪಿಎಂಸಿಯ ಹಲವು ವರ್ತಕರು ಹಾಗೂ ರವಾನೆದಾರರ ಮನೆ, ಅಂಗಡಿಗಳ ಮೇಲೆ ಆದಾಯ ತೆರಿಗೆ (ಐಟಿ) ಅಧಿಕಾರಿಗಳು ಬುಧವಾರ ಏಕಕಾಲಕ್ಕೆ ದಾಳಿ ನಡೆಸಿದರು.

ಎಪಿಎಂಸಿಯ ವರ್ತಕ ಹಾಗೂ ರವಾನೆದಾರರಾದ ಮಾಜಿ ಶಾಸಕ ಬಿ.ನಂಜಾಮರಿ, ಜಿ.ರುದ್ರಯ್ಯ ಟ್ರೇಡರ್ಸ್, ಸಂಪಿಗೆ ಟ್ರೇಡರ್ಸ್, ವಿ.ಪಿ. ಟ್ರೇಡರ್ಸ್, ಗಣೇಶ್ ಟ್ರೇಡರ್ಸ್ ಆ್ಯಂಡ್ ಕೋ ಆಪರೇಟಿವ್ ಮಾಲೀಕರ ಮನೆ ಹಾಗೂ ಅಂಗಡಿಗಳ ಮೇಲೆ ದಾಳಿ ನಡೆದಿದೆ.

ನಂಜಾಮರಿ ಅವರ ಬೆಳಗರಹಳ್ಳಿ ಮನೆಯಲ್ಲಿ ಬೆಳಿಗ್ಗಿನಿಂದ ಸಂಜೆವರೆಗೂ ಅಧಿಕಾರಿಗಳ ತಂಡ ಬೀಡು ಬಿಟ್ಟಿದ್ದು, ವಹಿವಾಟಿನ ಸಂಪೂರ್ಣ ಮಾಹಿತಿಯನ್ನು ಕಲೆ ಹಾಕುತ್ತಿದೆ. ಟ್ರೇಡರ್ಸ್‌ಗಳ ಮಾಲೀಕರ ಮನೆಗಳಲ್ಲೂ ಅಗತ್ಯ ದಾಖಲೆಗಳು, ಬ್ಯಾಂಕ್ ವಹಿವಾಟು ಸೇರಿದಂತೆ ಇತರೆ ದಾಖಲೆಗಳ ಪರಿಶೀಲನೆ ನಡೆಸಿದ್ದಾರೆ. ಸಂಜೆ ವೇಳೆಗೆ ಉಪ ನೋಂದಣಾಧಿಕಾರಿ ಕಚೇರಿಗೆ ತೆರಳಿದ ಅಧಿಕಾರಿಗಳ ತಂಡ ಅಗತ್ಯ ಮಾಹಿತಿಯನ್ನು ಪಡೆದುಕೊಂಡಿತು. ಬೆಳಿಗ್ಗೆಯೇ ಆದಾಯ ತೆರಿಗೆ ಅಧಿಕಾರಿಗಳ ದಾಳಿ ವಿಚಾರ ತಿಳಿಯುತ್ತಿದ್ದಂತೆ ಹಲವು ವರ್ತಕರು ಎಪಿಎಂಸಿಯಲ್ಲಿ ತಮ್ಮ ಅಂಗಡಿಗಳನ್ನು ತೆರೆಯಲಿಲ್ಲ. ಕೊಬ್ಬರಿ ವಹಿವಾಟಿನ ದಿನವಾದ ಬುಧವಾರ ಬೆಲೆಯು ಕ್ವಿಂಟಲ್‌ಗೆ ₹300ರವರೆಗೆ ಇಳಿಕೆಯಾಗಿದೆ. ಪ್ರತಿಷ್ಠಿತ ಟ್ರೇಡರ್‌ಗಳು ಹರಾಜಿನಲ್ಲಿ ಭಾಗವಹಿಸಲಿಲ್ಲ.

ಅಧಿಕಾರಿಗಳ ತಂಡ ಗುರುವಾರವೂ ತನಿಖೆ ಮುಂದುವರಿಸಲಿದ್ದು, ಇತರೆ ವರ್ತಕರು, ರವಾನೆದಾರರ ಮೇಲೂ ದಾಳಿ ನಡೆಸುವ ಸಾಧ್ಯತೆ ಇದೆ ಎಂದು ಮೂಲಗಳು ತಿಳಿಸಿವೆ.

ಶಿಕ್ಷಕರ ವರ್ಗಾವಣೆ: ಮುಂದೂಡಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಶಿಕ್ಷಕರ ವರ್ಗಾವಣೆಗೆ ಸಂಬಂಧಿಸಿದಂತೆ ಪರಿಷ್ಕೃತ ಆದೇಶ ಹೊರಡಿಸಿದ ಬೆನ್ನಲ್ಲೇ, ಸ್ಥಳ ಆಯ್ಕೆಗಾಗಿ ನ.24ರಿಂದ ನಡೆಯಬೇಕಿದ್ದ ಕೌನ್ಸೆಲಿಂಗ್ ಅನ್ನು ತಾತ್ಕಾಲಿಕವಾಗಿ ಮುಂದೂಡಲಾಗಿದೆ.

ತಾಲ್ಲೂಕಿನಲ್ಲಿ ಹಾಲಿ ಕಾರ್ಯನಿರ್ವಹಿಸುತ್ತಿರುವ ಶಿಕ್ಷಕರ ಸಂಖ್ಯೆಗೆ ಅನುಗುಣವಾಗಿ ಅದರಲ್ಲಿ ಶೇ 25ರಷ್ಟು ಶಿಕ್ಷಕರ ವರ್ಗಾವಣೆಗೆ ಶಿಕ್ಷಣ ಇಲಾಖೆ ಮುಂದಾಗಿತ್ತು. ಅದಕ್ಕೆ ವಿರೋಧ ವ್ಯಕ್ತಪಡಿಸಿದ ಕರ್ನಾಟಕ ರಾಜ್ಯ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘ ಮತ್ತು ರಾಜ್ಯ ಸರ್ಕಾರಿ ನೌಕರರ ಸಂಘ, ತಾಲ್ಲೂಕಿಗೆ ಒಟ್ಟು ಮಂಜೂರಾದ ಹುದ್ದೆಗಳಲ್ಲಿ ಶೇ 25ರಷ್ಟು ಹುದ್ದೆಗಳಿಗೆ ವರ್ಗಾವಣೆ ಮಾಡಬೇಕು ಎಂಬ ಬೇಡಿಕೆ ಮುಂದಿಟ್ಟಿತ್ತು.

'ತಾಲ್ಲೂಕಿಗೆ ಮಂಜೂರಾದ ಒಟ್ಟು ಶಿಕ್ಷಕರ ಹುದ್ದೆಗಳ ಪೈಕಿ ಶೇ 25ರಷ್ಟು ಹುದ್ದೆಗಳಿಗೆ ವರ್ಗಾವಣೆ ನೀಡಬೇಕು ಮತ್ತು ತಾಲ್ಲೂಕಿನೊಳಗೆ ಶೇ 25ರಷ್ಟು ವರ್ಗಾವಣೆ ಮಾಡಲು ಮೊದಲ ಆದ್ಯತೆ ನೀಡಬೇಕು ಎಂಬುದು ಪ್ರಮುಖ ಬೇಡಿಕೆಯಾಗಿತ್ತು. ಶಿಕ್ಷಣ ಸಚಿವರು ನಮ್ಮ ಬೇಡಿಕೆಗಳಿಗೆ ಸ್ಪಂದಿಸಿದ್ದಾರೆ' ಎಂದು ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಪ್ರಧಾನ ಕಾರ್ಯದರ್ಶಿ ಚಂದ್ರಶೇಖರ ನುಗ್ಗಲಿ ಹೇಳಿದ್ದಾರೆ.

ಪರಿಷ್ಕೃತ ಆದೇಶ ಹೊರಡಿಸಿರುವ ಸರ್ಕಾರ, 'ಯಾವುದೇ ಘಟಕದಲ್ಲಿ ಮಂಜೂರಾದ ಹುದ್ದೆಗಳ ಸಂಖ್ಯೆಯ ಆಧಾರದಲ್ಲಿ ಶೇಕಡಾವಾರು ಮಿತಿ ಲೆಕ್ಕಾಚಾರ ಮಾಡಬೇಕು' ಎಂದು ಸೂಚಿಸಿದೆ. ಅಂದರೆ, ಒಂದು ತಾಲ್ಲೂಕಿಗೆ ಎಷ್ಟು ಶಿಕ್ಷಕರ ಹುದ್ದೆಗಳು ಮಂಜೂರಾಗಿವೆ ಎಂಬುದನ್ನು ಪರಿಗಣಿಸಿ, ಅದರಲ್ಲಿ ಶೇ 25ರಷ್ಟು ಹುದ್ದೆಗಳಿಗೆ ವರ್ಗಾವಣೆ ಪ್ರಕ್ರಿಯೆ ನಡೆಸಬೇಕಾಗುತ್ತದೆ.

₹16.62 ಕೋಟಿ ದುರ್ಬಳಕೆ: ಐವರು ಅಮಾನತು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಯಾವುದೇ ಟೆಂಡರ್ ಕರೆಯದೆ ಮತ್ತು ಕಾಮಗಾರಿ ನಿರ್ವಹಿಸದೆ ಎಂಟು ನಕಲಿ ಬಿಲ್‌ಗಳನ್ನು ಸೃಷ್ಟಿಸಿ ₹ 16.62 ಕೋಟಿ ದುರುಪಯೋಗ ಮಾಡಿದ ಆರೋಪದಲ್ಲಿ ಜಲಸಂಪನ್ಮೂಲ ಇಲಾಖೆಯ ಐದು ಮಂದಿಯನ್ನು ರಾಜ್ಯ ಸರ್ಕಾರ ಅಮಾನತುಗೊಳಿಸಿದೆ.

ಅಲ್ಲದೆ, ಇದೇ ಪ್ರಕರಣದಲ್ಲಿ ಭಾಗಿಯಾದ, ಸದ್ಯ ಬೇರೆ ಇಲಾಖೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಇತರ ಇಬ್ಬರನ್ನು ಅಮಾನತು ಮಾಡುವಂತೆ ಆ ಅಧಿಕಾರಿಗಳ ಮಾತೃ ಇಲಾಖೆಗೆ (ಆರ್ಥಿಕ ಇಲಾಖೆ) ಜಲಸಂಪನ್ಮೂಲ ಇಲಾಖೆ ಸೂಚಿಸಿದೆ.

ಕೆಎನ್‌ಎನ್‌ಎಲ್ (ಕರ್ನಾಟಕ ನೀರಾವರಿ ನಿಗಮ ನಿಯಮಿತ) ವ್ಯಾಪ್ತಿಯ ಅಥಣಿಯ ಹಿಪ್ಪರಗಿ ಬ್ಯಾರೇಜ್ ನಾಲಾ (ಎಚ್‌ಬಿಸಿ) ವಿಭಾಗದಲ್ಲಿ ಹಣ ದುರ್ಬಳಕೆ ಪ್ರಕರಣ ನಡೆದಿದೆ.

ಕೆಎನ್‌ಎನ್‌ಎಲ್ ಧಾರವಾಡ ವಿಭಾಗದ ಮುಖ್ಯ ಲೆಕ್ಕಾಧಿಕಾರಿ ಎಸ್.ಎನ್. ವರದರಾಜು, ಅದೇ ಕಚೇರಿಯ ಲೆಕ್ಕ ಅಧೀಕ್ಷಕರಾದ ಡಿ.ಸಿ. ಶೀಲಾ ಮತ್ತು ವಿನಾಯಕ ಅರ್ಕಸಾಲಿ, ಪ್ರಥಮ ದರ್ಜೆ ಲೆಕ್ಕ ಸಹಾಯಕರಾದ ಅನಿಲ್ ಜಾಧವ್ ಮತ್ತು ಶರಣಪ್ಪ ಅಮಾನತುಗೊಂಡವರು.

ಇದೇ ಅಕ್ರಮದಲ್ಲಿ ಭಾಗಿಯಾಗಿ, ಪ್ರಸ್ತುತ ಜಲಸಂಪನ್ಮೂಲ ಇಲಾಖೆಯಿಂದ ವರ್ಗಾವಣೆಗೊಂಡು ಸದ್ಯ ಬೆಳಗಾವಿ ಸ್ಮಾರ್ಟ್ ಸಿಟಿ ಮುಖ್ಯ ಹಣಕಾಸು ಅಧಿಕಾರಿಯಾಗಿರುವ ಎಂ.ಎಂ. ಮಿರ್ಜಾ, ಜಮಖಂಡಿಯಲ್ಲಿ ಅಚ್ಚುಕಟ್ಟು ಪ್ರದೇಶಾಭಿವೃದ್ಧಿ ಪ್ರಾಧಿಕಾರದಲ್ಲಿ (ಕಾಡಾ) ಲೆಕ್ಕಪರಿಶೋಧಕರಾಗಿರುವ ದೀಪಕ್ ಎ. ಮೂಡಲಗಿ ಅವರನ್ನು ಅಮಾನತು ಮಾಡುವಂತೆ ಆರ್ಥಿಕ ಇಲಾಖೆಗೆ ಸೂಚಿಸಲಾಗಿದೆ.

ಪ್ರಕರಣದಲ್ಲಿ ಭಾಗಿಯಾದ ಈ ಏಳು ಮಂದಿ ಮತ್ತು ನಿವೃತ್ತ ಲೆಕ್ಕಾಧಿಕಾರಿ ಎಸ್.ಆರ್. ಎಲಿಗಾರ್, ಗುತ್ತಿಗೆದಾರರಾದ ಬೆಳಗಾವಿಯ ಎ.ವೈ. ಮುಲ್ಲಾ ಮತ್ತು ಆರ್.ಬಿ. ಶೇಖ್ ವಿರುದ್ಧ ಕ್ರಿಮಿನಲ್ ಪ್ರಕರಣ ದಾಖಲಿಸಬೇಕು. ಅವರೆಲ್ಲರ ಚರಾಸ್ತಿ ಮತ್ತು ಸ್ಥಿರಾಸ್ತಿಯನ್ನು ಪರಭಾರೆ ಮಾಡದಂತೆ ನೋಂದಣಿ ಮತ್ತು ಮುದ್ರಾಂಕ ಇಲಾಖೆಗೆ ಸೂಚಿಸಿರುವ ಜಲಸಂಪನ್ಮೂಲ ಇಲಾಖೆ, ಅವರು ಹೊಂದಿರುವ ಖಾತೆಗಳನ್ನು ತಕ್ಷಣ ಸ್ಥಗಿತಗೊಳಿಸುವಂತೆ ಕೆಎನ್‌ಎನ್‌ಎಲ್ ವ್ಯವಸ್ಥಾಪಕ ನಿರ್ದೇಶಕರಿಗೆ ನಿರ್ದೇಶನ ನೀಡಿದೆ.

ಒಟ್ಟು ಎಂಟು ಕಾಮಗಾರಿಗಳಿಗೆ ಸಂಬಂಧಿಸಿದಂತೆ 2019ರ ಫೆ. 25ರಿಂದ 2020ರ ನ.7ರ ಮಧ್ಯೆ ನಕಲಿ ಬಿಲ್‌ಗಳನ್ನು ಸೃಷ್ಟಿಸಲಾಗಿತ್ತು. ಈ ಎಂಟು ಬಿಲ್‌ಗಳ ಪೈಕಿ ಐದು ಬಿಲ್‌ಗಳು ಲಭ್ಯವಾಗಿವೆ. ಉಳಿದ ಮೂರು ನಾಪತ್ತೆಯಾಗಿರುವುದು ಕೂಡಾ ಗೊತ್ತಾಗಿದೆ.

ಪ್ರಯಾಣಿಕರ ಬೇಡಿಕೆ ಆಧರಿಸಿ ಪರಿಷ್ಕೃತ ಮಾರ್ಗ: ಬಿಎಂಟಿಸಿ ಎಂಡಿ ವಿ.ಅನ್ಬುಕುಮಾರ್

ಬಸ್ ಮಾರ್ಗ ಮರು ಸರ್ವೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೋವಿಡ್ ಕಾಣಿಸಿಕೊಂಡ ಬಳಿಕ ಸಂಚಾರ ಸ್ಥಿತಿಗತಿ ಬದಲಾಗಿದ್ದು, ನಗರದಲ್ಲಿ ಬಿಎಂಟಿಸಿ ಬಸ್‌ಗಳು ಸಂಚರಿಸುವ ಮಾರ್ಗಗಳ ಪರಿಷ್ಕರಣೆಗಾಗಿ ಮರು ಸರ್ವೆ ನಡೆಸಲು ಸಂಸ್ಥೆಯು ಸಿದ್ಧತೆ ನಡೆಸಿದೆ.

'ಪ್ರಜಾವಾಣಿ ನೇರ ಫೋನ್ ಇನ್' ಕಾರ್ಯಕ್ರಮದಲ್ಲಿ ಬಿಎಂಟಿಸಿ ವ್ಯವಸ್ಥಾಪಕ ನಿರ್ದೇಶಕ ವಿ.ಅನ್ಬುಕುಮಾರ್ ಅವರು ಬುಧವಾರ ಈ ವಿಚಾರ ತಿಳಿಸಿದರು.

ರಾಮಮೂರ್ತಿನಗರದ ಸತೀಶ್ ಪ್ರಶ್ನೆಗೆ ಉತ್ತರಿಸಿದ ಅವರು, 'ಎರಡು ವರ್ಷಗಳ ಹಿಂದೆ ಬಸ್ ಸಂಚಾರ ಮಾರ್ಗಗಳ ಸರ್ವೆ ನಡೆಸಲಾಗಿತ್ತು. ಈಗ ಪರಿಸ್ಥಿತಿ ಸಂಪೂರ್ಣ ಬದಲಾಗಿದೆ. ಬಸ್ ಸೇವೆ ಆರಂಭಿಸುವಂತೆ ಅನೇಕ ಪ್ರದೇಶಗಳಿಂದ ಬೇಡಿಕೆಗಳು ಬರುತ್ತಿವೆ. ಹಾಗಾಗಿ ಸಂಚಾರ ಮಾರ್ಗಗಳ ಪರಿಷ್ಕರಣೆಗಾಗಿ ಮರು ಸರ್ವೆ ನಡೆಸಲು ನಿರ್ಧರಿಸಿದ್ದೇವೆ. ಈ ವರ್ಷದ ಡಿಸೆಂಬರ್ ಅಂತ್ಯದೊಳಗೆ ಸರ್ವೆ ಪೂರ್ಣಗೊಳಿಸಲು ಪ್ರಯತ್ನಿಸುತ್ತೇವೆ' ಎಂದರು.

'ಮಹಿಳೆಯರ ಸುರಕ್ಷತೆಗೆ ಆದ್ಯತೆ'

'ಬೆಳಿಗ್ಗೆ ಹಾಗೂ ಸಂಜೆ ದಟ್ಟಣೆ ಅವಧಿಯಲ್ಲಿ ಪ್ರಯಾಣಿಕರ ಬೇಡಿಕೆಗೆ ಕೊರತೆ ಆಗದಂತೆ ಬಸ್ ಕಾರ್ಯಾಚರಣೆ ನಡೆಸುವುದು ನಮ್ಮ ಆಶಯ. ಬೆಳಿಗ್ಗೆಯ ಅವಧಿಗಿಂತಲೂ ಸಂಜೆ ದಟ್ಟಣೆ ಅವಧಿಯ ಕಾರ್ಯಾಚರಣೆಯಲ್ಲಿ ಲೋಪ ಆಗದಂತೆ ಹೆಚ್ಚು ಕಾಳಜಿ ವಹಿಸುತ್ತೇವೆ. ಮಹಿಳೆಯರು ಸುರಕ್ಷಿತವಾಗಿ ಮನೆಗೆ ತಲುಪುವುದಕ್ಕೆ ಅನುವಾಗುವಂತೆ ಸೇವೆ ಒದಗಿಸುವುದು ನಮ್ಮ ಕರ್ತವ್ಯ' ಎಂದು ಅನ್ಬುಕುಮಾರ್ ತಿಳಿಸಿದರು.

'ಪ್ರಯಾಣಿಕರಿಗೆ ಉತ್ತಮ ಸೇವೆ ಒದಗಿಸುವುದು ನಮ್ಮ ಆದ್ಯತೆ. ಈ ಬಾರಿ ಪ್ರಯಾಣಿಕರ ಅಭಿಪ್ರಾಯ ಆಧರಿಸಿಯೇ ಬಸ್ ಮಾರ್ಗಗಳನ್ನು ಪರಿಷ್ಕರಣೆ ಮಾಡುತ್ತೇವೆ' ಎಂದು ಸ್ಪಷ್ಟಪಡಿಸಿದರು.

ಫೀಡರ್ ಬಸ್ ಶೀಘ್ರ ಹೆಚ್ಚಳ: ವಿಜಯನಗರದ ಅಂಜನಾ ಅವರ ಪ್ರಶ್ನೆಗೆ ಉತ್ತರಿಸಿದ ವ್ಯವಸ್ಥಾಪಕ ನಿರ್ದೇಶಕರು, 'ನಮ್ಮ ಮೆಟ್ರೊ ರೈಲುಗಳಿಗೆ ಪೂರಕವಾಗಿ ಬಿಎಂಟಿಸಿ ಫೀಡರ್ ಬಸ್ ಕಾರ್ಯಾಚರಣೆ ನಡೆಸುವುದರಿಂದ ಸಂಸ್ಥೆಗೆ ನಷ್ಟವೇ ಜಾಸ್ತಿ. ಆದರೂ, ಮೆಟ್ರೊ ಸೇವೆ ರಾತ್ರಿ 11.30ರವರೆಗೂ ವಿಸ್ತರಣೆಯಾದ ಬಳಿಕ ಪ್ರಯಾಣಿಕರ ಅನುಕೂಲಕ್ಕಾಗಿ 90 ಫೀಡರ್ ಬಸ್‌ಗಳನ್ನು ಆರಂಭಿಸಿದ್ದೇವೆ. ಈ ಸಲುವಾಗಿಯೇ ಖರೀದಿಸಲಾದ 90 ಹೊಸ ಮಿಡಿ ಬಸ್‌ಗಳು 15 ದಿನಗಳಲ್ಲಿ ಸಂಸ್ಥೆಗೆ ಸೇರ್ಪಡೆಯಾಗಲಿವೆ. ಮೆಟ್ರೊ ಸೇವೆ ವಿಸ್ತರಣೆಯಾದಂತೆ ಫೀಡರ್ ಬಸ್‌ಗಳನ್ನೂ ಒದಗಿಸುತ್ತೇವೆ' ಎಂದರು.

ರಾತ್ರಿ ಸೇವೆ ವಿಸ್ತರಣೆ: ನಗರದ ವಿವಿಧ ಭಾಗಗಳ ತಂಗುದಾಣಗಳಿಗೆ ತಡ ರಾತ್ರಿವರೆಗೂ ಬಸ್ ಸೌಕರ್ಯ ಕಲ್ಪಿಸಿ ಅವುಗಳನ್ನು ಅಲ್ಲೇ ನಿಲುಗಡೆ ಮಾಡುವ ವ್ಯವಸ್ಥೆಯನ್ನು ಬಿಎಂಟಿಸಿ ಹೊಂದಿತ್ತು. ಆದರೆ, ಕೋವಿಡ್ ಕಾಣಿಸಿಕೊಂಡ ಬಳಿಕ ಇದನ್ನು ಹಿಂಪಡೆದಿತ್ತು. ಕೋವಿಡ್ ನಿಯಂತ್ರಣಕ್ಕೆ ಜಾರಿಗೊಳಿಸಿದ್ದ ರಾತ್ರಿ ಕರ್ಫ್ಯೂವನ್ನು ಸರ್ಕಾರ ಹಿಂಪಡೆದ ಬಳಿಕ ರಾತ್ರಿ ನಿಲುಗಡೆ ಸೇವೆಯನ್ನು ವಿಸ್ತರಿಸುವುದಕ್ಕೂ ಬಿಎಂಟಿಸಿ ಆದ್ಯತೆ ನೀಡಿದೆ.

ನಾಗರಬಾವಿಯ ಮಹೇಶ್ ಪ್ರಶ್ನೆಗೆ ಉತ್ತರಿಸಿದ ಅನ್ಬುಕುಮಾರ್, 'ಈ ತಿಂಗಳಲ್ಲಿ 200ಕ್ಕೂ ಅಧಿಕ ಕಡೆ ರಾತ್ರಿ ನಿಲುಗಡೆ ವ್ಯವಸ್ಥೆಯನ್ನು ಮರುಸ್ಥಾಪಿಸಿದ್ದೇವೆ. ನಗರದ ಕೇಂದ್ರ ಪ್ರದೇಶದಿಂದ ದೂರ ಇರುವ ಹಳ್ಳಿಗಳಿಗೆ ರಾತ್ರಿವರೆಗೂ ಬಸ್ ಸೌಕರ್ಯ ಕಲ್ಪಿಸುವುದು ನಮ್ಮ ಜವಾಬ್ದಾರಿ. ಶೀಘ್ರವೇ ಈ ಬಗ್ಗೆ ಸರ್ವೆ ನಡೆಸಿ ರಾತ್ರಿ ನಿಲುಗಡೆ ಸೇವೆಯನ್ನು ಸಾವಿರಕ್ಕೂ ಅಧಿಕ ತಂಗುದಾಣಗಳಿಗೆ ವಿಸ್ತರಿಸಲು ಕ್ರಮಕೈಗೊಳ್ಳಲಿದ್ದೇವೆ' ಎಂದು ಭರವಸೆ ನೀಡಿದರು.

'ಈ ಹಿಂದೆ ಚಾಲಕ ಮತ್ತು ನಿರ್ವಾಹಕರು ತಮ್ಮ ಮಾಮೂಲಿ ಅವಧಿಗಿಂತ ಹೆಚ್ಚು ಕೆಲಸ ಮಾಡುವ ಅವಧಿಗೆ (ಒ.ಟಿ) ಪ್ರೋತ್ಸಾಹಧನ ನೀಡಲಾಗುತ್ತಿತ್ತು. ಕೋವಿಡ್ ಕಾಣಿಸಿಕೊಂಡ ಬಳಿಕ ಇದನ್ನು ಕೈಬಿಡಲಾಗಿತ್ತು. ಹಾಗಾಗಿ, ಕೆಲವು ಕಡೆ ರಾತ್ರಿ 8.30 ಗಂಟೆ ನಂತರ ಬಸ್ ಕಾರ್ಯಾಚರಣೆ ಸ್ಥಗಿತಗೊಂಡಿರಬಹುದು. ಚಾಲಕರೂ ಬೆಳಿಗ್ಗೆಯಿಂದ ರಾತ್ರಿವರೆಗೆ ಕರ್ತವ್ಯ ನಿರ್ವಹಿಸಿ ದಣಿದಿರುತ್ತಾರೆ. ಶೀಘ್ರವೇ ಹೆಚ್ಚುವರಿ ಅವಧಿಯ ಕೆಲಸಕ್ಕೆ ಮತ್ತೆ ಪ್ರೋತ್ಸಾಹಧನ ನೀಡುವ ಮೂಲಕ ರಾತ್ರಿ 8.30ರ ನಂತರದ ಕಾರ್ಯಾಚರಣೆ ಹೆಚ್ಚಿಸಲು ಕ್ರಮ ಕೈಗೊಳ್ಳುತ್ತೇವೆ' ಎಂದು ಕೃಷ್ಣ ಅವರ ಪ್ರಶ್ನೆಗೆ ವ್ಯವಸ್ಥಾಪಕ ನಿರ್ದೇಶಕರು ಉತ್ತರಿಸಿದರು.

'ಮಾರ್ಚ್‌ನಿಂದ ಏಕರೂಪ ಸಂಚಾರ ಕಾರ್ಡ್'

ವಿವಿಧ ಮಾದರಿಯ ಸಾರಿಗೆಗಳಲ್ಲಿ ಪ್ರಯಾಣಿಸಲು 'ರಾಷ್ಟ್ರೀಯ ಏಕರೂಪ ಸಂಚಾರ ಕಾರ್ಡ್' ಬಳಕೆಗೆ ಮುಂದಿನ ಆರ್ಥಿಕ ವರ್ಷದವರೆಗೆ ಕಾಯಬೇಕು. ಈ ಕಾರ್ಡ್ ಬಳಕೆಗೆ ಅಗತ್ಯವಿರುವ ಹೊಸ ತಂತ್ರಜ್ಞಾನ ಅಳವಡಿಸಲಾಗುತ್ತಿದೆ. ಇದಕ್ಕೆ ಹೆಚ್ಚಿನ ಬಂಡವಾಳದ ಅಗತ್ಯವೂ ಇದೆ' ಎಂದು ವ್ಯವಸ್ಥಾಪಕ ನಿರ್ದೇಶಕರು ತಿಳಿಸಿದರು.

'ಹೊಸ ಬಸ್ ಖರೀದಿಗೆ ಬಿಎಂಟಿಸಿ ಹಣ ಬಳಸಿಲ್ಲ'

'ಸಂಸ್ಥೆಯು 643 ಬಿಎಸ್-6 ಡೀಸೆಲ್ ಎಂಜಿನ್ ಬಸ್‌ಗಳನ್ನು, 300 ಎಲೆಕ್ಟ್ರಿಕ್ ಬಸ್‌ಗಳು (12 ಮೀ ಉದ್ದ) ಹಾಗೂ 90 ಮಿಡಿ ಬಸ್‌ಗಳನ್ನು (9 ಮೀ ಉದ್ದ) ಖರೀದಿಸುತ್ತಿದೆ. ಡಿಸೆಂಬರ್ ತಿಂಗಳಲ್ಲೇ ಹೊಸ ಬಸ್‌ಗಳು ಕಾರ್ಯಾಚರಣೆ ಆರಂಭಿಸಲಿವೆ' ಎಂದು ಅನ್ಬುಕುಮಾರ್ ತಿಳಿಸಿದರು.

ಬಿಎಂಟಿಸಿ ನಷ್ಟದಲ್ಲಿದ್ದರೂ ಹೊಸ ಬಸ್‌ಗಳನ್ನು ಖರೀದಿಸುತ್ತಿರುವುದು ಏಕೆ ಎಂದು ಕೆಲವರು ಸಾಮಾಜಿಕ ಮಾಧ್ಯಮಗಳಲ್ಲಿ ಪ್ರಶ್ನೆ ಮಾಡಿದ್ದಾರೆ. ಇದಕ್ಕೆ ಉತ್ತರಿಸಿದ ಅನ್ಬುಕುಮಾರ್, 'ಈ ಬಸ್‌ಗಳೆಲ್ಲವನ್ನೂ ಕೇಂದ್ರ ಸರ್ಕಾರ ಹಾಗೂ ರಾಜ್ಯ ಸರ್ಕಾರದ ಅನುದಾನದಲ್ಲಿ ಖರೀದಿ ಮಾಡಲಾಗಿದೆ. ಇವುಗಳನ್ನು ಖರೀದಿ ಮಾಡದೇ ಇರುತ್ತಿದ್ದರೆ ಸರ್ಕಾರದಿಂದ ಮಂಜೂರಾದ ಅನುದಾನ ವಾಪಸ್ ಹೋಗುತ್ತಿತ್ತು. ಹೊಸ ಬಸ್‌ಗಳ ಖರೀದಿಗೆ ಬಿಎಂಟಿಸಿ ನಯಾಪೈಸೆ ಬಂಡವಾಳವನ್ನೂ ಹೂಡಿಲ್ಲ' ಎಂದು ಸ್ಪಷ್ಟಪಡಿಸಿದರು.

'ನಮ್ಮಲ್ಲಿರುವ ಬಹುತೇಕ ಬಸ್‌ಗಳು 10 ವರ್ಷಗಳಿಗೂ ಹಳೆಯವು. ಕೆಲವು ಬಸ್‌ಗಳು ಸೋರುತ್ತಿವೆ. ಪದೇ ಪದೇ ಕೆಟ್ಟುಹೋಗುತ್ತಿವೆ ಎಂಬ ದೂರುಗಳಿದ್ದವು. ಕಾರ್ಯಾಚರಣೆಗೆ ಹಳೆಯ ಬಸ್‌ಗಳನ್ನು ಬಳಸಲು ಚಾಲಕರೂ ಹಿಂದೇಟು ಹಾಕುತ್ತಾರೆ. ಹೊಸ ಬಸ್‌ಗಳ ಖರೀದಿ ಬಳಿಕ ಈ ಸ್ಥಿತಿ ಬದಲಾಗಲಿದೆ' ಎಂದು ಅವರು ಸಮರ್ಥಿಸಿಕೊಂಡರು.

'ಕೋವಿಡ್ ಸಂದರ್ಭದಲ್ಲಿ ಟೆಂಡರ್ ಆಹ್ವಾನಿಸಿದ್ದರಿಂದ ನಿರೀಕ್ಷೆಗಿಂತಲೂ ಕಡಿಮೆ ದರಕ್ಕೆ ಹೊಸ ಬಸ್‌ಗಳನ್ನು ಪೂರೈಸಲು ಕಂಪನಿಗಳು ಒಪ್ಪಿವೆ. ಇದರಿಂದ ಸಂಸ್ಥೆಗೆ ಹೆಚ್ಚು ಪ್ರಯೋಜನವಾಗಿದೆ. ಈ ಬಸ್‌ಗಳನ್ನು ಈಗಿನ ದರದಲ್ಲಿ ಖರೀದಿಸುವುದಾದರೆ ಹೆಚ್ಚು ಹಣ ವ್ಯಯವಾಗುತ್ತಿತ್ತು' ಎಂದು ಅವರು ವಿವರಿಸಿದರು.

'ಟಿಕೆಟ್‌ಗೆ ಎಂಜಲು ಹಚ್ಚುವ ಪದ್ಧತಿ'

ಎಲೆಕ್ಟ್ರಾನಿಕ್ ಟಿಕೆಟಿಂಗ್ ಮಷಿನ್(ಇಟಿಎಂ) ಇಲ್ಲದಿರುವುದರಿಂದ ಎಂಜಲು ಹಚ್ಚಿ ಟಿಕೆಟ್ ಕೊಡುವ ಪದ್ಧತಿ ಈಗಲೂ ಇದೆ ಎಂದು ಬಿಎಂಟಿಸಿ ಪ್ರಯಾಣಿಕ ಕೃಷ್ಣಮೂರ್ತಿ ದೂರಿದರು.

'ಈ ಬಗ್ಗೆ ಪ್ರಶ್ನೆ ಮಾಡಿದರೆ ನಿರ್ವಾಹಕರು ಉಡಾಫೆಯಿಂದ ವರ್ತಿಸುತ್ತಾರೆ. ಸೌಜನ್ಯ ಇಲ್ಲದೆ ನಡೆದುಕೊಳ್ಳುತ್ತಾರೆ' ಎಂದು ಹೇಳಿದರು.

ಇದಕ್ಕೆ ಪ್ರತಿಕ್ರಿಯಿಸಿದ ಅನ್ಬುಕುಮಾರ್, 'ಇಟಿಎಂ ಯಂತ್ರಗಳನ್ನು ಒದಗಿಸಲು ಹೊಸದಾಗಿ ಟೆಂಡರ್ ಕರೆಯಲಾಗುತ್ತಿದೆ. ಮೂರು ತಿಂಗಳಲ್ಲಿ ಹೊಸ ಇಟಿಎಂ ಯಂತ್ರಗಳು ಬರಲಿದ್ದು, ಸಮಸ್ಯೆ ಪರಿಹಾರವಾಗಲಿದೆ' ಎಂದು ಸ್ಪಷ್ಟಪಡಿಸಿದರು.

ಬಸ್ ಮಾಹಿತಿಗೆ ಮೊಬೈಲ್ ಆ್ಯಪ್

ಬಸ್‌ಗಳ ನೈಜ ಸಮಯದ ಬಗ್ಗೆ ಪ್ರಯಾಣಿಕರಿಗೆ ಮಾಹಿತಿ ಒದಗಿಸುವ ಮೊಬೈಲ್ ಆ್ಯಪ್ ಅಭಿವೃದ್ಧಿಪಡಿಸಲಾಗುತ್ತಿದ್ದು, ಫೆಬ್ರುವರಿಯಲ್ಲಿ ಕಾರ್ಯರೂಪಕ್ಕೆ ಬರಲಿದೆ ಎಂದು ವಿ.ಅನ್ಬುಕುಮಾರ್ ತಿಳಿಸಿದರು.

'ಕೆಲವು ಸಂದರ್ಭದಲ್ಲಿ ಗಂಟೆಗಟ್ಟಲೆ ಬಸ್‌ಗಳೇ ಇರುವುದಿಲ್ಲ. ಕೆಲವು ವೇಳೆ ಒಮ್ಮೆಗೆ ಏಳೆಂಟು ಬಸ್‌ಗಳು ಬರುತ್ತವೆ' ಎಂದು ಕೋಲಾರದ ನರೇಂದ್ರಬಾಬು ಪ್ರಶ್ನಿಸಿದರು. 'ಒಮ್ಮೆಗೆ ಬರುವ ಬಸ್‌ಗಳೆಲ್ಲವೂ ಒಂದೇ ಮಾರ್ಗದವಲ್ಲ. ಬೇರೆ ಮಾರ್ಗಕ್ಕೆ ಹೋಗುವ ಬಸ್‌ಗಳಿರುತ್ತವೆ. ಯಾವ ಮಾರ್ಗದ ಬಸ್ ಎಲ್ಲಿದೆ, ನೀವಿರುವ ನಿಲ್ದಾಣಕ್ಕೆ ಎಷ್ಟೊತ್ತಿಗೆ ಬರಲಿದೆ ಎಂಬೆಲ್ಲಾ ಮಾಹಿತಿಯೂ ಆ್ಯಪ್‌ನಲ್ಲಿ ಮುಂದೆ ಲಭ್ಯವಾಗಲಿದೆ' ಎಂದು ಅನ್ಬುಕುಮಾರ್ ವಿವರಿಸಿದರು.

ಫೋನ್‌ಇನ್ ಕಾರ್ಯಕ್ರಮದಲ್ಲಿ ವಿ.ಅನ್ಬುಕುಮಾರ್ ಮಾತನಾಡಿದರು. ಸಂಸ್ಥೆಯ ಮುಖ್ಯ ಸಂಚಾರ ವ್ಯವಸ್ಥಾಪಕ(ಕಾರ್ಯಾಚರಣೆ) ರಾಜೇಶ್, ಸಾರ್ವಜನಿಕ ಸಂಪರ್ಕಾಧಿಕಾರಿ ಅಜಿತ್ ಬಿ.ತೋರಗಲ್ ಇದ್ದರು –ಪ್ರಜಾವಾಣಿ ಚಿತ್ರ

ಬಸ್ಸೇ ಬರ್ತಿಲ್ಲ: ಅಳಲು

ಪ್ರಯಾಣಿಕರ ಅಹವಾಲು ಆಲಿಸಿದ ಬಿಎಂಟಿಸಿ ಎಂಡಿ

ಬೆಂಗಳೂರು: ಬಿಎಂಟಿಸಿ ಪ್ರಯಾಣಿಕರು ತಮ್ಮ ತೊಂದರೆಗಳನ್ನು ಸಂಸ್ಥೆಯ ವ್ಯವಸ್ಥಾಪಕ ನಿರ್ದೇಶಕ ವಿ.ಅನ್ಬುಕುಮಾರ್ ಅವರಿಗೆ ಫೋನ್‌ಇನ್ ಕಾರ್ಯಕ್ರಮದಲ್ಲಿ ಮನವರಿಕೆ ಮಾಡಿಸಿದರು. ಬಿಡುವಿಲ್ಲದೆ ಬಂದ ಕರೆಗಳನ್ನು ಸ್ವೀಕರಿಸಿದ ಅನ್ಬುಕುಮಾರ್, ಪ್ರಯಾಣಿಕರ ಅಹವಾಲುಗಳಿಗೆ ಕಿವಿಯಾದರು.



- **ಕಾಟನ್‌ಪೇಟೆ ಮಾರ್ಗದಲ್ಲಿ ರಸ್ತೆ ಅಭಿವೃದ್ಧಿ ಕಾಮಗಾರಿ ನಡೆಯುತ್ತಿರುವುದರಿಂದ ಬಿಎಂಟಿಸಿ ಬಸ್‌ಗಳೇ ಇಲ್ಲವಾಗಿದೆ. ಲಾರಿಗಳು, ಕೆಎಸ್‌ಆರ್‌ಟಿಸಿ ಮತ್ತು ಖಾಸಗಿ ಬಸ್‌ಗಳು ಇರುವ ರಸ್ತೆಯಲ್ಲೇ ಸಂಚರಿಸುತ್ತಿವೆ. ಬಿಎಂಟಿಸಿ ಬಸ್‌ಗಳು ಮಾತ್ರ ಇಲ್ಲ. ದುಬಾರಿ ದರ ಭರಿಸಿ ಆಟೋರಿಕ್ಷಾದಲ್ಲಿ ಸಂಚರಿಸಬೇಕಿದೆ.**

  – **ಪ್ರಿಯಾಂಕಾ,** ಕಾಟನ್‌ಪೇಟೆ

  ಉತ್ತರ: ಕಾಮಗಾರಿ ನಡೆಯುತ್ತಿರುವುದರಿಂದ ಮಿನಿ ಬಸ್‌ಗಳ ಸಂಚಾರಕ್ಕೆ ಸಾಧ್ಯವಿದೆಯೇ ಎಂದು ಪರಿಶೀಲಿಸುತ್ತೇನೆ. ಪೊಲೀಸ್ ಅಧಿಕಾರಿಗಳ ಜತೆ ಸಮಾಲೋಚನೆ ನಡೆಸಿ ಸಾಧ್ಯವಿದ್ದರೆ ದೊಡ್ಡ ಬಸ್‌ಗಳ ಸಂಚಾರವನ್ನೂ ಆರಂಭಿಸಲಾಗುವುದು.

- **ಮೂಡಲಪಾಳ್ಯದಿಂದ ಮೆಜೆಸ್ಟಿಕ್‌ಗೆ ಹೋಗುವ ಬಸ್‌ಗಳು ವಿಜಯನಗರ ಮಾರ್ಗದಲ್ಲಿ ಸಂಚರಿಸಿದರೆ ಅನುಕೂಲ** ಆಗಲಿದೆ.

  –**ಸಂಪತ್,** ಮೂಡಲಪಾಳ್ಯ

  ಉ: ಜನರಿಗೆ ಅನುಕೂಲ ಆಗುವಂತೆಯೇ ಮಾರ್ಗ ರೂಪಿಸಲಾಗಿರುತ್ತದೆ. 2–3 ದಿನಗಳಲ್ಲಿ ಅಧಿಕಾರಿಗಳನ್ನು ಸ್ಥಳಕ್ಕೆ ಕಳುಹಿಸಿ ಪರಿಶೀಲಿಸುತ್ತೇನೆ.

- **ಕಾಟನ್‌ಪೇಟೆ ಮಾರ್ಗದಲ್ಲಿ ಸಂಚರಿಸುತ್ತಿದ್ದ 45ಜಿ ಮತ್ತು 222 ಬಸ್‌ಗಳ ಕಾರ್ಯಾಚರಣೆ ಸ್ಥಗಿತಗೊಳಿಸಲಾಗಿದೆ.**

  –**ಪಾಪಣ್ಣ,** ಮೂಡಲಪಾಳ್ಯ

  ಉ: ರಸ್ತೆ ಸರಿಯಾಗಿದ್ದರೆ 3-4 ದಿನಗಳಲ್ಲಿ ಎರಡೂ ಮಾರ್ಗಗಳ ಬಸ್ ಕಾರ್ಯಾಚರಣೆ ಆರಂಭವಾಗಲಿದೆ.

- **ಬೆಂಗಳೂರಿನ ಹಲವೆಡೆ ಬಿಬಿಎಂಪಿ ಕಟ್ಟಿರುವ ಶೆಲ್ಟರ್‌ಗಳ ಬಳಿ ಬಸ್‌ಗಳು ನಿಲ್ಲುವುದಿಲ್ಲ. ಶೆಲ್ಟರ್‌ನಲ್ಲಿ ನಿಂತಿರುವ ಜನ ತೊಂದರೆ ಅನುಭವಿಸಬೇಕಿದೆ.**

  –**ಜೀವನ್,** ಲಂಚಮುಕ್ತ ಕರ್ನಾಟಕ ವೇದಿಕೆ ಕಾರ್ಯದರ್ಶಿ

  ಉ: ಎಲ್ಲೆಲ್ಲಿ ಈ ರೀತಿಯ ತೊಂದರೆ ಇದೆ ಎಂಬುದನ್ನು ಪರಿಶೀಲಿಸಲು ಅಧಿಕಾರಿಗಳಿಗೆ ಸೂಚನೆ ನೀಡುತ್ತೇನೆ.

- **ಕಬ್ಬನ್ ಪಾರ್ಕ್ ಮೆಟ್ರೊ ನಿಲ್ದಾಣದಿಂದ ಮೌಂಟ್ ಕಾರ್ಮೆಲ್ ಕಾಲೇಜು ತನಕ ಫೀಡರ್ ಬಸ್ ಸೇವೆ ಅಗತ್ಯವಿದೆ. ನಗರದ ಹಲವೆಡೆ ಬಸ್ ನಿಲುಗಡೆ ಮಾರ್ಗದಲ್ಲಿ(ಬಸ್ ಬೇ) ಬೇರೆ ವಾಹನಗಳನ್ನು ನಿಲ್ಲಿಸಲಾಗುತ್ತಿದೆ.**

  –**ರಾಜಕುಮಾರ್ ದುಗಾರ್,** ಹೋರಾಟಗಾರ

  ಉ: ಸ್ಮಾರ್ಟ್‌ಸಿಟಿ ಕಾಮಗಾರಿ ಮುಗಿದಿದ್ದರೆ ಕಬ್ಬನ್ ಪಾರ್ಕ್ ಮೆಟ್ರೊ ನಿಲ್ದಾಣದಿಂದ ಮೌಂಟ್ ಕಾರ್ಮೆಲ್ ಕಾಲೇಜು ಮಾರ್ಗದಲ್ಲಿ ಬಸ್ ಸಂಚಾರ ಆರಂಭಿಸಲಾಗುವುದು. ಬಸ್ ನಿಲುಗಡೆ ಮಾರ್ಗದಲ್ಲಿ ಬೇರೆ ವಾಹನಗಳ ನಿಲುಗಡೆ ಆಗದಂತೆ ಕ್ರಮ ಕೈಗೊಳ್ಳಲಾಗುವುದು.

- **ರೈಲು ನಿಲ್ದಾಣಗಳಲ್ಲಿ ಬಿಎಂಟಿಸಿ ಬಸ್‌ಗಳು ಯಾವ ಯಾವ ಮಾರ್ಗಕ್ಕೆ ಇವೆ ಎಂಬ ಮಾಹಿತಿಯೇ ಸಿಗುವುದಿಲ್ಲ. ಹೊಸದಾಗಿ ಬರುವ ಪ್ರಯಾಣಿಕರು ಪರದಾಡಬೇಕಾಗುತ್ತದೆ. ರೈಲು ನಿಲ್ದಾಣದಿಂದ ಶಾಂತಿನಗರಕ್ಕೆ ಹೋಗಲು ಆಟೋರಿಕ್ಷಾದಲ್ಲಿ ₹300 ಕೇಳುತ್ತಾರೆ. ಫಲಕ ಇದ್ದರೆ ಬಿಎಂಟಿಸಿ ಬಸ್‌ನಲ್ಲಿ ಕಡಿಮೆ ಖರ್ಚಿನಲ್ಲಿ ತಲುಪಬಹುದು.**

  –**ಐಶ್ವರ್ಯ,** ಗೋಕಾಕ

  ಉ: ರೈಲು ನಿಲ್ದಾಣಗಳಲ್ಲಿ ಬಿಎಂಟಿಸಿ ಬಸ್‌ಗಳ ಫಲಕ ಬೇಕು ಎಂಬುದು ಒಳ್ಳೆಯ ಸಲಹೆ. ಫಲಕ ಅಳವಡಿಸಲು ಕೂಡಲೇ ಕ್ರಮ ಕೈಗೊಳ್ಳಲಾಗುವುದು.

- **ಯಲಹಂಕ ಮೂಲಕ ದೇವನಹಳ್ಳಿಗೆ ಹೋಗಲು 298 ಒಂದೇ ಬಸ್ ಇದೆ. ಯಲಹಂಕದಿಂದ ಬೆಟ್ಟಹಲಸೂರಿಗೆ ಹೋಗಲು ಬಸ್‌ಗಳೇ ಇಲ್ಲ. ಗ್ರಾಮಾಂತರ ಪ್ರದೇಶ ಎಂಬ ಕಾರಣಕ್ಕೆ ಹಳೇ ಬಸ್‌ಗಳನ್ನೇ ಕಳುಹಿಸಲಾಗುತ್ತಿದೆ. ಮಳೆ ಬಂದರೆ ಸೋರುತ್ತಿವೆ.**

  –**ವೆಂಕಟಾಚಲಪತಿ,** ಮಾರುತಿನಗರ, ಯಲಹಂಕ

  ಉ: ದೇವನಹಳ್ಳಿ ಮಾರ್ಗಕ್ಕೆ ಹೆಚ್ಚುವರಿ ಬಸ್‌ಗಳ ವ್ಯವಸ್ಥೆ ಮಾಡಲಾಗುವುದು. ಹೊಸದಾಗಿ ಬಸ್‌ಗಳನ್ನು ಖರೀದಿಸುತ್ತಿದ್ದು, 2 ತಿಂಗಳಲ್ಲಿ ಹೊಸ ಬಸ್‌ಗಳು ಯಲಹಂಕ ಮಾರ್ಗದಲ್ಲೂ ಸಂಚರಿಸಲಿವೆ.

- **ಕೆ.ಆರ್.ಮಾರುಕಟ್ಟೆ ಕಡೆಗೆ ಹೋಗುವ ಬಸ್‌ಗಳು ಇಲ್ಲ. ಹೆಚ್ಚುವರಿ ಬಸ್‌ಗಳ ವ್ಯವಸ್ಥೆ ಬೇಕು. ರಾತ್ರಿ ವೇಳೆಯಂತೂ ಬಸ್‌ಗಳೇ ಇಲ್ಲ.**

  –**ಕದಿರಪ್ಪ,** ಕೆಂಗೇರಿ ಉಪನಗರದ ಒಳಗೇರಹಳ್ಳಿ ನಿವಾಸಿಗಳ ಒಕ್ಕೂಟದ ಅಧ್ಯಕ್ಷ

  ಉ: ಕೋವಿಡ್ ಬಳಿಕ ರಾತ್ರಿ ತಂಗುವ ಬಸ್‌ಗಳ ಸಂಖ್ಯೆ ಕಡಿಮೆಯಾಗಿದ್ದು, ಮುಂದಿನ ದಿನಗಳಲ್ಲಿ ಹೆಚ್ಚಿಸಲಾಗುವುದು. ಹಗಲು ವೇಳೆ ಬಸ್‌ಗಳ ಟ್ರಿಪ್ ಹೆಚ್ಚಳಕ್ಕೆ ಕ್ರಮ ಕೈಗೊಳ್ಳಲಾಗುವುದು.

KHARAGPUR PARAMEDICAL INSTITUTE

Invite applications for Professor/Associate Professor/ Lecturer & M. Sc. Nurses for proposed different Paramedical Courses, as given below:-
◉Bachelor in Medical Laboratory Technology ◉Bachelor in Critical Care Technology ◉Bachelor in Radiology ◉Bachelor in Physiotherapy ◉Master in Hospital Administration.
Address:At.+P.O.Matkatpur, P.O. Kharagpur(Local), Dist.-Paschim Medinipur, Pin-721305,West Bengal.
Website: www.k-dest.org;
Email: a.acharya.kgp@gmail.com.
Phone No: 9434936355//9434804508

7 ಜಿಲ್ಲೆಗಳ ಶಾಲಾ ಮಕ್ಕಳಿಗೆ ಬೇಯಿಸಿದ ಮೊಟ್ಟೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದ ಏಳು ಜಿಲ್ಲೆಗಳ ಸರ್ಕಾರಿ ಮತ್ತು ಅನುದಾನಿತ ಪ್ರಾಥಮಿಕ ಮತ್ತು ಹಿರಿಯ ಪ್ರಾಥಮಿಕ ಶಾಲೆಗಳ 1ರಿಂದ 8ನೇ ತರಗತಿವರೆಗಿನ ವಿದ್ಯಾರ್ಥಿಗಳಿಗೆ ಮಧ್ಯಾಹ್ನದ ಬಿಸಿಯೂಟದೊಂದಿಗೆ ಬೇಯಿಸಿದ ಮೊಟ್ಟೆ (ಮೊಟ್ಟೆ ತಿನ್ನದವರಿಗೆ ಬಾಳೆಹಣ್ಣು) ವಿತರಿಸಲು ರಾಜ್ಯ ಸರ್ಕಾರ ನಿರ್ಧರಿಸಿದೆ.

ಬೀದರ್, ರಾಯಚೂರು, ಕಲಬುರ್ಗಿ, ಯಾದಗಿರಿ, ಕೊಪ್ಪಳ, ಬಳ್ಳಾರಿ ಮತ್ತು ವಿಜಯಪುರ ಜಿಲ್ಲೆಯ ಒಟ್ಟು 14,44,322 ಮಕ್ಕಳಿಗೆ ಬಿಸಿಯೂಟದೊಂದಿಗೆ ಪ್ರತಿ ತಿಂಗಳು 12 ಮೊಟ್ಟೆ, ಮೊಟ್ಟೆ ಸೇವಿಸದವರಿಗೆ ಮೊಟ್ಟೆಯ ಬದಲು ಬಾಳೆಹಣ್ಣು ನೀಡಲು ತೀರ್ಮಾನಿಸಲಾಗಿದೆ.

ಪ್ರಸಕ್ತ ಸಾಲಿನಲ್ಲಿ ಡಿಸೆಂಬರ್ ತಿಂಗಳಿನಿಂದ 2020ರ ಮಾರ್ಚ್ 30ರವರೆಗೆ (ಒಟ್ಟು ನಾಲ್ಕು ತಿಂಗಳು) ಈ ಯೋಜನೆ ಜಾರಿಯಲ್ಲಿ ಇರಲಿದೆ. ಸುಮಾರು ₹ 39.86 ಕೋಟಿ ವೆಚ್ಚ ಅಂದಾಜಿಸಲಾಗಿದೆ.

ಅಪೌಷ್ಟಿಕತೆ, ರಕ್ತಹೀನತೆ ಹೊಂದಿರುವ ಶಾಲಾ ಮಕ್ಕಳ ಶೇಕಡಾವಾರು ಪ್ರಮಾಣ ಯಾದಗಿರಿಯಲ್ಲಿ ಅತೀ ಹೆಚ್ಚು ಶೇ 74ರಷ್ಟಿದೆ. ಉಳಿದಂತೆ, ಕಲಬುರಗಿಯಲ್ಲಿ ಶೇ 72.4, ಬಳ್ಳಾರಿ ಶೇ 72.3, ಕೊಪ್ಪಳ ಶೇ 70.7, ರಾಯಚೂರು ಶೇ 70.6, ಬೀದರ್ ಶೇ 69.1, ವಿಜಯಪುರ ಶೇ 68ರಷ್ಟಿದೆ. 6ರಿಂದ 15ರವರೆಗಿನ ವಯೋಮಾನದವರೆಗಿನ ಶಾಲಾ ಮಕ್ಕಳಲ್ಲಿ ಅಪೌಷ್ಟಿಕತೆ, ರಕ್ತ ಹೀನತೆ ಹಾಗೂ ಪೋಷಕಾಂಶಗಳ ಕೊರತೆ ನಿವಾರಿಸುವ ಉದ್ದೇಶದಿಂದ 'ಪ್ರಧಾನ ಮಂತ್ರಿ ಪೋಷಣ್ ಶಕ್ತಿ ನಿರ್ಮಾಣ್' ಯೋಜನೆಯಲ್ಲಿ ಈ ಕಾರ್ಯಕ್ರಮ ಅನುಷ್ಠಾನಗೊಳಿಸಲಾಗುತ್ತಿದೆ.

ನಗರದಲ್ಲಿ ಇಂದು

ಎಂಜಿನಿಯರ್‌ಗಳ ವಾಕಥಾನ್: ಅತಿಥಿಗಳು–ರಾಜ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕೆಗಳ ಸಚಿವ ಮುರುಗೇಶ ನಿರಾಣಿ, ಅದಮ್ಯ ಚೇತನ ಸಂಸ್ಥೆಯ ಮುಖ್ಯಸ್ಥೆ ತೇಜಸ್ವಿನಿ ಅನಂತಕುಮಾರ್, ಆಯೋಜನೆ–ಅಸೋಸಿಯೇಷನ್ ಆಫ್ ಕನ್ಸಲ್ಟಿಂಗ್ ಸಿವಿಲ್ ಎಂಜಿನಿಯರ್ಸ್ (ಎಸಿಸಿಇ), ಸ್ಥಳ–ಸ್ವಾತಂತ್ರ್ಯ ಉದ್ಯಾನ, ಬೆಳಿಗ್ಗೆ 10

ರಾಷ್ಟ್ರೀಯ ಬೌದ್ಧ ಧಮ್ಮಾಧಿವೇಶನ: ಉದ್ಘಾಟನೆ–ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಅತಿಥಿಗಳು–ಉನ್ನತ ಶಿಕ್ಷಣ ಸಚಿವ ಸಿ.ಎನ್. ಅಶ್ವತ್ಥನಾರಾಯಣ, ಆಶಯ ನುಡಿ–ಎಂ.ವೆಂಕಟಸ್ವಾಮಿ, ಅಧ್ಯಕ್ಷತೆ–ಎಚ್.ಆರ್.ಸುರೇಂದ್ರ, ಆಯೋಜನೆ–ವಿಶ್ವ ಬುದ್ಧ ಧಮ್ಮ ಸಂಘ ಹಾಗೂ ನಾಗಸೇನಾ ಬುದ್ಧ ವಿಹಾರ, ಸ್ಥಳ–ನಾಗಸೇನಾ ವಿದ್ಯಾಲಯದ ಮೈದಾನ, ಸದಾಶಿವನಗರ, ಬೆಳಿಗ್ಗೆ 10.30

ಯುವ ನಾಟಕೋತ್ಸವ: ಉದ್ಘಾಟನೆ–ವೂಡೇ ಪಿ.ಕೃಷ್ಣ, ಅತಿಥಿಗಳು–ಎಸ್. ರಂಗಪ್ಪ, ಶಿವಾನಂದ ತಗಡೂರು, ಕೆ.ಬಿ.ಕಿರಣ್ ಸಿಂಗ್, ರಾಜಶೇಖರ ನುಲಿ, ಆಯೋಜನೆ–ನಂದನ ಬೆಂಗಳೂರು, ಸ್ಥಳ–ರವೀಂದ್ರ ಕಲಾಕ್ಷೇತ್ರ, ಮಧ್ಯಾಹ್ನ 12

ಶಾರದಾ ಪ್ರತಿಷ್ಠಾನದ ಉದ್ಘಾಟನೆ ಹಾಗೂ ಬೇಲೂರು ರಘುನಂದನ್ ಅವರ 'ಪದ ಪದ ಕಟ್ಟುಪದ' ಪುಸ್ತಕ ಬಿಡುಗಡೆ: ಉದ್ಘಾಟನೆ– ಶಂಭುನಾಥ ಸ್ವಾಮೀಜಿ, ಪುಸ್ತಕ ಬಿಡುಗಡೆ–ಬೆಂಗಳೂರು ಸಂಚಾರ ವಿಭಾಗದ ಜಂಟಿ ಕಮಿಷನರ್ ಬಿ.ಆರ್.ರವಿಕಾಂತೇಗೌಡ, ಅತಿಥಿಗಳು– ಎನ್.ಆರ್.ರಮೇಶ್, ಟಿ.ರಾಮಚಂದ್ರಯ್ಯ, ಎಚ್.ಟಿ. ರಾಮಯ್ಯ, ರಾಜಶೇಖರ್ ಮಠಪತಿ, ಅಧ್ಯಕ್ಷತೆ–ಗುಂಡಣ್ಣ, ಸ್ಥಳ–ರವೀಂದ್ರ ಕಲಾಕ್ಷೇತ್ರ, ಸಂಜೆ 6

ಪರಸ್ಪರ ಅಂತರ ಕಾಯ್ದುಕೊಳ್ಳಿ

ಬಿಜೆಪಿ: ಸಂವಿಧಾನ ಗೌರವ ಅಭಿಯಾನ

ಬೆಂಗಳೂರು: ಇದೇ 26ರಿಂದ ಡಿಸೆಂಬರ್ 6ರವರೆಗೆ ಬಿಜೆಪಿ ವತಿಯಿಂದ ರಾಜ್ಯದಾದ್ಯಂತ ಸಂವಿಧಾನ ಗೌರವ ಅಭಿಯಾನ ಹಮ್ಮಿಕೊಳ್ಳಲಾಗಿದೆ ಎಂದು ಪಕ್ಷದ ಎಸ್‌ಸಿ ಮೋರ್ಚಾ ರಾಜ್ಯ ಘಟಕದ ಅಧ್ಯಕ್ಷ ಛಲವಾದಿ ನಾರಾಯಣಸ್ವಾಮಿ ತಿಳಿಸಿದರು.

ಮಂಗಳವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, 'ರಾಜ್ಯದ ಎಲ್ಲ ಜಿಲ್ಲೆಗಳಲ್ಲೂ ನಡೆಯುವ ಅಭಿಯಾನದಲ್ಲಿ ಅಂಬೇಡ್ಕರ್ ಪುತ್ಥಳಿಗೆ ಮಾಲಾರ್ಪಣೆ, ಸಂವಿಧಾನದ ಪ್ರತಿ ಹಿಡಿದು ಪಾದಯಾತ್ರೆ ಮುಂತಾದ ಕಾರ್ಯಕ್ರಮಗಳನ್ನು ಆಯೋಜಿಸಲಾಗುವುದು. ಅಂಬೇಡ್ಕರ್ ಪರಿನಿರ್ವಾಣ ಹೊಂದಿದ ದಿನವಾದ ಡಿ.6ರಂದು ಅಭಿಯಾನ ಸಮಾರೋಪಗೊಳ್ಳಲಿದೆ' ಎಂದರು.

PUBLIC NOTICE

NOTICE is here by given to the public at large that we are investigating the clear & marketable title of

1) Mr. Sanjay Khinvasra S/o. Late Karanraj, **2) Mr. Ashok Khinvasra** S/o. Late Karanraj, both residing at, No. 4, Skyline Residency, 105, Kingston Road, Richmond Town, Bengaluru – 560025, **3) Mr. Farook Mahmood**, S/o Late Sri Mohmood Yunus, No. 24, Harris Road, Benson Town, Bengaluru - 45 and **4) Mr. Zahed Mahmood**, S/o Late Mr. Mahmood Yunus, No. 78/2A, Benson Cross Road, Benson Town, Bengaluru - 560046 in respect of all that piece and parcel of property being the portion of property bearing Municipal No. 162/168/190/27/2/6, New Katha No. 162/168/190 and No. 162/168/190/27/2/6, New No. 162/168/190/1, Ambalipara, Ward No. 150, Bangalore (earlier, Plot No. 6, formed in residentially converted land bearing Survey No. 27/2, situated at Amablipura Village, Varthur Hobli, Bangalore South Taluk, Bangalore District, bearing Bellandur Grama Panchayat Katha No.190/27/2/6), measuring Eastto West: 200 feet and North to South: 100 feet, in all measuring 20,000 square feet and bounded as under:-

On or towards the East: Haralur Road
On or towards the West: Common Land bearing Survey No. 27/1
On or towards the North: Site No. 7 formed in Survey No. 27/2
On or towards the South: Site No. 5 formed in Survey No. 27/2

ALL PERSONS including individuals, Hindu undivided family, companies, banks, financial institution(s), non-banking financial institution(s), firms, association of persons or a body of individuals, whether incorporated or not, lenders and/or creditors having any benefits, objection, demand, claim, right, title and/or interest in respect of **Land** or any part or portion thereof, by way of sale, exchange, mortgage, pledge, charge, gift, trust, inheritance, succession, family arrangement/ settlement, bequest, possession, lease, tenancy, maintenance, easement, memorandum of understanding, license, share, assignment, lien, attachment, development rights, partnership, right of way, *lis pendens*, decree or order of any judicial/quasi-judicial authority, reservation, contracts/ agreement, power of attorney, option, FSI consumption, right of first refusal, pre-emption or any liability or commitment or otherwise of any nature whatsoever are hereby requested to inform the same in writing, supported with the original documents, to the undersigned at the address mentioned below within a period of 10 (ten) days from the date of the publication of this notice, failing which, the claim or right, if any, of such person or persons shall be considered to have been waived and/or abandoned.

Dated this the 25th day of November, 2021

B.N.Prakash
Partner, Lawyers Inc.,
No.15/2, V.S.Raju Road,
12th Block, Kumarapark West,
Bengaluru-560020.

ಮಲ್ಲೇಶ್ವರದಲ್ಲಿ ಪರಿಸರ ಪ್ರೇಮಿಯ ವಿಭಿನ್ನ ಮಾದರಿಯ ಪಾನೀಯದಂಗಡಿ

ಪ್ಲಾಸ್ಟಿಕ್ ರಹಿತ 'ಈಟ್ ರಾಜಾ'!

• ಮನೋಹರ ಎಂ.

ಬೆಂಗಳೂರು: ಮಲ್ಲೇಶ್ವರದಲ್ಲಿರುವ 'ಈಟ್ ರಾಜಾ' ಹೆಸರಿನ ಪ್ಲಾಸ್ಟಿಕ್‌ರಹಿತ ಜ್ಯೂಸ್ ಅಂಗಡಿ, ಜ್ಯೂಸ್ ಸಿದ್ಧಪಡಿಸುವ ಮತ್ತು ಸೇವಿಸುವ ಶೈಲಿಗಳಿಂದ ಜನಾಕರ್ಷಣೆ ಪಡೆದಿದೆ.

ಇಲ್ಲಿ ನೀರಿನ ಬಾಟಲಿ ಮಾರಾಟಕ್ಕಿಲ್ಲ. ನೋ ಪ್ಲಾಸ್ಟಿಕ್ ಸ್ಟ್ರಾ. ಒಂದು ಸಿಗರೇಟ್ = ಒಂದು ಜ್ಯೂಸ್' ಹೀಗೆ ದಿನಕ್ಕೊಂದು ಹೆಸರಿನಲ್ಲಿ ವಿಭಿನ್ನ ಶೈಲಿಗಳಲ್ಲಿ ತಯಾರಿಸುವ ಜ್ಯೂಸ್‌ನ ರುಚಿ ಜನರನ್ನು ಸೆಳೆಯುತ್ತಿದೆ.

ಜ್ಯೂಸ್ ಅಂಗಡಿಗಳ ಎದುರು ಜನ ಬೇಸಿಗೆಯಲ್ಲಿ ಸಾಲುಗಟ್ಟಿ ನಿಲ್ಲುವುದು ಸಾಮಾನ್ಯ. ಆದರೆ, ಇಲ್ಲಿ ಪ್ರತಿದಿನವೂ ಸಾಲು ನಿಲ್ಲುತ್ತಾರೆ. ಮಲ್ಲೇಶ್ವರದಿಂದ ಆರಂಭಗೊಂಡ 'ಈಟ್ ರಾಜಾ'ನ ಪಯಣ ಜಯನಗರ, ವಿ.ವಿ. ಪುರ, ಮೈಸೂರು ರಸ್ತೆ, ವಿಜಯವಾಡ, ದುಬೈವರೆಗೂ ತಲುಪಿದೆ.

ಈ ಜ್ಯೂಸ್ ಅಂಗಡಿ ಪರಿಕಲ್ಪನೆಯ ರುವಾರಿ ಆನಂದ್ ರಾಜ್. ರೇಡಿಯೊ ಕ್ಷೇತ್ರದಲ್ಲಿ 'ಬೀಟ್ ರಾಜಾ' ಎಂದೇ ಗುರುತಿಸಿಕೊಂಡಿದ್ದ ಎಂಜಿನಿಯರ್ ಪದವೀಧರ. ಖಾಸಗಿ ರೇಡಿಯೊ ವಾಹಿನಿಗಳಲ್ಲಿ ರೇಡಿಯೊ ಜಾಕಿ (ಆರ್.ಜೆ) ವೃತ್ತಿ ಆರಂಭಿಸಿದ್ದ ಅವರಿಗೆ ತಂದೆಯ ಅಕಾಲಿಕ ಮರಣ ಹೊಸ ತಿರುವು ನೀಡಿತ್ತು. ವೃತ್ತಿ ತೊರೆದು ತಂದೆ ನಡೆಸುತ್ತಿದ್ದ ಅಂಗಡಿಯಿಂದಲೇ ಹೊಸದು ಮಾಡಬೇಕೆಂಬ ಆಶಯದೊಂದಿಗೆ ಅವರು ಜ್ಯೂಸ್ ಅಂಗಡಿಯನ್ನು ಪ್ಲಾಸ್ಟಿಕ್‌ಮುಕ್ತಗೊಳಿಸಿದರು.

'ಒಮ್ಮೆ ಥಾಯ್ಲೆಂಡ್‌ಗೆ ಭೇಟಿ ನೀಡಿದಾಗ ಹೋಟೆಲ್‌ನಲ್ಲಿ ಒಣ ತೆಂಗಿನ ಚಿಪ್ಪಿನಿಂದ ಕಪ್ ತಯಾರಿಸಿ ಅದರಲ್ಲೇ ಜ್ಯೂಸ್ ನೀಡುತ್ತಿದ್ದರು. ಕಸದಿಂದ ರಸ ಮಾಡುವ ಪ್ರೇರಣೆ ಅಲ್ಲಿಂದಲೇ ಸಿಕ್ಕಿತು' ಎನ್ನುತ್ತಾರೆ ರಾಜಾ.

'ನಮ್ಮಲ್ಲಿ ಜ್ಯೂಸ್ ಸೇವಿಸಲು ಪ್ಲಾಸ್ಟಿಕ್ ಲೋಟ ಬಳಸುವುದಿಲ್ಲ. ಬದಲಿಗೆ ಹಣ್ಣಿನ ಸಿಪ್ಪೆಗಳಲ್ಲೇ ಕಪ್ ತಯಾರಿಸಿ, ಅದರಲ್ಲೇ ಗ್ರಾಹಕರಿಗೆ ಜ್ಯೂಸ್ ನೀಡುತ್ತೇನೆ. ಕಲ್ಲಂಗಡಿ, ಪೈನಾಪಲ್, ಸಪೋಟ, ಬಾಳೆಹಣ್ಣು, ಕರ್ಬೂಜ ಹಣ್ಣುಗಳನ್ನು ಅರ್ಧಭಾಗ ಕತ್ತರಿಸಿ ಹಣ್ಣಿನ ಸಾರವನ್ನು ತೆಗೆದು, ಅದಕ್ಕೆ ಕಪ್ ರೂಪ ನೀಡಲಾಗುತ್ತದೆ. ಹಣ್ಣಿನ ಜ್ಯೂಸ್, ಹಣ್ಣಿನ ಕಪ್‌ನಲ್ಲೇ ಸವಿಯುವ, ಕೆಲವು ಹಣ್ಣುಗಳನ್ನು ಜ್ಯೂಸ್ ಸೇವನೆಯ ಬಳಿಕ ತಿನ್ನುವ ಆಧುನಿಕ ವಿಧಾನ ಅಳವಡಿಸಿಕೊಂಡೆ. ಈ ಪ್ರಕ್ರಿಯೆಯಲ್ಲಿ ಪ್ಲಾಸ್ಟಿಕ್ ಬಳಕೆಯೇ ಇರುವುದಿಲ್ಲ' ಎಂದರು.

ಅಮ್ಮ ಮಾಡಿದ್ದು: 'ಅಮ್ಮನ ಕೈರುಚಿ ಎಲ್ಲರಿಗೂ ಅಚ್ಚುಮೆಚ್ಚು. ಹೀಗಾಗಿ ವಿವಿಧ ಬಡಾವಣೆಗಳಲ್ಲಿರುವ ಅಮ್ಮಂದಿರನ್ನು ಸಂಪರ್ಕಿಸಿ, ಅವರ ಮನೆಗಳಿಂದಲೇ ವಿವಿಧ ಖಾದ್ಯಗಳನ್ನು ತಯಾರಿಸಿ ಮಾರಾಟ ಮಾಡುತ್ತೇನೆ. ಇದಕ್ಕೆ 'ಅಮ್ಮ ಮಾಡಿದ್ದು' ಎಂಬ ಹೆಸರಿಟ್ಟಿದ್ದೇನೆ' ಎಂದರು.

ಜ್ಯೂಸ್ ಸಿದ್ಧಪಡಿಸುವ ಸೈಕಲ್‌ನೊಂದಿಗೆ ಆನಂದ್ ರಾಜ್

ಸೈಕಲ್ ತುಳಿದರೆ ಜ್ಯೂಸ್ ಸಿದ್ಧ

'ವಿದ್ಯುತ್ ಬಳಕೆ ಮಾಡದೆ ಕೇವಲ ಸೈಕಲ್ ತುಳಿಯುವ ಮೂಲಕ ಜ್ಯೂಸ್ ಸಿದ್ಧಗೊಳ್ಳುತ್ತದೆ. ಆ ಮಾದರಿಯ ಸೈಕಲ್ ಅನ್ನು ಈಟ್ ರಾಜಾ ಮಳಿಗೆಯಲ್ಲಿ ಇಡಲಾಗಿದೆ. ಗ್ರಾಹಕರು ಸ್ವತಃ ಸೈಕಲ್ ತುಳಿದು ಜ್ಯೂಸ್ ಸಿದ್ಧಪಡಿಸಿಕೊಳ್ಳುತ್ತಾರೆ. ಇದರಿಂದ ವ್ಯಾಯಾಮವೂ ಆಗುತ್ತದೆ. ರುಚಿಯಾದ ಜ್ಯೂಸ್ ಕೂಡ ಸಿದ್ಧವಾಗುತ್ತದೆ' ಎಂದು ರಾಜ್ ಹೇಳಿದರು.

ಹೊಸ ಬೆಳಕು

ಸುದ್ದಿ 2 ನಿಮಿಷ

'ಸಂತ್ರಸ್ತೆಯನ್ನೇ ಮದುವೆಯಾಗಿದ್ದರೂ ಅತ್ಯಾಚಾರ ಆರೋಪ ಎದುರಿಸಬೇಕು'

ಬೆಂಗಳೂರು: 'ಅತ್ಯಾಚಾರ ಆರೋಪದ ಸಂತ್ರಸ್ತೆಯನ್ನು ನಾನೀಗ ಮದುವೆಯಾಗಿದ್ದೇನೆ ಎಂಬ ಆಧಾರದಲ್ಲಿ ಆರೋಪಿಯ ವಾದವನ್ನು ಮನ್ನಿಸಿ, ಆತನ ವಿರುದ್ಧ ದಾಖಲಿಸಿದ ಅತ್ಯಾಚಾರ ಪ್ರಕರಣವನ್ನು ರದ್ದುಪಡಿಸಲು ಆಗದು' ಎಂದು ಹೈಕೋರ್ಟ್ ಅಭಿಪ್ರಾಯಪಟ್ಟಿದೆ.

'ನಾನೀಗ ಸಂತ್ರಸ್ತೆಯನ್ನು ಮದುವೆಯಾಗಿದ್ದೇನೆ. ಆದರೆ, ಸೆಷನ್ಸ್ ನ್ಯಾಯಾಲಯದಲ್ಲಿ ನನ್ನ ವಿರುದ್ಧ ಅತ್ಯಾಚಾರ ಆರೋಪ ಪ್ರಕರಣದ ವಿಚಾರಣೆ ನಡೆಯುತ್ತಿದ್ದು ಅದನ್ನು ರದ್ದುಪಡಿಸಬೇಕು' ಎಂದು ಕೋರಿ ಆರೋಪಿ ಹಾಗೂ ಸಂತ್ರಸ್ತೆ ಜಂಟಿಯಾಗಿ ಸಲ್ಲಿಸಿದ್ದ ಅರ್ಜಿಯನ್ನು ನ್ಯಾಯಮೂರ್ತಿ ಎಚ್.ಪಿ ಸಂದೇಶ್ ಅವರಿದ್ದ ಏಕಸದಸ್ಯ ನ್ಯಾಯಪೀಠ ವಜಾಗೊಳಿಸಿದೆ.

'ಘಟನೆ ನಡೆದ ಸಂದರ್ಭದಲ್ಲಿ ಸಂತ್ರಸ್ತೆಗೆ 19 ವರ್ಷವಾಗಿತ್ತು. ಆ ಬಳಿಕ ನಾವಿಬ್ಬರೂ ಮದುವೆಯಾಗಿದ್ದೇವೆ. ಆದ್ದರಿಂದ, ಪ್ರಕರಣ ರದ್ದುಪಡಿಸಬೇಕು' ಎಂದು ಅರ್ಜಿದಾರರು ಕೋರಿದ್ದರು.

ಇದನ್ನು ತಿರಸ್ಕರಿಸಿರುವ ನ್ಯಾಯಪೀಠ, 'ಘಟನೆ ನಡೆದ ಸಂದರ್ಭದಲ್ಲಿ ಸಂತ್ರಸ್ತೆ ಅಪ್ರಾಪ್ತೆಯಾಗಿದ್ದಳೋ ಅಥವಾ ವಯಸ್ಕಳೋ ಎಂಬುದನ್ನು ವಿಚಾರಣಾ ನ್ಯಾಯಾಲಯವೇ ನಿರ್ಧರಿಸಲಿದೆ. ಅತ್ಯಾಚಾರ ಹಾಗೂ ಪೋಕ್ಸೊ ಪ್ರಕರಣಗಳಲ್ಲಿ ಅಪರಾಧ ದಂಡ ಸಂಹಿತೆಯ ಕಲಂ 482 ಅನ್ನು ಬಳಸಿ ಪ್ರಕರಣ ರದ್ದುಪಡಿಸುವುದು ಸರಿಯಲ್ಲ' ಎಂದು ಹೇಳಿದೆ.

ಆಸ್ತಿ ವಿವರ ಮುಚ್ಚಿಟ್ಟಿದ್ದ ಮಾಯಣ್ಣ!

ಪ್ರಜಾವಾಣಿ ವಾರ್ತೆ

ಬೆಂಗಳೂರು: ಆದಾಯಕ್ಕಿಂತ ಹೆಚ್ಚು ಆಸ್ತಿ ಹೊಂದಿರುವ ಆರೋಪ ಎದುರಿಸುತ್ತಿರುವ ಬಿಬಿಎಂಪಿ ಕೇಂದ್ರ ಕಚೇರಿಯ ಪ್ರಥಮ ದರ್ಜೆ ಸಹಾಯಕ ಮಾಯಣ್ಣ ಹಲವು ವರ್ಷಗಳಿಂದ ತನ್ನ ಆಸ್ತಿ ಮತ್ತು ಬಾಧ್ಯತೆಯ ವಿವರಗಳನ್ನೇ ಸಲ್ಲಿಸಿರಲಿಲ್ಲ. ಸಕ್ಷಮ ಪ್ರಾಧಿಕಾರವೂ ಈ ಬಗ್ಗೆ ಯಾವುದೇ ಕ್ರಮ ಕೈಗೊಂಡಿರಲಿಲ್ಲ ಎಂಬುದು ಭ್ರಷ್ಟಾಚಾರ ನಿಗ್ರಹ ದಳದ ತನಿಖೆಯಲ್ಲಿ ಬಯಲಿಗೆ ಬಂದಿದೆ.

ಪಾಲಿಕೆಯ ಕೇಂದ್ರ ಕಚೇರಿಯಲ್ಲಿ ಪ್ರಥಮ ದರ್ಜೆ ಸಹಾಯಕನಾಗಿರುವ ಮಾಯಣ್ಣ, ಬಿಬಿಎಂಪಿ ನೌಕರರ ಸಂಘದ ಅಧ್ಯಕ್ಷರಾಗಿದ್ದರು. ಹಲವು ವರ್ಷಗಳಿಂದಲೂ ಸಂಘದ ಪದಾಧಿಕಾರಿಯಾಗಿದ್ದಾರೆ. ಅದೇ ಪ್ರಭಾವವನ್ನು ಬಳಸಿಕೊಂಡು ಆಸ್ತಿ ವಿವರ ಸಲ್ಲಿಸುವುದರಿಂದ ತಪ್ಪಿಸಿಕೊಳ್ಳುತ್ತಿದ್ದರು. ವರ್ಷಗಳ ಕಾಲದಿಂದಲೂ ಇದು ನಡೆದುಕೊಂಡು ಬಂದಿದೆ ಎಂದು ತನಿಖಾ ಸಂಸ್ಥೆಯ ಮೂಲಗಳು ತಿಳಿಸಿವೆ.

ನಿಯಮಗಳ ಪ್ರಕಾರ, ಸರ್ಕಾರದ ಎಲ್ಲ ನೌಕರರು ಪ್ರತಿ ವರ್ಷವೂ ತಮ್ಮ ಆಸ್ತಿ ಮತ್ತು ಬಾಧ್ಯತೆಯ ವಿವರಗಳುಳ್ಳ ಪ್ರಮಾಣಪತ್ರವನ್ನು ಸಕ್ಷಮ ಪ್ರಾಧಿಕಾರಕ್ಕೆ ಸಲ್ಲಿಸಬೇಕು. ಆದರೆ, ಮಾಯಣ್ಣ ಹಲವು ವರ್ಷಗಳಿಂದ ಈ ನಿಯಮ ಪಾಲನೆ ಮಾಡಿರಲಿಲ್ಲ ಎಂಬ ಮಾಹಿತಿ ಲಭಿಸಿದೆ.

ಬೇನಾಮಿ ಆಸ್ತಿಗೆ ಶೋಧ: ಮಾಯಣ್ಣ ಮೂವರು ಬೇನಾಮಿಗಳ ಹೆಸರಿನಲ್ಲಿ ಆಸ್ತಿ ಹೊಂದಿರುವ ಶಂಕೆ ಇದೆ. ಈ ಕಾರಣಕ್ಕಾಗಿ ಮೂರು ಸ್ಥಳಗಳಲ್ಲಿ ಎಸಿಬಿ ತಂಡ ಬುಧವಾರ ಶೋಧ ನಡೆಸಿದೆ.

ಪಾಲಿಕೆಯ ಸಿಬ್ಬಂದಿಯೂ ಆಗಿರುವ ಉಮಾದೇವಿ ಎಂಬುವವರ ಮನೆಯಲ್ಲೂ ಎಸಿಬಿ ಅಧಿಕಾರಿಗಳು ಶೋಧ ನಡೆಸಿದ್ದಾರೆ. ಮಾಯಣ್ಣ ಮತ್ತು ಉಮಾದೇವಿ ಬ್ಯಾಂಕ್ ಖಾತೆಗಳ ಮೂಲಕ ದೊಡ್ಡ ಪ್ರಮಾಣದ ವಹಿವಾಟು ನಡೆಸಿರುವ ಮಾಹಿತಿ ತನಿಖಾ ತಂಡಕ್ಕೆ ಲಭ್ಯವಾಗಿತ್ತು. ಅದೇ ಆಧಾರದಲ್ಲಿ ಶೋಧ ನಡೆದಿದೆ ಎಂದು ಗೊತ್ತಾಗಿದೆ.

'ಅಕ್ರಮವೇ ಇಲ್ಲ': ದಾಳಿ ಕುರಿತು ಪ್ರತಿಕ್ರಿಯೆ ನೀಡಿರುವ ಮಾಯಣ್ಣ, 'ನಾನು ಯಾವುದೇ ಅಕ್ರಮ ಎಸಗಿಲ್ಲ. ತನಿಖಾ ತಂಡದ ಎಲ್ಲ ಪ್ರಶ್ನೆಗಳಿಗೂ ಉತ್ತರಿಸಿದ್ದೇನೆ. ಯಾವುದೇ ಅಕ್ರಮವೂ ಇಲ್ಲ. ಸಾಹಿತ್ಯ ಪರಿಷತ್ ಚುನಾವಣೆ ಕಾರಣಕ್ಕೆ ದಾಳಿ ನಡೆದಿರಬಹುದು' ಎಂದರು.

ಮೂಲ ಪತ್ತೆಯ ಸವಾಲು: ಮಾರಪ್ಪನಪಾಳ್ಯ ಬಿಬಿಎಂಪಿ ಪ್ರೌಢಶಾಲೆ 'ಡಿ' ದರ್ಜೆ ನೌಕರ ಜಿ.ವಿ. ಗಿರಿ ಆಸ್ತಿ ಮತ್ತು ಆದಾಯದ ನಡುವೆ ಭಾರಿ ವ್ಯತ್ಯಾಸ ಕಂಡುಬಂದಿದೆ. ಇವರ ಬಳಿ ನಾಲ್ಕು ಕಾರುಗಳು ಪತ್ತೆಯಾಗಿವೆ. ಕಡಿಮೆ ಸಂಬಳದ ಹುದ್ದೆಯಲ್ಲಿದ್ದರೂ ಕೋಟಿಗಟ್ಟಲೆ ಆಸ್ತಿ ಸಂಪಾದಿಸಿದ್ದು ಯಾವ 'ಮೂಲ'ದಿಂದ ಎಂಬ ಪ್ರಶ್ನೆಗೆ ಉತ್ತರ ಹುಡುಕಲು ಎಸಿಬಿ ಅಧಿಕಾರಿಗಳು ಶೋಧ ಮುಂದುವರಿಸಿದ್ದಾರೆ.


ಪೀಣ್ಯದಾಸರಹಳ್ಳಿ ಬಾಗಲಗುಂಟೆ ವಾರ್ಡ್ ಸಿಡೇದಹಳ್ಳಿಯಲ್ಲಿರುವ ಬಿಬಿಎಂಪಿ ಗ್ರೂಪ್ ಡಿ ನೌಕರ ಜಿ.ವಿ. ಗಿರಿ ಅವರ ಮನೆ

ಎಪಿಎಂಸಿ ಕಾಯ್ದೆ ವಿರುದ್ಧ ಸುವರ್ಣ ಸೌಧಕ್ಕೆ ಮುತ್ತಿಗೆ: ರಾಜ್ಯ ರೈತ ಸಂಘ

ಬೆಂಗಳೂರು: 'ಎಪಿಎಂಸಿ ಕಾಯ್ದೆ ಹಾಗೂ ಭೂಸುಧಾರಣೆ ಕಾಯ್ದೆ (ತಿದ್ದುಪಡಿ), ಗೋಹತ್ಯೆ ನಿಷೇಧ ಕಾಯ್ದೆಗಳನ್ನು ಹಿಂಪಡೆಯದಿದ್ದಲ್ಲಿ, ಬೆಳಗಾವಿ ಅಧಿವೇಶನದ ಸಂದರ್ಭದಲ್ಲಿ ಸುವರ್ಣ ಸೌಧಕ್ಕೆ ಮುತ್ತಿಗೆ ಹಾಕಲಾಗುವುದು' ಎಂದು ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆ ರಾಜ್ಯ ಘಟಕದ ಅಧ್ಯಕ್ಷ ಕೋಡಿಹಳ್ಳಿ ಚಂದ್ರಶೇಖರ್ ಎಚ್ಚರಿಸಿದರು.

ಬುಧವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ಪ್ರಧಾನಿ ಮೋದಿ ಅವರು ಮೂರು ಕೃಷಿ ಕಾಯ್ದೆಗಳನ್ನು ಹಿಂಪಡೆದಿರುವುದು ಸ್ವಾಗತಾರ್ಹ. ಅದೇ ರೀತಿ ರಾಜ್ಯದಲ್ಲೂ ಕರಾಳ ಕಾಯ್ದೆಗಳನ್ನು ಸರ್ಕಾರ ಹಿಂಪಡೆಯಬೇಕು' ಎಂದು ಆಗ್ರಹಿಸಿದರು.

'ಒಂದು ವರ್ಷದಿಂದ ರೈತ ಚಳವಳಿಯಲ್ಲಿ ನಿರತರಾಗಿದ್ದ 700ಕ್ಕೂ ಹೆಚ್ಚು ಮಂದಿ ಮೃತಪಟ್ಟಿದ್ದು, ಅವರ ಕುಟುಂಬಗಳಿಗೆ ರಾಜ್ಯ ಸರ್ಕಾರ ತಲಾ ₹10 ಲಕ್ಷ ಹಾಗೂ ಕೇಂದ್ರ ಸರ್ಕಾರ ₹1 ಕೋಟಿ ಪರಿಹಾರ ನೀಡಬೇಕು. ಮಳೆಯಿಂದ ನಷ್ಟ ಅನುಭವಿಸಿರುವ ರೈತರಿಗೆ ಬೆಳೆ ನಷ್ಟ ಪರಿಹಾರ ನೀಡಬೇಕು ಹಾಗೂ ಬೆಳೆಗೆ ಬೆಂಬಲ ಬೆಲೆ ಶಾಸನಬದ್ಧಗೊಳಿಸಬೇಕು. ವಿದ್ಯುತ್ ಖಾಸಗೀಕರಣ ಮಾಡಬಾರದು' ಎಂದೂ ಒತ್ತಾಯಿಸಿದರು.

ಜಮ್ನಾಲಾಲ್ ಬಜಾಜ್ ಟ್ರಸ್ಟ್‌ಗೆ ಹೈಕೋರ್ಟ್ ನೋಟಿಸ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಜಮ್ನಾಲಾಲ್ ಬಜಾಜ್ ಸೇವಾ ಟ್ರಸ್ಟ್ ಹೆಚ್ಚುವರಿಯಾಗಿ ಹೊಂದಿದೆ ಎನ್ನಲಾದ 354.10 ಎಕರೆ ಜಮೀನನ್ನು, ಸರ್ಕಾರಕ್ಕೆ ಹಿಂದಿರುಗಿಸುವಂತೆ 2017ರಲ್ಲಿ ಭೂ ನ್ಯಾಯ ಮಂಡಳಿ ನೀಡಿದ್ದ ಆದೇಶ ರದ್ದುಪಡಿಸಿ, ಹೈಕೋರ್ಟ್ ಏಕಸದಸ್ಯ ನ್ಯಾಯಪೀಠ ನೀಡಿದ್ದ ಆದೇಶವನ್ನು, ಈಗ ವಿಭಾಗೀಯ ನ್ಯಾಯಪೀಠದಲ್ಲಿ ಮೇಲ್ಮನವಿ ಮೂಲಕ ಪ್ರಶ್ನಿಸಲಾಗಿದೆ.

ಏಕಸದಸ್ಯ ನ್ಯಾಯಪೀಠದ ಆದೇಶ ರದ್ದುಪಡಿಸುವಂತೆ ಕೋರಿ ರಾಜ್ಯ ಸರ್ಕಾರ ಸಲ್ಲಿಸಿರುವ ಮೇಲ್ಮನವಿಯನ್ನು ಮುಖ್ಯ ನ್ಯಾಯಮೂರ್ತಿ ಋತುರಾಜ್ ಅವಸ್ಥಿ ನೇತೃತ್ವದ ವಿಭಾಗೀಯ ನ್ಯಾಯಪೀಠ ಮಂಗಳವಾರ ವಿಚಾರಣೆ ನಡೆಸಿತು. ಪ್ರಕರಣದ ಪ್ರತಿವಾದಿ ಜಮ್ನಾಲಾಲ್ ಬಜಾಜ್ ಸೇವಾ ಟ್ರಸ್ಟ್‌ಗೆ ನೋಟಿಸ್ ಜಾರಿಗೊಳಿಸಲು ಆದೇಶಿಸಿ, ವಿಚಾರಣೆಯನ್ನು ಇದೇ 29ಕ್ಕೆ ಮುಂದೂಡಲಾಗಿದೆ.

ಪ್ರಕರಣವೇನು?: ಭೂ ಸುಧಾರಣಾ ಕಾಯ್ದೆಯ ಮಿತಿಗಿಂತಲೂ ಹೆಚ್ಚುವರಿ ಜಮೀನನ್ನು ಹೊಂದಿದೆ ಎಂಬ ಕಾರಣಕ್ಕೆ ದಾಖಲಾಗಿದ್ದ ಪ್ರಕರಣದಲ್ಲಿ ಭೂ ನ್ಯಾಯಮಂಡಳಿ, 'ಟ್ರಸ್ಟ್ ತನ್ನ ಸುಪರ್ದಿಯಲ್ಲಿರುವ ಹೆಚ್ಚುವರಿ ಜಮೀನನ್ನು ಸರ್ಕಾರಕ್ಕೆ ಮರಳಿಸಬೇಕು' ಎಂದು 2010ರಲ್ಲಿ ತೀರ್ಪು ನೀಡಿತ್ತು. ಇದನ್ನು ಟ್ರಸ್ಟ್ ಹೈಕೋರ್ಟ್‌ನಲ್ಲಿ ಪ್ರಶ್ನಿಸಿತ್ತು. ವಿಚಾರಣೆ ನಡೆಸಿದ್ದ ಏಕಸದಸ್ಯ ನ್ಯಾಯಪೀಠ, 'ಉಪವಿಭಾಗಾಧಿಕಾರಿ ಅಧ್ಯಕ್ಷತೆಯ ಭೂ ನ್ಯಾಯಮಂಡಳಿಯೇ ಪ್ರಕರಣವನ್ನು ಮರುಪರಿಶೀಲಿಸಿ ತೀರ್ಪು ನೀಡಬೇಕು' ಎಂದು 2014ರ ಮಾರ್ಚ್ 3ರಂದು ಆದೇಶಿಸಿತ್ತು.

ಈ ಆದೇಶದ ಅನುಸಾರ ವಿಚಾರಣೆ ನಡೆಸಿದ್ದ ಎಂ.ಕೆ.ಜಗದೀಶ್ ನೇತೃತ್ವದ ಭೂ ನ್ಯಾಯಮಂಡಳಿ, 'ಟ್ರಸ್ಟ್, ಕಾಯ್ದೆಯ ಮಿತಿಗಿಂತ 354 ಎಕರೆ ಹೆಚ್ಚುವರಿ ಜಮೀನನ್ನು ಹೊಂದಿದೆ. ಇದನ್ನು ಸರ್ಕಾರ ಮರಳಿ ತನ್ನ ವಶಕ್ಕೆ ಪಡೆಯಬೇಕು' ಎಂದು 2017ರ ನವೆಂಬರ್ 28ರಂದು ಆದೇಶಿಸಿತ್ತು. ಇದನ್ನು ಪ್ರಶ್ನಿಸಿ ಟ್ರಸ್ಟ್ ಪುನಃ ಹೈಕೋರ್ಟ್ ಮೆಟ್ಟಿಲೇರಿತ್ತು. ಈ ಅರ್ಜಿ ವಿಚಾರಣೆ ನಡೆಸಿದ್ದ ನ್ಯಾಯಮೂರ್ತಿ ಪಿ.ಎಸ್.ದಿನೇಶ್ ಕುಮಾರ್ ಅವರಿದ್ದ ಏಕಸದಸ್ಯ ನ್ಯಾಯಪೀಠ, ಭೂ ನ್ಯಾಯಮಂಡಳಿಯ ಆದೇಶ ರದ್ದುಪಡಿಸಿ 2021ರ ಜೂನ್ 30ರಂದು ತೀರ್ಪು ನೀಡಿತ್ತು.

ಮೈಸೂರು ಅರಮನೆ ಚಾವಣಿ ಸೋರಿಕೆ

ಪ್ರಜಾವಾಣಿ ವಾರ್ತೆ

ಮೈಸೂರು: ಸತತ ಮಳೆಯಿಂದಾಗಿ ಮೈಸೂರಿನ ಅಂಬಾವಿಲಾಸ ಅರಮನೆಯ ಚಾವಣಿ ಸೋರುತ್ತಿದ್ದು, ಕೆಲವೆಡೆ ಪ್ಲಾಸ್ಟರಿಂಗ್ ಕಿತ್ತು ಬಂದಿದೆ. ಗೋಡೆಗಳು ತೇವಗೊಂಡಿವೆ.

ಅರಮನೆಯ ಚಾವಣಿಯ ಕೆಲವೆಡೆ ಈ ಹಿಂದೆಯೂ ಸೋರಿಕೆ ಕಂಡುಬಂದಿತ್ತು. ಸಕಾಲಕ್ಕೆ ದುರಸ್ತಿ ಕಾರ್ಯ ಕೈಗೊಂಡು ಸರಿಪಡಿಸಲಾಗಿತ್ತು. ಕಳೆದ ಕೆಲ ದಿನಗಳಿಂದ ಎಡೆಬಿಡದೆ ಸುರಿದ ಮಳೆಯಿಂದಾಗಿ ಮತ್ತೆ ಸೋರಿಕೆ ಉಂಟಾಗಿದೆ.

'ರಾಜವಂಶಸ್ಥರು ವಾಸಿಸುತ್ತಿರುವ ಭಾಗದಲ್ಲಿ ನೀರು ಹೆಚ್ಚಿನ ಪ್ರಮಾಣದಲ್ಲಿ ಸೋರಿಕೆ ಆಗುತ್ತಿದೆ. ಅರಮನೆಯ ನಿರ್ವಹಣೆಗೆ ಸರ್ಕಾರ ಆಸಕ್ತಿ ತೋರದೇ ಇರುವುದಕ್ಕೆ ರಾಜವಂಶಸ್ಥೆ ಪ್ರಮೋದಾ ದೇವಿ ಒಡೆಯರ್ ಅಸಮಾಧಾನ ಹೊರ ಹಾಕಿದ್ದಾರೆ' ಎಂದು ಅರಮನೆ ಮೂಲಗಳು ತಿಳಿಸಿವೆ.

'ಅರಮನೆ ಮಂಡಳಿಯ ಸುಪರ್ದಿಗೆ ಬರುವ ಸ್ಥಳದಲ್ಲಿ ಮಳೆಯಿಂದಾಗಿ ಯಾವುದೇ ಹಾನಿ ಉಂಟಾಗಿಲ್ಲ. ಚಾವಣಿ ಸೋರಿಕೆ ಉಂಟಾಗಿಲ್ಲ' ಎಂದು ಅರಮನೆ ಮಂಡಳಿ ಉಪನಿರ್ದೇಶಕ ಟಿ.ಎಸ್.ಸುಬ್ರಹ್ಮಣ್ಯ 'ಪ್ರಜಾವಾಣಿ'ಗೆ ಸ್ಪಷ್ಟಪಡಿಸಿದರು.

ನಟ ರಾಜೇಶ್‌ಗೆ ಪತ್ನಿ ವಿಯೋಗ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಟ ರಾಜೇಶ್ ಅವರ ಪತ್ನಿ ಪಾರ್ವತಮ್ಮ ಅವರು (78) ಹೃದಯಾಘಾತದಿಂದ ಬುಧವಾರ ನಿಧನರಾದರು.

ಅವರಿಗೆ ಪುತ್ರಿ ಮತ್ತು ಇಬ್ಬರು ಪುತ್ರರು ಇದ್ದಾರೆ. ಅಂತ್ಯಕ್ರಿಯೆ ಲಕ್ಷ್ಮೀಪುರದ ರುದ್ರಭೂಮಿಯಲ್ಲಿ ಬುಧವಾರ ಸಂಜೆ ನಡೆಯಿತು ಎಂದು ಕುಟುಂಬದ ಮೂಲಗಳು ಮಾಹಿತಿ ನೀಡಿತು.

ಪ್ರಜಾವಾಣಿ ಕ್ಲಾಸಿಫೈಡ್ಸ್ ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

BUSINESS

Business to Business

Others

PETROL PUMP Dealership Know complete process to Open a New Petrol Pump in India Contact us 9163283658

Business Offers

Finance

NRI'S INVESTMENT And Finance Available On Low Interest Against Properties, Land & Building, Sites, Flats, Converted & Agriculture Lands Call: 7411265189

WANTED BUSINESS Partner with 5 Lakhs to 10 Lakhs Investment, Good Returns. Contact: 9606701007/ 8892501007

JOB OPPORTUNITIES

General

JOB OPPORTUNITY for Retired, Men, House wife & Graduates in Reputed Company. Age 40 to 75, Bangalorians only. Earn up to 40,000/- Contact: 9741401834

Teachers/ Professors

WANTED TRAINED LADY TEACHERS to teach English, Maths, Chemistry and Biology in English Medium Primary and Highschools. Wanted MENIAL STAFF to work in school. Walk-in Interview on 26-11-2021 between 11.00 AM and 1.00 PM at 'PRATHIBHA SHIKSHANA SAMITHI', #9, 18th Main, BSK II Stage, Bangalore-70. Phone: 080-26710170/ 74833-77387

JANASEVA VIDYAKENDRA
BOY'S RESIDENTIAL SCHOOLS
Channenahalli, Magadi Road, Bangalore City Dist-562130
Email: 123jsvkhighschool@gmail.com
WANTED TEACHERS
M.Sc, or B.Sc. B.Ed (PCM)
MA. or B.A., B.Ed.,
(English and Social & Kannada) / (English & Kannada Mediun Both)
Walk in Interview
27.11.2021 Saturday at 10 AM.
at Janaseva Vidyakendra
Contact: 7022428464/ 9480609078
Hon Secretary

RENTAL PROPERTIES

Accommodation Available

Commercial

1500 SQFT Office Space Available On First Floor Suitable For Architects Advocates Companies Facing R.V. Road Next To Indian Oil Petrol Bunk, Exclusive Parking Provided. Contact Owner:- 9740854716

PERSONAL

Change of Name

RAMALA DEVI, W/o 6495901N HAV/ASH Ashok Kumar, Vill- Bhartoul, Post-PAC Nakatiya, Bareilly, UP, my name RAMALA DEVI to RUMALA DEVI, Notary K.V. Mani, Bangalore.

I, CHUTRA RAM, residing at #96/2/5, 10th main, 1st cross, Ambedkar Colony, Hongasandra, Bommanahalli, Bangalore-68, declare that in my son's ARUN C KUMAWAT, Hall Ticket my name is wrongly entered as CHUTRAM instead of CHUTRA RAM, vide affidavit dated 24.11.2021, before Addl. Chief Metropolitan Magistrate, Bangalore

CHANGE OF NAME
I, RAGHAVENDRA. R, Residing at Flat No.1504, Tower 3, Tata Promont Apartment, Hosakerehalli, Off Ittamadu, Kattariguppe, Bangalore-560 085 have changed my name to **RAGHAVENDRA HUNSUR,** vide affidavit dated 23-11-2021 before Notary Onkarappa N.R. Bangalore.

I, JAYA KISHORE KUMAR s/o G.K. Jaya Shivakumar residing at No.B-62, Dodda Angadi Beedi, 11th-ward, Chamarajanagara Town, have changed my name to KISHORE KUMAR vide affidavit dated 23/11/2021 before notary Naganna, Chamarajanagar.

I, NIVEDA S KANGRALKAR w/o. Sanjay Kangralkar residing at No.49, Teachers Colony, Bengeri, Near Manoj Park, Keshwapur, Hubli, Dharwad, Karnataka-580023, we got married under Hindu marriage act & living together as married couple since 24-06-2019. Hereby changed my name from N. NIVEDAKUMARI LAMANI to NIVEDA S KANGRALKAR vide affidavit dated 23/11/2021 before notary Ganesh Gowda M.V, Bangalore

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
GM-Advertisement

DH Classifieds
BOOK YOUR AD FOR SUNDAY & GET 50% OFF ON WEEKDAYS
For Lineage & Single/ Multi Column Classifieds Display ads
For more information contact:
9880856233 /9845114560
9886213331

ಮೇಘಾಲಯ: 12 ಕಾಂಗ್ರೆಸ್ ಶಾಸಕರು ಟಿಎಂಸಿಗೆ ಸೇರ್ಪಡೆ

ನವದೆಹಲಿ (ಪಿಟಿಐ): ಮೇಘಾಲಯದ 18 ಮಂದಿ ಕಾಂಗ್ರೆಸ್ ಶಾಸಕರ ಪೈಕಿ ಮಾಜಿ ಮುಖ್ಯಮಂತ್ರಿ ಮುಕುಲ್ ಸಂಗ್ಮಾ ಸೇರಿದಂತೆ 12 ಮಂದಿ ಬುಧವಾರ ತೃಣಮೂಲ ಕಾಂಗ್ರೆಸ್ ಪಕ್ಷ (ಟಿಎಂಸಿ) ಸೇರ್ಪಡೆಗೊಂಡಿದ್ದಾರೆ.

ಹೊಸ ಶಾಸಕರ ಸೇರ್ಪಡೆಯಿಂದಾಗಿ ಟಿಎಂಸಿ ರಾಜ್ಯದಲ್ಲಿ ಪ್ರಮುಖ ವಿರೋಧ ಪಕ್ಷವಾಗಿ ಹೊರಹೊಮ್ಮಿದೆ ಎಂದು ಪಕ್ಷದ ಹಿರಿಯ ನಾಯಕರೊಬ್ಬರು ಹೇಳಿದ್ದಾರೆ.

ನ್ಯಾಷನಲ್ ಪೀಪಲ್ಸ್ ಪಾರ್ಟಿ ನೇತೃತ್ವದ ಸರ್ಕಾರ ರಾಜ್ಯದಲ್ಲಿದ್ದು, 2023ರಲ್ಲಿ ಚುನಾವಣೆ ನಡೆಯಲಿದೆ.

ನಗರದಲ್ಲಿ ಇಂದು ಸಿವಿಲ್ ಎಂಜಿನಿಯರ್‌ಗಳ ವಾಕಥಾನ್

ಬೆಂಗಳೂರು: 'ಅಸೋಸಿಯೇಷನ್ ಆಫ್ ಕನ್ಸಲ್ಟಿಂಗ್ ಸಿವಿಲ್ ಎಂಜಿನಿಯರ್ಸ್ (ಎಸಿಸಿಇ) ವತಿಯಿಂದ ಇದೇ 25ರಂದು ಬೆಳಿಗ್ಗೆ 10 ಗಂಟೆಗೆ ಸ್ವಾತಂತ್ರ್ಯ ಉದ್ಯಾನದವರೆಗೆ ಸಿವಿಲ್ ಎಂಜಿನಿಯರ್‌ಗಳ ವಾಕಥಾನ್ ಹಮ್ಮಿಕೊಳ್ಳಲಾಗಿದೆ' ಎಂದು ಎಸಿಸಿಇ ಬೆಂಗಳೂರು ಕೇಂದ್ರ ವಿಭಾಗದ ಅಧ್ಯಕ್ಷ ಶ್ರೀಕಾಂತ್ ಎಸ್.ಚನ್ನಾಲ್ ಹೇಳಿದರು.

ಮಂಗಳವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ರಾಷ್ಟ್ರೀಯ ಕಟ್ಟಡ ಸಂಹಿತೆ (ಎನ್‌ಬಿಸಿ) ಹಾಗೂ ಸಿವಿಲ್ ಎಂಜಿನಿಯರ್‌ಗಳ ಪಾತ್ರದ ಬಗ್ಗೆ ಅರಿವು ಮೂಡಿಸುವ ಉದ್ದೇಶದಿಂದ ವಾಕಥಾನ್ ಹಮ್ಮಿಕೊಳ್ಳಲಾಗಿದೆ' ಎಂದರು.

ಇಂದು ಬೆಂಗಳೂರು ಚಲೋ: ಸ್ವಾತಂತ್ರ್ಯ ಹೋರಾಟಗಾರರು ಮತ್ತು ಅವರ ಕುಟುಂಬಗಳಿಗೆ ವಿವಿಧ ಸವಲತ್ತುಗಳನ್ನು ನೀಡಬೇಕು ಎಂದು ಆಗ್ರಹಿಸಿ ರಾಜ್ಯ ಸ್ವಾತಂತ್ರ್ಯ ಹೋರಾಟಗಾರರ ಹಾಗೂ ಉತ್ತರಾಧಿಕಾರಿಗಳ ಸಂಘದ ವತಿಯಿಂದ ನ.25ರಂದು ಬೆಳಿಗ್ಗೆ 9 ಗಂಟೆಗೆ ಸ್ವಾತಂತ್ರ್ಯ ಉದ್ಯಾನದಲ್ಲಿ ಬೆಂಗಳೂರು ಚಲೋ ಹಮ್ಮಿಕೊಳ್ಳಲಾಗಿದೆ.

ಅರ್ಜಿ ಆಹ್ವಾನ

ಬೆಂಗಳೂರು: ಜೆಎಸ್‌ಎಸ್ ಸ್ಪರ್ಧಾತ್ಮಕ ಪರೀಕ್ಷೆಗಳ ತರಬೇತಿ ಸಂಸ್ಥೆಯು ಯುಪಿಎಸ್‌ಸಿ ಪರೀಕ್ಷೆಗಳ ತರಬೇತಿಗಾಗಿ ಅರ್ಜಿ ಆಹ್ವಾನಿಸಿದೆ.

8 ತಿಂಗಳ ಅವಧಿಯ ತರಬೇತಿಯು ಡಿಸೆಂಬರ್ ಕೊನೆಯ ವಾರದಿಂದ ಆರಂಭವಾಗಲಿದೆ. ಅರ್ಜಿ ಸಲ್ಲಿಸಲು ಡಿ.27 ಕೊನೆಯ ದಿನ. ಡಿ.19ರಂದು ನಡೆಯುವ ಪ್ರವೇಶ ಪರೀಕ್ಷೆ ಮೂಲಕ ಅಭ್ಯರ್ಥಿಗಳನ್ನು ತರಬೇತಿಗೆ ಆಯ್ಕೆ ಮಾಡಿಕೊಳ್ಳಲಾಗುವುದು ಎಂದು ತಿಳಿಸಿದೆ.

ವಿಳಾಸ: ಜೆಎಸ್‌ಎಸ್ ಸ್ಪರ್ಧಾತ್ಮಕ ಪರೀಕ್ಷೆಗಳ ತರಬೇತಿ ಸಂಸ್ಥೆ, ಜಯನಗರ 8ನೇ ಬ್ಲಾಕ್. 9845055718

ಸಂಕ್ಷಿಪ್ತ ಸುದ್ದಿ

ನಾಟಕ ಅಕಾಡೆಮಿ: ಪುಸ್ತಕ ಬಹುಮಾನಕ್ಕೆ ಅರ್ಜಿ ಆಹ್ವಾನ

ಬೆಂಗಳೂರು: ಕರ್ನಾಟಕ ನಾಟಕ ಅಕಾಡೆಮಿಯು 2020ನೇ ಸಾಲಿನ ಪುಸ್ತಕ ಬಹುಮಾನಕ್ಕೆ ಅರ್ಜಿ ಆಹ್ವಾನಿಸಿದೆ.

2020ರ ಜನವರಿಯಿಂದ ಡಿಸೆಂಬರ್ ಅಂತ್ಯದೊಳಗೆ ಮುದ್ರಣವಾದ ಮೊದಲ ಪ್ರಕಟಣೆಗಳನ್ನು ಪರಿಗಣಿಸಲಾಗುತ್ತದೆ. ಕೃತಿಗಳು ಸಂಶೋಧನಾ ಪ್ರಬಂಧ ಹಾಗೂ ನಾಟಕವಾಗಿರಬಾರದು. ರಂಗಸಂಬಂಧಿ ವಸ್ತುವುಳ್ಳದ್ದಾಗಿರಬೇಕು. ಮರುಮುದ್ರಣದ ಪುಸ್ತಕಗಳನ್ನು ಪರಿಗಣಿಸುವುದಿಲ್ಲ ಎಂದು ಅಕಾಡೆಮಿ ತಿಳಿಸಿದೆ.

ಆಸಕ್ತ ಲೇಖಕರು ತಮ್ಮ ಹೆಸರು, ವಿಳಾಸ, ಪುಸ್ತಕ ಪ್ರಕಟಣೆ ವರ್ಷ ಸೇರಿದಂತೆ ವಿವಿಧ ಮಾಹಿತಿಗಳನ್ನು ಒಳಗೊಂಡ ಅರ್ಜಿಯ ಪ್ರತಿ ಹಾಗೂ ಪುಸ್ತಕದ ನಾಲ್ಕು ಪ್ರತಿಗಳನ್ನು ರಿಜಿಸ್ಟ್ರಾರ್, ಕರ್ನಾಟಕ ನಾಟಕ ಅಕಾಡೆಮಿ, ಚಾಲುಕ್ಯ ವಿಭಾಗ, ಕನ್ನಡ ಭವನ, ಜೆ.ಸಿ. ರಸ್ತೆ, ಬೆಂಗಳೂರು–560002 ಈ ವಿಳಾಸಕ್ಕೆ ಡಿ.15ರೊಳಗೆ ಸಲ್ಲಿಸಬೇಕು.

ಬಹುಮಾನವನ್ನು ಲೇಖಕರಿಗೆ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ನೀಡಲಾಗುವುದು ಎಂದು ಅಕಾಡೆಮಿಯ ರಿಜಿಸ್ಟ್ರಾರ್ ಬಿ. ಮಂಜುನಾಥ ಆರಾಧ್ಯ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಹಂಸಲೇಖ ಬೆಂಬಲಿಸಿ ನಾಳೆ ಜಾಥಾ

ಬೆಂಗಳೂರು: ಸಂಗೀತ ನಿರ್ದೇಶಕ ಹಂಸಲೇಖ ಅವರ ಹೇಳಿಕೆ ಬೆಂಬಲಿಸಿ ಸಂವಿಧಾನ ಸಂರಕ್ಷಣಾ ಏಕತಾ ಸಮಿತಿಯು ನ.26ರಂದು ಬೆಳಿಗ್ಗೆ 11 ಗಂಟೆಗೆ ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ರೈಲು ನಿಲ್ದಾಣದಿಂದ ಸ್ವಾತಂತ್ರ್ಯ ಉದ್ಯಾನದವರೆಗೆ ಸಂವಿಧಾನ ಜಾಗೃತಿ ಜಾಥಾ ಮತ್ತು ಸಮಾವೇಶ ಹಮ್ಮಿಕೊಂಡಿದೆ.

'ಅಸ್ಪೃಶ್ಯತೆ ಮತ್ತು ಜಾತೀಯತೆ ವಿರುದ್ಧ ದನಿ ಎತ್ತಿದ ಹಂಸಲೇಖ ಅವರಿಗೆ ಬೆಂಬಲ ವ್ಯಕ್ತಪಡಿಸಲು ಜಾಥಾ ಹಾಗೂ ಸಮಾವೇಶ ಹಮ್ಮಿಕೊಳ್ಳಲಾಗಿದೆ. ಕಾರ್ಯಕ್ರಮದಲ್ಲಿ ಭಾಗವಹಿಸುವವರು ಮನೆಗಳಿಂದಲೇ ಊಟದ ಬುತ್ತಿ ತರಬೇಕು. ಸಾಮೂಹಿಕ ಊಟದ ಮೂಲಕ ಕಾರ್ಯಕ್ರಮಕ್ಕೆ ಚಾಲನೆ ನೀಡಲಾಗುವುದು' ಎಂದು ಸಾಹಿತಿ ಎಲ್.ಎನ್.ಮುಕುಂದರಾಜ್ ತಿಳಿಸಿದ್ದಾರೆ.

ನಾಳೆ 'ಮನೆ–ಮನದಲ್ಲಿ ಕನ್ನಡ' ಕಾರ್ಯಕ್ರಮ

ಬೆಂಗಳೂರು: ಮುಳಿಯ ಪ್ರತಿಷ್ಠಾನ ಮತ್ತು ಕರ್ನಾಟಕ ಲೇಖಕಿಯರ ಸಂಘದ ಸಹಯೋಗದಲ್ಲಿ ಕನ್ನಡ ರಾಜ್ಯೋತ್ಸವದ ಅಂಗವಾಗಿ 'ಮನೆ-ಮನದಲ್ಲಿ ಕನ್ನಡ' ಎಂಬ ಕಾರ್ಯಕ್ರಮವನ್ನು ನ.26ರಂದು ಬೆಳಿಗ್ಗೆ 10.30ಕ್ಕೆ ಮಣಿಪಾಲ್ ಸೆಂಟರ್‌ನಲ್ಲಿ ಹಮ್ಮಿಕೊಳ್ಳಲಾಗಿದೆ.

ಇಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಕಾರ್ಯಕ್ರಮದ ಸಂಯೋಜಕ ವೇಣು ಶರ್ಮ, 'ಕಾರ್ಯಕ್ರಮವನ್ನು ಕನ್ನಡ ಮತ್ತು ಸಂಸ್ಕೃತಿ ಸಚಿವ ಸುನಿಲ್ ಕುಮಾರ್ ಉದ್ಘಾಟಿಸಲಿದ್ದಾರೆ. ಕರ್ನಾಟಕ ಲೇಖಕಿಯರ ಸಂಘದ ಅಧ್ಯಕ್ಷೆ ವನಮಾಲಾ ಸಂಪನ್ನಕುಮಾರ್ ಹಾಗೂ ಮುಳಿಯ ಜ್ಯುವೆಲ್ಸ್‌ನ ಆಡಳಿತ ನಿರ್ದೇಶಕ ಕೇಶವ ಪ್ರಸಾದ್ ಮುಳಿಯ ಅಧ್ಯಕ್ಷತೆ ವಹಿಸಲಿದ್ದಾರೆ' ಎಂದರು.

ಡಿ.6ಕ್ಕೆ 'ಮಥುರಾ ಚಲೋ' ಸಮಾವೇಶ

ಬೆಂಗಳೂರು:'ಕೃಷ್ಣನ ಜನ್ಮಸ್ಥಳ ಮಥುರಾದಲ್ಲಿ ಡಿಸೆಂಬರ್ 6ರಂದು 'ಮಥುರಾ ಚಲೋ' ಸಮಾವೇಶವನ್ನು ಹಮ್ಮಿಕೊಳ್ಳಲಾಗಿದ್ದು, ಕೃಷ್ಣ ಜನ್ಮಸ್ಥಾನದ ಪೂರ್ಣ ಜಾಗವನ್ನು ಹಿಂದೂಗಳ ಸುಪರ್ದಿಗೆ ನೀಡುವವರೆಗೆ ಹೋರಾಟ ಮುಂದುವರಿಯಲಿದೆ' ಎಂದು ಅಖಿಲ ಭಾರತ ಹಿಂದೂ ಮಹಾಸಭಾದ ಪ್ರಚಾರಕ ಬಾಲಕೃಷ್ಣ ಗುರೂಜಿ ತಿಳಿಸಿದರು.

ನಿರ್ದೇಶಕ ಜಿ.ಆರ್.ಭಾಸ್ಕರ್ ಉದ್ಘಾಟನೆ

ಗುಣಮಟ್ಟದ ಹಾಲು ಪೂರೈಕೆಗೆ ಬಿಎಂಸಿ ಘಟಕಗಳ ಸ್ಥಾಪನೆ

ಪ್ರಜಾವಾಣಿ ವಾರ್ತೆ

ದಾಬಸ್ ಪೇಟೆ: 'ನೆಲಮಂಗಲ ತಾಲ್ಲೂಕಿನ ಹಾಲಿನ ಗುಣಮಟ್ಟ ಮುಂಚೂಣಿ ಸ್ಥಾನಕ್ಕೆ ತಲುಪಬೇಕು. ಇದಕ್ಕಾಗಿ ತಾಲ್ಲೂಕಿನಲ್ಲಿ ಬಿಎಂಸಿ (ಹಾಲು ಶೀತಲೀಕರಣ ಘಟಕ) ಕೇಂದ್ರಗಳ ಸಂಖ್ಯೆ ಹೆಚ್ಚಿಸಲಾಗುವುದು' ಎಂದು ಬೆಂಗಳೂರು ಹಾಲು ಒಕ್ಕೂಟದ ನೆಲಮಂಗಲ ತಾಲ್ಲೂಕಿನ ನಿರ್ದೇಶಕ ಜಿ.ಆರ್.ಭಾಸ್ಕರ್ ಹೇಳಿದರು.

ತಾಲ್ಲೂಕಿನ ಚನ್ನೋಹಳ್ಳಿ ಮತ್ತು ನರಸೀಪುರ ಗ್ರಾಮಗಳಲ್ಲಿ ನೂತನ ಬಿಎಂಸಿ ಕೇಂದ್ರಗಳನ್ನು ಉದ್ಘಾಟಿಸಿ ಅವರು ಮಾತನಾಡಿದರು.

'ಬಮೂಲ್‌ನಿಂದ ನನ್ನ ಅನುದಾನ ಬಳಸಿಕೊಂಡು, ಈಗಾಗಲೇ ತಾಲ್ಲೂಕಿನಲ್ಲಿ 44 ಶುದ್ಧ ನೀರಿನ ಘಟಕಗಳನ್ನು ಸ್ಥಾಪನೆ ಮಾಡಲಾಗಿದೆ. 18 ಬಿಎಂಸಿ ಕೇಂದ್ರಗಳು ಹಾಗೂ 25 ಡೈರಿ ನೂತನ ಕಟ್ಟಡಗಳನ್ನು ನಿರ್ಮಿಸಲಾಗಿದೆ. ಸೋಂಪುರ ಕೈಗಾರಿಕಾ ಪ್ರದೇಶದಲ್ಲಿ ಕೆಐಎಡಿಬಿ ವತಿಯಿಂದ ಬೆಂಗಳೂರು ಡೈರಿಗೆ 15 ಎಕರೆ ಜಮೀನು ಖರೀದಿ ಮಾಡಿದ್ದು, ಭವಿಷ್ಯದಲ್ಲಿ ಅಲ್ಲಿ ನೂರಾರು ರೈತರ ಮಕ್ಕಳಿಗೆ ಕೆಲಸ ದೊರೆಯಲಿದೆ' ಎಂದು ತಿಳಿಸಿದರು.

ಚನ್ನೋಹಳ್ಳಿಯಲ್ಲಿ ಬಿಎಂಸಿ ಕೇಂದ್ರವನ್ನು ಜಿ.ಆರ್.ಭಾಸ್ಕರ್ ಉದ್ಘಾಟಿಸಿದರು. ಚನ್ನೋಹಳ್ಳಿ ಡೈರಿಯ ಅಧ್ಯಕ್ಷ ಎಂ.ಜಿ.ಗಂಗಾಧರ್, ಉಪಾಧ್ಯಕ್ಷ ಡಿ.ಹನುಮಂತರಾಯಪ್ಪ, ವಿಸ್ತರಣಾಧಿಕಾರಿ ಎಸ್.ಚಂದನ್, ಕಾರ್ಯದರ್ಶಿ ಕಿರಣ್ ಹಾಗೂ ಹಾಲು ಉತ್ಪಾದಕರು ಇದ್ದರು.

ಮುಖ್ಯಾಂಶಗಳು
- ಕೆಐಎಡಿಬಿ ವತಿಯಿಂದ 15 ಎಕರೆ ಜಮೀನು ಖರೀದಿ
- ಭವಿಷ್ಯದಲ್ಲಿ ರೈತರ ಮಕ್ಕಳಿಗೆ ಕೆಲಸದ ಭರವಸೆ

ಜೆ.ಸಿ.ರಸ್ತೆಯಲ್ಲಿ ಸಾರ್ವಜನಿಕರು ಕೊಡೆ ಹಿಡಿದು ಸಾಗಿದರು (ಎಡ ಚಿತ್ರ). ಕಮರ್ಷಿಯಲ್ ಸ್ಟ್ರೀಟ್‌ನಲ್ಲಿ ಮಹಿಳೆಯರು ಕೊಡೆ ಹಿಡಿದು ಹೆಜ್ಜೆ ಹಾಕಿದರು –ಪ್ರಜಾವಾಣಿ ಚಿತ್ರಗಳು

ಸಂಜೆಯ ವೇಳೆ ಶುರುವಾದ ‘ವರುಣನ ಆಟ’: ನೀರು ನಿಂತು ಜನಜೀವನ ಅಸ್ತವ್ಯಸ್ತ

ಮತ್ತೆ ಮಳೆಯಿಂದ ಹೊಳೆಯಂತಾದ ರಸ್ತೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ನಿವಾಸಿಗಳಿಗೆ ಬುಧವಾರ ಮತ್ತೆ ಮಳೆಯ ಅನುಭವವಾಯಿತು. ಕೆಲ ಕಾಲ ಸುರಿದ ಜೋರು ಮಳೆಯಿಂದಾಗಿ ರಸ್ತೆಗಳು ಹೊಳೆಯಂತಾದವು. ಪಾದಚಾರಿಗಳು ಹಾಗೂ ವಾಹನ ಸವಾರರು ಪರದಾಡುವಂತಾಯಿತು.

ಬೆಳಿಗ್ಗೆಯಿಂದ ಸಂಜೆಯವರೆಗೂ ಬಿಸಿಲಿನ ವಾತಾವರಣವೇ ಇತ್ತು. ಸಂಜೆ 4.30ರ ನಂತರ ಹಠಾತ್ತನೆ ‘ವರುಣನ ಆಟ’ ಶುರುವಾಯಿತು. ಅರ್ಧ ಗಂಟೆಗೂ ಹೆಚ್ಚು ಸಮಯ ಮಳೆ ಬಿಡದೆ ಸುರಿಯಿತು. ಹೀಗಾಗಿ ತಗ್ಗು ಪ್ರದೇಶಗಳಲ್ಲಿ ನೀರು ನಿಂತಿತ್ತು. ದಿಢೀರ್ ಮಳೆಯಿಂದಾಗಿ ಚಳಿಯ ಅನುಭವವೂ ಆಯಿತು.

ಮೈಸೂರು ಮತ್ತು ಮಾಗಡಿ ರಸ್ತೆ, ಜೆ.ಸಿ.ನಗರದಲ್ಲಿರುವ ದೂರದರ್ಶನ ಕೇಂದ್ರ, ಸಂಜಯನಗರ, ಗಂಗಾನಗರ, ಆರ್.ಟಿ.ನಗರ, ಹೆಬ್ಬಾಳ, ಚಾಮರಾಜಪೇಟೆ, ಕೆ.ಆರ್. ಮಾರುಕಟ್ಟೆ, ಕಾರ್ಪೊರೇಷನ್ ವೃತ್ತ, ಮೆಜೆಸ್ಟಿಕ್, ವಿಜಯನಗರ, ನಾಯಂಡಹಳ್ಳಿ, ಕೆಂಗೇರಿ, ಬ್ಯಾಟರಾಯನಪುರ ಸುತ್ತಮುತ್ತ ಜೋರು ಮಳೆ ಸುರಿಯಿತು.

ಗಿರಿನಗರ, ಹೊಸಕೆರೆಹಳ್ಳಿ, ಶ್ರೀನಿವಾಸನಗರ, ಕತ್ರಿಗುಪ್ಪೆ, ಹನುಮಂತನಗರ, ರಾಜರಾಜೇಶ್ವರಿ ನಗರ, ದಾಸರಹಳ್ಳಿ, ಮಲ್ಲೇಶ್ವರ, ಮಹಾಲಕ್ಷ್ಮಿ ಬಡಾವಣೆ, ಎಂ.ಜಿ. ರಸ್ತೆ, ಇಂದಿರಾನಗರ, ಬ್ರಿಗೇಡ್ ರಸ್ತೆ, ಹಲಸೂರು, ಜೀವನ್‌ಬಿಮಾ ನಗರ, ಕಸ್ತೂರಿನಗರ, ಬಾಣಸವಾಡಿ, ಕೋರಮಂಗಲ, ಎಚ್‌ಎಸ್‌ಆರ್ ಬಡಾವಣೆ, ಬೊಮ್ಮನಹಳ್ಳಿ, ಕೆ.ಆರ್. ಪುರ, ರಾಮಮೂರ್ತಿನಗರ ಸೇರಿದಂತೆ ಹಲವೆಡೆಯೂ ಧಾರಾಕಾರ ಮಳೆ ಸುರಿಯಿತು. ಕೆಲವೆಡೆ ಸಂಚಾರ ದಟ್ಟಣೆಯೂ ಉಂಟಾಯಿತು.

ವ್ಯಾಪಾರಿಗಳ ಪರದಾಟ: ದಿಢೀರ್ ಸುರಿದ ಮಳೆಯಿಂದಾಗಿ ಕೆ.ಆರ್. ಮಾರುಕಟ್ಟೆ ಸೇರಿ ಪ್ರಮುಖ ಮಾರುಕಟ್ಟೆಗಳಲ್ಲಿನ ವರ್ತಕರು ಹಾಗೂ ನಗರದಾದ್ಯಂತ ಬೀದಿಬದಿ ವ್ಯಾಪಾರಿಗಳು ಸಂಕಷ್ಟ ಎದುರಿಸಿದರು.

‘ನಗರದಲ್ಲಿ ಒಟ್ಟು 11.4 ಮಿ.ಮೀ ಮಳೆಯಾಗಿದೆ’ ಎಂದು ಹವಾಮಾನ ಇಲಾಖೆ ತಿಳಿಸಿದೆ.

ಹೊರಮಾವು: ಮಳೆ ಹಾನಿ ಪ್ರದೇಶಗಳಿಗೆ ಸಿ.ಎಂ ಭೇಟಿ

ಬೆಂಗಳೂರು: ಹೊರಮಾವು ವಾರ್ಡ್‌ನ ಬಿ.ಡಿ.ಎಸ್ ನಗರದ ಪ್ರದೇಶದಲ್ಲಿ ಮಳೆಯಿಂದ ಹಾನಿಗೊಳಗಾದ ಪ್ರದೇಶಗಳಿಗೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಬುಧವಾರ ಭೇಟಿ ನೀಡಿ ಪರಿಶೀಲಿಸಿದರು.

ಸುದ್ದಿಗಾರರ ಜೊತೆ ಮಾತನಾಡಿದ ಮುಖ್ಯಮಂತ್ರಿ, ‘ಕೆ.ಆರ್.ಪುರ ಕ್ಷೇತ್ರದಲ್ಲಿ ಮಳೆಯಿಂದಾಗಿ ಆಗಾಗ ಪ್ರವಾಹ ಉಂಟಾಗುತ್ತಿದೆ. ಯಲಹಂಕ ಪ್ರದೇಶ ಕೆರೆಗಳ ಹೆಚ್ಚುವರಿ ಮಳೆನೀರು ಹೆಬ್ಬಾಳ ಕಣಿವೆಯಲ್ಲಿ ಕೆ.ಆರ್. ಪುರ, ಮಹದೇವಪುರದ ಮೂಲಕ ಹರಿದುಹೋಗುತ್ತದೆ. ಹೆಬ್ಬಾಳ ಕಣಿವೆಯ ನೀರು 125 ಅಡಿ ಅಗಲದ ಕಾಲುವೆಯಲ್ಲಿ ಹರಿದು ಬರುತ್ತಿದೆ. ಆದರೆ, ರೈಲ್ವೆ ಹಳಿ ಬಳಿಯ ತೂಬು ಬಹಳ ಚಿಕ್ಕದಿದೆ. ಭಾರಿ ಪ್ರಮಾಣದಲ್ಲಿ ನೀರು ಹರಿದುಬಂದಾಗ ಇಲ್ಲಿ 10-12 ಅಡಿ ವಿಸ್ತಾರಕ್ಕೆ ನೀರಿನ ಹರಿವು ವ್ಯಾಪಿಸುತ್ತದೆ. ಈ ಸಮಸ್ಯೆ ನೀಗಿಸಲು ಕೈಗೊಳ್ಳಬೇಕಾದ ಕಾಮಗಾರಿಗೆ ಅನುದಾನ ಒದಗಿಸಲಾಗುವುದು. ಕಾಮಗಾರಿಗೆ ಸಹಕರಿಸುವಂತೆ ರೈಲ್ವೆ ಅಧಿಕಾರಿಗಳೊಂದಿಗೆ ಇಂದೇ ಚರ್ಚಿಸುತ್ತೇನೆ’ ಎಂದು ತಿಳಿಸಿದರು.

‘ಅಕ್ಷಯ ಬಡಾವಣೆಯಲ್ಲಿ ರೈಲ್ವೆ ಹಳಿ ಬಳಿ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು (ಬಿಡಿಎ) ಇನ್ನೊಂದು ತೂಬನ್ನು ನಿರ್ಮಿಸಲಿದೆ. ಅಲ್ಲಿಂದ ಕಲ್ಕೆರೆ ಕೆರೆವರೆಗೆ ಕಾಂಕ್ರೀಟ್ ಕಾಲುವೆಯನ್ನು ನಿರ್ಮಿಸಲಿದೆ. ನಾಗೇನಹಳ್ಳಿ ಕೆರೆಯಿಂದ ಬರುವ ಮುಖ್ಯ ರಾಜಕಾಲುವೆಯನ್ನು 3.5 ಕಿ.ಮೀ ದೂರದವರೆಗೆ ವಿಸ್ತರಿಸಿ ಹೆಬ್ಬಾಳ ಕಣಿವೆಯ ರಾಜಕಾಲುವೆಗೆ ಜೋಡಿಸುವ ಕಾಮಗಾರಿಯನ್ನೂ ಶೀಘ್ರವೇ ಕೈಗೊಳ್ಳಲಾಗುವುದು’ ಎಂದು ಮುಖ್ಯಮಂತ್ರಿ ಹೇಳಿದರು.

ನೀರು ನುಗ್ಗಿದ ಹೊಲಗಳಿಗೂ ₹10 ಸಾವಿರ ಪರಿಹಾರ ಕೊಡಿ– ಡಿಕೆಶಿ

ಶಿವಕುಮಾರ್

ಬೆಂಗಳೂರು: ‘ಅಕಾಲಿಕ ಮಳೆಯಿಂದಾಗಿ ನೀರು ನುಗ್ಗಿದ ಮನೆಗಳಿಗೆ ₹ 10 ಸಾವಿರ ಪರಿಹಾರ ಘೋಷಿಸಿದಂತೆ, ನೀರು ನುಗ್ಗಿರುವ ಹೊಲಗಳಿಗೂ ಎಕರೆಗೆ ತಲಾ ₹ 10 ಸಾವಿರದಂತೆ ಪರಿಹಾರ ಘೋಷಿಸಬೇಕು’ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರನ್ನು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಒತ್ತಾಯಿಸಿದರು.

ಸುದ್ದಿಗೋಷ್ಠಿಯಲ್ಲಿ ಬುಧವಾರ ಮಾತನಾಡಿದ ಅವರು, ‘ರಾಜ್ಯಪಾಲರನ್ನು ಗುರುವಾರ ಭೇಟಿ ಮಾಡಿ ರೈತರ ನೆರವಿಗೆ ಧಾವಿಸುವಂತೆ ಮನವಿ ಮಾಡಲಾಗುವುದು’ ಎಂದರು.

‘ಬೆಳೆ ನಾಶ ಸಮೀಕ್ಷೆ, ಅಧ್ಯಯನದ ಬಳಿಕ ಪರಿಹಾರ ನೀಡುವುದಾಗಿ ಹೇಳಿಕೊಂಡು ಸರ್ಕಾರ ಕಾಲಹರಣ ಮಾಡಬಾರದು. ತಹಶೀಲ್ದಾರ್‌ಗಳ ಮೂಲಕ ರೈತರಿಂದ ತಕ್ಷಣ ಅರ್ಜಿ ಆಹ್ವಾನಿಸಿ, ಅಧಿಕಾರಿಗಳನ್ನು ಸ್ಥಳಕ್ಕೆ ಕಳುಹಿಸಿ, ವಿಡಿಯೊ, ಭಾವಚಿತ್ರ ತೆಗೆಸಿ, 30 ದಿನಗಳ ಒಳಗೆ ಪರಿಹಾರ ನೀಡಬೇಕು’ ಎಂದು ಅವರು ಆಗ್ರಹಿಸಿದರು. ಅಲ್ಲದೆ, ಅರ್ಜಿ ಸಲ್ಲಿಸುವ ರೈತರಿಗೆ ನೆರವಾಗುವಂತೆ ಕಾಂಗ್ರೆಸ್ ಕಾರ್ಯಕರ್ತರಲ್ಲೂ ಮನವಿ ಮಾಡಿದರು.

‘ಮನೆ ಸಂಪೂರ್ಣವಾಗಿ ಕಳೆದುಕೊಂಡವರಿಗೆ ಪುನರ್ವಸತಿ ಕೇಂದ್ರಗಳನ್ನು ಕಲ್ಪಿಸಬೇಕು. ಬೆಳೆ, ಜಮೀನು ಹಾನಿ ಆಗಿರುವ ರೈತರಿಗೆ ಕಂದಾಯ ಮನ್ನಾ ಮಾಡಬೇಕು. ಪರಿಹಾರ ನೀಡದ ವಿಮಾ ಕಂಪನಿಗಳನ್ನು ಕಪ್ಪು ಪಟ್ಟಿಗೆ ಸೇರಿಸಬೇಕು’ ಎಂದೂ ಒತ್ತಾಯಿಸಿದರು.

ಕೋವಿಡ್ ಅಂಕಿ–ಅಂಶ

ಆಧಾರ: ವರ್ಲ್ಡೋಮೀಟರ್

	ವಿಶ್ವ	ಭಾರತ
ಒಟ್ಟು ಪ್ರಕರಣ	25.94 ಕೋಟಿ	3.45 ಕೋಟಿ
ಸಕ್ರಿಯ ಪ್ರಕರಣ	1.95 ಕೋಟಿ	1.28 ಲಕ್ಷ
ಗುಣಮುಖ	23.46 ಕೋಟಿ	3.39 ಕೋಟಿ
ಸಾವು	51.88 ಲಕ್ಷ	4.66 ಲಕ್ಷ

ದಿನದ ಮಾಹಿತಿ

	ವಿಶ್ವ	ಭಾರತ
ಹೊಸ ಪ್ರಕರಣ	5.64 ಲಕ್ಷ	9,283
ಗುಣಮುಖ	4.52 ಲಕ್ಷ	10,949
ಸಾವು	8,182	437

ಎಲ್ಲಿ ಹೆಚ್ಚು ಪ್ರಕರಣ (ಹಿಂದಿನ 24 ಗಂಟೆಗಳಲ್ಲಿ): 86,016 ಅಮೆರಿಕ; 42,484 ಬ್ರಿಟನ್; 54,268 ಜರ್ಮನಿ

ಎಲ್ಲಿ ಹೆಚ್ಚು ಸಾವು: 1.40 ಲಕ್ಷ ಮಹಾರಾಷ್ಟ್ರ; 36,401 ತಮಿಳುನಾಡು; 38,045 ಕೇರಳ

ಎಲ್ಲಿ ಹೆಚ್ಚು ಸಕ್ರಿಯ ಪ್ರಕರಣಗಳು (ಲಕ್ಷಗಳಲ್ಲಿ): 93.29 ಅಮೆರಿಕ; 9.96 ಬ್ರಿಟನ್; 10.44 ರಷ್ಯಾ

ಎಲ್ಲಿ ಹೆಚ್ಚು ಪ್ರಕರಣ (ಲಕ್ಷಗಳಲ್ಲಿ): 66.31 ಮಹಾರಾಷ್ಟ್ರ; 51.09 ಕೇರಳ; 27.21 ತಮಿಳುನಾಡು

(*ರಾತ್ರಿ 12 ಗಂಟೆಯವರೆಗಿನ ಮಾಹಿತಿ)

ಡಿಪಿಆರ್ ಸಿದ್ಧಪಡಿಸಲು ಬಿಬಿಎಂಪಿಗೆ ಸೂಚನೆ • ರಾಜಕಾಲುವೆ ಅಭಿವೃದ್ಧಿಗೆ ಜ.30ರ ಗಡುವು

ರಾಜಕಾಲುವೆ ಅಭಿವೃದ್ಧಿ: ₹900 ಕೋಟಿ ಯೋಜನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಬಿಎಂಪಿ ವ್ಯಾಪ್ತಿಯಲ್ಲಿ ಕೈಗೆತ್ತಿಕೊಂಡಿರುವ 30 ಕಿ.ಮೀ ಉದ್ದದ ರಾಜಕಾಲುವೆ ಕಾಮಗಾರಿಯನ್ನು 2020ರ ಜನವರಿ ಅಂತ್ಯಕ್ಕೆ ಪೂರ್ಣಗೊಳಿಸುವಂತೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಗಡುವು ನಿಗದಿಪಡಿಸಿದರು.

‘ಪ್ರಾಥಮಿಕ ಚರಂಡಿಗಳ ಕಾಮಗಾರಿಗಳನ್ನು ಪ್ರತಿ 15 ದಿನಗಳಿಗೊಮ್ಮೆ ಸಿಎಂ ಡ್ಯಾಶ್ ಬೋರ್ಡ್‌ನಲ್ಲಿ ಖುದ್ದು ಪರಿಶೀಲಿಸುತ್ತೇನೆ. ಕಾಮಗಾರಿ ಪ್ರಗತಿ ಕುರಿತು ಎಂಜಿನಿಯರ್‌ಗಳಿಗೆ ಖುದ್ದು ಕರೆ ಮಾಡುತ್ತೇನೆ. ಕರ್ತವ್ಯ ನಿರ್ಲಕ್ಷ್ಯ ಕಂಡುಬಂದರೆ ಮುಲಾಜಿಲ್ಲದೆ ಅಮಾನತು ಮಾಡಲಿದ್ದೇನೆ’ ಎಂದು ಮುಖ್ಯಮಂತ್ರಿ ಎಚ್ಚರಿಕೆ ನೀಡಿದರು.

‘ನಗರದಲ್ಲಿ ಸುರಿದ ಭಾರಿ ಮಳೆಯಾಗಿದ್ದರಿಂದ ತಗ್ಗುಪ್ರದೇಶದ ಮನೆಗಳಿಗೆ ನೀರು ನುಗ್ಗಿದೆ. ಕೆರೆಗಳ ಕೆಳಗಿನ ಪ್ರದೇಶದ ರಾಜಕಾಲುವೆಗಳನ್ನು ದುರಸ್ತಿ ಮಾಡಿ, ಅವುಗಳಲ್ಲಿ ನೀರು ಹರಿವಿನ ಸಾಮರ್ಥ್ಯವನ್ನು ಹೆಚ್ಚಿಸಬೇಕು. ರಾಜಕಾಲುವೆಗಳ ಕಲ್ಲಿನ ರಚನೆಗಳನ್ನು ಕಾಂಕ್ರೀಟ್ ರಚನೆಗಳನ್ನಾಗಿ ಪರಿವರ್ತಿಸಬೇಕು. ಬಿಬಿಎಂಪಿಗೆ ಸೇರ್ಪಡೆಯಾದ ಹೊರವಲಯದ 110 ಗ್ರಾಮಗಳಲ್ಲಿ ಈಗಲೂ ಕೆಲವೆಡೆ ಕಚ್ಚಾಕಾಲುವೆಗಳಿವೆ. ಇಲ್ಲೂ ಕಾಂಕ್ರೀಟ್ ರಚನೆಗಳನ್ನು ನಿರ್ಮಿಸಿ, ಅವುಗಳ ಅಗಲ ವಿಸ್ತರಿಸಬೇಕು. ನೀರು ಸರಾಗವಾಗಿ ಹರಿಯುವುದಕ್ಕೆ ಇರುವ ಅಡೆತಡೆಗಳನ್ನು ನಿವಾರಿಸಲು ಕ್ರಮ ಕೈಗೊಳ್ಳಬೇಕು’ ಎಂದು ಅಧಿಕಾರಿಗಳಿಗೆ ಬೊಮ್ಮಾಯಿ ಸೂಚಿಸಿದರು.

ಬಿಬಿಎಂಪಿ ವ್ಯಾಪ್ತಿಯ ರಾಜಕಾಲುವೆಗಳ ಸ್ಥಿತಿಗತಿ ಕುರಿತು ಚರ್ಚಿಸಲು ಅಧಿಕಾರಿಗಳ ಸಭೆ ನಡೆಸಿದ ಬಳಿಕ ಅವರು ಬುಧವಾರ ಸುದ್ದಿಗಾರರೊಂದಿಗೆ ಮಾತನಾಡಿದರು.

‘ವೃಷಭಾವತಿ, ಹೆಬ್ಬಾಳ, ಕೋರಮಂಗಲ–ಚಲ್ಲಘಟ್ಟ ಕಣಿವೆಗಳ ವ್ಯಾಪ್ತಿಯಲ್ಲಿ 842 ಕಿ.ಮೀ ಉದ್ದದಷ್ಟು ರಾಜಕಾಲುವೆಗಳಿವೆ. ಇವುಗಳಲ್ಲಿ 415 ಕಿ.ಮೀ ಉದ್ದದ ಕಾಲುವೆಗಳು ಈಗಾಗಲೇ ಅಭಿವೃದ್ಧಿಗೊಂಡಿದೆ. 2019 -20 ರಲ್ಲಿ 75 ಕಿ.ಮೀ ಉದ್ದ ಕಾಲುವೆಗಳ ಅಭಿವೃದ್ಧಿಗೆ ಅನುಮೋದನೆ ನೀಡಲಾಗಿದ್ದು, ಅದರಲ್ಲಿ 40 ಕಿ.ಮೀ ಉದ್ದದಷ್ಟು ಕಾಮಗಾರಿ ಪೂರ್ಣಗೊಂಡಿದೆ. ರಾಜಕಾಲುವೆಗಳಲ್ಲಿ ಗಂಭೀರ ಸಮಸ್ಯೆಗಳಿರುವ 94 ಸ್ಥಳಗಳನ್ನು ಗುರುತಿಸಲಾಗಿದೆ. ಅವುಗಳನ್ನು ಎರಡು ತಿಂಗಳುಗಳ ಒಳಗೆ ಪೂರ್ಣಗೊಳಿಸಲು ಸೂಚಿಸಿದ್ದೇನೆ’ ಎಂದು ಮುಖ್ಯಮಂತ್ರಿ ತಿಳಿಸಿದರು.

‘ಕೋರಮಂಗಲ–ಚಲ್ಲಘಟ್ಟ ಮತ್ತು ವೃಷಭಾವತಿ ಕಣಿವೆಗಳಲ್ಲಿಯೂ ಗಂಭೀರ ಸಮಸ್ಯೆಗಳಿರುವ ಸ್ಥಳಗಳಿವೆ. ಸುಮಾರು 51 ಕಿ.ಮೀ ಉದ್ದ ಪ್ರಾಥಮಿಕ ರಾಜಕಾಲುವೆಗಳನ್ನು ದುರಸ್ತಿಯನ್ನು ಆದ್ಯತೆ ಮೇಲೆ ಕೈಗೊಳ್ಳಬೇಕಿದೆ. 38 ಕಿ.ಮೀಗಳಷ್ಟು ದ್ವಿತೀಯ ಹಂತದ ರಾಜಕಾಲುವೆಗಳ ಕಾಮಗಾರಿ ಕೈಗೆತ್ತಿಕೊಳ್ಳಬೇಕಿದೆ. ನಾಲ್ಕು ಕಣಿವೆಗಳ ವ್ಯಾಪ್ತಿಯಲ್ಲಿ ಬಾಕಿ ಉಳಿದಿರುವ ಕಾಮಗಾರಿಗಳು ಹಾಗೂ ಇಂದಿನ ಸ್ಥಿತಿಗತಿಗಳನ್ನು ಆಧರಿಸಿ ಕಾಲುವೆ ವ್ಯವಸ್ಥೆ ಸರಿಪಡಿಸಬೇಕಿದೆ. ಈ ಜಟಿಲವಾದ ಸವಾಲಿನಲ್ಲಿ ಶಾಶ್ವತ ಪರಿಹಾರ ಕಂಡುಕೊಳ್ಳಲು ₹ 900 ಕೋಟಿ ವೆಚ್ಚದ ಸಮಗ್ರ ಅಭಿವೃದ್ಧಿ ಯೋಜನೆ (ಡಿಪಿಆರ್) ಸಿದ್ಧಪಡಿಸುವಂತೆ ಮುಖ್ಯ ಆಯುಕ್ತರಿಗೆ ಸೂಚನೆ ನೀಡಿದ್ದೇನೆ. ಇದಕ್ಕೆ ತಕ್ಷಣವೇ ವಿಶೇಷ ಅನುದಾನ ಬಿಡುಗಡೆ ಮಾಡುತ್ತೇವೆ’ ಎಂದರು.

‘ಕಾಮಗಾರಿಯನ್ನು ಶೀಘ್ರವಾಗಿ ಅನುಷ್ಠಾನಕ್ಕೆ ತರಲು 197 ಕ್ಷೇತ್ರ ಎಂಜಿನಿಯರ್‌ಗಳನ್ನು ನೇಮಿಸಬೇಕಿದೆ. ಈ ಸಲುವಾಗಿ 130 ಎಂಜಿನಿಯರ್‌ಗಳನ್ನು ಗುತ್ತಿಗೆ ಆಧಾರದಲ್ಲಿ ನೇಮಿಸಿಕೊಳ್ಳಲು ಸೂಚನೆ ನೀಡಿದ್ದೇನೆ’ ಎಂದು ತಿಳಿಸಿದರು.

‘ಮಳೆ ನಿಂತ ತಕ್ಷಣವೇ ರಸ್ತೆ ಗುಂಡಿಗಳನ್ನು ಮುಚ್ಚಲು ಹಾಗೂ ಅರ್ಧ ಕಿಲೊ ಮೀಟರ್‌ಗಿಂತ ಹೆಚ್ಚು ಉದ್ದಕ್ಕೆ ರಸ್ತೆ ಹಾಳಾಗಿದ್ದರೆ, ಅಲ್ಲಿ ಡಾಂಬರು ಹಾಕಲು ಸೂಚನೆ ನೀಡಿದ್ದೇನೆ’ ಎಂದು ಅವರು ತಿಳಿಸಿದರು.

ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅಧ್ಯಕ್ಷತೆಯಲ್ಲಿ ಬುಧವಾರ ನಡೆದ ಸಭೆಯಲ್ಲಿ ಬಿಬಿಎಂಪಿ ಮುಖ್ಯ ಆಯುಕ್ತ ಗೌರವ್ ಗುಪ್ತ, ಆಡಳಿತಾಧಿಕಾರಿ ರಾಕೇಶ್ ಸಿಂಗ್, ಮುಖ್ಯಮಂತ್ರಿಯವರ ಪ್ರಧಾನ ಕಾರ್ಯದರ್ಶಿ ಎನ್.ಮಂಜುನಾಥ ಪ್ರಸಾದ್, ಉನ್ನತ ಶಿಕ್ಷಣ ಸಚಿವ ಅಶ್ವತ್ಥನಾರಾಯಣ, ವಸತಿ ಸಚಿವ ವಿ.ಸೋಮಣ್ಣ, ನಗರಾಭಿವೃದ್ಧಿ ಸಚಿವ ಬೈರತಿ ಬಸವರಾಜು ಹಾಗೂ ಅಬಕಾರಿ ಸಚಿವ ಕೆ.ಗೋಪಾಲಯ್ಯ ಇದ್ದಾರೆ– ಪ್ರಜಾವಾಣಿ ಚಿತ್ರ

ಮುಖ್ಯಮಂತ್ರಿ ನೀಡಿರುವ ಸೂಚನೆಗಳು

- ಮಳೆ ಬಂದಾಗ ರಸ್ತೆಗಳಲ್ಲಿ ನೀರು ನಿಲ್ಲದಂತೆ, ಮನೆಗಳಿಗೆ ನೀರು ನುಗ್ಗದಂತೆ ತುರ್ತು ಪರಿಹಾರ ಕೈಗೊಳ್ಳಬೇಕು.
- ಕಾಮಗಾರಿಗಳನ್ನು ಎನ್‌ಡಿಆರ್‌ಎಫ್ ಹಾಗೂ ಎಸ್‌ಡಿಆರ್‌ಎಫ್ ಅನುದಾನದಲ್ಲಿ ತ್ವರಿತವಾಗಿ ಕೈಗೊಳ್ಳಬೇಕು. ಇತರ ಇಲಾಖೆಗಳೊಂದಿಗೆ ಚರ್ಚಿಸಿ ಕಾಮಗಾರಿಯನ್ನು ಮುಂಬರುವ ಜನವರಿಯೊಳಗೆ ಪ್ರಾರಂಭಿಸಬೇಕು.
- ಸಂಸ್ಕರಿಸದ ತ್ಯಾಜ್ಯನೀರನ್ನು ರಾಜಕಾಲುವೆಗೆ ಹರಿಸಲೇಬಾರದು. ತ್ಯಾಜ್ಯ ನೀರು ಶುದ್ಧೀಕರಣಕ್ಕಾಗಿ ಕೊಳಚೆ ನೀರು ಶುದ್ಧೀಕರಣ ಘಟಕಗಳನ್ನು (ಎಸ್‌ಟಿಪಿ) ಸರಿಪಡಿಸಬೇಕು.

‘714 ಕಡೆ ಒತ್ತುವರಿ ತೆರವು ಬಾಕಿ’

‘ಬಿಬಿಎಂಪಿ ವ್ಯಾಪ್ತಿಯಲ್ಲಿ 2,626 ಕಡೆ ರಾಜಕಾಲುವೆಗಳು ಒತ್ತುವರಿಯಾಗಿರುವುದನ್ನು ಗುರುತಿಸಲಾಗಿದ್ದು, ಅವುಗಳಲ್ಲಿ 1,480 ಒತ್ತುವರಿಗಳನ್ನು ತೆರವುಗೊಳಿಸಲಾಗಿದೆ. ಇನ್ನೂ 714 ಕಡೆ ತೆರವು ಕಾರ್ಯ ಬಾಕಿ ಇದೆ’ ಎಂದು ಮುಖ್ಯಮಂತ್ರಿ ತಿಳಿಸಿದರು.

ಬಿಲ್ಡರ್‌ಗಳು ಹಾಗೂ ಪ್ರಭಾವಿಗಳು ಮಾಡಿರುವ ಒತ್ತುವರಿಯನ್ನು ಯಾವುದೇ ಮುಲಾಜಿಲ್ಲದೆ ತೆರವುಗೊಳಿಸಬೇಕು. ಬಡವರಿಗೆ ಕಾಲಾವಕಾಶ ನೀಡಬೇಕು ಎಂದು ಸೂಚನೆ ನೀಡಿದರು.

ಎಸ್‌ಡಿಎಂ: 29 ವಿದ್ಯಾರ್ಥಿಗಳಿಗೆ ಕೋವಿಡ್

ಧಾರವಾಡ: ಇಲ್ಲಿನ ಎಸ್‌ಡಿಎಂ ವೈದ್ಯಕೀಯ ಕಾಲೇಜಿನ ಪದವಿ ಹಂತದ 29 ವಿದ್ಯಾರ್ಥಿಗಳಲ್ಲಿ ಕೋವಿಡ್ ದೃಢಪಟ್ಟಿದೆ.

ಕಳೆದ ಕೆಲವು ದಿನಗಳಿಂದ ಕೆಲ ವಿದ್ಯಾರ್ಥಿಗಳು ಅನಾರೋಗ್ಯದ ಸಮಸ್ಯೆ ಎದುರಿಸುತ್ತಿದ್ದರು. ಮಂಗಳವಾರ (ನ.23) ಅವರ ತಪಾಸಣೆ ನಡೆಸಿದಾಗ 4 ವಿದ್ಯಾರ್ಥಿಗಳಲ್ಲಿ ಕೋವಿಡ್ ದೃಢಪಟ್ಟಿತ್ತು. ಹೀಗಾಗಿ ಕಾಲೇಜಿನ ಒಟ್ಟು 500 ವಿದ್ಯಾರ್ಥಿಗಳಲ್ಲಿ ಬುಧವಾರ 100 ವಿದ್ಯಾರ್ಥಿಗಳನ್ನು ತಪಾಸಣೆಗೆ ಒಳಪಡಿಸಲಾಗಿತ್ತು. ಇವರಲ್ಲಿ 25 ವಿದ್ಯಾರ್ಥಿಗಳಲ್ಲಿ ಸೋಂಕು ದೃಢಪಟ್ಟಿದೆ.

ಸಿ.ಎಂ ಕಚೇರಿ: ಇಬ್ಬರಿಗೆ ಕೋವಿಡ್

ಬೆಂಗಳೂರು: ಮುಖ್ಯಮಂತ್ರಿಯವರ ಗೃಹ ಕಚೇರಿ ‘ಕೃಷ್ಣಾ’ದಲ್ಲಿ ಇಬ್ಬರು ಅಧಿಕಾರಿಗಳಿಗೆ ಕೋವಿಡ್–19 ದೃಢಪಟ್ಟಿದ್ದು, ಇತರ ಸಿಬ್ಬಂದಿಯನ್ನು ಕೋವಿಡ್ ಪರೀಕ್ಷೆಗೆ ಒಳಪಡಿಸಲಾಗಿದೆ.

ಕೋವಿಡ್ ದೃಢಪಟ್ಟಿರುವ ಅಧಿಕಾರಿಗಳು ಈಗ ಚೇತರಿಸಿಕೊಳ್ಳುತ್ತಿದ್ದಾರೆ ಎಂದು ಮುಖ್ಯಮಂತ್ರಿ ಕಚೇರಿ ಮೂಲಗಳು ತಿಳಿಸಿವೆ. ಈ ಕಾರಣಕ್ಕೆ ‘ಕೃಷ್ಣಾ’ದಲ್ಲಿ ಮಂಗಳವಾರ ಮತ್ತು ಬುಧವಾರ ನಿಗದಿಯಾಗಿದ್ದ ಎಲ್ಲ ಕಾರ್ಯಕ್ರಮಗಳನ್ನು ಮುಖ್ಯಮಂತ್ರಿಯವರು ರದ್ದುಪಡಿಸಿ, ರೇಸ್‌ಕೋರ್ಸ್‌ನ ಅಧಿಕೃತ ನಿವಾಸದಲ್ಲಿ ಸಭೆಗಳನ್ನು ನಡೆಸಿದರು. ‘ಕೃಷ್ಣಾ’ ಆವರಣವನ್ನು ಸ್ಯಾನಿಟೈಸ್ ಮಾಡಲಾಗಿದೆ. ಇಲ್ಲಿ ಪೊಲೀಸರು ಸೇರಿ ಸುಮಾರು 50ಕ್ಕೂ ಹೆಚ್ಚು ಸಿಬ್ಬಂದಿ ಕಾರ್ಯ ನಿರ್ವಹಿಸುತ್ತಿದ್ದಾರೆ.

10 ಜಿಲ್ಲೆಗಳಲ್ಲಿ 10ಕ್ಕಿಂತ ಕಡಿಮೆ ಪ್ರಕರಣ

ಬೆಂಗಳೂರು: ರಾಜ್ಯದಲ್ಲಿ ಕೋವಿಡ್ ಸಕ್ರಿಯ ಪ್ರಕರಣಗಳು 6,412ಕ್ಕೆ ಇಳಿಕೆ ಕಂಡಿದ್ದು, 10 ಜಿಲ್ಲೆಗಳಲ್ಲಿ ಸೋಂಕಿತರ ಸಂಖ್ಯೆ 10ಕ್ಕಿಂತ ಕಡಿಮೆ ಇದೆ.

ಒಂದು ದಿನದ ಅವಧಿಯಲ್ಲಿ 65 ಸಾವಿರ ಮಾದರಿಗಳನ್ನು ಪರೀಕ್ಷೆ ಮಾಡಲಾಗಿದೆ. ಬುಧವಾರ 254 ಕೋವಿಡ್ ಪ್ರಕರಣಗಳು ವರದಿಯಾಗಿವೆ. ಸೋಂಕು ದೃಢ ಪ್ರಮಾಣ ಶೇ 0.38 ರಷ್ಟು ದೃಢಪಟ್ಟಿದೆ. ಮೂರು ಜಿಲ್ಲೆಗಳಲ್ಲಿ ಹೊಸ ಪ್ರಕರಣಗಳ ಸಂಖ್ಯೆ ಎರಡಂಕಿ, 12 ಜಿಲ್ಲೆಗಳಲ್ಲಿ ಒಂದಂಕಿಯಲ್ಲಿದೆ. ಬಾಗಲಕೋಟೆ, ಬಳ್ಳಾರಿ ಸೇರಿದಂತೆ 14 ಜಿಲ್ಲೆಗಳಲ್ಲಿ ಹೊಸ ಪ್ರಕರಣಗಳು ವರದಿಯಾಗಿಲ್ಲ.

ಬೆಂಗಳೂರಿನಲ್ಲಿ 152 ಮಂದಿ ಸೋಂಕಿತರಾಗಿದ್ದಾರೆ. ಉಳಿದ ಜಿಲ್ಲೆಗಳಲ್ಲಿ ಹೊಸ ಪ್ರಕರಣಗಳು 50ರ ಗಡಿಯೊಳಗೆ ಇವೆ. ಈವರೆಗೆ ಸೋಂಕಿತರಾದವರ ಒಟ್ಟು ಸಂಖ್ಯೆ 29.94 ಲಕ್ಷ ದಾಟಿದೆ.

ಬಾಗಲಕೋಟೆ, ಬೀದರ್, ಚಿಕ್ಕಬಳ್ಳಾಪುರ, ಗದಗ, ಹಾವೇರಿ, ಕಲಬುರಗಿ, ರಾಯಚೂರು, ರಾಮನಗರ, ವಿಜಯಪುರ ಹಾಗೂ ಯಾದಗಿರಿ ಜಿಲ್ಲೆಯಲ್ಲಿ ಬೆರಳಣಿಕೆಯಷ್ಟು ಸಕ್ರಿಯ ಪ್ರಕರಣಗಳಿವೆ.

ಬೆಂಗಳೂರು ನಗರ ಜಿಲ್ಲಾ ಕೋವಿಡ್ ಅಂಕಿ–ಅಂಶ

12,55,440 ಒಟ್ಟು ಸೋಂಕಿತರು (12,55,288 ನಿನ್ನೆಯ ವಿವರ)

ಸಕ್ರಿಯ ಪ್ರಕರಣ	ಗುಣಮುಖ ಆದವರು	ಒಟ್ಟು ಸಾವು
5,117	12,33,996	16,326

ದಿನದ ಏರಿಕೆ

ಹೊಸ ಪ್ರಕರಣ	152
ಗುಣಮುಖ	464
ಸಾವು	01

ಆಧಾರ: ಆರೋಗ್ಯ ಇಲಾಖೆ
ಪ್ರಜಾವಾಣಿ ಗ್ರಾಫಿಕ್ಸ್

ರಾಜ್ಯದ ಕೋವಿಡ್ ಅಂಕಿ–ಅಂಶ

29,94,255 ಒಟ್ಟು ಪ್ರಕರಣಗಳು (29,94,001 ನಿನ್ನೆಯ ವಿವರ)

6,415 ಸಕ್ರಿಯ ಪ್ರಕರಣಗಳು

29,49,629 ಗುಣಮುಖರಾದವರು

38,185 ಒಟ್ಟು ಸಾವು

ದಿನದ ಏರಿಕೆ

ಹೊಸ ಪ್ರಕರಣ	254
ಗುಣಮುಖ	546
ಸಾವು	03

ಆಧಾರ: ರಾಜ್ಯ ಆರೋಗ್ಯ ಇಲಾಖೆ
ಪ್ರಜಾವಾಣಿ ಗ್ರಾಫಿಕ್ಸ್

ಮಗು ಅಪಹರಣ: ಇಬ್ಬರ ಬಂಧನ

ಪ್ರಜಾವಾಣಿ ವಾರ್ತೆ

ಕೋಲಾರ: ತಮಿಳುನಾಡು ಮೂಲದ ದಂಪತಿಯ ನವಜಾತ ಶಿಶುವಿನ ಅಪಹರಣ ಪ್ರಕರಣ ಸಂಬಂಧ ನಾಗಮಣಿ ಮತ್ತು ಅವರ ಸಂಬಂಧಿ ಅನುಸೂಯಮ್ಮ ಎಂಬುವವರನ್ನು ನಗರದ ಮಹಿಳಾ ಠಾಣೆ ಪೊಲೀಸರು ಬಂಧಿಸಿದ್ದಾರೆ.

ಪ್ರಕರಣದ ಪ್ರಮುಖ ಆರೋಪಿ ಗೀತಾ ತಲೆಮರೆಸಿಕೊಂಡಿದ್ದು, ಪೊಲೀಸರು ಅವರ ಪತ್ತೆ ಕಾರ್ಯ ಚುರುಕುಗೊಳಿಸಿದ್ದಾರೆ. ನವಜಾತ ಶಿಶುವಿನ ಅಪಹರಣದ ನಂತರ ಕಳೆದೊಂದು ತಿಂಗಳಿಂದ ನಾಪತ್ತೆಯಾಗಿರುವ ಗೀತಾ ಅವರ ಮೊಬೈಲ್ ಸ್ವಿಚ್ ಆಫ್ ಆಗಿದ್ದು, ಪತ್ತೆ ಕಾರ್ಯಕ್ಕೆ ದೊಡ್ಡ ಹಿನ್ನಡೆಯಾಗಿದೆ.

ಮಾಲೂರು ತಾಲ್ಲೂಕಿನ ಹುಂಗೇನಹಳ್ಳಿಯ ನಾಗಮಣಿಯು ಗೀತಾ ಮತ್ತು ಪುಷ್ಪಾ ಎಂಬುವರಿಂದ ₹50 ಸಾವಿರಕ್ಕೆ ಮಗು ಖರೀದಿಸಿದ್ದರು. ಮಗುವಿನ ಪೋಷಕರಾದ ಸತ್ಯ ಮತ್ತು ಸುಮಿತ್ರಾ ದಂಪತಿಯು ಹಣದಾಸೆಗೆ ಮಗುವನ್ನು ಗೀತಾಗೆ ಮಾರಿದ್ದರು ಎಂದು ಪೊಲೀಸರು ತಿಳಿಸಿದ್ದಾರೆ.

ಮಗು ಮಾರಿದ ಕೆಲ ದಿನಗಳ ಬಳಿಕ ಸತ್ಯ ದಂಪತಿ ಮಗುವನ್ನು ವಾಪಸ್ ಕೇಳಿದ್ದರು. ಗೀತಾ ಮತ್ತು ಪುಷ್ಪಾ ಮಗು ವಾಪಸ್ ಕೊಡದ ಕಾರಣ ಮಹಿಳಾ ಠಾಣೆಯಲ್ಲಿ ನ.2ರಂದು ದೂರು ದಾಖಲಿಸಿದ್ದರು. ಈ ದೂರಿನ ಹಿನ್ನೆಲೆಯಲ್ಲಿ ಪೊಲೀಸರು ಗೀತಾ ಮತ್ತು ಪುಷ್ಪಾರನ್ನು ಠಾಣೆಗೆ ಕರೆಸಿ ವಿಚಾರಣೆ ಮಾಡಿ ಒಂದು ವಾರದೊಳಗೆ ಮಗು ತಂದು ಕೊಡುವಂತೆ ಎಚ್ಚರಿಕೆ ನೀಡಿ ಕಳುಹಿಸಿದ್ದರು.

ಪೊಲೀಸರು ಠಾಣೆಗೆ ಕರೆದೊಯ್ದಿದ್ದರಿಂದ ಬೇಸರಗೊಂಡಿದ್ದ ಪುಷ್ಪಾ, ಅವರ ತಂದೆ ಮುನಿಯಪ್ಪ, ತಾಯಿ ನಾರಾಯಣಮ್ಮ, ಪತಿ ಬಾಬು ಹಾಗೂ ಮಗಳು ಗಂಗೋತ್ರಿ ಮರ್ಯಾದೆಗೆ ಅಂಜಿ ನ.7ರಂದು ತಂಪು ಪಾನೀಯದಲ್ಲಿ ವಿಷ ಬೆರೆಸಿಕೊಂಡು ಕುಡಿದು ಸಾಮೂಹಿಕವಾಗಿ ಆತ್ಮಹತ್ಯೆ ಮಾಡಿಕೊಂಡಿದ್ದರು.

ಪುಷ್ಪಾ ಪಾತ್ರವಿತ್ತು: ‘ಮಗುವಿನ ಅಪಹರಣ ಮತ್ತು ಮಾರಾಟ ಪ್ರಕರಣದಲ್ಲಿ ಪುಷ್ಪಾ ಅವರ ಪಾತ್ರವಿದ್ದ ಸಂಗತಿ ತನಿಖೆಯಲ್ಲಿ ದೃಢಪಟ್ಟಿದೆ.’ ಎಂದು ಹಿರಿಯ ಪೊಲೀಸ್ ಅಧಿಕಾರಿಗಳು ತಿಳಿಸಿದ್ದಾರೆ.

ಅಪರಾಧ ಸುದ್ದಿ

ಭದ್ರತಾ ಸಿಬ್ಬಂದಿ ಹತ್ಯೆ: ನಾಲ್ವರ ಬಂಧನ

ಬೆಂಗಳೂರು: ಕೃಷಿ ವಿಶ್ವವಿದ್ಯಾಲಯ ಗಾಂಧಿ ಕೃಷಿ ವಿಜ್ಞಾನ ಕೇಂದ್ರದ (ಜಿಕೆವಿಕೆ) ಭದ್ರತಾ ಸಿಬ್ಬಂದಿ ದೀಪಕ್‌ಕುಮಾರ್ (46) ಎಂಬುವರನ್ನು ಅವರ ಮನೆಯಲ್ಲೇ ಮಾರಕಾಸ್ತ್ರಗಳಿಂದ ಕೊಚ್ಚಿ ಕೊಲೆ ಮಾಡಿದ್ದ ಪ್ರಕರಣದಲ್ಲಿ ನಾಲ್ವರನ್ನು ಯಲಹಂಕ ನ್ಯೂ ಟೌನ್ ಪೊಲೀಸರು ಬಂಧಿಸಿದ್ದಾರೆ.

‘ಬಿಹಾರದ ದೀಪಕ್‌ಕುಮಾರ್, ಪತ್ನಿ ಹಾಗೂ ಇಬ್ಬರು ಹೆಣ್ಣು ಮಕ್ಕಳ ಜತೆ ವೀರ್‌ಸಾಗರ್ ರಸ್ತೆಯಲ್ಲಿ ಬಾಡಿಗೆ ಮನೆಯಲ್ಲಿ ವಾಸವಿದ್ದರು. ಹೋದ ಭಾನುವಾರ ತಡರಾತ್ರಿ ಮಾರಕಾಸ್ತ್ರ ಹಿಡಿದು ಮನೆಗೆ ನುಗ್ಗಿದ್ದ ದುಷ್ಕರ್ಮಿಗಳು, ದೀಪಕ್ ಮೇಲೆ ದಾಳಿ ಮಾಡಿದ್ದರು. ಮಕ್ಕಳ ಎದುರೇ ಅವರನ್ನು ಅಟ್ಟಾಡಿಸಿಕೊಂಡು ಮಾರಕಾಸ್ತ್ರಗಳಿಂದ ಹೊಡೆದು ಕೊಲೆ ಮಾಡಿದ್ದರು. ಬಂಧಿತರೆಲ್ಲಾ ಅಪ್ರಾಪ್ತರಾಗಿದ್ದಾರೆ. ಅವರ ವಿಚಾರಣೆ ನಡೆಸಲಾಗುತ್ತಿದೆ’ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಶಿಕ್ಷಕರ ಮನೆಯಿಂದ ಚಿನ್ನ, ನಗದು ಕಳವು

ಬೆಂಗಳೂರು: ಸೋಂಪುರ ಹೋಬಳಿಯ ಕಂಬಾಳು ಗ್ರಾಮದಲ್ಲಿ ನೆಲೆಸಿದ್ದ ಶಿಕ್ಷಕರೊಬ್ಬರ ಮನೆಯಲ್ಲಿ ಕಳವಾಗಿದ್ದು ದಾಬಸ್‌ಪೇಟೆ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ‘ಶಿಕ್ಷಕ ಜಡಿಯಪ್ಪ ಹಾಗೂ ಅವರ ಪತ್ನಿ ಮನೆಯಲ್ಲಿ ಇಲ್ಲದಾಗ, ಈ ವೇಳೆ ಬಾಗಿಲು ಮುರಿದು ಮನೆಯೊಳಗೆ ನುಗ್ಗಿರುವ ಕಳ್ಳರು, ಬೀರುವಿನಲ್ಲಿ ಇಟ್ಟಿದ್ದ ₹2 ಲಕ್ಷ ನಗದು ಹಾಗೂ ₹3 ಲಕ್ಷ ಮೌಲ್ಯದ ಚಿನ್ನಾಭರಣ ಹಾಗೂ ಬೆಳ್ಳಿಯ ಸಾಮಗ್ರಿಗಳನ್ನು ಕದ್ದು ಪರಾರಿಯಾಗಿದ್ದಾರೆ’ ಎಂದು ಪೊಲೀಸರು ತಿಳಿಸಿದ್ದಾರೆ.

ಸಿ.ಡಿ ಪ್ರಕರಣ: ಕಮಲ್ ಪಂತ್ ಅರ್ಜಿ

ಬೆಂಗಳೂರು: ‘ಯುವತಿಯೊಬ್ಬಳನ್ನು ಲೈಂಗಿಕವಾಗಿ ದುರ್ಬಳಕೆ ಮಾಡಿಕೊಂಡು ವಂಚಿಸಲಾಗಿದೆ’ ಎಂಬ ಆರೋಪಕ್ಕೆ ಸಂಬಂಧಿಸಿದಂತೆ ಅಂದಿನ ಜಲಸಂಪನ್ಮೂಲ ಸಚಿವ ರಮೇಶ್ ಜಾರಕಿಹೊಳಿ ವಿರುದ್ಧ, ಕನಕಪುರದ ದಿನೇಶ್ ಕಲ್ಲಹಳ್ಳಿ ನೀಡಿದ ದೂರಿನ ಅನುಸಾರ ಎಫ್‌ಐಆರ್ ದಾಖಲಿಸದ ಬೆಂಗಳೂರು ನಗರ ಪೊಲೀಸ್ ಆಯುಕ್ತರಾಗಿದ್ದ ಕಮಲ್ ಪಂತ್, ಡಿಸಿಪಿಯಾಗಿದ್ದ ಎಂ.ಎನ್. ಅನುಚೇತ್ ಮತ್ತು ಕಬ್ಬನ್ ಪಾರ್ಕ್ ಪೊಲೀಸ್ ಠಾಣಾಧಿಕಾರಿ ಬಿ.ಮಾರುತಿ ವಿರುದ್ಧ ತನಿಖೆ ನಡೆಸಲು ಆದೇಶಿಸಿರುವ ವಿಚಾರಣಾ ನ್ಯಾಯಾಲಯದ ಆದೇಶ ರದ್ದುಗೊಳಿಸುವಂತೆ ಕೋರಿ ಹೈಕೋರ್ಟ್‌ನಲ್ಲಿ ಅರ್ಜಿ ಸಲ್ಲಿಸಲಾಗಿದೆ.

ಕಮಲ್ ಪಂತ್, ಅನುಚೇತ್ ಮತ್ತು ಬಿ.ಮಾರುತಿ ಈ ರಿಟ್ ಅರ್ಜಿ ಸಲ್ಲಿಸಿದ್ದು, ವಿಶೇಷ ತನಿಖಾ ತಂಡ (ಎಸ್‌ಐಟಿ) ಹಾಗೂ ಜನಾಧಿಕಾರ ಸಂಘರ್ಷ ಪರಿಷತ್ (ಜೆಎಸ್‌ಪಿ) ಅಧ್ಯಕ್ಷ ಆದರ್ಶ ಆರ್.ಅಯ್ಯರ್ ಅವರನ್ನು ಪ್ರತಿವಾದಿಗಳನ್ನಾಗಿ ಕಾಣಿಸಲಾಗಿದೆ. ಈ ಅರ್ಜಿಯು (ಡಬ್ಲ್ಯು.ಪಿ 21264/2021) ನ್ಯಾಯಮೂರ್ತಿ ಶ್ರೀನಿವಾಸ ಬಿ.ಹರೀಶ್ ಕುಮಾರ್ ಅವರ ಏಕಸದಸ್ಯ ನ್ಯಾಯಪೀಠದ ಮುಂದೆ ಗುರುವಾರ (ನ.25) ವಿಚಾರಣೆಗೆ ನಿಗದಿಯಾಗಿದೆ.

‘ಪ್ರಕರಣಕ್ಕೆ ಸಂಬಂಧಿಸಿದಂತೆ ಪೊಲೀಸರು ಎಫ್‌ಐಆರ್ ದಾಖಲಿಸಿಲ್ಲ’ ಎಂದು ಆಕ್ಷೇಪಿಸಿ, ‘ಜನಾಧಿಕಾರ ಸಂಘರ್ಷ ಪರಿಷತ್’ ಪೊಲೀಸ್ ಅಧಿಕಾರಿಗಳ ವಿರುದ್ಧ ಮ್ಯಾಜಿಸ್ಟ್ರೇಟ್ ಕೋರ್ಟ್‌ನಲ್ಲಿ ಖಾಸಗಿ ದೂರು ದಾಖಲಿಸಿತ್ತು.

ಈ ದೂರನ್ನು ಇದೇ ನವೆಂಬರ್ 23ರಂದು ವಿಚಾರಣೆ ನಡೆಸಿದ್ದ 8ನೇ ಎಸಿಎಂಎಂ ಮ್ಯಾಜಿಸ್ಟ್ರೇಟ್ ನ್ಯಾಯಾಧೀಶರು, ‘ಅಪರಾಧ ದಂಡ ಪ್ರಕ್ರಿಯಾ ಸಂಹಿತೆ–1973ರ ಕಲಂ 156 (3)ರ ಅನುಸಾರ ಆರೋಪಿಗಳ ವಿರುದ್ಧ ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸಬೇಕು. ಈ ಕುರಿತ ವರದಿಯನ್ನು 2022ರ ಫೆಬ್ರುವರಿ 1ಕ್ಕೆ ನ್ಯಾಯಾಲಯಕ್ಕೆ ಸಲ್ಲಿಸಬೇಕು’ ಎಂದು ಆದೇಶಿಸಿದ್ದರು. ಈ ಆದೇಶವನ್ನು ಪ್ರಶ್ನಿಸಿ ಹೈಕೋರ್ಟ್‌ಗೆ ಅರ್ಜಿ ಸಲ್ಲಿಸಲಾಗಿದೆ.

ಸಾಲ ತೀರಿಸಲು ವೃದ್ಧೆಯ ಸರ ಕದ್ದ

ಬೆಂಗಳೂರು: ಸಾಲ ತೀರಿಸುವ ಸಲುವಾಗಿ ನೆರೆಮನೆಗೆ ನುಗ್ಗಿ, ವೃದ್ಧೆಯ ಕತ್ತಿನಲ್ಲಿದ್ದ ಚಿನ್ನದ ಸರ ಕಿತ್ತುಕೊಂಡು ಪರಾರಿಯಾಗಿದ್ದ ಆರೋಪಿ ಗಣೇಶ್ (26) ಎಂಬಾತನನ್ನು ಜೆ.ಸಿ.ನಗರ ಠಾಣೆ ಪೊಲೀಸರು ಬಂಧಿಸಿದ್ದಾರೆ.

‘ಕೋಳಿ ಅಂಗಡಿಯೊಂದನ್ನು ಇಟ್ಟುಕೊಂಡಿದ್ದ ಆರೋಪಿ ಅದರಿಂದ ನಷ್ಟ ಅನುಭವಿಸಿದ್ದ. ₹1 ಲಕ್ಷದವರೆಗೂ ಸಾಲ ಮಾಡಿಕೊಂಡಿದ್ದ. ಸಾಲಗಾರರು ಹಣ ಹಿಂತಿರುಗಿಸುವಂತೆ ಪೀಡಿಸುತ್ತಿದ್ದರು. ಹೀಗಾಗಿ ಕಳ್ಳತನ ಮಾಡಲು ನಿರ್ಧರಿಸಿದ್ದ’ ಎಂದು ಪೊಲೀಸರು ತಿಳಿಸಿದ್ದಾರೆ.

‘ಶಾಂತಮ್ಮ ಎಂಬುವವರು ಮಾರಪ್ಪ ಗಾರ್ಡನ್‌ನ 4ನೇ ತಿರುವಿನಲ್ಲಿ ವಾಸವಿದ್ದಾರೆ. ಅವರ ಮನೆಯ ಪಕ್ಕದಲ್ಲೇ ಆರೋಪಿ ಅಜ್ಜಿಯ ಸರ ಕಿತ್ತುಕೊಂಡು ಪರಾರಿಯಾಗಿದ್ದ’ ಎಂದು ಹೇಳಿದ್ದಾರೆ.

ಕೇರ್ ಇಂಡಿಯಾ ವತಿಯಿಂದ ಬಿಬಿಎಂಪಿಗೆ ಒದಗಿಸಿದ ಕಾರುಗಳು– ಪ್ರಜಾವಾಣಿ ಚಿತ್ರ

ಮನೆ-ಮನೆಗೆ ತೆರಳಿ ಕೋವಿಡ್ ಲಸಿಕೆ

ಬೆಂಗಳೂರು: ಮನೆ-ಮನೆಗೆ, ಬೀದಿ ಬೀದಿಗಳಿಗೆ ತೆರಳಿ ಕೋವಿಡ್ ಲಸಿಕೆ ನೀಡಲು ಬಿಬಿಎಂಪಿಯು ‘ಕೇರ್ ಇಂಡಿಯಾ’ ಸಹಯೋಗದಲ್ಲಿ 80 ದ್ವಿಚಕ್ರ ವಾಹನ ಹಾಗೂ 16 ಕಾರುಗಳನ್ನು ಬಳಸಲಿದೆ.

ಪ್ರತಿ ವಲಯಕ್ಕೆ 8 ದ್ವಿಚಕ್ರ ವಾಹನಗಳು ಹಾಗೂ 2 ಕಾರುಗಳನ್ನು ಬಿಬಿಎಂಪಿ ಒದಗಿಸಲಿದೆ. ಬ್ಲಾಕ್ ಮತ್ತು ಬೀದಿ ಹಂತದಲ್ಲಿ ಕೋವಿಡ್ ಲಸಿಕೆ ನೀಡಲು ‘ಕೇರ್ ಇಂಡಿಯಾ’ ಸ್ವಯಂಸೇವಕರು ಬಿಬಿಎಂಪಿ ಸಿಬ್ಬಂದಿಗೆ ನೆರವಾಗಲಿದ್ದಾರೆ. ಈ ಲಸಿಕೆ ವಾಹನಗಳಿಗೆ ಬಿಬಿಎಂಪಿ ಮುಖ್ಯ ಆಯುಕ್ತ ಗೌರವ್ ಗುಪ್ತ ಚಾಲನೆ ನೀಡಿದರು.

ಬಿಬಿಎಂಪಿ ವ್ಯಾಪ್ತಿಯಲ್ಲಿ ಕೋವಿಡ್ ಲಸಿಕೆ ಪಡೆಯಲು ಅರ್ಹರಾದ ಶೇ 88 ರಷ್ಟು ಮಂದಿ ಮೊದಲ ಡೋಸ್ ಹಾಗೂ ಶೇ 62 ರಷ್ಟು ಮಂದಿ ಎರಡೂ ಡೋಸ್‌ಗಳನ್ನು ಪಡೆದಿದ್ದಾರೆ. ಎರಡನೇ ಡೋಸ್ ಪಡೆಯದವರ ಪಟ್ಟಿಯನ್ನು ಕೋವಿನ್ ಪೋರ್ಟಲ್ ನಿಂದ ಪಡೆದು ಅವರಿಗೆ ಕರೆ ಮಾಡಿ ತಿಳಿವಳಿಕೆ ನೀಡಲಾಗುತ್ತಿದೆ.

ವಾರ್ಡ್ ವಾರು ಆರೋಗ್ಯ ತಂಡ: ಆರೋಗ್ಯ ವಿಭಾಗದ ಸಿಬ್ಬಂದಿಯ ತಂಡವು ಮನೆ-ಮನೆಗೆ ಭೇಟಿ ನೀಡಿ 18 ವರ್ಷ ಮೇಲಿನವರು ಲಸಿಕೆ ಪಡೆದಿದ್ದಾರೆಯೇ ಎಂಬುದನ್ನು ಖಾತರಿಪಡಿಸಿಕೊಳ್ಳುತ್ತಿದೆ. 70 ವಾರ್ಡ್‌ಗಳಲ್ಲಿ ಮನೆ ಮನೆಗೆ ಭೇಟಿ ನೀಡಿ 35 ಸಾವಿರ ಮಂದಿಗೆ ತಂಡವು ಲಸಿಕೆ ನೀಡಿದೆ.

ವಿಶೇಷ ಆಯುಕ್ತ (ಆರೋಗ್ಯ) ಡಾ.ತ್ರಿಲೋಕಚಂದ್ರ, ಮುಖ್ಯ ಆರೋಗ್ಯಾಧಿಕಾರಿ ಡಾ.ಬಾಲಸುಂದರ್ ಮತ್ತಿತರರು ಉಪಸ್ಥಿತರಿದ್ದರು.

ಅಂಕಿ-ಅಂಶಗಳು

1.37 ಕೋಟಿ ಡೋಸ್ – ಬಿಬಿಎಂಪಿ ವ್ಯಾಪ್ತಿಯಲ್ಲಿ ಇದುವರೆಗೆ ನೀಡಿರುವ ಕೋವಿಡ್ ಲಸಿಕೆಯ ಒಟ್ಟು ಡೋಸ್‌ಗಳು

80,57,563 – ಕೋವಿಡ್ ಲಸಿಕೆಯ ಮೊದಲ ಡೋಸ್ ಪಡೆದವರು

56,41,455 – ಕೋವಿಡ್ ಲಸಿಕೆಯ ಎರಡೂ ಡೋಸ್‌ಗಳನ್ನು ಪಡೆದವರು

ಡಿಸಿಗೆ ಬೆದರಿಕೆ: ಜಗದೀಶ್ ಕಾರಂತ್ ವಿರುದ್ಧ ಪ್ರಕರಣ

ಮಂಗಳೂರು: ಬಂಟ್ವಾಳ ತಾಲ್ಲೂಕಿನ ಕಾರಿಂಜ ಕ್ಷೇತ್ರದಲ್ಲಿ ನಡೆದ ಪ್ರತಿಭಟನಾ ಸಭೆಯಲ್ಲಿ ಜಿಲ್ಲಾಧಿಕಾರಿಯ ಕೊರಳಪಟ್ಟಿ ಹಿಡಿಯುವುದಾಗಿ ಹೇಳಿದ್ದ ಹಿಂದೂ ಜಾಗರಣ ವೇದಿಕೆ ಸಂಘಟನಾ ಕಾರ್ಯದರ್ಶಿ ಜಗದೀಶ್ ಕಾರಂತ್ ವಿರುದ್ಧ ಪುಂಜಾಲಕಟ್ಟೆ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಜಗದೀಶ್ ಕಾರಂತ್

ಪ್ರತಿಭಟನಾ ಸಭೆಯಲ್ಲಿ ಮಾತನಾಡಿದ್ದ ಜಗದೀಶ್ ಕಾರಂತ್, ‘ಅಕ್ರಮ ಗಣಿಗಾರಿಕೆ ನಿಲ್ಲಿಸದಿದ್ದರೆ ಡಿ. 21ಕ್ಕೆ ಎಲ್ಲರೂ ಸಿದ್ಧರಾಗಿ, ಸಾವಿರಾರು ಸಂಖ್ಯೆಯಲ್ಲಿ ಬಂದು ಜಿಲ್ಲಾಧಿಕಾರಿ ಕಚೇರಿಗೆ ಲಗ್ಗೆ ಹಾಕಿ ಕೊರಳ ಪಟ್ಟಿ ಹಿಡಿಯುತ್ತೇವೆ’ ಎಂದು ಎಚ್ಚರಿಕೆ ನೀಡಿದ್ದರು.

ಈ ಬಗ್ಗೆ ಜಿಲ್ಲಾಧಿಕಾರಿ ಡಾ.ಕೆ.ವಿ. ರಾಜೇಂದ್ರ ಅವರು ಪುಂಜಾಲಕಟ್ಟೆ ಪೊಲೀಸ್ ಠಾಣೆಯಲ್ಲಿ ದೂರು ನೀಡಿದ್ದರು. ‘ಜಗದೀಶ್ ಕಾರಂತ್ ಅವರು ಏಕವಚನ ಹಾಗೂ ಅಸಭ್ಯವಾಗಿ ಮಾತನಾಡುವ ಮೂಲಕ ಜಿಲ್ಲಾಧಿಕಾರಿ ಹುದ್ದೆಗೆ ಅಗೌರವ ತೋರಿದ್ದು, ಸರ್ಕಾರಿ ಅಧಿಕಾರಿಗೆ ಬೆದರಿಕೆಯೊಡ್ಡುವ ರೀತಿಯಲ್ಲಿ ಮಾತನಾಡಿ ಅಪರಾಧಕ್ಕೆ ಪ್ರಚೋದಿಸಿದ್ದಾರೆ’ ಎಂದು ದೂರಿನಲ್ಲಿ ಉಲ್ಲೇಖಿಸಿದ್ದಾರೆ. ಪ್ರಕರಣ ದಾಖಲಿಸಲಾಗಿದ್ದು, ಮುಂದಿನ ಕ್ರಮ ಕೈಗೊಳ್ಳಲಾಗುವುದು ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಋಷಿಕೇಶ್ ಭಗವಾನ್ ಸೋನಾವಣೆ ತಿಳಿಸಿದ್ದಾರೆ.

‘ಕನ್ನಡ ವಿರೋಧಿ ನಿಲುವು ತೋರಿದರೆ ಸರ್ಕಾರದ ವಿರುದ್ಧವೂ ಹೋರಾಟ’

ಆರೆಸ್ಸೆಸ್‌ಗೆ ಸೇರಿದವನೆಂಬ ಅಪಪ್ರಚಾರ: ಮಹೇಶ ಜೋಶಿ

• ವರುಣ ಹೆಗಡೆ

ಬೆಂಗಳೂರು: ‘ಕನ್ನಡ ಸಾಹಿತ್ಯ ಪರಿಷತ್ತಿನ (ಕಸಾಪ) ಲಾಂಛನದ ದುರುಪಯೋಗ ಮಾಡಲು ಹಾಗೂ ಹೊಸ ಹುದ್ದೆಗಳ ಸೃಷ್ಟಿಗೆ ಅವಕಾಶ ನೀಡುವುದಿಲ್ಲ. ಕೇಂದ್ರ, ರಾಜ್ಯ ಸರ್ಕಾರಗಳು ಕನ್ನಡ ವಿರೋಧಿ ನಿಲುವು ತಾಳಿದರೆ ಪತ್ರ ಬರೆದು ಸುಮ್ಮನೆ ಕೂರಲಾರೆ. ಹೋರಾಟದ ಜೊತೆಗೆ ಕಾನೂನು ಕ್ರಮಕ್ಕೆ ಮುಂದಾಗುತ್ತೇನೆ...’

ಕಸಾಪದ 26ನೇ ಅಧ್ಯಕ್ಷರಾಗಿ ಆಯ್ಕೆಯಾದ ಬಳಿಕ ಮಹೇಶ ಜೋಶಿ ಅವರು ‘ಪ್ರಜಾವಾಣಿ’ಗೆ ನೀಡಿದ ಸಂದರ್ಶನದಲ್ಲಿ ಹಂಚಿಕೊಂಡ ಮಾತುಗಳಿವು.

‘ಮಾಧ್ಯಮದಲ್ಲಿ 35 ವರ್ಷ ಕೆಲಸ ಮಾಡಿದ್ದೇನೆ. ಎಲ್ಲ ರಾಜಕೀಯ ಪಕ್ಷ ಹಾಗೂ ಮುಖಂಡರೊಂದಿಗೆ ಸಂಪರ್ಕ ಹೊಂದಿರುವೆ. ಆದರೆ, ರಾಜಕೀಯವಾಗಿ ನಾನು ತಟಸ್ಥ. ಯಾವುದೇ ರಾಜಕೀಯ ಪಕ್ಷದ ಪ್ರಾಥಮಿಕ ಸದಸ್ಯತ್ವ ಪಡೆದುಕೊಂಡಿಲ್ಲ. ಪಕ್ಷಗಳ ಸಿದ್ಧಾಂತಗಳನ್ನೂ ಒಪ್ಪುವುದಿಲ್ಲ. ನಾನು ಬಿಜೆಪಿ

ಪ್ರಜಾವಾಣಿ ಸಂದರ್ಶನ

ಮಹೇಶ ಜೋಶಿ, ಕಸಾಪ ಅಧ್ಯಕ್ಷ

ಮತ್ತು ಆರೆಸ್ಸೆಸ್‌ಗೆ ಸೇರಿದವನು ಎಂದು ಕೆಲವರು ಅಪಪ್ರಚಾರ ಮಾಡಿದರು. ಇದಕ್ಕೆ ಕಿವಿಗೊಡದ ಮತದಾರರು ತಕ್ಕ ಉತ್ತರ ನೀಡಿದ್ದಾರೆ’ ಎಂದು ಅವರು ಹೇಳಿದರು.

• 5 ವರ್ಷಗಳ ಅವಧಿಯಲ್ಲಿ ಕನ್ನಡಿಗರು ಏನೆಲ್ಲಾ ನಿರೀಕ್ಷಿಸಬಹುದು?

ಜೋಶಿ: ನಾನು ದೂರದರ್ಶನವನ್ನು ಸಮೀಪ ದರ್ಶನವನ್ನಾಗಿಸಿದೆ. ಕನ್ನಡ ಸಾಹಿತ್ಯ ಪರಿಷತ್ತನ್ನು ಜನಸಾಮಾನ್ಯರ ಪರಿಷತ್ತನ್ನಾಗಿ ರೂಪಿಸುತ್ತೇನೆ. ನಿವೃತ್ತಿ ಬಳಿಕ ಪುನರ್ವಸತಿಗಾಗಿ ಬಂದಿದ್ದಲ್ಲ.

• ಕನ್ನಡದ ಅಸ್ಮಿತೆಯನ್ನು ಕಾಯುವ, ಕನ್ನಡತನವನ್ನು ಬೆಳೆಸುವ ಆಶಯ ಹೊಂದಿರುವ ಪರಿಷತ್ತಿನ ಚುನಾವಣೆ ವೇಳೆ ಬಿಜೆಪಿ ನಿಮ್ಮ ಬೆಂಬಲಕ್ಕೆ ನಿಂತಿದ್ದು ಎಷ್ಟು ಸರಿ?

ಜೋಶಿ: ಮತಯಾಚಿಸಲು ವಿವಿಧ ಪಕ್ಷಗಳ ಕಚೇರಿಗೆ ಹೋದಾಗ ರಾಜಕೀಯ ವಿಚಾರ ಮಾತಾಡಿಲ್ಲ. ದೇವೇಗೌಡರನ್ನು ಸಂಪರ್ಕಿಸಿದಾಗ ಕಚೇರಿಗೆ ಬರಲು ಹೇಳಿದರು. ಅವರು ನನ್ನ ಪರ ಪತ್ರ ಬರೆದು ಬೆಂಬಲ ನೀಡಲು ಮನವಿ ಮಾಡಿದ್ದರು. ಹಾಗಂತ ನಾನು ಜೆಡಿಎಸ್‌ಗೆ ಸೇರಿದವನೆ? ಗದಗದಲ್ಲಿ ಡಿ.ಆರ್. ಪಾಟೀಲ, ಎಚ್‌.ಕೆ. ಪಾಟೀಲ ಅವರು ನನ್ನ ಪರ ಮತಯಾಚಿಸಿದ್ದರು. ನನ್ನನ್ನು ಕಾಂಗ್ರೆಸ್ ಪಕ್ಷಕ್ಕೆ ಸೇರಿದವನು ಎನ್ನಬಹುದೇ?

• ಜಗತ್ತು ದಿನೇದಿನೇ ಬದಲಾಗುತ್ತಿದ್ದರೂ ಕಸಾಪ ಹೊಸತನ ಹಾಗೂ ತಂತ್ರಜ್ಞಾನಕ್ಕೆ ತೆರೆದುಕೊಂಡಿಲ್ಲ?.

ಜೋಶಿ: ಕನ್ನಡದ ಕಾಯಕಕ್ಕೆ ಆಧುನಿಕ ತಂತ್ರಜ್ಞಾನಗಳನ್ನು ಸಮರ್ಪಕವಾಗಿ ಬಳಸಿಕೊಳ್ಳುತ್ತೇನೆ. ಸದಸ್ಯತ್ವ ನೋಂದಣಿ ಸೇರಿದಂತೆ ವಿವಿಧ ಪ್ರಕ್ರಿಯೆಗಳಿಗೆ ಮೊಬೈಲ್ ಆ್ಯಪ್ ರೂಪಿಸುತ್ತೇನೆ. ಮತದಾನವನ್ನೂ ಆ್ಯಪ್ ಮೂಲಕವೇ ನಡೆಸುವ ವ್ಯವಸ್ಥೆ ಕಲ್ಪಿಸುತ್ತೇನೆ.

• ಉದ್ಯೋಗ ಸೇರಿದಂತೆ ವಿವಿಧ ಕ್ಷೇತ್ರಗಳಲ್ಲಿ ಕನ್ನಡಿಗರಿಗೆ ಇತ್ತೀಚಿನ ವರ್ಷಗಳಲ್ಲಿ ಅನ್ಯಾಯ ಆಗುತ್ತಲೇ ಇದೆ?

ಜೋಶಿ: ದೂರದರ್ಶನಕ್ಕೆ ಬರುವ ಮೊದಲು ಮೂರು ವರ್ಷಗಳು ಕಾರ್ಮಿಕ ಆಯುಕ್ತನಾಗಿದ್ದೆ. ಹೀಗಾಗಿ, ಉದ್ಯೋಗ ಕ್ಷೇತ್ರದಲ್ಲಿ ಕನ್ನಡಿಗರಿಗೆ ಆಗುವ ಅನ್ಯಾಯ ಅರಿವಿನಲ್ಲಿದೆ.

• ಬ್ಯಾಂಕಿಂಗ್ ಪರೀಕ್ಷೆ ಸೇರಿದಂತೆ ವಿವಿಧೆಡೆ ದ್ವಿಭಾಷಾ ಸೂತ್ರ ಅನುಸರಿಸಿ, ಹಿಂದಿ ಹೇರಿಕೆ ಮಾಡಲಾಗುತ್ತಿದೆಯಲ್ಲವೇ?

ಜೋಶಿ: ಯಾವುದೇ ಕಾರಣಕ್ಕೂ ದ್ವಿಭಾಷಾ ಸೂತ್ರ ಒಪ್ಪಲು ಸಾಧ್ಯವಿಲ್ಲ. ಕೇಂದ್ರ ಸರ್ಕಾರ ನಡೆಸುವ ಪರೀಕ್ಷೆಗಳು ಕನ್ನಡದಲ್ಲಿಯೂ ನಡೆಯಬೇಕು. ಕೇಂದ್ರ ಸರ್ಕಾರಿ ಕಚೇರಿಗಳು ಸೇರಿದಂತೆ ಯಾರೊಬ್ಬರು ಕನ್ನಡ ಕಡೆಗಣಿಸಿದರೆ ಧರಣಿ ಮಾಡಿ, ಕಾನೂನು ಸಲಹೆ ಪಡೆದು ಪ್ರಕರಣ ದಾಖಲಿಸುತ್ತೇನೆ.

• ಸ್ವಾಯತ್ತ ಸಂಸ್ಥೆ ಕಸಾಪ ಇತ್ತೀಚಿನ ವರ್ಷಗಳಲ್ಲಿ ಸರ್ಕಾರದ ಅಂಗ ಸಂಸ್ಥೆಯಂತೆ ವರ್ತಿಸುತ್ತಿದೆ ಎಂಬ ಟೀಕೆ ಇದೆಯಲ್ಲ?

ಜೋಶಿ: ಇದು ಅಧ್ಯಕ್ಷರ ಮೇಲೆ ಅವಲಂಬನೆ ಆಗಿರುತ್ತದೆ. ನನ್ನ ಅವಧಿಯಲ್ಲಿ ಪರಿಷತ್ತು ಸರ್ಕಾರದ ಅಂಗ ಸಂಸ್ಥೆಯಂತೆ ವರ್ತಿಸುವುದಿಲ್ಲ. ಸ್ವಾಯತ್ತತೆ ಕಾಪಾಡಿಕೊಳ್ಳುತ್ತೇನೆ.

• ಮೂಲ ಆಶಯ ಮರೆತ ಕಸಾಪ, ಸಾಹಿತ್ಯ ಸಮ್ಮೇಳನ, ದತ್ತಿ ಪ್ರಶಸ್ತಿ ವಿತರಣೆಯಂತಹ ಕಾರ್ಯಕ್ರಮಗಳಿಗೆ ಸೀಮಿತ ಆಗುತ್ತಿದೆ ಎಂಬ ಆಕ್ಷೇಪವಿದೆ?

ಜೋಶಿ: ಸಮ್ಮೇಳನದ ಜೊತೆಗೆ ಸಾಹಿತ್ಯೋತ್ಸವ, ನಾಡಹಬ್ಬ, ಉಪನ್ಯಾಸ, ಸ್ಪರ್ಧೆ, ಕಲಾಪ್ರದರ್ಶನ, ಗೋಷ್ಠಿ, ಕಾರ್ಯಾಗಾರ ಸೇರಿದಂತೆ ಎಲ್ಲವಕ್ಕೂ ಆದ್ಯತೆ ನೀಡಲಾಗುವುದು.

• ಚುನಾವಣೆಯಲ್ಲಿ ನಿಮಗೆ ಬಿಜೆಪಿ ಮತ್ತು ಆರೆಸ್ಸೆಸ್ ಬೆಂಬಲ ಸೂಚಿಸಿದ್ದವು. ಕೇಂದ್ರ ಮತ್ತು ರಾಜ್ಯದಲ್ಲಿ ಈ ಬಿಜೆಪಿ ನೇತೃತ್ವದ ಸರ್ಕಾರಗಳೇ ಇವೆ. ಅವು ಕನ್ನಡ ವಿರೋಧಿ ನಿಲುವು ತಾಳಿದರೆ ನೀವು ಹೇಗೆ ಪ್ರತಿಭಟಿಸಲು ಸಾಧ್ಯ?

ಜೋಶಿ: ಯಾವುದೇ ಪಕ್ಷದ ಸರ್ಕಾರ ಕನ್ನಡ ಭಾಷೆ, ಸಂಸ್ಕೃತಿ, ಗಡಿ ಹಾಗೂ ನೆಲ–ಜಲದ ಬಗ್ಗೆ ವಿರುದ್ಧ ನಿಲುವು ತಾಳಿದರೆ ಹಿಂಜರಿಕೆ ಇಲ್ಲದೆ ಹೋರಾಟ ನಡೆಸುತ್ತೇನೆ.

ಠೇವಣಿ ಕಳೆದುಕೊಂಡ ಸೋತವರು...

ಬೆಂಗಳೂರು: ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಸ್ಥಾನಕ್ಕೆ ನಡೆದ ಚುನಾವಣೆಯಲ್ಲಿ ಮಹೇಶ ಜೋಶಿ ಅವರು 69,431 ಮತಗಳನ್ನು ಪಡೆಯುವ ಮೂಲಕ ಗೆಲುವು ಸಾಧಿಸಿದರೇ, ಉಳಿದ ಎಲ್ಲ ಅಭ್ಯರ್ಥಿಗಳು ಠೇವಣಿ ಕಳೆದುಕೊಂಡಿದ್ದಾರೆ.

ಈ ಬಾರಿ ಚುನಾವಣೆಯಲ್ಲಿ ಮತದಾನಕ್ಕೆ ಅರ್ಹರಾಗಿದ್ದ 3.10 ಲಕ್ಷ ಮತದಾರರಲ್ಲಿ 1.62 ಲಕ್ಷ ಮಂದಿ ಹಕ್ಕು ಚಲಾಯಿಸಿದ್ದರು. ಠೇವಣಿ ಉಳಿಸಿಕೊಳ್ಳಲು ಅಭ್ಯರ್ಥಿಗಳು 27 ಸಾವಿರ ಮತಗಳನ್ನು ಪಡೆಯಬೇಕಾಗಿತ್ತು. ಆದರೆ, ಉಳಿದ 20 ಅಭ್ಯರ್ಥಿಗಳಲ್ಲಿ ಯಾರಿಗೂ ಇಷ್ಟು ಮತಗಳು ಬಂದಿಲ್ಲ.

ಶೇಖರಗೌಡ ಮಾಲಿಪಾಟೀಲ ಅವರು 23,195 ಮತಗಳನ್ನು ಗಳಿಸುವ ಮೂಲಕ ಹೆಚ್ಚು ಮತ ಪಡೆದವರಲ್ಲಿ ಎರಡನೇ ಸ್ಥಾನದಲ್ಲಿದ್ದಾರೆ. ಮಹೇಶ ಜೋಶಿ ಅವರು 46,236 ಮತಗಳ ಅಂತರದಲ್ಲಿ ಗೆಲುವು ಸಾಧಿಸಿದ್ದಾರೆ. ಸಾಹಿತ್ಯ ಪರಿಷತ್ತಿನ ಇತಿಹಾಸದಲ್ಲಿ ಇದು ದಾಖಲೆಯಾಗಿದೆ.

ಅಧ್ಯಕ್ಷ ಸ್ಥಾನಕ್ಕೆ ಭಾನುವಾರ ಮತದಾನ ನಡೆದಿದ್ದು, ಜಿಲ್ಲೆಗಳಲ್ಲಿ ಚಲಾವಣೆಯಾಗಿದ್ದ ಮತಗಳಲ್ಲಿ ಜೋಶಿ ಅವರಿಗೆ 68,525 ಮತಗಳು ಲಭಿಸಿದ್ದವು. ಹೊರನಾಡು, ಹೊರ ದೇಶಗಳಿಂದ ಬಂದ 2,682 ಅಂಚೆ ಮತಗಳನ್ನು ಬುಧವಾರ ಎಣಿಕೆ ಮಾಡಲಾಯಿತು. ಸಂಜೆ ಕೇಂದ್ರ ಚುನಾವಣಾಧಿಕಾರಿ ಜಿ.ಎಂ. ಗಂಗಾಧರಸ್ವಾಮಿ ಅವರು ಫಲಿತಾಂಶವನ್ನು ಅಧಿಕೃತವಾಗಿ ಘೋಷಣೆ ಮಾಡಿದರು.

ಮೊದಲೇ ಫಲಿತಾಂಶ ಖಚಿತವಾಗಿದ್ದರಿಂದ ಪರಿಷತ್ತಿನ ಕೇಂದ್ರ ಕಚೇರಿಯ ಮುಂದೆ ವಿಜಯೋತ್ಸವ ಇರಲಿಲ್ಲ. ಬೆರಳೆಣಿಕೆಯಷ್ಟು ಬೆಂಬಲಿಗರೊಂದಿಗೆ ಬಂದ ಜೋಶಿ ಅವರು, ಪ್ರಮಾಣ ಪತ್ರ ಸ್ವೀಕರಿಸಿದರು. ಇದಕ್ಕೂ ಮೊದಲು ಗಡಿನಾಡು ಘಟಕಗಳ ಅಧ್ಯಕ್ಷರ ಫಲಿತಾಂಶ ಘೋಷಿಸಲಾಯಿತು. ತಮಿಳುನಾಡು ಗಡಿನಾಡ ಘಟಕಕ್ಕೆ ತಮಿಳ್ ಸೆಲ್ವಿ ಅವರು ಮಾತ್ರ ಸ್ಪರ್ಧಿಸಿದ್ದರಿಂದ ಅವಿರೋಧ ಆಯ್ಕೆಯಾದರು. ಗೋವಾ ಗಡಿನಾಡ ಘಟಕಕ್ಕೆ ಯಾವುದೇ ಅಭ್ಯರ್ಥಿ ಸ್ಪರ್ಧಿಸಿಲ್ಲ.

ಇದೇ 26ರ ಬೆಳಿಗ್ಗೆ 11 ಗಂಟೆಗೆ ಪರಿಷತ್ತಿನ ಕೇಂದ್ರ ಕಚೇರಿಯಲ್ಲಿ ಕನ್ನಡ ಮತ್ತು ಸಂಸ್ಕೃತಿ ಸಚಿವ ವಿ. ಸುನೀಲ್ ಕುಮಾರ್ ಅವರ ಸಮ್ಮುಖ ಅಧ್ಯಕ್ಷನಾಗಿ ಅಧಿಕಾರ ಸ್ವೀಕರಿಸುತ್ತೇನೆ ಎಂದು ಮಹೇಶ ಜೋಶಿ ಘೋಷಿಸಿದ್ದಾರೆ.

ಗಡಿನಾಡು ಘಟಕಗಳ ಅಧ್ಯಕ್ಷರು

ಘಟಕ	ಅಧ್ಯಕ್ಷರಾಗಿ ಆಯ್ಕೆಯಾದವರು
ಮಹಾರಾಷ್ಟ್ರ	ಸೋಮಶೇಖರ ಜಮಶೆಟ್ಟಿ
ಕೇರಳ	ಸುಬ್ರಹ್ಮಣ್ಯ ವಿ. ಭಟ್ಟ
ತಮಿಳುನಾಡು	ತಮಿಳ್ ಸೆಲ್ವಿ
ಆಂಧ್ರಪ್ರದೇಶ	ಅಂಜನ್‌ಕುಮಾರ್

ಕಸಾಪ: ಹಸ್ತಕ್ಷೇಪಕ್ಕೆ ಬಿಜೆಪಿಯಲ್ಲೇ ಅತೃಪ್ತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕನ್ನಡ ಸಾಹಿತ್ಯ ಪರಿಷತ್ ಚುನಾವಣೆಯಲ್ಲಿ ನಿರ್ದಿಷ್ಟ ಅಭ್ಯರ್ಥಿಯೊಬ್ಬರನ್ನು ಗೆಲ್ಲಿಸಲು ಸಕ್ರಿಯವಾಗಿ ಸಂಘಟನೆಗಳನ್ನು ತೊಡಗಿಸಿಕೊಂಡ ಬಗ್ಗೆ ಬಿಜೆಪಿ ಮತ್ತು ಆರ್‌ಎಸ್‌ಎಸ್‌ನ ಒಂದು ವಲಯದಲ್ಲಿ ಆಕ್ಷೇಪ ವ್ಯಕ್ತವಾಗಿದೆ.

ಅಧ್ಯಕ್ಷ ಹುದ್ದೆಗೆ ಸ್ಪರ್ಧಿಸಿದ್ದ ಮಹೇಶ್ ಜೋಶಿಗೆ ಪರ ಕೆಲಸ ಮಾಡದ ಕಾರಣ ಬಿಜೆಪಿ ಬೆಂಗಳೂರು ದಕ್ಷಿಣ ಜಿಲ್ಲಾ ಘಟಕದ ಅಧ್ಯಕ್ಷ ಎನ್.ಆರ್.ರಮೇಶ್ ಅವರು ಜಿಲ್ಲಾ ಘಟಕದ ಕಾರ್ಯಕಾರಿಣಿ ಸದಸ್ಯ ಎಂ.ಮಹೇಂದ್ರಗೌಡ ಅವರನ್ನು ವಜಾ ಮಾಡಿರುವುದು ಪಕ್ಷದಲ್ಲಿ ಚರ್ಚೆ ಹುಟ್ಟುಹಾಕಿದೆ.

ಮೂಲಗಳ ಪ್ರಕಾರ, ಮಹೇಶ್ ಜೋಶಿ ಅವರು ಆರ್‌ಎಸ್‌ಎಸ್‌ನ ಹಿರಿಯ ನಾಯಕರೊಬ್ಬರನ್ನು ಸಂಪರ್ಕಿಸಿ ಚುನಾವಣೆಯಲ್ಲಿ ತಮ್ಮನ್ನು ಬೆಂಬಲಿಸುವಂತೆ ಮನವೊಲಿಸಿದ್ದರು. ಸಂಘದ ಆ ನಾಯಕರ ಮೂಲಕವೇ ಬಿಜೆಪಿಯ ವರಿಷ್ಠರ ಮೇಲೂ ಒತ್ತಡ ಹೇರಿ ತಮ್ಮ ಪರವಾಗಿ ಇಡೀ ಪಕ್ಷವೇ ನಿಲ್ಲುವಂತೆ ಮಾಡಿದ್ದರು. ಹೀಗಾಗಿ ಸಂಘ ಮತ್ತು ಬಿಜೆಪಿ ತಮ್ಮೆಲ್ಲ ಶಕ್ತಿಯನ್ನು ಜೋಶಿಗೆ ಧಾರೆ ಎರೆದು ಗೆಲ್ಲಿಸಿವೆ ಎಂದು ಹೇಳಲಾಗುತ್ತಿದೆ.

ಸಾಹಿತ್ಯ ಪರಿಷತ್ ಚುನಾವಣೆಗೂ ಮೊದಲೇ ಬಿಜೆಪಿಯ ಎಲ್ಲ ಮಂಡಲಗಳಲ್ಲೂ ಜೋಶಿ ಪರವಾಗಿ ಪ್ರಚಾರ ಮಾಡಲು ಸೂಚನೆ ಹೋಗಿತ್ತು. ಚುನಾವಣೆಯಲ್ಲಿ ಮತದಾರರನ್ನು ಮತಗಟ್ಟೆಗೆ ಕರೆತರುವ ಕಾರ್ಯತಂತ್ರವನ್ನೂ ರೂಪಿಸಲಾಗಿತ್ತು. ಇದರಿಂದಾಗಿ ಸಾಕಷ್ಟು ಜಿಲ್ಲೆಗಳಲ್ಲಿ ಮತದಾನದ ಪ್ರಮಾಣ ಶೇ 70 ರಷ್ಟು ಆಗಿತ್ತು. ಮತದಾನದ ದಿನ ಬಿಜೆಪಿ ಕಾರ್ಯಕರ್ತರು ಸಾರ್ವತ್ರಿಕ ಚುನಾವಣೆಗಳಲ್ಲಿ ಕೆಲಸ ಮಾಡುವಂತೆ ಮತದಾರರ ಪಟ್ಟಿಯನ್ನು ತಯಾರು ಮಾಡಿಕೊಂಡು, ಪ್ರತಿಯೊಬ್ಬ ಮತದಾರನ ಮನೆಗೆ ಹೋಗಿ ಅವರನ್ನು ಮತಗಟ್ಟೆಗೆ ಕರೆ ತರುವ ಕೆಲಸ ಮಾಡಿದರು ಎಂದು ಮೂಲಗಳು ಹೇಳಿವೆ.

ಬೆಂಗಳೂರು ನಗರದಲ್ಲಿ ಬಹಿರಂಗವಾಗಿ ಕೆಲಸ ಮಾಡಿದರೆ ಮಾಧ್ಯಮಗಳಿಂದ ಟೀಕೆಗೆ ಒಳಗಾಗಬಹುದು ಎಂಬ ಕಾರಣಕ್ಕೆ ನಗರದಲ್ಲಿ ಮತದಾರರನ್ನು ಸಂಪರ್ಕಿಸುವ ಕೆಲಸ ಮಾಡಲಿಲ್ಲ. ಹೀಗಾಗಿ ಬೆಂಗಳೂರಿನಲ್ಲಿ ಮತದಾನದ ಪ್ರಮಾಣ ಶೇ 28 ದಾಟಿರಲಿಲ್ಲ. ಸಾಹಿತ್ಯ ಪರಿಷತ್‌ನಂತಹ ಚುನಾವಣೆಯಲ್ಲಿ ಬಿಜೆಪಿ ಸಕ್ರಿಯವಾಗಿ ತೊಡಗಿಸಿಕೊಂಡಿದ್ದು ಸರಿಯಲ್ಲ ಎಂದು ಬಿಜೆಪಿ ಮುಖಂಡರೊಬ್ಬರು ತಿಳಿಸಿದರು.

ಮಹೇಶ್ ಜೋಶಿ ಅವರು ‘ಕನ್ನಡ ಮತ್ತು ಸಂಸ್ಕೃತಿ ಸಚಿವ ವಿ.ಸುನಿಲ್ ಕುಮಾರ್ ಸಮ್ಮುಖದಲ್ಲಿ ಅಧ್ಯಕ್ಷರಾಗಿ ಅಧಿಕಾರ ಸ್ವೀಕರಿಸುತ್ತೇನೆ’ ಎಂದು ಹೇಳಿಕೊಂಡಿರುವುದು ಸಾಕಷ್ಟು ಟೀಕೆಗೆ ಕಾರಣವಾಗಿದೆ.

ಕಸಾಪ ಚುನಾವಣೆಯಲ್ಲಿ ನಿರ್ದಿಷ್ಟ ಅಭ್ಯರ್ಥಿಗೆ ಬೆಂಬಲ ಸೂಚಿಸಿ ಕೆಲಸ ಮಾಡುವಂತೆ ಯಾರಿಗೂ ನಿರ್ದೇಶನ ನೀಡಿಲ್ಲ. ವೈಯಕ್ತಿಕವಾಗಿ ಕೆಲವರು ಬೆಂಬಲಿಸಿರಬಹುದು. ಪಕ್ಷ ಆ ಕೆಲಸ ಮಾಡಿಲ್ಲ

ಎನ್.ರವಿಕುಮಾರ್
ಪ್ರಧಾನ ಕಾರ್ಯದರ್ಶಿ, ರಾಜ್ಯ ಬಿಜೆಪಿ

ಸುದ್ದಿ 2 ನಿಮಿಷ

ಎಸ್‌ಟಿ ಮೀಸಲಾತಿ: ಬಿಜೆಪಿಯಿಂದ ಮೂಗಿಗೆ ತುಪ್ಪ ಸವರುವ ಕೆಲಸ

ಕನಕಗಿರಿ (ಕೊಪ್ಪಳ ಜಿಲ್ಲೆ): ‘ಅಧಿಕಾರಕ್ಕೆ ಬಂದ 24 ಗಂಟೆಯೊಳಗೆ ಪರಿಶಿಷ್ಟ ಪಂಗಡಕ್ಕೆ ಶೇ 7.5ರಷ್ಟು ಮೀಸಲಾತಿ ನೀಡುವುದಾಗಿ ಹೇಳಿದ್ದ ಬಿಜೆಪಿಯವರು ಭರವಸೆ ಈಡೇರಿಸಲಿಲ್ಲ. ಮೂಗಿಗೆ ತುಪ್ಪ ಸವರುವ ಕೆಲಸ ಮಾಡಿದರು’ ಎಂದು ಹರಿಹರದ ರಾಜನಹಳ್ಳಿಯ ವಾಲ್ಮೀಕಿ ಪೀಠದ ಪ್ರಸನ್ನಾನಂದಪುರಿ ಸ್ವಾಮೀಜಿ ದೂರಿದರು.

‘ರಾಜ್ಯದಲ್ಲಿ ವಾಲ್ಮೀಕಿ ಸಮಾಜ 60 ಲಕ್ಷ ಜನಸಂಖ್ಯೆ ಹೊಂದಿದೆ. ಮೀಸಲಾತಿ ಸಿಗುವವರೆಗೂ ಹೋರಾಟ ನಡೆಸಲಾಗುವುದು. ಸರ್ಕಾರ ನಿರ್ಧಾರ ಪ್ರಕಟಿಸದಿದ್ದರೆ, ಫೆಬ್ರುವರಿ 8 ಮತ್ತು 9 ರಂದು ನಡೆಯುವ ವಾಲ್ಮೀಕಿ ಜಾತ್ರೆಯಲ್ಲಿ ಕಠಿಣ ನಿರ್ಧಾರ ಕೈಗೊಳ್ಳಲಾಗುವುದು’ ಎಂದು ಅವರು ಬುಧವಾರ ಎಚ್ಚರಿಕೆ ನೀಡಿದರು.

‘ನಾಯಕ ಸಮಾಜದ ಬಿ. ಶ್ರೀರಾಮುಲು ಅವರನ್ನು ಉಪಮುಖ್ಯಮಂತ್ರಿಯನ್ನಾಗಿ ಮಾಡಲಾಗುವುದು ಎಂದು ಘೋಷಿಸಲಾಗಿತ್ತು. ವಿಧಾನಸಭಾ ಚುನಾವಣೆಯಲ್ಲಿ ಸೋಲುಂಡ ಲಕ್ಷ್ಮಣ ಸವದಿ ಅವರನ್ನು ಉಪಮುಖ್ಯಮಂತ್ರಿಯನ್ನಾಗಿ ಮಾಡಲಾಯಿತು. ಆದರೆ, 2018ರ ವಿಧಾನಸಭಾ ಚುನಾವಣೆಯಲ್ಲಿ ಶ್ರೀರಾಮುಲು ಅವರನ್ನು ಬಳಸಿಕೊಂಡರೂ ಉತ್ತಮ ಸ್ಥಾನಮಾನ ನೀಡಲಿಲ್ಲ’ ಎಂದು ಪ್ರಸನ್ನಾನಂದಪುರಿ ಸ್ವಾಮೀಜಿ ಅಸಮಾಧಾನ ವ್ಯಕ್ತಪಡಿಸಿದರು.

ಮೀಸಲಾತಿ ಭರವಸೆ ವರ್ಷದೊಳಗೆ ಈಡೇರಿಸಿ: ಕೂಡಲಸಂಗಮ ಶ್ರೀ

ಜಮಖಂಡಿ (ಬಾಗಲಕೋಟೆ ಜಿಲ್ಲೆ): ಪಂಚಮಸಾಲಿ ಸಮುದಾಯಕ್ಕೆ 2ಎ ಮೀಸಲಾತಿ ನೀಡುವ ವಿಷಯದಲ್ಲಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ನೀಡಿದ ಭರವಸೆಯನ್ನು ಈ ವರ್ಷದೊಳಗೆ ಈಡೇರಿಸಬೇಕು ಎಂದು ಕೂಡಲಸಂಗಮದ ಪಂಚಮಸಾಲಿ ಪೀಠದ ಜಗದ್ಗುರು ಬಸವಜಯ ಮೃತ್ಯುಂಜಯ ಸ್ವಾಮೀಜಿ ಒತ್ತಾಯಿಸಿದರು.

ಮಾಧ್ಯಮದವರೊಂದಿಗೆ ಬುಧವಾರ ಮಾತನಾಡಿದ ಅವರು, ‘ನ. 30ರ ಒಳಗಾಗಿ ಕೂಡಲಸಂಗಮದಲ್ಲಿ ವಿಜಯಪುರ-ಬಾಗಲಕೋಟೆ ಅವಳಿ ಜಿಲ್ಲೆಗಳ ನಮ್ಮ ಸಮಾಜದ ಗ್ರಾಮ ಪಂಚಾಯಿತಿ ಸದಸ್ಯರನ್ನು ಕರೆದು 2ಎ ಮೀಸಲಾತಿ ಬಗ್ಗೆ ಅರಿವು ಮೂಡಿಸಿ ಅವರೊಂದಿಗೆ ಸಂವಾದ ನಡೆಸುತ್ತೇವೆ. 2ಎ ಮೀಸಲಾತಿ ಬಗ್ಗೆ ಸರ್ಕಾರಕ್ಕೆ ಗಡುವು ನೀಡಲಾಗುತ್ತದೆ’ ಎಂದರು.

‘ಮೀಸಲಾತಿ ನೀಡುವವರೆಗೆ ನಮ್ಮ ಹೋರಾಟ ಮುಂದುವರೆಯುತ್ತದೆ’ ಎಂದು ತಿಳಿಸಿದರು.

ಯಾದಗಿರಿ, ರಾಯಚೂರಿನಲ್ಲಿ ಮಳೆಗೆ ಭತ್ತ ನೀರುಪಾಲು

ಕಲಬುರಗಿ: ಯಾದಗಿರಿ ಜಿಲ್ಲೆಯ ಸುರಪುರ, ಶಹಾಪುರ, ಹುಣಸಗಿ, ಗುರುಮಠಕಲ್, ವಡಗೇರಾ ತಾಲ್ಲೂಕು ಹಾಗೂ ರಾಯಚೂರು ಜಿಲ್ಲೆಯ ದೇವದುರ್ಗ ತಾಲ್ಲೂಕಿನ ಜಾಲಹಳ್ಳಿ ಹೋಬಳಿಯಲ್ಲಿ ಮಂಗಳವಾರ ರಾತ್ರಿ ಸುರಿದ ಭಾರಿ ಮಳೆಯಿಂದ ಭತ್ತ ಹಾನಿಯಾಗಿದೆ.

ಆಲಿಕಲ್ಲು ಮಳೆ

ಆಲಿಕಲ್ಲು ಮಳೆಯಿಂದ ಜಾಲಹಳ್ಳಿ ಹೋಬಳಿ ವ್ಯಾಪ್ತಿಯ ಗಲಗ, ಮೇದಿನಾಪುರ, ಕರಡಿಗುಡ್ಡ, ಮ್ಯಾಕಲ್‌ದೊಡ್ಡಿ ಸೇರಿ 50ಕ್ಕೂ ಹೆಚ್ಚು ಗ್ರಾಮಗಳಲ್ಲಿಯ ಭತ್ತ ನೀರುಪಾಲಾಗಿದೆ.

‘10 ದಿನಗಳಲ್ಲಿ ಕಟಾವು ಆಗಬೇಕಿದ್ದ ಭತ್ತವು ನೀರುಪಾಲಾಗಿದೆ. ಸಾಧ್ಯವಾದಷ್ಟು ಬೇಗ ನಷ್ಟದ ಬಗ್ಗೆ ವರದಿ ಸಿದ್ದಪಡಿಸುತ್ತೇವೆ’ ಎಂದು ದೇವದುರ್ಗ ತಹಶೀಲ್ದಾರ್ ಶ್ರೀನಿವಾಸ ಚಂಪಾಲ್ ತಿಳಿಸಿದರು.

ಯಾದಗಿರಿ ಜಿಲ್ಲೆಯಲ್ಲಿ 500ಕ್ಕೂ ಹೆಚ್ಚು ಹೆಕ್ಟೇರ್ ಪ್ರದೇಶದಲ್ಲಿ ಕಟಾವು ಹಂತಕ್ಕೆ ಬಂದಿದ್ದ ಭತ್ತ ನೆಲಕಚ್ಚಿದೆ.

ವಡಗೇರಾ ತಾಲ್ಲೂಕಿನ ಗುರುಸಣಗಿ ಸಮೀಪ ಒಣಗಲು ಹಾಕಿದ್ದ ಭತ್ತ ಮಳೆಯಿಂದ ಮೊಳಕೆಯೊಡೆದಿದೆ. ಜೋಳ ಮತ್ತು ಹತ್ತಿ ಜಮೀನುಗಳಲ್ಲಿ ನೀರು ನಿಂತಿದೆ.

ಯಾದಗಿರಿ ಜಿಲ್ಲೆಯ ವಡಗೇರಾ ತಾಲ್ಲೂಕಿನ ಗುರುಸಣಗಿ ಸಮೀಪ ಒಣಗಲು ಹಾಕಿದ್ದ ಭತ್ತ ಮಳೆಯಿಂದಾಗಿ ಮೊಳಕೆಯೊಡೆದಿದೆ

ಬಾದಾಮಿಯಲ್ಲಿ ಧಾರಾಕಾರ ಮಳೆ

ಹುಬ್ಬಳ್ಳಿ: ಬೆಳಗಾವಿ ನಗರ ಮತ್ತು ತಾಲ್ಲೂಕು ಸೇರಿದಂತೆ ಜಿಲ್ಲೆಯ ಹಲವೆಡೆ ಬುಧವಾರ ಬೆಳಿಗ್ಗೆ ಗುಡುಗು ಸಹಿತ ಸಾಧಾರಣ ಮಳೆಯಾಯಿತು. ಬಾಗಲಕೋಟೆಯ ಬಾದಾಮಿ, ತೇರದಾಳದಲ್ಲಿ ಧಾರಾಕಾರ ಮಳೆಯಾಗಿದೆ.

ಬಾಗಲಕೋಟೆಯ ಬಾದಾಮಿಯಲ್ಲಿ ಎರಡು ದಿನ ಬಿಡುವು ನೀಡಿದ್ದ ಮಳೆ ಬೆಳಗಿನ ಜಾವ ಒಮ್ಮಿಂದೊಮ್ಮೆಲೆ ರಭಸದಿಂದ ಸುರಿಯಿತು. ಅಲ್ಲಿನ ಪೂರ್ವ ದಿಕ್ಕಿನ ಬೆಟ್ಟದ ಮೇಲಿನ ಬೃಹತ್ ಬಂಡೆಯ ಮೇಲಿಂದ ಜೋಡಿ ಜಲಧಾರೆಗಳು ಭೂತನಾಥ ದೇವಾಲಯದ ಎದುರಿನ ಅಗಸ್ತ್ಯತೀರ್ಥ ಹೊಂಡಕ್ಕೆ ಧುಮ್ಮಿಕ್ಕಿದವು. ತೇರದಾಳ ಸೇರಿದಂತೆ ಸುತ್ತಲಿನ ಗ್ರಾಮಗಳಲ್ಲಿ ಮಳೆಯಾಗಿದೆ. ಕಟಾವಿಗೆ ಬಂದ ನೂರಾರು ಎಕರೆ ಕಬ್ಬು ನೆಲಕ್ಕುರುಳಿದೆ.

ಇದೇ 30ರೊಳಗೆ ಬೆಳೆ ಹಾನಿ ಜಂಟಿ ಸಮೀಕ್ಷೆ

ಬೆಂಗಳೂರು: ಇತ್ತೀಚಿನ ಮಳೆಯಿಂದ ಹಾನಿಗೊಳಗಾಗಿರುವ ಮನೆಗಳಿಗೆ ಪರಿಹಾರ ನೀಡುವ ಸಂಬಂಧ ರಾಜ್ಯ ಸರ್ಕಾರ ಮಾರ್ಗಸೂಚಿ ಹೊರಡಿಸಿದೆ.

ಅಲ್ಲದೇ, ಈವರೆಗೆ ಆಗಿರುವ ಬೆಳೆ ಹಾನಿಯ ಬಗ್ಗೆ ಇದೇ 30 ರೊಳಗೆ ಜಂಟಿ ಸಮೀಕ್ಷೆ ನಡೆಸಿ ಆಯಾ ದಿನವೇ ತಂತ್ರಾಂಶದಲ್ಲಿ ನಮೂದಿಸುವಂತೆಯೂ ಕಂದಾಯ ಇಲಾಖೆ ಸೂಚಿಸಿದೆ.

ಪ್ರವಾಹದಿಂದ ಆಗಿರುವ ಬೆಳೆ ಹಾನಿ ವಿವರಗಳನ್ನು ಜಂಟಿ ಸಮೀಕ್ಷೆ ನಡೆಸಿ ಪ್ರತಿನಿತ್ಯ ಪರಿಹಾರ ತಂತ್ರಾಂಶದಲ್ಲಿ ನಮೂದಿಸಬೇಕು. ಇದರ ಅನ್ವಯ ಪ್ರತಿ ದಿನ ಇನ್‌ಪುಟ್ ಸಬ್ಸಿಡಿಯನ್ನು ನೇರವಾಗಿ ಫಲಾನುಭವಿಗಳ ಖಾತೆಗೆ ವರ್ಗಾವಣೆ ಮಾಡಲಾಗುವುದು ಎಂದು ತಿಳಿಸಿದೆ.

ಕೇಂದ್ರ ಸರ್ಕಾರದ ಮಾರ್ಗಸೂಚಿ ಅನ್ವಯ ಪ್ರವಾಹ ನೀರು ನುಗ್ಗಿರುವ ಮನೆಗಳ ಗೃಹೋಪಯೋಗಿ ವಸ್ತುಗಳು ಮತ್ತು ಬಟ್ಟೆಗಳನ್ನು ಕಳೆದುಕೊಂಡ ಕುಟುಂಬಗಳಿಗೆ ತಲಾ ₹10 ಸಾವಿರದಂತೆ ಜಿಲ್ಲಾಧಿಕಾರಿಗಳು ವೈಯಕ್ತಿಕ ಖಾತೆಯಲ್ಲಿ ಲಭ್ಯವಿರುವ ಅನುದಾನದಿಂದ ಕೂಡಲೇ ಪಾವತಿ ಮಾಡಬೇಕು ಎಂದು ಹೇಳಿದೆ.

ಪ್ರಕೃತಿ ವಿಕೋಪದ ಸಂದರ್ಭದಲ್ಲಿ ಜಿಲ್ಲಾಧಿಕಾರಿಗಳು ತಮ್ಮ ಜಿಲ್ಲಾ ವ್ಯಾಪ್ತಿಯಲ್ಲಿ ಪರಿಸ್ಥಿತಿ ಅವಲೋಕಿಸಿ ಎಸ್‌ಡಿಆರ್‌ಎಫ್ ಮತ್ತು ಎನ್‌ಡಿಆರ್‌ಎಫ್ ಮಾರ್ಗಸೂಚಿಯಂತೆ ಹಾನಿ ವಿವರಗಳನ್ನು ನಮೂದಿಸಲು ಸಂಪೂರ್ಣ ಅಧಿಕಾರ ನೀಡಲಾಗಿದೆ ಎಂದು ಮಾರ್ಗಸೂಚಿ ತಿಳಿಸಿದೆ.

ಅತಿವೃಷ್ಟಿ ಪರಿಹಾರ

ವಿವರ	ಪರಿಹಾರ ಮೊತ್ತ
ನೀರು ನುಗ್ಗಿ ಗೃಹೋಪಯೋಗಿ ವಸ್ತುಗಳ ಹಾನಿ	₹10,000
ಶೇ 75 ಕ್ಕಿಂತ ಹೆಚ್ಚು ಹಾನಿಯಾದ ಮನೆ(‘ಎ’ ವರ್ಗ)	₹5 ಲಕ್ಷ
ಶೇ25 ರಿಂದ ಶೇ 75ರಷ್ಟು ಮನೆ ಹಾನಿ(‘ಬಿ’ ವರ್ಗ)	₹3 ಲಕ್ಷ
ಶೇ 15ರಿಂದ ಶೇ 25 ಭಾಗಶಃ ಮನೆ ಹಾನಿ(‘ಸಿ’ ವರ್ಗ)	₹50 ಸಾವಿರ

(2021-22 ನೇ ಸಾಲಿನಲ್ಲಿ ಪ್ರವಾಹ/ ಅತಿವೃಷ್ಟಿಯಿಂದ ಉಂಟಾದ ಮನೆಗಳ ಹಾನಿಗೆ ಪರಿಹಾರ ದರ)

ಜಲಾಶಯದ ನೀರಿನ ಮಟ್ಟ (ಸಮುದ್ರ ಮಟ್ಟದಿಂದ)

ಜಲಾಶಯ	ಗರಿಷ್ಠ ಮಟ್ಟ (ಅಡಿಗಳಲ್ಲಿ)	ಇಂದಿನ ಮಟ್ಟ	ಒಳಹರಿವು (ಕ್ಯುಸೆಕ್‌ಗಳಲ್ಲಿ)	ಹೊರಹರಿವು (ಕ್ಯುಸೆಕ್‌ಗಳಲ್ಲಿ)
ಕೆ ಆರ್ ಎಸ್ *	124.80	124.80	4,426	4,426
ಹಾರಂಗಿ	2,859	2,857.60	1,264	957
ಕಬಿನಿ	2,284.00	2,283.86	1,300	700
ಹೇಮಾವತಿ	2,922	2,912.60	8,171	440
ಲಿಂಗನಮಕ್ಕಿ	1,819	1,813.20	3,090	-
ಸೂಪಾ (ಮೀ)	564	555.11	906	2,639
ಮಾಣಿ	594.36	586.68	329	-
ತುಂಗಭದ್ರಾ	1,633	1,632.99	23,824	20,022
ಮಲಪ್ರಭಾ	2,079.5	2,077	769	769
ಘಟಪ್ರಭಾ	2,175	2,165.53	175	175
ಭದ್ರಾ	186	185.10	1,427	211
ಆಲಮಟ್ಟಿ (ಮೀ)	519.6	518.41	8,547	1,580
ನಾರಾಯಣಪುರ (ಮೀ)	492.25	492.02	3,680	420

* ನೆಲಮಟ್ಟದಿಂದ

ಕೋಟಿಗಟ್ಟಲೆ ಆಸ್ತಿ

ಬೆಂಗಳೂರಿನ ನಂದಿನಿ ಲೇಔಟ್‌ನಲ್ಲಿರುವ ಬಿಬಿಎಂಪಿ ಸಿಬ್ಬಂದಿ ಉಮಾದೇವಿ ಅವರ ಮನೆಯಲ್ಲಿ ಬುಧವಾರ ಎಸಿಬಿ ಅಧಿಕಾರಿಗಳು ದಾಖಲೆ ಪರಿಶೀಲಿಸಿದರು

ಒಂದನೇ ಪುಟದಿಂದ...

ಮಂಗಳೂರು ಸ್ಮಾರ್ಟ್‌ಸಿಟಿ ಕಾರ್ಯನಿರ್ವಾಹಕ ಎಂಜಿನಿಯರ್ ಕೆ.ಎಸ್. ಲಿಂಗೇಗೌಡ ಮಂಗಳೂರಿನಲ್ಲಿ ವಾಸದ ಮನೆ, ನಿವೇಶನ ಮತ್ತು ಚಾಮರಾಜನಗರದಲ್ಲಿ ನಿವೇಶನ ಹೊಂದಿದ್ದಾರೆ.

ಯಲಹಂಕ ಸರ್ಕಾರಿ ಆಸ್ಪತ್ರೆಯ ಫಿಸಿಯೋ ಥೆರಪಿ ತಜ್ಞ ಎಸ್.ಎಸ್. ರಾಜಶೇಖರ್ ಅಲ್ಲಿನ ಮಾರಸಂದ್ರದಲ್ಲಿ ಒಂದು ಮತ್ತು ಶಿವನಹಳ್ಳಿಯಲ್ಲಿ ಎರಡು ಫ್ಲ್ಯಾಟ್, ಮೈಲನಹಳ್ಳಿಯಲ್ಲಿ ನಿವೇಶನ ಹೊಂದಿರುವ ದಾಖಲೆಗಳನ್ನು ತನಿಖಾ ತಂಡ ವಶಕ್ಕೆ ಪಡೆದಿದೆ.

ಗೋಕಾಕದ ಹಿರಿಯ ಮೋಟಾರು ವಾಹನ ನಿರೀಕ್ಷಕ ಸದಾಶಿವ ಆರ್. ಮರಿಲಿಂಗಣ್ಣನವರ್ ಬೆಳಗಾವಿ ನಗರದಲ್ಲಿ ಒಂದು ಮನೆ, 22 ಎಕರೆ ಕೃಷಿ ಜಮೀನು ಹೊಂದಿದ್ದು, ಮನೆಯಲ್ಲಿ ₹ 8.22 ಲಕ್ಷ ನಗದು ವಶಪಡಿಸಿಕೊಳ್ಳಲಾಗಿದೆ.

ರಾಯಭಾಗ್ ತಾಲ್ಲೂಕು ಸಹಕಾರ ಅಭಿವೃದ್ಧಿ ಅಧಿಕಾರಿ ಅಡವಿ ಸಿದ್ದೇಶ್ವರ ಕಾರೆಪ್ಪ ಮಸ್ತಿ ಬೈಲಹೊಂಗಲದಲ್ಲಿ ಎರಡು ಮನೆ, ನಾಲ್ಕು ನಿವೇಶನ ಹೊಂದಿದ್ದಾರೆ.

ಬೆಳಗಾವಿಯಲ್ಲಿನ ಹೆಸ್ಕಾಂ ಲೈನ್ ಮೆಕ್ಯಾನಿಕ್–ಗ್ರೇಡ್ 2 ನಾಥಾಜಿ ಪೀರಾಜಿ ಪಾಟೀಲ ಒಂದು ಮನೆ ಮತ್ತು ಎರಡು ನಿವೇಶನ ಹೊಂದಿರುವ ದಾಖಲೆ ಪತ್ತೆಯಾಗಿದೆ.

ದೊಡ್ಡಬಳ್ಳಾಪುರ ತಾಲ್ಲೂಕಿನ ಕಸಬಾ–2 ಹೋಬಳಿಯ ಕಂದಾಯ ನಿರೀಕ್ಷಕ ಲಕ್ಷ್ಮೀನರಸಿಂಹಯ್ಯ ವಿವಿಧೆಡೆ ಐದು ಮನೆ, ಆರು ನಿವೇಶನ, 25 ಗುಂಟೆ ಜಮೀನು ಹೊಂದಿದ್ದಾರೆ. ಬೆಂಗಳೂರಿನ ನಂದಿನಿ ಹಾಲು ಡೇರಿಯ ಪ್ರಧಾನ ವ್ಯವಸ್ಥಾಪಕ ಬಿ. ಕೃಷ್ಣಾ ರೆಡ್ಡಿ ಮೂರು ಮನೆ, ಒಂಬತ್ತು ನಿವೇಶನ, 5 ಎಕರೆ 30 ಗುಂಟೆ ಕೃಷಿ ಜಮೀನು ಹೊಂದಿರುವ ದಾಖಲೆಗಳನ್ನು ಎಸಿಬಿ ಪತ್ತಹೆಚ್ಚಿದೆ.

ನಿವೃತ್ತ ಅಧಿಕಾರಿ 9 ಮನೆಗಳ ಒಡೆಯ

ಬೆಂಗಳೂರು ಗ್ರಾಮಾಂತರ ಜಿಲ್ಲಾ ನಿರ್ಮಿತಿ ಕೇಂದ್ರದ ಯೋಜನಾ ನಿರ್ದೇಶಕರಾಗಿ ನಿವೃತ್ತರಾಗಿರುವ ಆರ್.ಎನ್. ವಾಸುದೇವ್, ಒಂಬತ್ತು ಮನೆಗಳ ಒಡೆಯ. ಬೆಂಗಳೂರು ನಗರದಲ್ಲಿ ಎಂಟು ನಿವೇಶನಗಳನ್ನೂ ಹೊಂದಿದ್ದಾರೆ. ನೆಲಮಂಗಲ, ಮಾಗಡಿ ತಾಲ್ಲೂಕಿನಲ್ಲಿ 10 ಎಕರೆ 20 ಗುಂಟೆ ಕೃಷಿ ಜಮೀನು ಕೂಡ ಇದೆ. ಮನೆಯಲ್ಲಿ ₹ 15 ಲಕ್ಷ ನಗದು ಮತ್ತು ₹ 98 ಲಕ್ಷ ಮೌಲ್ಯದ ಐಷಾರಾಮಿ ಗೃಹೋಪಯೋಗಿ ವಸ್ತುಗಳನ್ನು ಪತ್ತೆ ಮಾಡಲಾಗಿದೆ.

ಬಳ್ಳಾರಿಯಲ್ಲಿ ಉಪ ನೋಂದಣಿಯಾಧಿಕಾರಿಯಾಗಿ ಕೆಲವು ತಿಂಗಳ ಹಿಂದೆ ನಿವೃತ್ತರಾಗಿರುವ ಕೆ.ಎಸ್. ಶಿವಾನಂದ್ ಮಗನ ಮದುವೆಯ ಸಂಭ್ರಮದಲ್ಲಿರುವಾಗಲೇ ಮನೆಯ ಮೇಲೆ ಎಸಿಬಿ ದಾಳಿ ನಡೆದಿದೆ. ಮಂಡ್ಯದಲ್ಲಿ ಒಂದು ಮನೆ, ಬೆಂಗಳೂರಿನಲ್ಲಿ ಒಂದು ನಿವೇಶನ, ವಾಣಿಜ್ಯ ಕಟ್ಟಡ, ಬಳ್ಳಾರಿ ಜಿಲ್ಲೆಯ ಮೋಕಾ ಗ್ರಾಮದಲ್ಲಿ 7 ಎಕರೆ ಕೃಷಿ ಜಮೀನು ಹೊಂದಿರುವುದು ಪತ್ತೆಯಾಗಿದೆ.

ನಾಲ್ವರು ಆರೋಪಿಗಳ ಬಂಧನ

ಸಾಮೂಹಿಕ ಅತ್ಯಾಚಾರ ಎಸಗಿ ಕೊಲೆ

ಮಂಗಳೂರು: ಉಳಾಯಿಬೆಟ್ಟು ಪರಾರಿಯ ರಾಜ್ ಟೈಲ್ಸ್ ಹೆಂಚಿನ ಕಾರ್ಖಾನೆಯಲ್ಲಿ ಕೆಲಸ ಮಾಡುವ ಕಾರ್ಮಿಕ ಕುಟುಂಬಕ್ಕೆ ಸೇರಿದ 8 ವರ್ಷದ ಬಾಲಕಿಯ ಮೇಲೆ ಸಾಮೂಹಿಕ ಅತ್ಯಾಚಾರ ನಡೆಸಿ, ಕೊಲೆ ಮಾಡಿರುವ ಪ್ರಕರಣವನ್ನು ಭೇದಿಸಿರುವ ಪೊಲೀಸರು, ಉತ್ತರ ಭಾರತದ ನಾಲ್ವರು ಆರೋಪಿಗಳನ್ನು ಬಂಧಿಸಿದ್ದಾರೆ.

ಮಧ್ಯಪ್ರದೇಶದ ಪನ್ನಾ ಜಿಲ್ಲೆಯ ಜಾಯ್ಬನ್ ಸಿಂಗ್, ಮುಖೇಶ್ ಸಿಂಗ್, ಮುನೀಂ ಸಿಂಗ್ ಹಾಗೂ ಜಾರ್ಖಂಡ್‌ನ ರಾಂಚಿ ಜಿಲ್ಲೆಯ ಮನೀಶ್ ತಿರ್ಕಿ ಬಂಧಿತ ಆರೋಪಿಗಳು. ಮೂವರು ಅದೇ ಕಾರ್ಖಾನೆಯ ಕಾರ್ಮಿಕರಾಗಿದ್ದು, ಮುನೀಂ ಸಿಂಗ್ ಪುತ್ತೂರಿನಲ್ಲಿ ಕೂಲಿ ಕಾರ್ಮಿಕನಾಗಿದ್ದಾನೆ.

‘ಬಾಲಕಿಗೆ ಈ ಹಿಂದೆಯೂ ಆರೋಪಿಗಳು ಸಿಹಿ ತಿಂಡಿ ನೀಡುವ ನೆಪದಲ್ಲಿ ಲೈಂಗಿಕ ಕಿರುಕುಳ ನೀಡಿದ್ದರು. ಕೃತ್ಯ ನಡೆದ ನಾಲ್ಕೈದು ದಿನಗಳ ಹಿಂದೆ ಒಂದೆಡೆ ಸೇರಿ ಬಾಲಕಿಯ ಮೇಲೆ ಅತ್ಯಾಚಾರ ಎಸಗುವ ಬಗ್ಗೆ ಸಂಚು ರೂಪಿಸಿದ್ದರು ಎಂಬುದನ್ನು ಆರೋಪಿಗಳು ವಿಚಾರಣೆ ವೇಳೆ ಒಪ್ಪಿಕೊಂಡಿದ್ದಾರೆ’ ಎಂದು ನಗರ ಪೊಲೀಸ್ ಕಮಿಷನರ್ ಎನ್. ಶಶಿಕುಮಾರ್ ಮಾಹಿತಿ ನೀಡಿದ್ದಾರೆ.

ಭಾನುವಾರ ಮಧ್ಯಾಹ್ನ ಆಟವಾಡುತ್ತಿದ್ದಾಗ ಬಾಲಕಿಯನ್ನು ಎಳೆದೊಯ್ದ ಆರೋಪಿಗಳು, ಸಾಮೂಹಿಕ ಅತ್ಯಾ ಚಾರ ಎಸಗಿದ್ದಾರೆ. ಈ ವೇಳೆ ಬಾಲಕಿ ನೋವಿನಿಂದ ಕಿರುಚಾಡಿದ್ದು, ಜಾಯ್ಬನ್ ಸಿಂಗ್ ಆಕೆಯ ಕತ್ತು ಹಿಸುಕಿ ಕೊಲೆ ಮಾಡಿದ್ದಾನೆ. ಬಳಿಕ ಬಾಲಕಿಯ ಶವವನ್ನು ಚರಂಡಿಗೆ ಎಸೆದಿದ್ದರು. ಪ್ರಕರಣವನ್ನು ಗಂಭೀರವಾಗಿ ಪರಿಗಣಿಸಿದ್ದ ತನಿಖಾ ತಂಡ, ಸಿಸಿಟಿವಿ ಕ್ಯಾಮೆರಾ ದೃಶ್ಯಾವಳಿ, ಸಿಡಿಆರ್ ವಿಶ್ಲೇಷಣೆ, ಸಾಕ್ಷಿಗಳ ಹೇಳಿಕೆ ಆಧರಿಸಿ ಆರೋಪಿಗಳನ್ನು ಬಂಧಿಸಿದೆ ಎಂದು ಶಶಿಕುಮಾರ್ ತಿಳಿಸಿದರು.

‘ರಾಜ್ ಟೈಲ್ಸ್’ ಹೆಂಚಿನ ಕಾರ್ಖಾನೆಯಲ್ಲಿ 2 ವರ್ಷಗಳಿಂದ ಕೆಲಸ ಮಾಡುತ್ತಿದ್ದ ಜಾರ್ಖಂಡ್‌ನ ದಂಪತಿಗೆ ನಾಲ್ವರು ಮಕ್ಕಳಿದ್ದು, ಹಿರಿಯ ಮಗಳು 8 ವರ್ಷದ ಬಾಲಕಿ ಭಾನುವಾರ (ನ.21) ಮಧ್ಯಾಹ್ನ ಊಟವಾದ ಬಳಿಕ ಆಟ ಆಡಲು ತೆರಳಿದ್ದಳು. ನಂತರ ಬಾಲಕಿ ಕಾಣೆಯಾಗಿದ್ದು, ಸ್ಥಳೀಯರು, ಪಾಲಕರು ಹುಡುಕಾಡಿದಾಗ ಸಂಜೆ 6 ಗಂಟೆ ವೇಳೆಗೆ ಕಾರ್ಖಾನೆ ಆವರಣದ ಚರಂಡಿಯಲ್ಲಿ ಆಕೆಯ ಶವ ಪತ್ತೆಯಾಗಿತ್ತು.

ಕಪಾಟಿನಲ್ಲಿತ್ತು ₹ 43 ಲಕ್ಷ

ಸಕಾಲ ಮಿಷನ್ ಆಡಳಿತಾಧಿಕಾರಿಯಾಗಿರುವ ಕೆಎಎಸ್ ಅಧಿಕಾರಿ ಎಲ್‌.ಸಿ. ನಾಗರಾಜ್ ಅವರ ನೆಲಮಂಗಲದ ಮನೆಯ ಕಪಾಟಿನಲ್ಲಿದ್ದ ₹ 43 ಲಕ್ಷ ನಗದನ್ನು ತನಿಖಾ ತಂಡ ವಶಕ್ಕೆ ಪಡೆದಿದೆ.

ಇವರ ಬಳಿ ಬೆಂಗಳೂರು ನಗರ ಮತ್ತು ನೆಲಮಂಗಲದಲ್ಲಿ ತಲಾ ಒಂದು ಮನೆಗಳು, ನೆಲಮಂಗಲ ತಾಲ್ಲೂಕಿನಲ್ಲಿ 11 ಎಕರೆ 26 ಗುಂಟೆ ಜಮೀನು, ಒಂದು ಕೈಗಾರಿಕಾ ಕಟ್ಟಡ, 1.76 ಕೆ.ಜಿ. ಚಿನ್ನ, 7.28 ಕೆ.ಜಿ. ಬೆಳ್ಳಿ, ಮೂರು ಕಾರುಗಳು ಪತ್ತೆಯಾಗಿವೆ ಎಂದು ಎಸಿಬಿ ಮಾಹಿತಿ ನೀಡಿದೆ.

ಐಎಂಎ ಹಗರಣದಲ್ಲಿ ನಾಗರಾಜ್ ಅವರನ್ನು ಬಂಧಿಸಲಾಗಿತ್ತು. ಬಳಿಕ ಅವರನ್ನು ಸೇವೆಯಿಂದ ಅಮಾನತು ಮಾಡಲಾಗಿತ್ತು.

ನ್ಯಾಯಾಲಯದಿಂದ ಜಾಮೀನು ಪಡೆದು ಬಿಡುಗಡೆಯಾದ ಬಳಿಕ ಸಕಾಲ ಮಿಷನ್‌ನಲ್ಲಿ ಕಾರ್ಯನಿರ್ವಹಿಸುತ್ತಿದ್ದಾರೆ.

ರಾಜಕೀಯ ಪ್ರೇರಿತ ದಾಳಿ: ನನ್ನ ಮೇಲಿನ ಎಸಿಬಿ ದಾಳಿ ರಾಜಕೀಯ ಪ್ರೇರಿತವಾಗಿದೆ. ರಾಜಕೀಯವಾಗಿ ನಾನು ಬೆಳೆಯುತ್ತೇನೆ ಎಂಬ ಕಾರಣಕ್ಕಾಗಿ ಈ ದಾಳಿ ಮಾಡಲಾಗಿದೆ’ ಎಂದು ಕೆಎಎಸ್ ಅಧಿಕಾರಿ ಎಲ್‌.ಸಿ. ನಾಗರಾಜ್ ದೂರಿದರು.

ಎಸಿಬಿ ಅಧಿಕಾರಿಗಳ ಶೋಧ ಮುಗಿದ ಬಳಿಕ ಸುದ್ದಿಗಾರರ ಜತೆ ಮಾತನಾಡಿದ ಅವರು, ‘ಹೃದಯಾಘಾತಕ್ಕೊಳಗಾಗಿರುವ ಅತ್ತೆಗೆ ಚಿಕಿತ್ಸೆ ಕೊಡಿಸಲು ನನ್ನ ತಾತ ಕೊಟ್ಟಿದ್ದ ₹ 43 ಲಕ್ಷ ನಗದು ಮನೆಯಲ್ಲಿತ್ತು. ನಾನು ಯಾವುದೇ ಅಕ್ರಮ ಎಸಗಿಲ್ಲ. ನನ್ನ ತಾತ ಜಮೀನ್ದಾರ. ಹೆಂಡತಿ ಉದ್ಯಮಿಯಾಗಿದ್ದು, ಒಳ್ಳೆಯ ಆದಾಯವಿದೆ. ನಾನು ಕೂಡ ಕೃಷಿಕ. ಎಲ್ಲ ಆಸ್ತಿಗಳಿಗೂ ದಾಖಲೆಗಳಿವೆ’ ಎಂದರು.

ಸಲೀಂ ಹಸನ್ ಚಿಸ್ತಿಗೆ ‘ಎಚ್‌.ಎಲ್‌. ನಾಗೇಗೌಡ ಪ್ರಶಸ್ತಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕ ಜಾನಪದ ಪರಿಷತ್ತು ವತಿಯಿಂದ ನೀಡಲಾಗುವ ‘ಎಚ್‌.ಎಲ್.ನಾಗೇಗೌಡ ರಾಷ್ಟ್ರೀಯ ಪ್ರಶಸ್ತಿ’ಗೆ ಉತ್ತರ ಪ್ರದೇಶದ ಜಾನಪದ ಸೂಫಿ ಗಾಯಕ ಸಲೀಂ ಹಸನ್ ಚಿಸ್ತಿ ಅವರನ್ನು ಆಯ್ಕೆ ಮಾಡಲಾಗಿದೆ.

‘ಪ್ರಶಸ್ತಿ ₹1 ಲಕ್ಷ ನಗದು ಒಳಗೊಂಡಿದೆ. ನ.27ರಂದು ಸಂಜೆ 5 ಗಂಟೆಗೆ ರವೀಂದ್ರ ಕಲಾಕ್ಷೇತ್ರದಲ್ಲಿ ನಡೆಯಲಿರುವ ಕಾರ್ಯಕ್ರಮದಲ್ಲಿ ಕನ್ನಡ ಮತ್ತು ಸಂಸ್ಕೃತಿ ಸಚಿವ ವಿ.ಸುನೀಲ್ ಕುಮಾರ್ ಪ್ರಶಸ್ತಿ ಪ್ರದಾನ ಮಾಡಲಿದ್ದಾರೆ’ ಎಂದು ಜಾನಪದ ಪರಿಷತ್ತಿನ ಅಧ್ಯಕ್ಷ ಟಿ.ತಿಮ್ಮೇಗೌಡ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.



ಸಲೀಂ ಹಸನ್ ಚಿಸ್ತಿ

ನಾಲ್ವರು ಆರೋಪಿಗಳು ಬಿಗಿ ಭದ್ರತೆಯಲ್ಲಿ ನ್ಯಾಯಾಲಯಕ್ಕೆ ಹಾಜರು

ಕಲಬುರ್ಗಿ ಹತ್ಯೆ ವಿಚಾರಣೆ ಡಿ.20ರಿಂದ

ಪ್ರಜಾವಾಣಿ ವಾರ್ತೆ

ಧಾರವಾಡ: ಹಿರಿಯ ಸಂಶೋಧಕ ಡಾ. ಎಂ.ಎಂ.ಕಲಬುರ್ಗಿ ಹತ್ಯೆ ಪ್ರಕರಣಕ್ಕೆ ಸಂಬಂಧಿಸಿದಂತೆ ಇಲ್ಲಿನ 4ನೇ ಹೆಚ್ಚುವರಿ ಜಿಲ್ಲಾ ನ್ಯಾಯಾಲಯ ವಿಚಾರಣೆಯನ್ನು ಡಿ. 20 ಹಾಗೂ 21ಕ್ಕೆ ನಿಗದಿಪಡಿಸಿತು.

ಪ್ರಕರಣದ ಆರು ಆರೋಪಿಗಳಲ್ಲಿ ಧಾರವಾಡ ಕೇಂದ್ರ ಕಾರಾಗೃಹದಲ್ಲಿದ್ದ ಪ್ರವೀಣ ಚತುರ ಹಾಗೂ ಮುಂಬೈನ ಆರ್ಥರ್ ರಸ್ತೆ ಜೈಲಿನಲ್ಲಿದ್ದ ಅಮಿತ ಬದ್ದಿ, ಗಣೇಶ ಮಿಸ್ಕಿನ್, ವಾಸುದೇವ ಸೂರ್ಯವಂಶಿಯನ್ನು ಬಿಗಿ ಭದ್ರತೆಯಲ್ಲಿ ಬುಧವಾರ ನ್ಯಾಯಾಲಯಕ್ಕೆ ಕರೆತರಲಾಯಿತು. ಉಳಿದಿಬ್ಬರು ಆರೋಪಿಗಳು ಅನಾರೋಗ್ಯದಿಂದಾಗಿ ಹಾಜರಾಗಿರಲಿಲ್ಲ.

ಪ್ರಕರಣದ ವಿಚಾರಣೆಯನ್ನು ಧಾರವಾಡದಲ್ಲೇ ನಡೆಸುವಂತೆ ಆರೋಪಿಗಳು ನ್ಯಾಯಾಲಯವನ್ನು ಕೇಳಿಕೊಂಡರು. ಜತೆಗೆ ತಮ್ಮನ್ನು ಭೇಟಿಯಾಗಲು ಬಂದ ಕುಟುಂಬದವರು ಹಾಗೂ ವಕೀಲರೊಂದಿಗೆ ಮಾತನಾಡಲು ಅವಕಾಶ ಕೋರಿದರು. ಇವುಗಳಲ್ಲಿ ಭೇಟಿಯ ಕೋರಿಕೆಯನ್ನು ಮಾನ್ಯ ಮಾಡಿದ ನ್ಯಾಯಾಧೀಶರು, ನ್ಯಾಯಾಲಯದ ಆವರಣದಲ್ಲೇ ಭೇಟಿಗೆ ಅವಕಾಶ ನೀಡಿದರು.

ವಿಚಾರಣೆ ಸಂದರ್ಭದಲ್ಲಿ ಮರಾಠಿ ಹಾಗೂ ಹಿಂದಿಯಲ್ಲಿ ಮಾತನಾಡುತ್ತಿದ್ದ ಆರೋಪಿಗಳ ವಿರುದ್ಧ ನ್ಯಾಯಾಧೀಶೆ ಪಂಚಾಕ್ಷರಿ ಅವರು ಗರಂ ಆದರು.

‘ಕರ್ನಾಟಕದವರಾಗಿದ್ದು ಕನ್ನಡದಲ್ಲಿ ಮಾತನಾಡಿ’ ಎಂದು ತಾಕೀತು ಮಾಡಿದರು. ಆಗ ಆರೋಪಿಗಳು ಕನ್ನಡದಲ್ಲೇ ಉತ್ತರಿಸಿದರು.

ನ್ಯಾಯಾಲಯದಿಂದ ಹೊರಬಂದ ಆರೋಪಿಗಳು, ‘ನಾವು ಅಮಾಯಕರು. ಎಸ್‌ಐಟಿ ಅಧಿಕಾರಿಗಳು ನಮ್ಮನ್ನು ಇದರಲ್ಲಿ ಸಿಲುಕಿಸಿದ್ದಾರೆ. ಪ್ರಜಾಪ್ರಭುತ್ವದ ಮೇಲೆ ನಮಗೆ ನಂಬಿಕೆ ಇದೆ. ನಾವೆಲ್ಲರೂ ಆರೋಪಮುಕ್ತರಾಗಿ ಹೊರಬರುತ್ತೇವೆ’ ಎಂದು ಕೂಗಿದರು.

ಮಹಾರಾಷ್ಟ್ರದ ವಿಚಾರವಾದಿಗಳಾದ ಗೋವಿಂದ ಪಾನ್ಸರೆ ಮತ್ತು ನರೇಂದ್ರ ದಾಬೋಲ್ಕರ್ ಹತ್ಯೆ ಪ್ರಕರಣಕ್ಕೆ ಸಂಬಂಧಿಸಿದಂತೆ ಆರೋಪಿಗಳನ್ನು ಮುಂಬೈನ ಕೇಂದ್ರ ಕಾರಾಗೃಹಕ್ಕೆ ಮರಳಿಸುವಂತೆ ಅನುಮತಿ ಕೋರಿದ ಅರ್ಜಿಯೂ ನ್ಯಾಯಾಲಯಕ್ಕೆ ಸಲ್ಲಿಕೆಯಾಯಿತು. ಪ್ರಕರಣದ ವಿಚಾರಣೆಯನ್ನು ಶೀಘ್ರದಲ್ಲಿ ನಡೆಸಬೇಕು ಎಂಬ ಹೈಕೋರ್ಟ್ ಸೂಚನೆ ಹಿನ್ನೆಲೆಯಲ್ಲಿ ವಿಶೇಷ ಅಭಿಯೋಜಕರನ್ನೂ ಸರ್ಕಾರ ನೇಮಕ ಮಾಡಿದೆ.

ಮುಖ್ಯಾಂಶಗಳು

- ಧಾರಾವಾಡದಲ್ಲೇ ವಿಚಾರಣೆ ನಡೆಸುವಂತೆ ಆರೋಪಿಗಳ ಮನವಿ
- ಕನ್ನಡದಲ್ಲಿ ಮಾತನಾಡಿ: ಆರೋಪಿಗಳಿಗೆ ನ್ಯಾಯಾಧೀಶರ ಸೂಚನೆ
- ಆರೋಪ ಮುಕ್ತರಾಗಿ ಹೊರಬರುವೆವು ಎಂದು ಕೂಗಿದ ಆರೋಪಿಗಳು

ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿ ಗ್ರಹಿಸಿದ ವಿಷಯವನ್ನು ವ್ಯವಸ್ಥಿತ ಪದಗಳ ಜೋಡಣೆಯೊಂದಿಗೆ ಉತ್ತರಿಸುವುದು ಬಹಳ ಮುಖ್ಯ. ಇಂತಹ ಕೌಶಲ ಒಂದೇ ಬಾರಿಗೆ ಸಿದ್ಧಿಸುವುದಿಲ್ಲ. ಇದಕ್ಕೆ ಸತತ ಅಭ್ಯಾಸ ಅಗತ್ಯ.

ಓದಿದ್ದನ್ನು ನೆನಪಿಟ್ಟುಕೊಳ್ಳಿ... ಪ್ರತಿದಿನವೂ ಅಭ್ಯಾಸಕ್ಕಾಗಿ ಒಂದಿಷ್ಟು ಸಮಯವನ್ನು ತೆಗೆದಿಡಿ. ಓದಿದ ವಿಷಯಗಳನ್ನು ಟಿಪ್ಪಣಿ (ನೋಟ್ಸ್) ಮಾಡಿಟ್ಟುಕೊಳ್ಳಿ. ಅದನ್ನು ಆಗಾಗ್ಗೆ ಪುನರಾವರ್ತನೆ ಮಾಡುತ್ತಿರಿ. ಹೀಗೆ ಟಿಪ್ಪಣಿಯನ್ನು ಮನನ ಮಾಡುವುದರಿಂದ, ಓದಿರುವುದನ್ನು ಮರೆತು ಹೋಗದಂತೆ ತಡೆಯಬಹುದು.

ಗ್ರೂಪ್-ಸಿ (ತಾಂತ್ರಿಕೇತರ) ಹುದ್ದೆ

ಕರ್ನಾಟಕ ಆರ್ಥಿಕತೆ ಬಲ ಹಾಗೂ ದೌರ್ಬಲ್ಯ

ಕರ್ನಾಟಕ ಲೋಕ ಸೇವಾ ಆಯೋಗವು ಗ್ರೂಪ್ 'ಸಿ' ವೃಂದದ ತಾಂತ್ರಿಕೇತರ ಹುದ್ದೆಗಳ ನೇಮಕಕ್ಕಾಗಿ ನಡೆಸುವ ಸ್ಪರ್ಧಾತ್ಮಕ ಪರೀಕ್ಷೆಗೆ ಸಾಮಾನ್ಯ ಜ್ಞಾನ ವಿಭಾಗದಲ್ಲಿ 'ಕರ್ನಾಟಕ ಆರ್ಥಿಕತೆ, ಅದರ ಬಲ ಹಾಗೂ ದೌರ್ಬಲ್ಯ' ವಿಷಯದ ಕುರಿತಾದ ಬಹು ಆಯ್ಕೆ ಪ್ರಶ್ನೆಗಳು.

1. ಭಾರತ ಜಗತ್ತಿನಲ್ಲಿ 6ನೇ ದೊಡ್ಡ ಅರ್ಥ ವ್ಯವಸ್ಥೆ ಹೊಂದಿದೆ. ಕರ್ನಾಟಕವೂ ಪ್ರಮುಖ ಅರ್ಥವ್ಯವಸ್ಥೆಯ ಭಾಗವಾಗಿದ್ದು, ನಮ್ಮ ರಾಜ್ಯವು ದೇಶದ ಒಟ್ಟು ಆಂತರಿಕ ಉತ್ಪಾದನೆ(ಜಿಡಿಪಿ)ಗೆ ಶೇಕಡವಾರು ಎಷ್ಟು ಕೊಡುಗೆಯನ್ನು ಕೊಡುತ್ತದೆ?

ಎ. ಶೇ 8 ಬಿ. ಶೇ 15 ಸಿ. ಶೇ 20 ಡಿ. ಶೇ 4

ಉತ್ತರ: ಎ

2. 2020-21ರ ಆರ್ಥಿಕ ವರ್ಷದಲ್ಲಿ ರಾಜ್ಯದ ಒಟ್ಟು ಆಂತರಿಕ ಉತ್ಪಾದನೆ(ಜಿಎಸ್‌ಡಿಪಿ) ₹11,13,818 ಕೋಟಿಗಳಷ್ಟಿದೆ. ಇದನ್ನು ಲೆಕ್ಕ ಹಾಕುವಾಗ ....ಸಾಲಿನ ಸ್ಥಿರ ಬೆಲೆಯನ್ನು ತೆಗೆದು ಕೊಳ್ಳಲಾಗಿದೆ.

ಎ. 2020-21 ಬಿ. 2015-16

ಸಿ. 2000-01 ಡಿ. 2011-12

ಉತ್ತರ: ಡಿ

3. 'ಒಂದು ಜಿಲ್ಲೆ ಒಂದು ಉತ್ಪನ್ನ'ಯೋಜನೆ ಅಡಿಯಲ್ಲಿ ಕರ್ನಾಟಕದ ಪ್ರತಿಯೊಂದು ಜಿಲ್ಲೆಯೂ ಒಂದೊಂದು ಕೃಷಿ ಉತ್ಪನ್ನಗಳಿಗೆ ಪ್ರಸಿದ್ದವಾಗಿದೆ. ಉದಾ:- ಈರುಳ್ಳಿಗೆ- ಬಾಗಲಕೋಟೆ ಜಿಲ್ಲೆ, ಕಬ್ಬು ಅಥವಾ ಬೆಲ್ಲಕ್ಕೆ ಬೆಳಗಾವಿ ಮತ್ತು ಮಂಡ್ಯ ಪ್ರಸಿದ್ದವಾದರೆ ಮಸಾಲೆ ಪದಾರ್ಥಕ್ಕೆ ಯಾವ ಜಿಲ್ಲೆ ಪ್ರಸಿದ್ದವಾಗಿದೆ?

ಎ. ಉತ್ತರ ಕನ್ನಡ ಬಿ. ಬೀದರ್

ಸಿ. ತುಮಕೂರು ಡಿ. ಹಾಸನ

ಉತ್ತರ: ಎ

4. ನಮ್ಮ ರಾಜ್ಯದಲ್ಲಿ ಎಷ್ಟು ಮಣ್ಣು ಪರೀಕ್ಷಾ ಪ್ರಯೋಗಾಲಯಗಳು ಇವೆ?

ಎ. 30 ಬಿ. 40 ಸಿ. 50 ಡಿ. 15

ಉತ್ತರ: ಎ

5. ಕೆಳಗಿನ ಹೇಳಿಕೆಗಳನ್ನು ಗಮನಿಸಿ

1. ನಮ್ಮ ರಾಜ್ಯವು 2007-8ರ ಆರ್ಥಿಕ ವರ್ಷದಿಂದ ಲಿಂಗಸಮಾನತೆ ದೃಷ್ಟಿಯಿಂದ 'ಲಿಂಗಾನುಪಾತ ಆಧಾರಿತ ಬಜೆಟ್' (ಜಂಡರ್ ಬಜೆಟ್) ನೀಡುತ್ತಾ ಬಂದಿದೆ. ಶೇ 48.30ರಷ್ಟು ಯೋಜನೆಗಳು ಮಹಿಳೆಯರ ಕಲ್ಯಾಣಕ್ಕಾಗಿಯೂ ವಿಸ್ತರಿಸಲಾಗಿದೆ.
2. 2020-21ರಿಂದ ಮಕ್ಕಳ ಹಿತಕ್ಕಾಗಿ ಇರುವ ಕಾರ್ಯಕ್ರಮವನ್ನು ಜಾರಿಗೊಳಿಸುವ ಮಕ್ಕಳ ಬಜೆಟ್ ಅನ್ನೂ ಮಂಡಿಸಲು ಕರ್ನಾಟಕ ಸರ್ಕಾರ ಮುಂದಾಗಿದ್ದು ಸುಮಾರು 280 ಮಕ್ಕಳಿಗೆ ಸಹಾಯವಾಗುವ ಕಾರ್ಯಕ್ರಮಗಳನ್ನು ಹಾಕಿಕೊಳ್ಳಲಾಗಿದೆ ಅದಕ್ಕಾಗಿ ₹36,340 ಕೋಟಿ ಅನುದಾನವನ್ನು ಮೀಸಲಾಗಿಡಲಾಗಿದೆ.
3. 2020-21ನೇ ಸಾಲಿನಲ್ಲಿ ಕರ್ನಾಟಕದಲ್ಲಿ ತಲಾ ವರಮಾನ ₹ 2,26,796 ಇದ್ದು 2019-20ನೇ ಸಾಲಿನಲ್ಲಿ ₹2,23,175 ಇತ್ತು 2019-20ನೇ ಸಾಲಿಗೆ ಹೋಲಿಸಿದರೆ ಶೇ 1.6ರಷ್ಟು ಹೆಚ್ಚಾಗಿದೆ.
4. ಕರ್ನಾಟಕದ ಆರ್ಥಿಕ ಸಮೀಕ್ಷೆ 2020-21ರ ಪ್ರಕಾರ ಕರ್ನಾಟಕದ ಒಟ್ಟು ಕಾರ್ಮಿಕರಲ್ಲಿ ಶೇ 30ರಷ್ಟು ಜನ ಕೃಷಿ ಕ್ಷೇತ್ರದಲ್ಲಿ ತೊಡಗಿಸಿಕೊಂಡಿದ್ದು ನಮ್ಮ ರಾಜ್ಯದ ಜಿಡಿಪಿಗೆ ಕೃಷಿ ಕ್ಷೇತ್ರವು ಶೇ 8.7ರಷ್ಟು ಕೊಡುಗೆಯನ್ನು ನೀಡುತ್ತದೆ.

ಮೇಲಿನ ಹೇಳಿಕೆಗಳಲ್ಲಿ ಯಾವೆಲ್ಲಾ ಹೇಳಿಕೆಗಳು ಸರಿಯಾಗಿವೆ?

ಎ. ಹೇಳಿಕೆ 2, 3 ಮತ್ತು 4ರ ಮಾತ್ರ ಸರಿಯಾಗಿದೆ

ಬಿ. ಹೇಳಿಕೆ 1, 3 ಮತ್ತು 4 ಮಾತ್ರ ಸರಿಯಾಗಿದೆ

ಸಿ. ಹೇಳಿಕೆ 1 ರಿಂದ 4ರ ತನಕ ಎಲ್ಲವೂ ಸರಿಯಾಗಿದೆ

ಡಿ. ಮೇಲಿನ ಯಾವ ಹೇಳಿಕೆಯೂ ಸರಿಯಾಗಿಲ್ಲ.

ಉತ್ತರ: ಸಿ

6. ಫುಡ್ ಕರ್ನಾಟಕ ಲಿಮಿಟೆಡ್, ಕರ್ನಾಟಕದಲ್ಲಿ ಪುಡ್ ಪಾರ್ಕ್‌ಗಳನ್ನು ಗಮನಿಸಲು ಇರುವ ನೋಡಲ್ ಏಜೆನ್ಸಿ. ಹಾಗಾದರೆ 'ಇನೋವಾ ಅಗ್ರಿ ಬಯೋ ಟೆಕ್ ಪಾರ್ಕ್ ಲಿಮಿಟೆಡ್' ಎಲ್ಲಿದೆ?

ಎ. ಜೇವರ್ಗಿ ಬಿ. ಮಾಲೂರು.

ಸಿ. ಹುಮನಾಬಾದ್ ಡಿ. ಸಕಲೇಶಪುರ

ಉತ್ತರ:-ಬಿ

7. ಕೆಳಗಿನ ಹೇಳಿಕೆಗಳನ್ನು ಗಮನಿಸಿ

1. ಭಾರತದಲ್ಲಿರುವ ಒಟ್ಟು ಕಾರ್ಖಾನೆಗಳಲ್ಲಿ ಶೇ 5.6ರಷ್ಟು ಕರ್ನಾಟಕದಲ್ಲಿವೆ.
2. 2019-20ರಲ್ಲಿ ಕರ್ನಾಟಕದಲ್ಲಿ ಇದ್ದ ಸೂಕ್ಷ್ಮ, ಸಣ್ಣ ಮತ್ತು ಮಧ್ಯಮ ಕೈಗಾರಿಕಾ ಘಟಕಗಳ (MSMEs) ಸಂಖ್ಯೆ 97,232. ಇವುಗಳಲ್ಲಿ ಹೂಡಿಕೆ ಮಾಡಿದ್ದು ₹ 18,59,727 ಲಕ್ಷಗಳು.
3. ನಮ್ಮ ರಾಜ್ಯದಲ್ಲಿ ಕೈಗಾರಿಕೆಗಳ ಸ್ಥಾಪನೆಯಾಗುವಲ್ಲಿ ಕೆಐಎಡಿಬಿಯ ಏಜನ್ಸಿಯಾದ 'ಕರ್ನಾಟಕ ಉದ್ಯೋಗ ಮಿತ್ರ'ದ ಪಾತ್ರ ದೊಡ್ಡದಿದ್ದು. ಇದು ರಾಜ್ಯದಲ್ಲಿ ಕೈಗಾರಿಕೆ ಸ್ಥಾಪಿಸಲು 'ಏಕ ಗವಾಕ್ಷಿ' ಸಂಸ್ಥೆಯಾಗಿದೆ. ₹ 15 ಕೋಟಿಗೂ ಮೇಲ್ಪಟ್ಟ ₹ 500 ಕೋಟಿ ತನಕದ ಬಂಡವಾಳ ಹೂಡಿಕೆದಾರರಿಗೆ ಇದೂ ನೆರವು ನೀಡುತ್ತದೆ.
4. 2007-08 ರಿಂದ 2020ರ ನವೆಂಬರ್ ತನಕ 38,410 ಮಿಲಿಯನ್ ಅಮೆರಿಕನ್ ಡಾಲರ್‌ನಷ್ಟು ವಿದೇಶಿ ನೇರ ಬಂಡವಾಳವು(ಎಫ್‌ಡಿಐ) ರಾಜ್ಯದಲ್ಲಿ ಹೂಡಿಕೆಯಾಗಿದೆ.

ಮೇಲಿನ ಹೇಳಿಕೆಗಳಲ್ಲಿ ಯಾವೆಲ್ಲಾ ಹೇಳಿಕೆಗಳು ಸರಿಯಾಗಿವೆ?

ಎ. ಹೇಳಿಕೆ 1, 2 ಮತ್ತು 4 ಮಾತ್ರ ಸರಿಯಾಗಿದೆ

ಬಿ. ಹೇಳಿಕೆ 1, 3 ಮತ್ತು 4 ಮಾತ್ರ ಸರಿಯಾಗಿದೆ

ಸಿ. ಹೇಳಿಕೆ 1 ರಿಂದ 4ರತನಕ ಎಲ್ಲವೂ ಸರಿಯಾಗಿದೆ

ಡಿ. ಮೇಲಿನ ಯಾವ ಹೇಳಿಕೆಯೂ ಸರಿಯಾಗಿಲ್ಲ.

ಉತ್ತರ: ಸಿ

8. ದೇಶದ ಶೇ 20ರಷ್ಟು ಸಿದ್ಧ ಉಡುಪು (ಗಾರ್ಮೆಂಟ್) ಉತ್ಪಾದನೆ ನಮ್ಮ ಕರ್ನಾಟಕದಲ್ಲಿ ಆಗುತ್ತಿದ್ದು, ಇದರ ಮೌಲ್ಯ 1.56 ಬಿಲಿಯನ್ ಅಮೆರಿಕನ್ ಡಾಲರ್‌ನಷ್ಟಾಗಿದೆ. ಹಾಗಾದರೆ ಈ ಕೆಳಗಿನ ಯಾವ ದೇಶಕ್ಕೆ ನಮ್ಮ ರಾಜ್ಯದಿಂದ ಗಾರ್ಮೆಂಟ್ ಉತ್ಪನ್ನಗಳು ರಫ್ತಾಗುತ್ತಿವೆ?

ಎ. ಅಮೆರಿಕ ಬಿ. ಬ್ರಿಟನ್

ಸಿ. ಇಟಲಿ ಡಿ. ಮೇಲಿನ ಎಲ್ಲಾ ದೇಶಗಳಿಗೆ

ಉತ್ತರ: ಡಿ (ಕರ್ನಾಟಕವು ಅಮೆರಿಕ, ಬ್ರಿಟನ್, ಇಟಲಿ, ಜರ್ಮನಿ ಹಾಂಕಾಂಗ್, ಟರ್ಕಿ, ಆಸ್ಟ್ರೇಲಿಯಾ, ಕೆನಡಾ ಮತ್ತಿತರ ದೇಶಗಳಿಗೆ ಗಾರ್ಮೆಂಟ್ ಉತ್ಪನ್ನಗಳನ್ನು ರಫ್ತು ಮಾಡುತ್ತಿದೆ)

9. ಕೆಳಗಿನ ಹೇಳಿಕೆಗಳನ್ನು ಗಮನಿಸಿ

1. ಈ ವರ್ಷ (2020-21ರಲ್ಲಿ) 'ಕೋವಿಡ್-19' ಹಿನ್ನೆಲೆಯಲ್ಲಿ ನಮ್ಮ ರಾಜ್ಯದ ಪ್ರಗತಿಯ ದರ, ಋಣಾತ್ಮಕವಾಗಿ ಕುಸಿತ ಕಂಡಿದೆ. ಅಂದರೆ ಪ್ರಗತಿ ದರ ಶೇ (-)2ರಷ್ಟು ದಾಖಲಾಗಿದೆ. 2020-21ರಲ್ಲಿ ಕೃಷಿ ಕ್ಷೇತ್ರವು ಶೇ 6.4ರಷ್ಟು ಬೆಳವಣಿಗೆಯನ್ನು ದಾಖಲಿಸಿದ್ದನ್ನು ಬಿಟ್ಟರೆ ಉಳಿದ ಕ್ಷೇತ್ರಗಳಾದ ಕೈಗಾರಿಕೆ ಶೇ (-) 5.1, ಸೇವಾ ವಲಯ ಶೇ(-) 3.1ರಷ್ಟು ಋಣಾತ್ಮಕ ಬೆಳವಣಿಗೆ ದರವನ್ನು ದಾಖಲಿಸಿವೆ.
2. 2020-21ರಲ್ಲಿ ನಮ್ಮ ರಾಜ್ಯದ ಆದಾಯ ಸ್ವೀಕೃತಿ (ರೆವೆನ್ಯೂ ರಿಸಿಪ್ಟ್) ₹ 1,79,919 ಕೋಟಿಯಷ್ಟಿದೆ. ಅದೇ ಹೊತ್ತಿಗೆ ನಮ್ಮ ರಾಜ್ಯದ ಸಾಲದ ಭಾರವು ₹3,68,692 ಕೋಟಿಯಷ್ಟಿದೆ.
3. ಕರ್ನಾಟಕದಲ್ಲಿ ಶಿಕ್ಷಣ, ಆರೋಗ್ಯ, ಮೂಲಸೌಕರ್ಯ, ಕೈಗಾರಿಕೆ ಸೇರಿದಂತೆ ಯಾವುದೇ ಕ್ಷೇತ್ರದಲ್ಲಿ ನೋಡಿದರೂ ಈಗಲೂ ಅಸಮತೋಲನ ಕಂಡು ಬರುತ್ತಿದೆ. ರಾಜ್ಯದಲ್ಲಿ 4 ಕಂದಾಯ ವಿಭಾಗಗಳಿವೆ. ಈ ಪೈಕಿ ಉತ್ತರ ಪ್ರಾಂತ್ಯಕ್ಕೆ ಸೇರುವ ಬೆಳಗಾವಿ, ಕಲಬುರಗಿ ವಿಭಾಗಗಳು ಹಿಂದುಳಿದಿವೆ. ದಕ್ಷಿಣ ಪ್ರಾಂತ್ಯದ ಬೆಂಗಳೂರು, ಮೈಸೂರು ವಿಭಾಗಗಳು ಎಂದಿನಂತೆ ಮುಂದಿವೆ.
4. ₹42 ಕೋಟಿ ಹೂಡಿಕೆಯೊಂದಿಗೆ ಹುಬ್ಬಳ್ಳಿಯಲ್ಲಿ ಐಟಿ ಪಾರ್ಕ್ ನಿರ್ಮಿಸಲಾಗಿದೆ. ಶಿವಮೊಗ್ಗದಲ್ಲಿ ಐಟಿ ಪಾರ್ಕ್ ಮತ್ತು ಎಸ್‌ಇಝೆಡ್ ನಿರ್ಮಾಣಕ್ಕಾಗಿ 33 ಎಕರೆ ಭೂಮಿ ಸ್ವಾಧೀನ ಪಡಿಸಿಕೊಳ್ಳಲಾಗಿದೆ. ಕಲಬುರ್ಗಿಯಲ್ಲಿ 1.7 ಎಕರೆ ಪ್ರದೇಶದಲ್ಲಿ ಐಟಿ ಪಾರ್ಕ್ ನಿರ್ಮಾಣಕ್ಕೆ ಸಿದ್ದತೆ ನಡೆದಿದೆ. ಇಷ್ಟೆಲ್ಲಾ ಪ್ರಯತ್ನಗಳು ನಡೆಯುತ್ತಿದ್ದರೂ ಐಟಿ ರಫ್ತು ಕ್ಷೇತ್ರದಲ್ಲಿ ಬೆಂಗಳೂರಿನ ಪಾತ್ರವೇ ದೊಡ್ಡದು. 2 ಮತ್ತು 3ನೇ ಹಂತದ ನಗರಗಳಿಂದ ಕೇವಲ ಶೇ 2ರಷ್ಟು ಮಾತ್ರ ಐಟಿ(ಮಾಹಿತಿ ತಂತ್ರಜ್ಞಾನ ಸೇವೆ) ರಫ್ತಾಗುತ್ತಿದೆ

ಮೇಲಿನ ಹೇಳಿಕೆಗಳಲ್ಲಿ ಯಾವೆಲ್ಲಾ ಹೇಳಿಕೆಗಳು ತಪ್ಪಾಗಿವೆ?

ಎ. ಹೇಳಿಕೆ 1, 2 ಮತ್ತು 3 ಮಾತ್ರ ತಪ್ಪಾಗಿವೆ.

ಬಿ. ಹೇಳಿಕೆ 2, 3 ಮತ್ತು 4 ಮಾತ್ರ ತಪ್ಪಾಗಿವೆ

ಸಿ. ಹೇಳಿಕೆ 1 ರಿಂದ 4ರತನಕ ಎಲ್ಲವೂ ತಪ್ಪಾಗಿವೆ

ಡಿ. ಮೇಲಿನ ಯಾವ ಹೇಳಿಕೆಯೂ ತಪ್ಪಾಗಿಲ್ಲ.

ಉತ್ತರ: ಡಿ

10. ಕೆಳಗಿನ ಹೇಳಿಕೆಗಳನ್ನು ಗಮನಿಸಿ

1. ಕರ್ನಾಟಕ, ದೇಶದಲ್ಲೇ 4ನೇ ದೊಡ್ಡ ಆಟೋಮೊಬೈಲ್ ತಯಾರಿಕಾ ರಾಜ್ಯವಾಗಿದೆ. ಅಷ್ಟೇ ಅಲ್ಲ, ರಾಜ್ಯದಲ್ಲಿ ಅತಿದೊಡ್ಡ ಆಟೋಮೊಬೈಲ್ ಮಾರುಕಟ್ಟೆಯೂ ಇದೆ. ನಮ್ಮ ರಾಜ್ಯದಲ್ಲಿ 14 ಮಿಲಿಯನ್ ನೋಂದಾಯಿತ ವಾಹನಗಳಿವೆ.
2. ದೇಶದಲ್ಲಿ ಶೇ 60ರಷ್ಟು ಮಿಷಿನ್ ಟೂಲ್ಸ್‌ಗಳನ್ನು ಕರ್ನಾಟಕ ಉತ್ಪಾದಿಸುತ್ತಿದೆ.
3. ಭಾರತದಲ್ಲಿ ಬೆಂಗಳೂರು ಅತಿದೊಡ್ಡ `ಬಯೋಟೆಕ್ ಹಬ್' ಆಗಿದೆ. ಬಿಟಿ ಕ್ಷೇತ್ರದಲ್ಲಿ ದೇಶದ ಒಟ್ಟು ರಫ್ತಿನಲ್ಲಿ ಕರ್ನಾಟಕದ ಪಾಲು 1/3 ಆಗಿದೆ. ದೇಶದ ಶೇ 50ರಷ್ಟು ಬಯೋಟೆಕ್ ಕಂಪನಿಗಳು ನಮ್ಮ ರಾಜದಲ್ಲಿಯೇ ಕಾರ್ಯ ನಿರ್ವಹಿಸುತ್ತಿವೆ.
4. ಕರ್ನಾಟಕದ ವಿವಿಧ ಪ್ರವಾಸಿ ತಾಣಗಳಿಗೆ ಭೇಟಿ ನೀಡುವವರ ಸಂಖ್ಯೆ 2006 ರಲ್ಲಿ 36 ಮಿಲಿಯನ್‌ನಷ್ಟಿತ್ತು. ಅದೂ 2019ರಲ್ಲಿ 229.9 ಮಿಲಿಯನ್‌ಗೆ ಏರಿಕೆಯಾಗಿದೆ. 2019ರಲ್ಲಿ 6.08 ಲಕ್ಷ ವಿದೇಶಿ ಪ್ರವಾಸಿಗರು ನಮ್ಮ ರಾಜ್ಯಕ್ಕೆ ಭೇಟಿ ಕೊಟ್ಟಿದ್ದರು.

ಮೇಲಿನ ಹೇಳಿಕೆಗಳಲ್ಲಿ ಯಾವೆಲ್ಲಾ ಹೇಳಿಕೆಗಳು ಸರಿಯಾಗಿವೆ?

ಎ. ಹೇಳಿಕೆ 1, 3 ಮತ್ತು 4 ಮಾತ್ರ ಸರಿಯಾಗಿದೆ

ಬಿ. ಹೇಳಿಕೆ 1 ರಿಂದ 4ರತನಕ ಎಲ್ಲವೂ ಸರಿಯಾಗಿದೆ

ಸಿ. ಹೇಳಿಕೆ 1 ರಿಂದ 3ರ ತನಕ ಮಾತ್ರ ಸರಿಯಾಗಿದೆ

ಡಿ. ಮೇಲಿನ ಯಾವ ಹೇಳಿಕೆಯೂ ಸರಿಯಾಗಿಲ್ಲ.

ಉತ್ತರ: ಬಿ

11. ಕರ್ನಾಟಕದ ಆರ್ಥಿಕತೆಗೆ ಸಂಬಂಧಿಸಿದ ಕೆಳಗಿನ ಪ್ಯಾರಾ ಓದಿ

ಬಡತನ ನಿವಾರಣೆಯಲ್ಲಿ ದೇಶದಲ್ಲೇ ಕರ್ನಾಟಕ ರಾಜ್ಯ ಹಿಂದುಳಿದಿದೆ. ತಮಿಳುನಾಡು ಮೊದಲ ಸ್ಥಾನದಲ್ಲಿದ್ದರೆ, ನಮ್ಮ ರಾಜ್ಯಕ್ಕಿಂತ ಪುಟ್ಟ ರಾಜ್ಯವಾಗಿರುವ ಗೋವಾ ದ್ವಿತೀಯ ಸ್ಥಾನದಲ್ಲಿದೆ. ನಮ್ಮ ರಾಜ್ಯ 11ನೇ ಸ್ಥಾನದಲ್ಲಿದೆ. ಗುಣಮಟ್ಟದ ಶಿಕ್ಷಣ ನೀಡುವಲ್ಲಿ ಕೇರಳ ಮೊದಲ ಸ್ಥಾನದಲ್ಲಿದ್ದರೆ ದ್ವಿತೀಯ ಸ್ಥಾನದಲ್ಲಿ ಹಿಮಾಚಲ ಪ್ರದೇಶ ಹಾಗೂ ತೃತೀಯ ಸ್ಥಾನದಲ್ಲಿ ಗೋವಾ ರಾಜ್ಯವಿದೆ. ಕರ್ನಾಟಕ 6ನೇ ಸ್ಥಾನ ದಲ್ಲಿದೆ. ಆರೋಗ್ಯ ಕ್ಷೇತ್ರದಲ್ಲಿ ಇಷ್ಟೆಲ್ಲಾ ತಾಂತ್ರಿಕತೆಯನ್ನು ಹೊಂದಿದ ಕರ್ನಾಟಕ ರಾಜ್ಯ, 6ನೇ ಸ್ಥಾನದಲ್ಲಿದೆ. ಗುಜರಾತ್ ಮೊದಲ ಸ್ಥಾನ ಹಾಗೂ ಮಹಾರಾಷ್ಟ ದ್ವಿತೀಯ ಸ್ಥಾನ ಮತ್ತು ನಮ್ಮ ಪಕ್ಕದ ತಮಿಳುನಾಡು 3ನೇ ಸ್ಥಾನದಲ್ಲಿದೆ.

ಮೇಲೆ ವಿವರಿಸಿದ ಅಂಶವು ಯಾವುದರಲ್ಲಿ ಕಾಣಬಹುದು?

ಎ. ಕರ್ನಾಟಕ ಸರ್ಕಾರ ಪ್ರಕಟಿಸಿದ 'ಇನೊವೇಶನ್ ವಿಷನ್-2030' ಡಾಕ್ಯುಮೆಂಟ್

ಬಿ. ನೀತಿ ಆಯೋಗ ಇತ್ತೀಚಿಗೆ ಬಿಡುಗಡೆ ಮಾಡಿದ ಸುಸ್ಥಿರ ಅಭಿವೃದ್ಧಿ ಸೂಚ್ಯಂಕ

ಸಿ. ಕರ್ನಾಟಕ ಬಯೋ ಎಕಾನಾಮಿ ರಿಪೋರ್ಟ್ 2020

ಡಿ. ಮೇಲಿನ ಯಾವುದರಲ್ಲಿಯೂ ಅಲ್ಲ

ಉತ್ತರ: ಬಿ

12. ಬೆಂಗಳೂರು ವಿಭಾಗದಲ್ಲಿ ತಲಾವರ ಮಾನ ₹3,01,748 ಇದ್ದರೆ ಕಲಬುರ್ಗಿ ವಿಭಾಗದಲ್ಲಿ ಎಷ್ಟಿದೆ?

ಎ. ₹2,15,136 ಬಿ. ₹1,14,133

ಸಿ. ₹1,19,233 ಡಿ. ₹2,14,645

ಉತ್ತರ: ಬಿ

ಮಾಹಿತಿ: Spardha Bharati UPSC ಯೂಟ್ಯೂಬ್ ಚಾನೆಲ್

ಪ್ರಜಾವಾಣಿ ಉದ್ಯೋಗ ವಾರ್ತೆ

ಹೆದ್ದಾರಿ ಅಭಿವೃದ್ಧಿ ಪ್ರಾಧಿಕಾರದಲ್ಲಿ ಹುದ್ದೆಗಳು

ರಾಷ್ಟ್ರೀಯ ಹೆದ್ದಾರಿ ಅಭಿವೃದ್ಧಿ ಪ್ರಾಧಿಕಾರ ಡೆಪ್ಯೂಟಿ ಮ್ಯಾನೇಜರ್ ಹುದ್ದೆಯ ಭರ್ತಿಗೆ ಅರ್ಜಿ ಆಹ್ವಾನಿಸಿದೆ. ಆಸಕ್ತರು ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಬಹುದು.

ಹುದ್ದೆ: ಡೆಪ್ಯೂಟಿ ಮ್ಯಾನೇಜರ್

ಹುದ್ದೆಗಳ ಸಂಖ್ಯೆ: 90

ಸ್ಥಳ: ದೇಶದೆಲ್ಲೆಡೆ

ವಿದ್ಯಾರ್ಹತೆ: ಡೆಪ್ಯೂಟಿ ಮ್ಯಾನೇಜರ್ (ತಾಂತ್ರಿಕ) ಹುದ್ದೆಗೆ ಸಿವಿಲ್ ಎಂಜಿನಿಯರಿಂಗ್ ಪದವಿ ಮುಗಿಸಿರಬೇಕು. ಡೆಪ್ಯೂಟಿ ಮ್ಯಾನೇಜರ್ (ಎಫ್ ಅಂಡ್ ಎ) ಹುದ್ದೆಗೆ ವಾಣಿಜ್ಯ ಶಾಸ್ತ್ರದಲ್ಲಿ ಪದವಿ ಅಥವಾ ಸಿಎ, ಎಂಬಿಎ ಮುಗಿಸಿರಬೇಕು.

ವಯೋಮಿತಿ; ಕನಿಷ್ಠ 18 ವರ್ಷ ಹಾಗೂ ಗರಿಷ್ಠ 45 ವರ್ಷ. ಒಬಿಸಿ ಅಭ್ಯರ್ಥಿಗಳಿಗೆ 3 ವರ್ಷ, ಎಸ್‌ಸಿ ಹಾಗೂ ಎಸ್‌ಟಿ ಅಭ್ಯರ್ಥಿಗಳಿಗೆ 5 ವರ್ಷ, ಅಂಗವಿಕಲ ಅಭ್ಯರ್ಥಿಗಳಿಗೆ 10 ವರ್ಷ ವಯೋಮಿತಿ ಸಡಿಲಿಕೆ ಇರುತ್ತದೆ.

ಅರ್ಜಿ ಶುಲ್ಕ: ಸಾಮಾನ್ಯ ಹಾಗೂ ಒಬಿಸಿ ಅಭ್ಯರ್ಥಿಗಳಿಗೆ ₹ 500. ಎಸ್‌ಸಿ, ಎಸ್‌ಟಿ ಅಭ್ಯರ್ಥಿಗಳಿಗೆ ಯಾವುದೇ ಅರ್ಜಿ ಶುಲ್ಕವಿಲ್ಲ.

ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: ನವೆಂಬರ್ 30, 2021

ಹೆಚ್ಚಿನ ಮಾಹಿತಿಗೆ: nhai.gov.in

3 ತಿಂಗಳ ಕ್ರ್ಯಾಶ್ ಕೋರ್ಸ್

ಪೂರ್ಣಗೊಂಡ ತಕ್ಷಣ ಉದ್ಯೋಗ

"ಒಂದು ಉನ್ನತ ಕಂಪೆನಿಯಲ್ಲಿ ಹೆಮ್ಮೆಯ ಉದ್ಯೋಗ ಎಂಬುದು ಪ್ರತಿಯೊಬ್ಬ ವಿದ್ಯಾರ್ಥಿಯ ಕನಸು. ಇಂತಹ ಕನಸ್ಸನ್ನು ನನಸಾಗಿಸಲು ನಿಮ್ಮ ಮುಂದಿದೆ ಈ ಸುವರ್ಣಾವಕಾಶ."

ಸುರಕ್ಷತಾ ಕ್ಷೇತ್ರದ ಶಿಕ್ಷಣದಲ್ಲಿ ನಿರಂತರ ಅಧ್ಯಯನ, ಸಂಶೋಧನೆ ನಡೆಸಿ ಹೊಸ ರೂಪುರೇಷೆ ನೀಡಿದ ಮಂಗಳೂರಿನ ಮಂಗಳೂರು ಇನ್‌ಸ್ಟಿಟ್ಯೂಟ್ ಆಫ್ ಫೈರ್ ಆ್ಯಂಡ್ ಸೇಫ್ಟಿ ಇಂಜಿನಿಯರಿಂಗ್ (ಎಂಐಎಫ್ ಎಸ್ಸಿ) ಮುಂದಿನ ಶನಿವಾರ ಮತ್ತು ಭಾನುವಾರ (ನ.27, 28) ಎರಡು ದಿನಗಳ ವಿಶೇಷ ವರ್ಕ್‌ಶಾಪ್ ಅನ್ನು ರಾಜ್ಯಾದ್ಯಂತ ಇರುವ ಎಲ್ಲಾ ಶಾಖೆಗಳಲ್ಲಿ ಆಯೋಜಿಸಿದೆ. ವರ್ಕ್‌ಶಾಪ್‌ನಲ್ಲಿ ಭಾಗವಹಿಸುವ ಎಲ್ಲಾ ವಿದ್ಯಾರ್ಥಿಗಳಿಗೆ ವಿಶೇಷ ಪ್ರಮಾಣ ಪತ್ರವನ್ನು ನೀಡಲಾಗುವುದು.

ಫೈರ್ ಮತ್ತು ಸುರಕ್ಷತಾ ಕ್ಷೇತ್ರದಲ್ಲಿರುವ ಉದ್ಯೋಗ ಅವಕಾಶ, ಕೋವಿಡ್ 19ರ ನಂತರ ಹೆಚ್ಚಾದ ಬೇಡಿಕೆ, ಸುರಕ್ಷತಾ ಕ್ರಮದ ಅವಶ್ಯಕತೆ ಮತ್ತು ಜಾಗೃತಿ, ಸುರಕ್ಷತಾ ಕ್ಷೇತ್ರದಲ್ಲಾಗುತ್ತಿರುವ ಬದಲಾವಣೆ ಹೀಗೆ ಹತ್ತು ಹಲವು ವಿಚಾರಗಳನ್ನು ಕೇಂದ್ರೀಕರಿಸಿ ಯುವ ಸಮುದಾಯಕ್ಕೆ ಮಾಹಿತಿ ನೀಡುವ ಉದ್ದೇಶದಿಂದ ವಿಶೇಷ ವರ್ಕ್‌ಶಾಪ್ ಆಯೋಜಿಸಲಾಗಿದೆ. ಎಸ್‌ಎಸ್‌ಎಲ್‌ಸಿ, ಪಿಯುಸಿ, ಐಟಿಐ ಹಾಗೂ ಡಿಪ್ಲೊಮಾ ಶಿಕ್ಷಣ ಮುಗಿಸಿದವರು ಈ ವರ್ಕ್‌ಶಾಪ್‌ನಲ್ಲಿ ಭಾಗವಹಿಸಬಹುದಾಗಿದೆ.

ಬೆಂಗಳೂರುನಲ್ಲಿ

27 & 28 ನವೆಂಬರ್ 2021 @ 10.30 a.m.

ವಿಶೇಷ ಸೆಮಿನಾರ್

VENUE

BENGALURU Swetha mansion, Malleshwaram Circle, Sampige Road

ಈ ಸೆಮಿನಾರ್‌ನ ಪ್ರಯೋಜನಗಳು:

- ಫೈರ್ ಆ್ಯಂಡ್ ಸೇಫ್ಟಿ ಕ್ಷೇತ್ರದ ಕೋರ್ಸುಗಳು ಎಂದರೆ ಏನು?
- ಈ ಕೋರ್ಸು ಕಲಿತ ತಕ್ಷಣ ಉದ್ಯೋಗ ಪಡೆಯಬಹುದು ಇದು ಹೇಗೆ ಸಾಧ್ಯ?
- ಈ ಒಂದು ವರ್ಷದ ಕೋರ್ಸಿನಲ್ಲಿ ಕಲಿಯುವ ವಿಷಯಗಳು ಯಾವುವು?
- ಈ ಕೋರ್ಸು ಕಲಿತಲ್ಲಿ ಯಾವೆಲ್ಲ ಕಂಪೆನಿಗಳಲ್ಲಿ ಉದ್ಯೋಗ ಪಡೆಯಬಹುದು?
- ಫೈರ್ ಆ್ಯಂಡ್ ಸೇಫ್ಟಿ ಕ್ಷೇತ್ರದಲ್ಲಿನ ವಿವಿಧ ಹುದ್ದೆಗಳು ಮತ್ತು ಮಾಸಿಕ ವೇತನ ಎಷ್ಟು ಲಭಿಸಬಹುದು?
- ಕಲಿತ ತಕ್ಷಣ ವಿದೇಶಗಳಲ್ಲಿ ಉದ್ಯೋಗ ಪಡೆಯುವ ಅವಕಾಶಗಳು ಎಷ್ಟು?
- ವಿದೇಶಗಳಲ್ಲಿ ಈ ಕೋರ್ಸು ಕಲಿತ ಅಭ್ಯರ್ಥಿಗಳಿಗಿರುವ ಆರಂಭಿಕ ವೇತನ?
- ಪ್ರಸ್ತುತ ದೇಶ–ವಿದೇಶಗಳಲ್ಲಿ ಅದೆಷ್ಟು ಉದ್ಯೋಗ ಲಭ್ಯವಿದೆ?

ಮುಂಚಿತವಾಗಿ ರಿಜಿಸ್ಟ್ರೇಷನ್ ಪಡೆದ ನಿರ್ದಿಷ್ಟ ಸಂಖ್ಯೆಯ ವಿದ್ಯಾರ್ಥಿಗಳಿಗೆ ಅವಕಾಶ ನೀಡಲಾಗುವುದು.

ಮೇಲಿನ ಎಲ್ಲಾ ಪ್ರಶ್ನೆಗಳಿಗೆ ಈ ಸೆಮಿನಾರ್‌ನಲ್ಲಿ ಭಾಗವಹಿಸಿ ಉತ್ತರ ಪಡೆಯಿರಿ. ಆಸಕ್ತ ವಿದ್ಯಾರ್ಥಿಗಳು ಕೋರ್ಸುಗಳ ಬಗ್ಗೆ ನಿಖರ ಮಾಹಿತಿ ಪಡೆದ ಬಳಿಕ ಅಂದೇ Spot Admission ಪಡೆಯುವ ಅವಕಾಶವನ್ನು ಏರ್ಪಡಿಸಿದೆ. Spot Admission ಪಡೆಯುವ ವಿದ್ಯಾರ್ಥಿಗಳಿಗೆ ಫೀಸ್‌ನಲ್ಲಿ ₹ 10,000/- ರಿಯಾಯಿತಿ ಮತ್ತು Free Admission Kit ಅಂದೇ ನೀಡಲಾಗುವುದು ಮತ್ತು Participation Certificate ಲಭಿಸಲಿದೆ.

FEES DISCOUNT ₹ 10,000/-

FREE ADMISSION KIT

PARTICIPATION CERTIFICATE

ಏನಿದು ಕ್ರ್ಯಾಶ್ ಕೋರ್ಸ್

ರಾಜ್ಯದಲ್ಲೇ ಪ್ರಪ್ರಥಮವಾಗಿ ಫೈರ್ ಆ್ಯಂಡ್ ಸೇಫ್ಟಿ ಕ್ಷೇತ್ರದ ಕೋರ್ಸ್‌ಗಳನ್ನು ಆರಂಭಿಸಿದ ವಿದ್ಯಾ ಸಂಸ್ಥೆ ಎಂಐಎಫ್‌ಎಸ್‌ಸಿ ವಿದ್ಯಾರ್ಥಿಗಳಿಗೆ ಉದ್ಯೋಗ ಆಧಾರಿತ ಮೂರು ತಿಂಗಳ ಕ್ರಾಶ್ ಕೋರ್ಸ್ ಆರಂಭಿಸಿದೆ. ಒಂದು ವರ್ಷದ ಡಿಪ್ಲೋಮಾ ಮತ್ತು ಪಿಜಿ ಡಿಪ್ಲೋಮಾ ಕೋರ್ಸ್‌ಗಳ ಪಠ್ಯವನ್ನು ಮೂರು ತಿಂಗಳಿನಲ್ಲಿ ವಿದ್ಯಾರ್ಥಿಗಳಿಗೆ ನೀಡಲಾಗುತ್ತದೆ. ಹೆಚ್ಚುವರಿ ತರಗತಿ, ವಿಶೇಷ ಕ್ಲಾಸ್, ಹೆಚ್ಚುವರಿ ತರಬೇತಿ, ಪ್ರೋಜೆಕ್ಟ್ ವರ್ಕ್, ಇಂಡಸ್ಟ್ರೀಯಲ್ ವಿಸಿಟ್ ಮುಂತಾದ ಪ್ರಾಯೋಗಿಕ ತರಬೇತಿಯನ್ನು ನೀಡಲಾಗುವುದು. ಮೂರು ತಿಂಗಳ ಕೋರ್ಸ್ ಬಳಿಕ ಇಂಟರ್ನ್‌ಶಿಪ್ ಕೂಡಾ ನೀಡಲಾಗುತ್ತದೆ. ವಿದ್ಯಾರ್ಥಿಗಳಿಗೆ ಪ್ರತ್ಯೇಕ ಮೊಕ್ ಇಂಟರ್‌ವೀವ್ ಮೂಲಕ ದೇಶ ವಿದೇಶಗಳ ಉದ್ಯೋಗ ಅವಕಾಶ ಪಡೆಯಲು ತಯಾರಿಗೊಳಿಸಲಾಗುತ್ತದೆ.



ರಿಜಿಸ್ಟ್ರೇಷನ್ ಪಡೆಯಲು ಕೂಡಲೇ ಸಂಪರ್ಕಿಸಿ.

Mifse® AN ISO 9001:2015 CERTIFIED INSTITUTION EMPLOYABILITY. ASSURED

Recognised by NSDC, Govt. of India Affiliated to Mangalore University, Bangalore City University, University of Mysore

BENGALURU Malleshwaram

Ph: 72040 56933, 70226 17933

www.mifse.com

12 BRANCHES across INDIA

design@tarjani.com

❦ ಸುಭಾಷಿತ ❦

ಒತ್ತಿ ಒತ್ತಿ ನಂಬಿಕೆ ಪ್ರತಿಪಾದಿಸುವುದು ಭಯದ ಸಂಕೇತ.
– ಜಿಡ್ಡು ಕೃಷ್ಣಮೂರ್ತಿ

ಕೆಎಸ್‌ಪಿಸಿಬಿ: ನೇಮಕಾತಿಯಲ್ಲಿನ 'ಮಾಲಿನ್ಯ' ಮೊದಲು ನಿಯಂತ್ರಿಸಿ

ಪರಿಸರ ಮಾಲಿನ್ಯಕ್ಕೆ ಕಾರಣವಾದ ಆರೋಪ ಹೊತ್ತಿರುವ ಕೆಲವು ಕಂಪನಿಗಳಿಗೆ ಸಲಹೆಗಾರರಾಗಿದ್ದ ಡಾ. ಶಾಂತ್ ಅವ್ವೇರಹಳ್ಳಿ ತಿಮ್ಮಯ್ಯ ಅವರನ್ನು ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯ (ಕೆಎಸ್‌ಪಿಸಿಬಿ) ಅಧ್ಯಕ್ಷರನ್ನಾಗಿ ನೇಮಕ ಮಾಡಿರುವ ರಾಜ್ಯ ಸರ್ಕಾರದ ಕ್ರಮ ಆಶ್ಚರ್ಯಕರ. ಸರ್ಕಾರದ ಉದ್ದೇಶದ ಕುರಿತೇ ಸಂಶಯವನ್ನು ಮೂಡಿಸುವಂತಹ ನಡೆ ಇದು. ಮಾಲಿನ್ಯಕಾರಕ ಉದ್ಯಮಗಳೊಂದಿಗೆ ಸಂಬಂಧ ಹೊಂದಿದ್ದ ವ್ಯಕ್ತಿಯನ್ನು ಕೆಎಸ್‌ಪಿಸಿಬಿ ಮುಖ್ಯಸ್ಥರ ಸ್ಥಾನದಲ್ಲಿ ಕೂರಿಸುವ ಮೂಲಕ ಪರಿಸರ ಸಂರಕ್ಷಣೆಯ ವಿಷಯದಲ್ಲಿ ತಮಗೆ ಒಂದಿನಿತೂ ಆಸಕ್ತಿಯಿಲ್ಲ ಎಂಬ ಸಂದೇಶವನ್ನೂ ಆಡಳಿತದ ಹೊಣೆ ಹೊತ್ತವರು ರವಾನಿಸಿದಂತಿದೆ. ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸರ್ಕಾರದಲ್ಲೂ ಹಿತಾಸಕ್ತಿ ಸಂಘರ್ಷದ ಅಪಾಯವನ್ನು ಅಲಕ್ಷಿಸಿ, ಕೈಗಾರಿಕೆ ಮತ್ತು ಪರಿಸರ ಖಾತೆ ಎರಡಕ್ಕೂ ಒಬ್ಬರೇ ಸಚಿವರನ್ನು ನೇಮಕ ಮಾಡಲಾಗಿತ್ತು. ಅದು ಸಾಲದು ಎನ್ನುವಂತೆ ಸರ್ಕಾರದ ಕ್ರಮವನ್ನು ಸಮರ್ಥಿಸಿಕೊಳ್ಳಲು ವಾರ್ತಾ ಮತ್ತು ಪ್ರಸಾರ ಖಾತೆಯನ್ನೂ ಅದೇ ವ್ಯಕ್ತಿಗೆ ವಹಿಸಿಕೊಡಲಾಗಿತ್ತು. ಬಸವರಾಜ ಬೊಮ್ಮಾಯಿ ನೇತೃತ್ವದ ರಾಜ್ಯ ಸರ್ಕಾರವೂ ಹಿತಾಸಕ್ತಿ ಸಂಘರ್ಷದ ವಿಷಯದಲ್ಲಿ ಕೇಂದ್ರದ ದಾರಿಯನ್ನೇ ಅನುಸರಿಸಿದೆ. ಡಾ. ಶಾಂತ್ ಅವರೇ ಸಲಹೆಗಾರರಾಗಿದ್ದ ಬೆಂಗಳೂರಿನ ಅಪಾರ್ಟ್‌ಮೆಂಟ್ ಯೋಜನೆಯೊಂದಕ್ಕೆ ಪರಿಸರ ಇಲಾಖೆಯು ನೀಡಿದ್ದ ನಿರಾಕ್ಷೇಪಣಾ ಪತ್ರವನ್ನು ರಾಷ್ಟ್ರೀಯ ಹಸಿರು ನ್ಯಾಯಮಂಡಳಿ ಇತ್ತೀಚೆಗೆ ರದ್ದು ಮಾಡಿದೆ. ಕೈಕೊಂಡ್ರಹಳ್ಳಿ ಮತ್ತು ಕಸವನಹಳ್ಳಿ ಕೆರೆಗಳಿಗೆ ಹಾನಿಯುಂಟುಮಾಡಿದ ಆರೋಪದ ಮೇಲೆ ಈ ಕ್ರಮ ಕೈಗೊಳ್ಳಲಾಗಿದೆ. ಹಿತಾಸಕ್ತಿ ಸಂಘರ್ಷದ ಹಿನ್ನೆಲೆಯಲ್ಲಿ ಅಧ್ಯಕ್ಷ ಹುದ್ದೆಗೆ ಅವರ ಹೆಸರನ್ನು ಪರಿಗಣಿಸದಿರಲು ಇದಕ್ಕಿಂತ ಬೇರೆ ಯಾವ ಕಾರಣ ಬೇಕಿತ್ತು? ಅದಾನಿ, ಗೋದ್ರೇಜ್, ವೇದಾಂತ ಸೇರಿದಂತೆ ಹಲವು ಬೃಹತ್ ಕಂಪನಿಗಳ ಸಲಹೆಗಾರರಾಗಿ, ಕೇಂದ್ರ ಪರಿಸರ ಇಲಾಖೆಯಿಂದ ನಿರಾಕ್ಷೇಪಣಾ ಪತ್ರವನ್ನು ತರಲು ನೆರವಾಗಿರುವುದು ಕೆಎಸ್‌ಪಿಸಿಬಿ ಮುಖ್ಯಸ್ಥರ ಹುದ್ದೆಗೇರಲು ಖಂಡಿತವಾಗಿಯೂ ಅರ್ಹತೆಯನ್ನು ತಂದುಕೊಡಲಾರದು.

ಪರಿಸರ ಸಂರಕ್ಷಣೆಯಂತಹ ಮಹತ್ವದ ಹೊಣೆಗಾರಿಕೆಯಿರುವ ಸಂಸ್ಥೆಯ ಅಧ್ಯಕ್ಷ ಸ್ಥಾನಕ್ಕೆ ನೇಮಕ ಮಾಡುವಲ್ಲಿ ಆಡಳಿತ ವ್ಯವಸ್ಥೆ ಇಷ್ಟೊಂದು ಅಸೂಕ್ಷ್ಮವಾಗಿ ನಡೆದುಕೊಳ್ಳುವುದು ಸರಿಯಲ್ಲ

ಮಾಲಿನ್ಯ ನಿಯಂತ್ರಣ ಮಂಡಳಿಗಳು ಸ್ವಾಯತ್ತ ಸಂಸ್ಥೆಗಳಾಗಿದ್ದು, ಅವು ರಾಜಕಾರಣಿಗಳ ಅಧೀನಕ್ಕೆ ಒಳಪಡುವಂತಿಲ್ಲ ಎಂದು ಸುಪ್ರೀಂ ಕೋರ್ಟ್ ಬಹಳ ಹಿಂದೆಯೇ ತುಂಬಾ ಸ್ಪಷ್ಟವಾಗಿ ಹೇಳಿದೆ. ಕೆಎಸ್‌ಪಿಸಿಬಿಯ ಅಧ್ಯಕ್ಷರಾಗುವವರು ಪರಿಸರ ಸಂರಕ್ಷಣೆ ಕಾರ್ಯದಲ್ಲಿ ಅನುಭವ ಹೊಂದಿದವರಾಗಿರಬೇಕು ಇಲ್ಲವೆ ಪರಿಸರಕ್ಕೆ ಸಂಬಂಧಿಸಿದ ವಿಷಯಗಳನ್ನು ನಿರ್ವಹಿಸಿದ ಅನುಭವವುಳ್ಳ ಸರ್ಕಾರಿ ಅಧಿಕಾರಿಯಾಗಿರಬೇಕು ಎಂದು ರಾಜ್ಯ ಹೈಕೋರ್ಟ್ ಸಹ ಹೇಳಿದೆ. ಪರಿಸರ ಸಂರಕ್ಷಣೆ ಕಾರ್ಯದಲ್ಲಿ 15 ವರ್ಷಗಳ ಪ್ರಾಯೋಗಿಕ ಅನುಭವ ಹೊಂದಿದವರು ಮಾಲಿನ್ಯ ನಿಯಂತ್ರಣ ಮಂಡಳಿಯ ಅಧ್ಯಕ್ಷರಾಗಬಹುದು ಎಂದು ಕೇಂದ್ರ ಪರಿಸರ ಇಲಾಖೆಯ ಮಾರ್ಗಸೂಚಿ ಹೇಳುತ್ತದೆ. ಮೇಲಿನ ಯಾವುದೇ ಮಾನದಂಡದಿಂದ ನೋಡಿದರೂ ಡಾ. ಶಾಂತ್ ಅವರು ಕೆಎಸ್‌ಪಿಸಿಬಿ ಅಧ್ಯಕ್ಷ ಹುದ್ದೆಗೆ ಸೂಕ್ತ ವ್ಯಕ್ತಿಯಲ್ಲ ಎನ್ನುವುದು ಎದ್ದು ಕಾಣುವ ಅಂಶ. ವಿಪರ್ಯಾಸದ ಸಂಗತಿ ಎಂದರೆ, ಮಾಲಿನ್ಯಕಾರಕ ಕಂಪನಿಗಳ ಪರವಾಗಿ ಈ ಹಿಂದೆ ವರದಿ ಬರೆದಿದ್ದ ವ್ಯಕ್ತಿಯೇ ಈಗ ತೀರ್ಪು ನೀಡುವ ಜಾಗದಲ್ಲಿ ಕುಳಿತಿರುವುದು. 'ಖಾಸಗಿ ಕಂಪನಿಗಳಿಗಾಗಿ ಕೆಲಸ ಮಾಡಿದ ವ್ಯಕ್ತಿಯೊಬ್ಬರು ಆ ಕಂಪನಿಗಳ ಯೋಜನೆಗಳನ್ನು ನಿಷ್ಪಕ್ಷಪಾತವಾಗಿ ಪರಿಶೀಲಿಸುತ್ತಾರೆ ಎಂದು ಹೇಳುವುದು ಕಷ್ಟ. ರಾಷ್ಟ್ರೀಯ ಹಸಿರು ನ್ಯಾಯಮಂಡಳಿಯಿಂದ ಕೋಟ್ಯಂತರ ರೂಪಾಯಿ ದಂಡ ಹಾಕಿಸಿಕೊಂಡ ಮಾಲಿನ್ಯಕಾರಕ ಉದ್ಯಮಗಳೊಂದಿಗೇ ಸಂಬಂಧ ಹೊಂದಿದ್ದ ವ್ಯಕ್ತಿ ರಾಜ್ಯದ ಪರಿಸರದ ಹಿತಾಸಕ್ತಿಗೆ ಪೂರಕವಾಗಿ ನಡೆದುಕೊಳ್ಳಲಿದ್ದಾರೆ ಎಂಬುದನ್ನು ಹೇಗೆ ತಾನೆ ನಂಬುವುದು' ಎನ್ನುವ ಪರಿಸರವಾದಿಗಳ ಪ್ರಶ್ನೆ ಸಮಂಜಸವೇ ಆಗಿದೆ.

ಕೆಎಸ್‌ಪಿಸಿಬಿ ಅಧ್ಯಕ್ಷ ಹುದ್ದೆಗೆ ಮಾಡಲಾಗಿರುವ ಇತ್ತೀಚಿನ ಬಹುತೇಕ ನೇಮಕಗಳು ವಿವಾದದ ರಾಡಿ ಎಬ್ಬಿಸಿವೆ. ಕೆಲವೊಮ್ಮೆ ರಾಜಕಾರಣಿಗಳು, ಇನ್ನು ಕೆಲವೊಮ್ಮೆ ಬಿಲ್ಡರ್‌ಗಳು ಆ ಹುದ್ದೆಗೆ ಏರಿದ್ದಾರೆ. ಅದರಲ್ಲೂ ಅಧ್ಯಕ್ಷರಾಗಿದ್ದ ಒಬ್ಬರು ತಾವು ಆಗಿನ ಮುಖ್ಯಮಂತ್ರಿಯವರ ಸಂಬಂಧಿಕರಿಗೆ ₹ 16 ಕೋಟಿ ಲಂಚ ಕೊಡಲಾಗದ ಕಾರಣಕ್ಕೆ ತಮ್ಮ ಸಹಿಯನ್ನು ಫೋರ್ಜರಿ ಮಾಡಿ ರಾಜೀನಾಮೆ ಪತ್ರ ಸೃಷ್ಟಿಸಲಾಗಿದೆ ಎಂದು ಆರೋಪಿಸಿದ್ದರು. ಪರಿಸರ ಸಂರಕ್ಷಣೆಯಂತಹ ವಿಷಯದಲ್ಲಿ, ಮಹತ್ವದ ಹುದ್ದೆಗೆ ನೇಮಕ ಮಾಡುವಲ್ಲಿ ಆಡಳಿತ ವ್ಯವಸ್ಥೆ ಇಷ್ಟೊಂದು ಅಸೂಕ್ಷ್ಮವಾಗಿ ನಡೆದುಕೊಳ್ಳುವುದು ಸರ್ವಥಾ ಸರಿಯಲ್ಲ. ಸನ್ನಿವೇಶದ ಗಾಂಭೀರ್ಯ ಅರಿತು, ಪರಿಸರವಾದಿಗಳ ಆತಂಕವನ್ನು ಅರ್ಥಮಾಡಿಕೊಂಡು ಸದರಿ ನೇಮಕವನ್ನು ರಾಜ್ಯ ಸರ್ಕಾರ ರದ್ದುಗೊಳಿಸಬೇಕು. ಕೋರ್ಟ್‌ಗಳ ಮಾರ್ಗದರ್ಶನ ಹಾಗೂ ಪರಿಸರ ಇಲಾಖೆಯ ಮಾರ್ಗಸೂಚಿ ಅನ್ವಯ ಅರ್ಹ ವ್ಯಕ್ತಿಯನ್ನೇ ಆ ಹುದ್ದೆಗೆ ನೇಮಕ ಮಾಡಬೇಕು.

ದಿನದ ಟ್ವೀಟ್

ಮಹಿಳಾ ಸಬಲೀಕರಣದತ್ತ ಹೆಜ್ಜೆ

ಸ್ವೀಡನ್, 33 ಪುರುಷರ ಬಳಿಕ ಇದೀಗ ಮಹಿಳೆಯೊಬ್ಬರನ್ನು ತನ್ನ ಪ್ರಧಾನ ಮಂತ್ರಿಯನ್ನಾಗಿ ಪಡೆಯುವಲ್ಲಿ ಯಶಸ್ವಿಯಾಗಿದೆ. ಮೊದಲ ಮಹಿಳಾ ಪ್ರಧಾನಿಯನ್ನು ಹೊಂದಿದ ದಿನ ಸ್ವೀಡಿಷ್ ಟೆಲಿವಿಷನ್ ಇಂದಿರಾ ಗಾಂಧಿ ಮತ್ತು ಮಾರ್ಗರೆಟ್ ಥ್ಯಾಚರ್ ಅವರನ್ನು ನೆನಪಿಸಿಕೊಂಡಿದೆ!

ಅಶೋಕ್ ಸ್ವೈನ್, ಪ್ರಾಧ್ಯಾಪಕ

ಕಿಡಿನುಡಿ

ಕೇಂದ್ರ ಸರ್ಕಾರದ ಫಸಲ್ ಬಿಮಾ ಯೋಜನೆ ಬಿಜೆಪಿ ಕೃಪಾಪೋಷಿತ ನಾಟಕ ಮಂಡಳಿಯ ಒಂದು ಪಾತ್ರವಷ್ಟೆ. ಈ ಯೋಜನೆಯಿಂದ ರಾಜ್ಯದ ಯಾವ ರೈತರಿಗೆ ವಿಮೆ ಹಣ ಸಿಕ್ಕಿದೆ? ಎರಡು ವರ್ಷಗಳಿಂದ ಬೆಳೆ ನಷ್ಟ ಅನುಭವಿಸಿದ ರಾಜ್ಯದ ರೈತರಿಗೆ ಪರಿಹಾರ ಸಿಕ್ಕಿಲ್ಲ. ಬಹುಶಃ ವಿಮೆ ಕಂಪನಿಗಳ ಜೊತೆ ಸರ್ಕಾರ ಒಳಒಪ್ಪಂದ ಮಾಡಿಕೊಂಡಂತೆ ಮೇಲ್ನೋಟಕ್ಕೆ ಕಾಣುತ್ತಿದೆ.

ಡಿ.ಕೆ.ಶಿವಕುಮಾರ್, ಕೆಪಿಸಿಸಿ ಅಧ್ಯಕ್ಷ

25 ವರ್ಷಗಳ ಹಿಂದೆ

ಸೋಮವಾರ, 25-11-1996

• **ಮತೀಯ ಶಕ್ತಿಗಳ ವಿರುದ್ಧ ಸಮರಕ್ಕೆ ರಂಗ ಸಮರ್ಥ**

ಬೆಂಗಳೂರು, ನ. 24– ಯಾವುದೇ ಪಕ್ಷದೊಂದಿಗೆ ವಿಲೀನಗೊಳ್ಳದೆ, ಮತೀಯವಾದಿ ಶಕ್ತಿಗಳ ವಿರುದ್ಧ ಹೋರಾಟ ನಡೆಸುವ ಶಕ್ತಿ ಸಂಯುಕ್ತ ರಂಗಕ್ಕಿದೆ ಎಂದು ಪ್ರಧಾನಿ ಎಚ್.ಡಿ. ದೇವೇಗೌಡ ಇಂದು ಇಲ್ಲಿ ಸ್ಪಷ್ಟಪಡಿಸಿದರು.

'ಮತೀಯವಾದಿ ಶಕ್ತಿಗಳನ್ನು ಎದುರಿಸಲು ಎಲ್ಲಾ ಜಾತ್ಯತೀತ ಶಕ್ತಿಗಳು ಒಂದಾಗಬೇಕು' ಎಂದು ಅವರು ಹೇಳಿದರು.

ಎರಡು ದಿನಗಳ ಭೇಟಿಗಾಗಿ ಇಂದು ಬೆಳಿಗ್ಗೆ ನಗರಕ್ಕೆ ಆಗಮಿಸಿದ ಅವರನ್ನು ವಿಮಾನ ನಿಲ್ದಾಣದಲ್ಲಿ ಭೇಟಿಯಾದ ಪತ್ರಕರ್ತರು 'ಜಾತ್ಯತೀತ ಶಕ್ತಿಗಳ ಹಿತದೃಷ್ಟಿಯಿಂದ ಸಂಯುಕ್ತ ರಂಗವು ಕಾಂಗ್ರೆಸ್ ಪಕ್ಷದಲ್ಲಿ ವಿಲೀನಗೊಳ್ಳುವುದೇ?' ಎಂದು ಪ್ರಶ್ನಿಸಿದಾಗ 'ಸಂಯುಕ್ತ ರಂಗವು ಇತರ ಎಲ್ಲ ಪಕ್ಷಗಳಷ್ಟೇ ಸದೃಢವಾಗಿದೆ' ಎಂದು ಸಮರ್ಥಿಸಿಕೊಂಡರು.

• **ಜನತೆಯ ಸಂತಸಕ್ಕೆ ಸ್ಲೀವಾ ಆದ್ಯತೆ**

ಬೆಂಗಳೂರು, ನ. 24– 'ನಾನು ಹೇಗೆ ಸಂತೋಷವಾಗಿದ್ದೇನೆಯೋ ಅದೇ ರೀತಿ ವಿಶ್ವದ ಜನರನ್ನು ಸಂತೋಷದಿಂದ ಇರುವಂತೆ ಮಾಡುವುದಕ್ಕೆ ನನ್ನ ಪ್ರಥಮ ಆದ್ಯತೆ. ಇದಕ್ಕಾಗಿ ಅತಿ ಶೀಘ್ರದಲ್ಲಿಯೇ ವಿಶ್ವ ಪರ್ಯಟನೆ ಆರಂಭಿಸುತ್ತೇನೆ'.

ಇದು, 46ನೇ ವಿಶ್ವಸುಂದರಿಯಾಗಿ ಆಯ್ಕೆಯಾಗಿರುವ ಗ್ರೀಸ್ ದೇಶದ ಚೆಲುವೆ ಐರಿನ್ ಸ್ಲೀವಾ ಅವರು ವ್ಯಕ್ತಪಡಿಸಿದ ಆಶಯ.

50 ವರ್ಷಗಳ ಹಿಂದೆ

ಗುರುವಾರ, 25-11-1971

• **ಮೊದಲ ಹೊಡೆತಕ್ಕೇ ಹದಿಮೂರು ಪಾಕಿಸ್ತಾನಿ ಟ್ಯಾಂಕುಗಳು ಧ್ವಂಸ**

ನವದೆಹಲಿ, ನ. 24– ಭಾರತದ ಪೂರ್ವ ಗಡಿಯಿಂದ ಐದು ಮೈಲಿ ದೂರದಲ್ಲಿ ಬೋಯ್ರಾ ಬಳಿ ನ. 21ರಂದು ಸಂಭವಿಸಿದ ಹಣಾಹಣಿ ಹೋರಾಟದಲ್ಲಿ ಭಾರತೀಯ ಸೇನಾ ಪಡೆಗಳು, ಅತಿಕ್ರಮಿಸಿ ಬಂದಿದ್ದ ಪಾಕಿಸ್ತಾನದ 13 ಟ್ಯಾಂಕುಗಳನ್ನು ಧ್ವಂಸ ಮಾಡಿದವು ಎಂದು ಇಂದು ಲೋಕಸಭೆಯಲ್ಲಿ ಪ್ರಧಾನ ಮಂತ್ರಿ ಇಂದಿರಾ ಗಾಂಧಿ ಅವರು ಪ್ರಕಟಿಸಿದರು.

• **ಸಾಧುಗಳಿಂದ ಗೂಢಚರ್ಯೆ ವಿರುದ್ಧ ಸರ್ಕಾರಕ್ಕೆ ಎಚ್ಚರಿಕೆ**

ನವದೆಹಲಿ, ನ. 24– ಯೋಗಿಗಳು ಮತ್ತು ಗುರುಗಳು ರಾಷ್ಟ್ರದಲ್ಲಿ ನಡೆಸುತ್ತಿರುವ ಗೂಢಚರ್ಯೆ ಚಟುವಟಿಕೆಗಳ ವಿರುದ್ಧ ಇಂದು ರಾಜ್ಯಸಭೆಯಲ್ಲಿ ಅನೇಕ ಸದಸ್ಯರು ಸರ್ಕಾರಕ್ಕೆ ಎಚ್ಚರಿಕೆ ನೀಡಿದರು. ಅವರಿಗೆ ಹಣದ ಸೌಲಭ್ಯ ನೀಡುತ್ತಿರುವ ಮೂಲಗಳ ಬಗ್ಗೆ ಸಮಗ್ರ ತನಿಖೆ ನಡೆಸಬೇಕೆಂದು ಇನ್ನು ಕೆಲವರು ಸಲಹೆ ಮಾಡಿದರು. ಇದಕ್ಕೆ ಒಲವು ವ್ಯಕ್ತಪಡಿಸಿದ ಗೃಹ ಶಾಖೆ ರಾಜ್ಯ ಸಚಿವ ಕೆ.ಸಿ. ಪಂತ್ ಅವರು, ಚಾಣಕ್ಯನ ಕಾಲದಿಂದಲೂ ಬೇಹುಗಾರಿಕೆಗಾಗಿ ಸಾಧುಗಳನ್ನು ಬಳಸಿಕೊಳ್ಳುತ್ತಿರುವ ಉದಾಹರಣೆ ನೀಡಿದರು.

ಸಾಧುಗಳಲ್ಲಿ ಕೆಲವರು ಒಳ್ಳೆಯವರೂ ಕೆಲವರು ಕೆಟ್ಟವರೂ ಇರುವುದರಿಂದ ಒಟ್ಟಾರೆ ಕಟುಟೀಕೆ ಸಲ್ಲದೆಂದು ಹೇಳಿದರು.

ಇಂದಿನ ಪ್ರವಾಹದ ವಿರುದ್ಧದ ಪ್ರಾಮಾಣಿಕ ಗೆಲುವುಗಳು ನಾಳಿನ ಕಲಾಕೃತಿಗಳೆಂಬ ಚೈತನ್ಯದ ಬುಗ್ಗೆಗಳಾಗುತ್ತವೆ

ಭರವಸೆ ಹುಟ್ಟಿಸಿದ ಕೆಲವು ಗೆಲುವು

ವಿಶ್ಲೇಷಣೆ

ಸಬಿತಾ ಬನ್ನಾಡಿ

ಕೆಲವು ಸಂಗತಿಗಳು ವಿಶೇಷ ಉಸಿರ್ತಾಣಗಳಂತೆ ಕೆಲಸ ಮಾಡುತ್ತವೆ. ಅಸಾಧ್ಯವೆನಿಸಿದ್ದೂ ಸಾಧ್ಯವಾದ ಕಥನಗಳು ಯಾವಾಗಲೂ ಭರವಸೆ ಕಳೆದುಕೊಂಡ ನಿರ್ಜೀವತೆಗೆ ಜೀವ ಕೊಡುತ್ತವೆ. ಎಲ್ಲೆಲ್ಲಾ ಸಂಪತ್ತಿನ ಮೂಲ ಇದೆ ಎಂದು ಗೊತ್ತಾಗುತ್ತದೋ ಅಲ್ಲೆಲ್ಲಾ ಸಾಮ್ರಾಜ್ಯ ವಿಸ್ತರಿಸುವವರು ಇದ್ದೇ ಇರುತ್ತಾರೆ ಮಾತ್ರವಲ್ಲ, ಅದನ್ನು ಅವರು ಬದಲಾವಣೆಯ ಹರಿಕಾರರ ವೇಷ ಧರಿಸಿ, ನಂಬಿಸಿ, ಅದಕ್ಕಾಗಿ ಜನರನ್ನು ತಲುಪುವ ಎಲ್ಲಾ ಮಾರ್ಗಗಳನ್ನು ಕೈವಶ ಮಾಡಿಕೊಂಡೇ ಮಾಡಿರುತ್ತಾರೆ. ಮಾನವನ ಆಧುನಿಕ ಚರಿತ್ರೆಯುದ್ದಕ್ಕೂ ಈ ಕಥನಗಳಿವೆ. ಇದನ್ನು ಸಾಧಿಸಿಕೊಂಡವರು ಸಾಧನೆಯ ಚರಿತ್ರೆಯನ್ನಾಗಿ ಬಿಂಬಿಸಿ ನೂರಾರು ವರ್ಷಗಳ ಕಾಲ ಅದೇ ಕತೆಯನ್ನು ರಾಷ್ಟ್ರೀಯ ಹೆಮ್ಮೆ ಎಂಬಂತೆ ಜನರಲ್ಲಿ ರಕ್ತಗತಗೊಳಿಸಿರುತ್ತಾರೆ– ಯಾಕೆಂದರೆ ಅದು ಅವರ ಚಿಂತನೆಗಳೇ ಆಕ್ರಮಿಸಿಕೊಂಡ ರಾಷ್ಟ್ರವಾಗಿರುತ್ತದೆ.

ಆದರೆ ಎಲ್ಲೋ ಒಂದು ಚಿಕ್ಕ ಕಿಂಡಿಯಿಂದ ಬಂದ ಭಿನ್ನ ದಿಕ್ಕಿನ ಬೆಳಕು ಮುಚ್ಚಿಹೋಗಿದ್ದ ಇತರ ಸತ್ಯಗಳನ್ನೂ ಕಾಣಿಸಿ ಸೋತವರ ಮುಖದಲ್ಲೂ ಒಂದು ಪುಟ್ಟದಾದರೂ ನಗುವನ್ನೂ ಹುಮ್ಮಸ್ಸನ್ನೂ ಹುಟ್ಟಿಸುತ್ತದೆ. ಮೊದಲು ಇದು ದೇಶಗಳ ಮೇಲೆ ಅನ್ಯ ದೇಶಗಳ ದಾಳಿಯಾಗಿದ್ದರೆ, ಇಂದು ನಾವು ಬದುಕುತ್ತಿರುವ ಕಾಲದಲ್ಲಿ ದೇಶದೊಳಗೇ ಇರುವ ಸಂಪತ್ತಿನ ಮೇಲೆ ಅಧಿಕಾರ ಚಲಾಯಿಸಲು ದೇಶೀಯರ ಮೇಲೇ ನಡೆಸುತ್ತಿರುವ 'ಬದಲಾವಣೆ, ಅಭಿವೃದ್ಧಿ, ಅದ್ಭುತ ಭವಿಷ್ಯ' ಇನ್ನೂ ಮೊದಲಾದ ಆಕರ್ಷಕ ಪದಗಳಲ್ಲಿ ದಾಳಿಗಳಾಗಿ ಬದಲಾಗಿದೆ.

ಯುರೋಪಿಯನ್ನರು ಕರಿಯರನ್ನು ಆಫ್ರಿಕಾದ ಕಾಡುಗಳಿಂದ ಅಪಹರಿಸಿ, ಬತ್ತಲುಗೊಳಿಸಿ, ಹಡಗುಗಳಲ್ಲಿ ನಾಯಿ ನರಿಗಳಂತೆ ತುರುಕಿ, ಅದರೊಳಗೇ ಇರುವ ಹೆಂಗಸರ ಮೇಲೆ ಅತ್ಯಾಚಾರ ಮಾಡಿ, ಅಲ್ಲಿ ತುಂಬಿ ತುಳುಕುವ ಕೊಳಕುಗಳಿಂದ ಹುಣ್ಣು ಕಾಯಿಲೆಗೆ ಒಳಗಾದವರ ಮೇಲೆ ಬ್ಲೀಚಿಂಗ್ ಪೌಡರ್ ಹಾಕಿ ನೆಲ ಉಜ್ಜುವ ಬ್ರಷ್‌ಗಳಿಂದ ಉಜ್ಜಿ- ಹಾಗೂ ಬದುಕುಳಿದವರನ್ನು ತಂದು ತಮ್ಮ ಸೇವೆ ಮಾಡಿಸಿಕೊಳ್ಳುವ ಸ್ಲೇವ್‌ಗಳನ್ನಾಗಿಸಿಕೊಂಡರು. ತಮ್ಮ ಬರ್ಬರತೆಯನ್ನು ಮರೆಮಾಚಿ ತಾವೇ ನಾಗರಿಕರು ಎಂಬಂತೆ ಜಗತ್ತನ್ನು ನಂಬಿಸಿದರು. ಇದನ್ನು ಆಫ್ರಿಕನ್ ಅಮೆರಿಕನ್ ಅಲೆಕ್ಸ್ ಹ್ಯಾಲಿ ತಮ್ಮ ಕಾದಂಬರಿ 'ರೂಟ್ಸ್'ನಲ್ಲಿ ಬರೆದಾಗ ಅದು ಜಗತ್ತನ್ನೇ ಪ್ರಭಾವಿಸಿತು (ಕನ್ನಡದಲ್ಲಿ ಇದನ್ನು 'ತಲೆಮಾರು' ಎಂಬ ಹೆಸರಿನಲ್ಲಿ ಬಂಜಗೆರೆ ಜಯಪ್ರಕಾಶ್ ಅನುವಾದಿಸಿದ್ದಾರೆ). ಅಲೆಕ್ಸ್‌ನ ಏಳು ತಲೆಮಾರುಗಳ ಹಿಂದಿನ ಪೂರ್ವಜ ಕಿಂಟಾ ಕುಂಟೆಯನ್ನು ಅಪಹರಿಸಿದ್ದು ಮಾತ್ರವಲ್ಲ, ನಾಲ್ಕು ಬಾರಿ ತಪ್ಪಿಸಿಕೊಳ್ಳಲು ಹೊರಟ ಆತನ ಬಲಪಾದವನ್ನು ಅರ್ಧಕ್ಕೆ ಕತ್ತರಿಸಿ ಮತ್ತೆ ತಪ್ಪಿಸಿಕೊಳ್ಳದಂತೆ ಮಾಡಲಾಗಿತ್ತು. ಈ ಕ್ರೌರ್ಯಗಳ ಅರಿವಿದ್ದರೆ ಮಾತ್ರ ನೆಲ್ಸನ್ ಮಂಡೇಲಾ ಅವರ ಗೆಲುವು ನಮ್ಮೊಳಗೆ ಪುಳಕ ಹುಟ್ಟಿಸಲು ಸಾಧ್ಯ.

ನಮ್ಮದೇ ನೆಲದಲ್ಲಿ ಸ್ವಾತಂತ್ರ್ಯ ಹೋರಾಟದ ಸಂದರ್ಭದಲ್ಲೂ ಎಂತೆಂತಹ ಹಿಂಸಾಚಾರಗಳಾಗಿವೆ ಎಂಬುದನ್ನು ಕಥಿಸಿದ ಅಸಂಖ್ಯ ಕಲಾಕೃತಿಗಳು ನಮ್ಮ ನಡುವೆ ಇವೆ. ಆದರೆ ಅಜ್ಞಾನಿಗಳಿಗೆ ನಮ್ಮ ಸ್ವಾತಂತ್ರ್ಯ ಹೋರಾಟದ ಫಲ 'ಭಿಕ್ಷೆ'ಯಾಗಿ ಕಾಣುತ್ತದೆಯೇ ಹೊರತು ತಮ್ಮ ಪ್ರಶಸ್ತಿಗಳು ನಿಜವಾದ ಭಿಕ್ಷೆ ಎಂಬುದು ತಲೆಗೇ ಹೋಗುವುದಿಲ್ಲವೇ? ಈ ಎಲ್ಲವುಗಳ ನೆಪದಲ್ಲಿ ಎಂತಹ ವಿಚಾರಗಳನ್ನು ಮುನ್ನೆಲೆಗೆ ತರಲಾಗುತ್ತಿದೆ, ಎಂತಹ ವಿಚಾರಗಳನ್ನು ಮೂಲೆಗೆ ಸರಿಸಲಾಗುತ್ತಿದೆ ಎನ್ನುವುದನ್ನು ಮಾತ್ರ ಸೂಕ್ಷ್ಮವಾಗಿ ಅವಲೋಕಿಸುತ್ತಲೇ ಇರಬೇಕು. ಯಾಕೆಂದರೆ, ಸಾಧಾರಣವಾಗಿ ಅಧಿಕಾರಶಾಹಿಯನ್ನು ಹೇರಿಕೆ ಮಾಡಲು ನೆಲ ಹದ ಮಾಡಿಕೊಳ್ಳಲು ಬೇಕಾದ ಸಂಗತಿಗಳನ್ನೇ ಮುನ್ನೆಲೆಗೆ ತರುವುದು. ಹೀಗೆ ಮಾಡಿ ಮನಸ್ಸುಗಳನ್ನು, ಮನುಷ್ಯರನ್ನು ವಿಭಜಿಸಿ ಅವರವರೇ ಹೊಡೆದಾಡಿಕೊಳ್ಳುವಂತೆ ಮಾಡುವ ತಂತ್ರ ಪುರಾತನವಾದುದು. ಹೀಗಾಗಿಯೇ ಯಾವುದೇ ಚಳವಳಿ ಅಥವಾ ಹೋರಾಟವನ್ನು ಸಾಂಘಿಕವಾಗಿ ಕಟ್ಟಲು ವಿಪರೀತ ಶ್ರಮ ಹಾಕಬೇಕಾಗುತ್ತದೆ.

ಬಿಳಿಯರ ವಿರುದ್ಧದ ಕರಿಯರ ಹೋರಾಟವನ್ನು ಕತೆಯಾಗಿ ಉಳ್ಳ 'ಡಿ ಜಾಂಗೋ' ಎಂಬ ಸಿನಿಮಾದಲ್ಲಿ ಒಂದು ದೃಶ್ಯ ಬರುತ್ತದೆ. ಇಬ್ಬರು ಕರಿಯ ಗುಲಾಮರನ್ನು ಕುಸ್ತಿಗೆ ಇಳಿಸಿ ಬಿಳಿಯರು ಮಜಾ ತೆಗೆದುಕೊಳ್ಳುತ್ತಿರುತ್ತಾರೆ. ಇಬ್ಬರಲ್ಲಿ ಒಬ್ಬರು ಇನ್ನೊಬ್ಬನನ್ನು ಸಾಯಿಸುವ ತನಕವೂ ಕುಸ್ತಿ ನಿಲ್ಲಿಸಲು ಬಿಡುವುದೇ ಇಲ್ಲ. ಯಾರು ಸತ್ತರೂ ನಷ್ಟ ಕರಿಯರಿಗೇ. ಸಾಯಿಸಿದವನ ಹೆಸರು ದಾಖಲು ಆಗುವುದೂ ಕರಿಯನದೇ. ಅದೇ ಸಿನಿಮಾದಲ್ಲಿ ಇನ್ನೊಂದೆಡೆ, ಕರಿಯನೊಬ್ಬ ಬಿಳಿಯನ ಪ್ರೀತಿಪಾತ್ರನಾಗಿ ತಾನೇ ಒಂದು ಅಧಿಕಾರ ಕೇಂದ್ರವಾಗಿ ಕರಿಯರ ಮೇಲೆ ಬಿಳಿಯರ ಜೊತೆಗೂಡಿ ಹಿಂಸಿಸುತ್ತಾನೆ. ಇದು ದೂರದ ಕತೆಯಂತೆ ಕಾಣಬಹುದು. ಆದರೆ ಸ್ವಲ್ಪ ಎಚ್ಚರದಿಂದ ನೋಡಿದರೂ ಇದು ನಮ್ಮದೇ ಕಾಲಬುಡದ ಕತ್ತಲೆಯಾಗಿ ಕಾಣಿಸುತ್ತದೆ. ಈ ತಂತ್ರ ತಿಳಿಯದೇ, ಶೋಷಿತರು ಒಗ್ಗೂಡದೇ ಗೆಲುವು ಸಾಧ್ಯವಿಲ್ಲ.

ಒಂದು ವರ್ಷ ಕಾಲ ರೈತರು ದೆಹಲಿಯಲ್ಲಿ ಹೋರಾಟ ಮಾಡಿ, ಮಾಧ್ಯಮಗಳ ಬೆಂಬಲವಿಲ್ಲದೇ, ಎಲ್ಲಾ ಅಪಪ್ರಚಾರಗಳನ್ನು ಮೀರಿ ಒಂದು ಹಂತದ ಗೆಲುವು ಸಾಧಿಸಿದ್ದಾರೆ. ಆಂಧ್ರಪ್ರದೇಶದ ರೈತರೂ ಏಳ್ನೂರು ದಿನಗಳ ಹೋರಾಟದಿಂದ ಸರ್ಕಾರದ ನಿರ್ಧಾರ ಬದಲಿಸುವಂತೆ ಮಾಡಿದ್ದಾರೆ. ಈಚೆಗೆ ಎಲ್ಲರ ಮನ ಗೆದ್ದಿರುವ 'ಜೈಭೀಮ್' ಸಿನಿಮಾದಲ್ಲಿ ಬುಡಕಟ್ಟು ಜನರ ಹಕ್ಕುಗಳಿಗಾಗಿ ವಕೀಲನೊಬ್ಬ ಅಚಲವಾಗಿ ಹೋರಾಡಿದ, ಸಂವಿಧಾನದ ಶಕ್ತಿಯನ್ನು ಎತ್ತಿಹಿಡಿದ, ಅಷ್ಟೇ ಅಚಲವಾಗಿ ಯಾವ ಆಮಿಷಕ್ಕೂ ಒಳಗಾಗದೆ ಛಲ ಮೆರೆದ ಹೆಣ್ಣುಮಗಳ ಸಶಕ್ತ ಚಿತ್ರಣವಿದೆ. ಈ ಸಿನಿಮಾ ನಿಜ ಕತೆಯನ್ನೇ ಆಧರಿಸಿರುವಂತಹದು. ತೊಂಬತ್ತರ ದಶಕದ ಈ ಕತೆ ಇಂದು ನಮ್ಮಲ್ಲಿ ಹೊಸ ಉತ್ಸಾಹ ಹುಟ್ಟಿಸುತ್ತದೆ.

ಈ ಸಂದರ್ಭದಲ್ಲಿ ಗಮನಿಸಬೇಕಾದ ಸಂಗತಿಯೆಂದರೆ, ಈ ಎಲ್ಲಾ ಹೋರಾಟಗಳ ಹಿಂದೆ ಒಂದು ವ್ಯವಸ್ಥಿತವಾದ, ಸಾಮುದಾಯಿಕತೆಯಿರುವ, ಪ್ರಾಮಾಣಿಕತೆ ಇರುವ, ತಾವು ಪ್ರತಿನಿಧಿಸುತ್ತಿರುವ ಸಂಗತಿಗಳ ಕುರಿತು ಖಚಿತ ಜ್ಞಾನ ಇರುವ ನಡೆಯಾಗಿ ಇವೆಲ್ಲವೂ ಮುನ್ನಡೆದಿವೆ. ಮತ್ತು ಈ ಎಲ್ಲಾ ಸಂದರ್ಭಗಳಲ್ಲೂ ಜೀವದ ಹಂಗು ತೊರೆದು ಹೋರಾಡಲಾಗಿದೆ. ಜೀವ ಕಳೆದುಕೊಂಡವರ ದೊಡ್ಡ ಯಾದಿ ಇದೆ. ಇಂದಿಗೂ ಹೀಗೆ ತಮ್ಮನ್ನೇ ಸಾಮಾಜಿಕ ಸಮಾನತೆಯ ಹೋರಾಟಕ್ಕಾಗಿ ಮುಡಿಪಾಗಿ ಇಟ್ಟುಕೊಂಡವರ ದೊಡ್ಡ ಪಟ್ಟಿ ಇದೆ. ಆದರೆ ಎಲ್ಲೋ ಬೆರಳೆಣಿಕೆಯಲ್ಲಿ ಬಿಟ್ಟು ಉಳಿದವರ್‍ಯಾರೂ ನಮಗೆ ನಾಯಕ-ನಾಯಕಿಯರಾಗಿ ಕಾಣಿಸುವುದಿಲ್ಲ.

ಜೈಭೀಮ್ ಸಿನಿಮಾದ ಬಗ್ಗೆ ಚರ್ಚೆ ನಡೆಯುತ್ತಿರುವಾಗಲೇ ಜಾತಿ, ಧರ್ಮದ ಕಾರಣಕ್ಕಾಗಿ ಅಮಾಯಕರ ವಿರುದ್ಧ ಸುಳ್ಳು ಆರೋಪಗಳನ್ನು ಹೊರಿಸಲು ಪೊಲೀಸರೇ ಯತ್ನಿಸಿದ್ದ ಹಲವು ಪ್ರಕರಣಗಳು ಕರ್ನಾಟಕ ಸೇರಿದಂತೆ ದೇಶದ ಬೇರೆ ಬೇರೆ ಕಡೆ ನಡೆದಿರುವ ಮಾಹಿತಿ ಹೊರಬರಲಾರಂಭಿಸಿದೆ. ವಿಠಲ ಮಲೆಕುಡಿಯ ಎಂಬ ಬುಡಕಟ್ಟು ಹುಡುಗನಿಗೆ ನಕ್ಸಲ್ ಹಣೆಪಟ್ಟಿ ಅಂಟಿಸಲಾಗಿತ್ತು. ಇದೀಗ ಆತ ನಿರಪರಾಧಿ ಎಂದು ಕೋರ್ಟ್ ತೀರ್ಪಿತ್ತಿದೆ. ಇವರಿಗೆ ಊರುಗೋಲಾದವರು ದಿನೇಶ್ ಹೆಗ್ಡೆ ಉಳೆಪಾಡಿ ಎಂಬ ವಕೀಲ. ಇದಲ್ಲದೆ, ದಾಖಲೆಗೆ ಸಿಗದ ಇಂತಹ ಸಾವಿರಾರು ಪ್ರಕರಣಗಳು, ಹಿಂಸಾಚಾರಗಳು ನಡೆಯುತ್ತಲೇ ಇರುತ್ತವೆ. ಆದರೆ ಇದ್ಯಾವುದೂ ನಮ್ಮಲ್ಲಿ ಏನನ್ನೂ ಹುಟ್ಟಿಸುವುದಿಲ್ಲ. ಇವರುಗಳ ಕತೆ ಕಲಾಕೃತಿಯೋ ಸಿನಿಮಾವೋ ಆದಾಗ ಮಾತ್ರ ಇವರು ನಮಗೆ ನಾಯಕರೆನಿಸಿ ಪುಳಕ ಹುಟ್ಟಿಸುವ ಈ ವೈಚಿತ್ರ್ಯದ ನಡುವೆಯೂ ಈ ಕಲಾಕೃತಿಗಳು, ನಮ್ಮ ಸುತ್ತಿನ ಹೋರಾಟಗಳು ನಮ್ಮೊಳಗೂ ಕಿಚ್ಚು, ಕೆಚ್ಚು ಉಳಿಸಲು ಸ್ಫೂರ್ತಿ ತುಂಬುತ್ತವಾದ್ದರಿಂದ ಅವು ಅವಶ್ಯಕವೂ ಹೌದು, ಭರವಸೆಗಳೂ ಹೌದು.

ಚುರುಮುರಿ

ನಾಲಿಗೆ ಚಟ

• ಮಣ್ಣೆರಾಜು

'ಅಕ್ಕಾ ತರಕಾರಿ...' ಎಂದು ಕರೆದ ತಾಯಮ್ಮ ತರಕಾರಿ ಮಂಕರಿ ಇಳಿಸಿದಳು.

'ತರಕಾರಿ ಬೇಡ ತಾಯಮ್ಮ, ನಿನ್ನ ಹತ್ರ ರೇಟ್ ಜಾಸ್ತಿ...' ನೈಟಿಗೆ ಕೈ ಒರೆಸಿಕೊಂಡು ಸುಮಿ ಮನೆ ಒಳಗಿನಿಂದ ಬಂದಳು.

'ಮನೆ ಬಾಗಿಲಿಗೆ ತರಕಾರಿ ಸೇವೆ ಕೊಡ್ತಿದ್ದೀನಿ. ನಂಗೂ ಮೂರು ಕಾಸು ಬೇಡ್ವಾ ಅಕ್ಕಾ?...' ತಾಯಮ್ಮನಿಗೆ ಹುಸಿ ಸಿಟ್ಟು.

'ಕೇಜಿಗೆ ನೂರು ರೂಪಾಯಿ ಹೇಳ್ತೀಯಾ, ಪೆಟ್ರೋಲ್‌ಗಿಂತ ನಿನ್ನ ತರಕಾರಿ ರೇಟೇ ಜಾಸ್ತಿ...' ಎನ್ನುತ್ತಾ ಸುಮಿ ತರಕಾರಿ ಆರಿಸಿಕೊಂಡಳು.

'ಹಿಂಗೇ ಇನ್ನಷ್ಟು ದಿನ ಮಳೆ ಹುಯ್ತಿದ್ರೆ ಇದೂ ಸಿಗಲ್ಲ, ಬೆಳೆದದ್ದೆಲ್ಲಾ ಕೊಚ್ಚಿಕೊಂಡು ಹೋಗ್ತದೆ'.

'ಈ ಮಳೆ ಯಾವತ್ತಿಗೆ ನಿಲ್ಲುತ್ತೋ?'

'ಕೊಡ, ಕೊಡೆ ಹಿಡಿದು ಮಳೆಯನ್ನ ತಡೆಯಲಾಗುತ್ತಾ? ಆನೆ ನಡೆದಿದ್ದೇ ದಾರಿ ಅನ್ನುವಂತೆ ನೀರು ಹರಿದಿದ್ದೇ ಮೋರಿ. ಮಳೆ ನೀರಿಗೆ ದಾರಿ ಬಿಟ್ಟುಕೊಟ್ಟು ನಾವು ಸುಮ್ಮನಿರಬೇಕಷ್ಟೇ'.

'ತರಕಾರಿ ಬೆಲೆ ಹೀಗೆ ಹೆಚ್ಚಾಗುತ್ತಿದ್ರೆ ನಮ್ಮಂಥವರು ಏನನ್ನು ತಿಂದು ಬದುಕೋದು?'

'ಅಡುಗೆ-ತಿಂಡಿ ಒಂದು ದಿನದ ವ್ಯವಹಾರ ಅಲ್ಲ. ಕೈಗೆ ಎಟಕುವುದಕ್ಕೆ ಉಪ್ಪು-ಖಾರ, ಒಗ್ಗರಣೆ ಸೇರಿಸಿ ತಿಂದು ನಾಲಿಗೆ ರುಚಿ ತೀರಿಸಿಕೊಳ್ಳಬೇಕು. ನಾವು ಏನನ್ನು ತಿಂದ್ವಿ ಅಂತ ಜನ ಹೊಟ್ಟೆ ಬಗೆದು ನೋಡ್ತಾರಾ? ಆಹಾರ ಅನ್ನೋದು ಅವರವರ ಹೊಟ್ಟೆಪಾಡು, ಕಟ್ಟುಪಾಡು...'

'ಬೇರೆಯವರ ಆಹಾರ ಪದ್ಧತಿಯನ್ನ ಆಡಿಕೊಳ್ಳೋದು ಕೆಲವರಿಗೆ ನಾಲಿಗೆ ಚಟವಾಗಿದೆ' ಸುಮಿಗೆ ಬೇಸರ.

'ಹೌದಕ್ಕಾ, ಸಾಮಾಜಿಕ ಜಾಲತಾಣದ ಜನ ಅಂತಹವರ ಜನ್ಮ ಜಾಲಾಡಿಸಿ ಮಾನ ಕಳೆಯುತ್ತಿರೋದ್ನ ನಾನೂ ನೋಡಿದ್ದೀನಿ' ನಕ್ಕಳು ತಾಯಮ್ಮ.

'ನಾವು ಸಮಾಜಕ್ಕೆ ಅಂಜಿದರೆ ಸಾಲದು, ಸಾಮಾಜಿಕ ಜಾಲತಾಣಕ್ಕೆ ಸಿಗದಂತೆ ನಾಲಿಗೆಯನ್ನ ನಿಯಂತ್ರಿಸಿಕೊಂಡು ಮರ್ಯಾದೆಯಿಂದ ಬಾಳೋದನ್ನು ಕಲೀಬೇಕು...' ಎಂದು ಸುಮಿ ತರಕಾರಿ ದುಡ್ಡು ಕೊಟ್ಟು ತಾಯಮ್ಮನಿಗೆ ಮಂಕರಿ ಹೊರಿಸಿದಳು.

ಸಂಗತ

ಮಾತು ಬಿತ್ತದಿರಲಿ ಭಾವಮಾಲಿನ್ಯ

ಆಡುವ ಮಾತು ಆವೇಶಕ್ಕೆ ಹೊರತಾಗಿರುವುದು ಜಾಣತನ

• ಯೋಗಾನಂದ

ಇಸವಿ 1963. ಮೈಸೂರಿನ ಪುರಭವನದ ಆವರಣ. ಭಾರತದ ಗವರ್ನರ್ ಜನರಲ್ ಹುದ್ದೆ ಅಲಂಕರಿಸಿದ್ದ ರಾಜಾಜಿಯವರ ಭಾಷಣ ಇತ್ತು ಅಂದು ಸಂಜೆ. ಮೆಟ್ರಿಕ್ ಓದುತ್ತಿದ್ದ ನಮಗೆ ಅವರ ಪ್ರಬಂಧವೊಂದು ಪಠ್ಯಕ್ರಮದಲ್ಲಿತ್ತು. ಕುತೂಹಲದಿಂದ ನಾವು ಸಮಯಕ್ಕೆ ಮೊದಲೇ ಹಾಜರಿದ್ದೆವು. ನೂಕುನುಗ್ಗಲು. ರಾಜಾಜಿ ಭಾಷಣ ಆರಂಭಿಸುವಾಗಲೂ ಗದ್ದಲ ಪೂರ್ತಿ ನಿಂತಿರಲಿಲ್ಲ. ಅವರು ಸ್ವಲ್ಪ ಕೂಡ ಸಿಟ್ಟಾಗಲಿಲ್ಲ. 'ಹಾಲಿನ ಬಟ್ಟಲಿನಲ್ಲಿ ಒಂದೆರಡು ಇರುವೆಗಳಿದ್ದರೂ ಆಯ್ತು. ಇಡೀ ಹಾಲನ್ನು ಚೆಲ್ಲಬೇಕಾದೀತು' ಎಂದಷ್ಟೇ ಹೇಳಿದ್ದರು. ಸಭೆಯಲ್ಲಿ ದಿಢೀರನೆ ಆವರಿಸಿದ ನೀರವತೆ. ರಾಜಾಜಿ ಮಾತು ಮುಗಿಯುವ ತನಕವೂ ಸೂಜಿ ಬಿದ್ದರೂ ಕೇಳಿಸುವಷ್ಟು ನಿಶ್ಶಬ್ದದ್ದೇ ಕಾರುಬಾರು. ಅವರ ಸತ್ವಯುತ ಮೊನಚು ನುಡಿಗಳು ಜನರನ್ನು ಹಾಗೆ ಬಂಧಿಸಿದ್ದವು.

ಇತ್ತೀಚೆಗಂತೂ ಶಿಸ್ತು, ಶಿಷ್ಟಾಚಾರಗಳ ಎಲ್ಲೆ ಮೀರಿ ವೇದಿಕೆಗಳಲ್ಲಿ ಬೀಸು ಹೇಳಿಕೆಗಳು, ಸಲ್ಲದ ಉದ್ಗಾರಗಳದ್ದೇ ಮೇಲುಗೈಯಾಗಿದೆ. ಪರಸ್ಪರ ಅಸಂಬದ್ಧ, ಅಬದ್ಧ ಸವಾಲುಗಳು ತೀರಾ ಮುಜುಗರ ಹುಟ್ಟಿಸುತ್ತವೆ. ಅದರಲ್ಲೂ ಚುನಾವಣಾ ಪ್ರಚಾರ ಸಭೆಗಳಲ್ಲಿ ಸದಭಿರುಚಿಯಲ್ಲದ ವ್ಯಂಗ್ಯ, ಲೇವಡಿ. ಪ್ರತಿಸ್ಪರ್ಧಿಗಳನ್ನು ಟೀಕಿಸುವ ಭರದಲ್ಲಿ ಅಮಾಯಕ ಪ್ರಾಣಿಗಳೂ ಬಂದಾವು!

ಯಾವುದೇ ಭಾಷಣದ ಯಶಸ್ಸಿಗೆ ಕರತಾಡನಗಳಷ್ಟೇ ಮಾನದಂಡವಲ್ಲ. ತಪ್ಪಾದ, ಪರರನ್ನು ನಿಂದಿಸುವ ಮಾತುಗಳಿಗೂ ಜೋರು ಚಪ್ಪಾಳೆಗಳಾಗುತ್ತವೆ. ಕರತಾಡನ ಕೆಲವೊಮ್ಮೆ ಮಾತು ನಿಲ್ಲಿಸಲು ತಾಕೀತೂ ಹೌದು. ಅಚ್ಚರಿಯ ಸಂಗತಿಯೆಂದರೆ, ಶ್ರೇಷ್ಠ ವಾಗ್ಮಿಗಳು ಚಪ್ಪಾಳೆ ಬಾರಿಸದ ಮಂದಿಗೆ ಹೆಚ್ಚು ಗಮನ ನೀಡಿರುತ್ತಾರೆ. ತಾವು ನುಡಿದಿದ್ದರಲ್ಲಿ ಏನಾದರೂ ಲೋಪಗಳಾದವೆ ಎಂಬ ಹುಡುಕಾಟಕ್ಕಿಳಿಯುತ್ತಾರೆ. ಇತರರನ್ನು ನಿಂದಿಸಿ, ಕಟಕಿಯಾಡಿ ಸಭೆಯನ್ನು ನಗಿಸುವ, ರಂಜಿಸುವ ಅಗತ್ಯವಿಲ್ಲ. ಹಾಗೆ ಪ್ರಚೋದಿಸಬಹುದು, ಆದರೆ ಪ್ರಭಾವಿಸುವುದು ಸಾಧ್ಯವಿಲ್ಲ.

ಕ್ರಿ.ಶ. 6ನೇ ಶತಮಾನದ ಕನ್ನಡ ಕವಿ ಅಣ್ಣಂಭಟ್ಟ ವೇದಿಕೆಯಲ್ಲಿರುವವರನ್ನು ಬೃಹಸ್ಪತಿಗೆ, ಸಭಿಕರನ್ನು ಸರಸ್ವತಿಗೆ ಹೋಲಿಸುತ್ತಾನೆ. ಸಭಿಕರು ಭಾಷಣಪಟುಗಳನ್ನು ಪರೀಕ್ಷಿಸುವಷ್ಟು ಮೇಧಾವಿಗಳು ಎಂಬುದು ಅವನ ಅಂಬೋಣ. ನಾಲಿಗೆ ಉತ್ತಮ ಸ್ನೇಹಿತ, ಅಷ್ಟೇ ಭಯಂಕರ ಯಜಮಾನ ಕೂಡ. ಕೋಪ, ತಾಪದ ಹೇಳಿಕೆಗಳು ಸೃಷ್ಟಿಸುವುದು ವೈರಿಗಳನ್ನೇ.

ನಾವಿಂದು ವಿದ್ಯುನ್ಮಾನ ದಿನಮಾನಗಳಲ್ಲಿದ್ದೇವೆ. ಆಡಿದ್ದು ರೆಪ್ಪೆ ಮುಚ್ಚಿ ತೆರೆಯುವುದರೊಳಗೆ ದಶದಿಕ್ಕುಗಳಿಗೂ ರವಾನೆಯಾಗಿರುತ್ತದೆ. ರೋಚಕತೆಯ ಅಮಲು ಸುದ್ದಿಯ ರೆಕ್ಕೆಗಳಿಗೆ ಮತ್ತಷ್ಟು ಬಲ ತಂದಿರುತ್ತದೆ. ಒಂದು ಸಂದರ್ಭ ಅಥವಾ ಒಬ್ಬ ವ್ಯಕ್ತಿ, ಒಂದು ವರ್ಗದ ಬಗ್ಗೆ ನಮ್ಮ ಆಲೋಚನೆಗಳು ಸಕಾರಾತ್ಮಕವಾಗಿರದಿದ್ದರೆ ಮಾತಾಡದಿರುವುದೇ ಲೇಸು.

ಒಂದು ವೃತ್ತಾಂತ ನೆನಪಾಗುವುದು. ಗಣಿತದ ಪ್ರೊಫೆಸರ್ ಒಬ್ಬರು ತರಗತಿಗೆ ಬರುತ್ತಲೆ ಬೋರ್ಡಿನ ಮೇಲಿದ್ದ ಗೀಚುಗಳು, ಅಸಂಬದ್ಧ ಚಿತ್ರಗಳು ಮತ್ತು ಒಕ್ಕಣೆಗಳನ್ನು ನೋಡುತ್ತಾರೆ. ಅವರು ಹಾಗೆ ಗಮನಿಸಲಿ ಎಂದೇ ತಾನೆ ಹೈಕಳ ತಂತ್ರ! ರೇಗಿದರೆ ಏನೂ ಫಲವಿಲ್ಲವೆಂದರಿತ ಗುರುಗಳ ಪ್ರತಿಕ್ರಿಯೆ ಭಿನ್ನವೆ ಇತ್ತು. ಅವರು ತಮ್ಮ ಕೋಟಿನ ಕಿಸೆಯಿಂದ ಕರವಸ್ತ್ರ ಹೊರತೆಗೆದು ಬೋರ್ಡ್ ಸ್ವಚ್ಛಗೊಳಿಸುತ್ತಾರೆ. ಇನ್ನು ಮುಂದೆ ಇದರ ಬದಲು ಗಣಿತ ಸೂತ್ರಗಳನ್ನು ಬರೆದರೆ ನಿಮಗೇನೆ ಉಪಯುಕ್ತವಾಗುವುದಲ್ಲ ಎಂದು ಉಲಿಯುತ್ತಾರೆ. ನಾಚಿ ನೀರಾಗಿದ್ದ ವಿದ್ಯಾರ್ಥಿಗಳ ಮನ ಗೆಲ್ಲುತ್ತಾರೆ.

ಮನೆಗೆ ಹಾಲು ತರುವ ಹುಡುಗನಿಗೆ 'ಇವೊತ್ತು ಯಾಕೆ ತಡ' ಎನ್ನುವುದರ ಬದಲು 'ನಿನ್ನೆ ಬೇಗ ಬಂದಿದ್ದೆ' ಎನ್ನಬಹುದಲ್ಲ? ಎಷ್ಟಾದರೂ ಮಾತೆಂಬುದು ಜ್ಯೋತಿರ್ಲಿಂಗ. ಅನುಚಿತ ಆಡಿ ಪರರ ಭಾವ ಕೆಡಿಸಬಾರದು. ಭಾವಮಾಲಿನ್ಯ ಪರಿಸರ ಮಾಲಿನ್ಯದಷ್ಟೇ ಸಾಮಾಜಿಕ ನ್ಯೂನತೆ.

'ಅಪ್ರಿಯ ಸತ್ಯ ಹೇಳಬೇಡ' ಎಂಬ ಚೆನ್ನುಡಿಗೆ ಹೀಗೊಂದು ಷರಾ ಉಂಟು: 'ಪ್ರಿಯವಾಗುವುದೆಂಬ ಮಾತ್ರಕ್ಕೆ ಅಬದ್ಧ ಹೇಳಕೂಡದು'. ಅರ್ಥಗೌರವಕ್ಕೆ ಪ್ರಸಿದ್ಧನಾದ ಕವಿ ಭಾರವಿ 'ಹಿತಂ ಮನೋಹಾರೀ ಚ ದುರ್ಲಭಂ ವಚಃ' ಎಂದಿದ್ದಾನೆ. ಅಂದರೆ ಹಿತವಾಗಿಯೂ ಮನೋಹರವಾಗಿಯೂ ಮಾತನಾಡುವವರು ವಿರಳ.

ನಾವು ಮಾತನಾಡುವುದು ನಮ್ಮ ಮೌನಕ್ಕಿಂತಲೂ ಉತ್ತಮವಾಗಿದ್ದರೆ ಮಾತ್ರ ಮಾತನಾಡಬೇಕು ಎನ್ನುವುದು ವಿವೇಕ. ಆಡುವುದು ಆವೇಶಕ್ಕೆ ಹೊರತಾಗಿರುವುದು ಜಾಣತನ. ಎಲ್ಲ ವಿಷಯಗಳಿಗೂ ಸ್ಪಂದಿಸುವ ಅನಿವಾರ್ಯವೇನಿಲ್ಲ. ಮುಗುಳ್ನಗೆಗಿಂತ ಭೂಷಣವಿಲ್ಲ. ಯಾರನ್ನು ಕುರಿತು, ಯಾವ ಉದ್ದೇಶಕ್ಕೆ ಮಾತಾಡುತ್ತಿದ್ದೇವೆ ಎನ್ನುವ ಸ್ಪಷ್ಟತೆ ಭಾಷಣ ಮಾಡುವವರಿಗಲ್ಲದೆ ಮತ್ತ್ಯಾರಿಗೆ ಗೊತ್ತಿರಬೇಕು? ಎಂದಮೇಲೆ ಯಾವುದೋ ದಾಕ್ಷಿಣ್ಯಕ್ಕೆ ಏನಾದರೂ ಮಾತಾಡಿ ಎಂಬ ಒಬ್ಬರ ಮೇಲಿನ ಒತ್ತಾಯ ಹಾಸ್ಯಾಸ್ಪದ. ಬಲವಂತಕ್ಕೊಳಗಾದವರಿಂದ ಸಭಿಕರು ಏನನ್ನು ತಾನೆ ನಿರೀಕ್ಷಿಸಲಾದೀತು?

ಪಾಂಡಿತ್ಯದಿಂದ ತಲೆ ಕೆರಳಲಿ, ಆದರೆ ಭಾವ ಅರಳಬೇಕು. ತಿರುಗು ಮುರುಗಾದರೆ ಭಾವಮಾಲಿನ್ಯ ಕಟ್ಟಿಟ್ಟ ಬುತ್ತಿ. ಆ ಕವಿಗೋಷ್ಠಿಯ ಆಮಂತ್ರಣ ಪತ್ರಿಕೆಯಲ್ಲಿ ಎರಡು ಸಿಹಿಗಳ ಭೂರಿ ಭೋಜನವೆಂದು ಅಚ್ಚಾಗಿತ್ತು. ಆದರೆ ತಯಾರಾಗಿದ್ದು ಒಂದೇ ಸಿಹಿ ಖಾದ್ಯ. ರಸಿಕರು ಮುನಿಸಿಕೊಂಡರೇನು ಗತಿ? ಆಯೋಜಕರು ತುಸು ಪ್ರಜ್ಞೆ ಮೆರೆದರು. ನೀವು ಬಹಳ ಇಷ್ಟಪಡುವ ಮೊದಲ ಸಿಹಿಯೇ ಘಮಘಮಿಸುತ್ತಿದೆ, ದಯವಿಟ್ಟು ಆಸ್ವಾದಿಸಿ ಎಂದು ಉದ್ಘೋಷಿಸಿದರು. ಗೋಷ್ಠಿಯ ಸಮಾರೋಪ ಸುಸೂತ್ರವಾಗಿತ್ತು. ವೇದಿಕೆ ಮತ್ತು ಸಭಾಂಗಣದ ನಡುವಿನ ಅನನ್ಯತೆಗೆ ಇದೊಂದು ನಿದರ್ಶನ.

ವಾಚಕರ ವಾಣಿ

ಕಸಾಪ: ಕಟ್ಟಡದ ಮರುನಿರ್ಮಾಣವಷ್ಟೇ ಸಾಲದು

ಕನ್ನಡ ಸಾಹಿತ್ಯ ಪರಿಷತ್ತು ಮತ್ತು ಅದರ ಚುನಾವಣೆ ಬಗೆಗಿನ ಪತ್ರಗಳನ್ನು (ನ. 13, 18, 24) ಹಾಗೂ ಪರಿಷತ್ತಿನ ಅಧ್ಯಕ್ಷರಾಗಿ ಮಹೇಶ್ ಜೋಶಿಯವರ ಗೆಲುವಿನ ನಿಚ್ಚಳ ಸಾಧ್ಯತೆ ವರದಿಗಳನ್ನು ಗಮನಿಸಿ ಈ ಪತ್ರ. ಕನ್ನಡ ಸಾಹಿತ್ಯ ಪರಿಷತ್ತಿನ ಚುನಾವಣೆಗೆ ಸಂಬಂಧಿಸಿದಂತೆ ರಾಜಕೀಯ ಪಕ್ಷವೊಂದರ 'ಆಸಕ್ತಿ' ಬಯಲಾದ (ಪ್ರ.ವಾ., ನ. 24) ಪ್ರಥಮ ಸಂದರ್ಭ ಇದು. ಆಯ್ಕೆಯಾದವರು ತಮ್ಮ ಆಡಳಿತದ ಮೂಲಕ ಇದನ್ನು ನಿರಾಕರಿಸಬೇಕಷ್ಟೆ.

ಸರ್ಕಾರಿ ಮಾಧ್ಯಮಕ್ಕೂ ಸಾಹಿತ್ಯ ಸಂಘಟನೆಗೂ ವ್ಯತ್ಯಾಸ ಇದೆ. ವ್ಯಕ್ತಿತ್ವದ ಛಾಪು, ಹಿಂಬಾಲಕರನ್ನು ಬೆಳೆಸಿಕೊಳ್ಳುವುದು, ಅಗತ್ಯಕ್ಕಿಂತ ಹೆಚ್ಚು ಮಾತನಾಡುವುದು, ಭಿನ್ನಾಭಿಪ್ರಾಯ ಇರುವವರನ್ನು ಹತ್ತಿಕ್ಕುವುದು- ಇವು ಪರಿಷತ್ತಿಗೆ ಕಂಟಕ. ನಿವೃತ್ತ ಅಧಿಕಾರಿಗಳಿಗೆ ಸರ್ಕಾರದೊಡನೆ ವ್ಯವಹರಿಸುವುದು ಸುಲಭ- ನಿಜ. ಆದರೆ ಪ್ರತಿಯೊಂದಕ್ಕೂ ಸರ್ಕಾರದ ವಿವಿಧ ಏಜೆನ್ಸಿಗಳ ನೆರವಿನ ಮೇಲೇ ಅವಲಂಬಿತವಾಗುವ ಪ್ರವೃತ್ತಿ ನಿಲ್ಲಬೇಕು. ಮಹತ್ವದ ಕೆಲಸಗಳಲ್ಲಾದರೂ ಕಳಪೆತನ ಹೋಗಬೇಕು (ಉದಾಹರಣೆಗೆ, ಸಂಕ್ಷಿಪ್ತ ಕನ್ನಡ ನಿಘಂಟಿನ ಹನ್ನೊಂದನೆಯ ಮುದ್ರಣ- 2018 ಬೆಲೆ ಕಡಿಮೆ, ಆದರೆ ಕಾಗದದ ಗುಣಮಟ್ಟ ಹಾಗೂ ಬೈಂಡಿಂಗ್ ಸರಿ ಇಲ್ಲ). ಜಿಲ್ಲಾ ಘಟಕಗಳಲ್ಲಿ ಸಾಹಿತಿ ವೇಷದ ಮರಿ ರಾಜಕಾರಣಿಗಳೇ ಹೆಚ್ಚು ಪ್ರಭಾವ ಹೊಂದಿರುತ್ತಾರೆ. ಚಿಕ್ಕ ಕಾರ್ಯಕ್ರಮಗಳನ್ನು ನಿರಂತರವಾಗಿ ನಡೆಸಬಲ್ಲವರನ್ನು ಪ್ರೋತ್ಸಾಹಿಸಬೇಕಾಗಿದೆ. ಒಟ್ಟಿನಲ್ಲಿ ಕಸಾಪ ಕಟ್ಟಡದ ಮರುನಿರ್ಮಾಣ ಅಷ್ಟೇ ಸಾಲದು, ಕಾಯಕಲ್ಪವು ಕಾಲದ ಕರೆ.

ಎಚ್.ಎಸ್.ಮಂಜುನಾಥ, ಗೌರಿಬಿದನೂರು

ಮುಕ್ತ ಆಯ್ಕೆ: ಕುವೆಂಪು ವಿ.ವಿ ಹೊರತಾಗದಿರಲಿ

ರಾಷ್ಟ್ರೀಯ ಶಿಕ್ಷಣ ನೀತಿಯಲ್ಲಿ ಮುಕ್ತ ಆಯ್ಕೆಯ ಪತ್ರಿಕೆಯೊಂದು ಅಧ್ಯಯನಕ್ಕಿದ್ದು, ಇದರಲ್ಲಿ ವಿದ್ಯಾರ್ಥಿಗಳು ಬಯಸಿದಲ್ಲಿ ತಾವು ಓದುವ ನಿಕಾಯವನ್ನು ಬಿಟ್ಟು ಬೇರೆ ನಿಕಾಯದ ವಿಷಯಗಳನ್ನು ಆಯ್ಕೆ ಮಾಡಿಕೊಳ್ಳಬಹುದು. ಕಲಾ ವಿಭಾಗದ ವಿದ್ಯಾರ್ಥಿಗಳು ವಾಣಿಜ್ಯ ಅಥವಾ ವಿಜ್ಞಾನ ವಿಭಾಗದ ಒಂದು ವಿಷಯ ಆಯ್ದುಕೊಳ್ಳಬಹುದು ಅಥವಾ ಇಷ್ಟ ಇಲ್ಲದಿದ್ದಲ್ಲಿ ಕಲೆ, ವಿಜ್ಞಾನ ಮೊದಲಾದ ಬಹು ವಿಷಯಗಳಿರುವ ವಿಭಾಗದವರು ತಾವು ಓದುತ್ತಿರುವ ಎರಡು ವಿಷಯ ಬಿಟ್ಟು ಮೂರನೆಯದೊಂದು ವಿಷಯ ಆಯ್ಕೆ ಮಾಡಿಕೊಳ್ಳಬಹುದು. ಇದನ್ನು ರಾಜ್ಯದ ಹಲವು ವಿಶ್ವವಿದ್ಯಾಲಯಗಳು ಅನುಸರಿಸಿ ಆದೇಶ ಹೊರಡಿಸಿವೆ. ಆದರೆ ಕುವೆಂಪು ವಿಶ್ವವಿದ್ಯಾಲಯವು ಈ ಆಯ್ಕೆಯನ್ನು ನಿರ್ಬಂಧಿಸಿ, ಕಲಾ ವಿಭಾಗದವರು ಕಡ್ಡಾಯವಾಗಿ ವಾಣಿಜ್ಯ/ವಿಜ್ಞಾನವನ್ನೂ ವಿಜ್ಞಾನದವರು ಕಡ್ಡಾಯವಾಗಿ ವಾಣಿಜ್ಯ/ಕಲೆಯನ್ನೂ ವಾಣಿಜ್ಯದವರು ಕಡ್ಡಾಯವಾಗಿ ವಿಜ್ಞಾನ/ಕಲೆಯನ್ನಷ್ಟೇ ತೆಗೆದುಕೊಳ್ಳುವಂತೆ ನಿರ್ಬಂಧಿಸುತ್ತಿದೆ. ಇದರಿಂದ ವಿದ್ಯಾರ್ಥಿಗಳಿಗೆ ತೀವ್ರ ಅನನುಕೂಲವಾಗಿದೆ.

ಕಲಾ ವಿದ್ಯಾರ್ಥಿಗಳು ಭೌತಶಾಸ್ತ್ರವನ್ನೋ ಗಣಿತವನ್ನೋ ಓದುವುದರಲ್ಲಿ ಆಸಕ್ತಿಯೇ ಇಲ್ಲ ಅಂದಾಗಲೂ ಬಲವಂತವಾಗಿ ಕೊಟ್ಟು ಅವರ ಭವಿಷ್ಯ ಹಾಳು ಮಾಡಬೇಕೇ? ಇದು ರಾಷ್ಟ್ರೀಯ ಶಿಕ್ಷಣ ನೀತಿಯ 'ಮುಕ್ತ ಆಯ್ಕೆ'ಗೆ ವಿರುದ್ಧವಲ್ಲವೇ? ಸಂಬಂಧಪಟ್ಟವರು ಗಮನಹರಿಸಬೇಕಾಗಿ ಮನವಿ.

ಸುಮನ, ಚಿಕ್ಕಮಗಳೂರು

ಮನೆ ಕುಸಿತಕ್ಕೆ ಬೇರೆಯದೇ ಕಾರಣ

ಇತ್ತೀಚಿನ ದಿನಗಳಲ್ಲಿ ಹೆಚ್ಚಿನ ಮಳೆಗೆ ಕಟ್ಟಡಗಳು ಬಿದ್ದಿವೆ. ಇದಕ್ಕೆ ಮುಖ್ಯ ಕಾರಣ ಕಟ್ಟಡಕ್ಕೆ ಭದ್ರ ಅಡಿಪಾಯ ಇಲ್ಲದೇ ಇರುವುದು. ಬೆಂಗಳೂರಿನಲ್ಲಿ ಕೆರೆ ಜಾಗದಲ್ಲಿ ಮನೆ ಕಟ್ಟಿರುವುದು, ಕೆರೆ ಜಾಗ ಪರಿವರ್ತಿಸಿ ನಿವೇಶನ ಮಾಡಿ ಅಲ್ಲಿ ಮನೆ ಕಟ್ಟಿರುವುದು, ತಗ್ಗು ಪ್ರದೇಶಗಳಲ್ಲಿ ಮನೆ ಕಟ್ಟಿರುವುದು ಮುಖ್ಯ ಕಾರಣ.

ನಿವೇಶನ ಮಾಡುವ ಸಮಯದಲ್ಲಿ ನೆಲವನ್ನು ಮಟ್ಟ ಮಾಡಿರುತ್ತಾರೆ. ಆದರೆ ಅದರಲ್ಲಿ ಏನು ತುಂಬಿರುತ್ತಾರೆ ಎಂದು ಹೇಳಲಾಗುವುದಿಲ್ಲ. ಇಲ್ಲಿ ತಳದ ಮಣ್ಣು ಯಾವಾಗಲೂ ಸಡಿಲವಾಗಿರುತ್ತದೆ. ಇಂತಹ ಜಾಗಗಳಲ್ಲಿ ಸರ್ಕಾರದ ಆದೇಶದ ಪ್ರಕಾರ ನೀರು ಸಂಗ್ರಹ ಮಾಡಿದರೆ ತಳಹದಿ ಕುಸಿಯುತ್ತದೆ. ಎಷ್ಟೇ ಭದ್ರ ಅಡಿಪಾಯ ಹಾಕಿದ್ದರೂ ನೀರು ತುಂಬಿದ ಮೇಲೆ ಕುಸಿಯುವ ಸಾಧ್ಯತೆ ಹೆಚ್ಚು. ಸರ್ಕಾರವೇ ಹರಿವ ನೀರನ್ನು ಸರ್ಕಾರದ ಜಮೀನುಗಳಲ್ಲಿ ಸಂಗ್ರಹಿಸಿ ಮರುಬಳಕೆ ಮಾಡಿದರೆ ಸೂಕ್ತ.

ಡಾ. ಮಲ್ಲಿಕಾರ್ಜುನ, ಬೆಂಗಳೂರು

ಸದಸ್ಯತ್ವ ನೋಂದಣಿಗೆ ಇರಲಿ ಮಾನದಂಡ

ಕನ್ನಡ ಸಾಹಿತ್ಯ ಪರಿಷತ್ತಿಗೆ ಸರ್ಕಾರದ ಅನುದಾನ ಹೆಚ್ಚು ಹೆಚ್ಚು ಬರತೊಡಗಿದ ಮೇಲೆ ಕನ್ನಡದ ಕೆಲಸಕ್ಕಿಂತ ಸಮ್ಮೇಳನಗಳ ವೈಭವೀಕರಣ ಮಹತ್ವ ಪಡೆದಿದೆ. ಹಾಗಾಗಿ ಇದರ ಚುನಾವಣೆಯಲ್ಲಿ ರಾಜಕಾರಣಿಗಳ ಹಸ್ತಕ್ಷೇಪ, ಜಾತಿ ಲೆಕ್ಕಾಚಾರ, ಹೆಚ್ಚು ಹಣ ಖರ್ಚು ಮಾಡುವವರು ಮಾತ್ರ ಚುನಾವಣೆಗೆ ನಿಲ್ಲುವ ಪರಿಸ್ಥಿತಿ ಉಂಟಾಗಿದೆ. ಇತ್ತೀಚೆಗೆ ಕಸಾಪ ಸದಸ್ಯತ್ವ ಪಡೆಯುತ್ತಿರುವವರಲ್ಲಿ ಹೆಚ್ಚಿನವರಿಗೆ ಚುನಾವಣಾ ಉದ್ದೇಶ ಇರುತ್ತದೆಯೇ ವಿನಾ ಪರಿಷತ್ತಿನ ಮೇಲಿನ ಆಸಕ್ತಿಯಲ್ಲ. ಮಂಡ್ಯದ ಕುಗ್ರಾಮವೊಂದರಲ್ಲಿ 600ಕ್ಕೂ ಹೆಚ್ಚು ಮಂದಿ ಸದಸ್ಯತ್ವ ಪಡೆದುಕೊಂಡಿರುವುದು ಇದೇ ಕಾರಣಕ್ಕೆ. ಜಿಲ್ಲಾ ಅಧ್ಯಕ್ಷ ಅಭ್ಯರ್ಥಿ ಲಕ್ಷ ಲಕ್ಷ ಖರ್ಚು ಮಾಡುವ ಪರಿಸ್ಥಿತಿ ಎದುರಾಗಿದೆ ಎಂದರೆ, ಕೇಂದ್ರ ಅಧ್ಯಕ್ಷಗಿರಿ ಅಭ್ಯರ್ಥಿ ಇನ್ನೆಷ್ಟು ಖರ್ಚು ಮಾಡಬಹುದು ಎಂಬುದನ್ನು ಊಹಿಸಿಕೊಳ್ಳಬಹುದು.

ಚೋಳರ ಕಾಲದಲ್ಲಿ 'ಗ್ರಾಮ ಸಭೆ' ಸದಸ್ಯ ಸ್ಥಾನದ ಚುನಾವಣೆಗೆ ಸ್ಪರ್ಧೆ ಮಾಡಲು ಮಾನದಂಡಗಳು ಇದ್ದವು. ಅದರಲ್ಲಿ ಅವನಿಗೆ ವೇದದ ಜ್ಞಾನ ಇರಬೇಕಾದ ಅಂಶ ಒಂದು. ಅಂತಹುದರಲ್ಲಿ ಸಾಹಿತ್ಯ ಪರಿಷತ್ ಚುನಾವಣೆಗೆ ಸ್ಪರ್ಧೆ ಮಾಡಲು, ಮತ ಹಾಕಲು ಮತ್ತು ಸದಸ್ಯತ್ವ ಪಡೆಯಲು ಮಾನದಂಡಗಳನ್ನು ರೂಪಿಸಲಿ. ಇಲ್ಲವಾದರೆ ಚುನಾವಣೆಗೆ ಸ್ಪರ್ಧಿಸುವ ಮಂದಿ ಚುನಾವಣಾ ಉದ್ದೇಶದಿಂದ ತಮ್ಮ ತಮ್ಮ ಕಡೆಯವರನ್ನು ಸದಸ್ಯರನ್ನಾಗಿ ನೋಂದಣಿ ಮಾಡುವ ಕಾರ್ಯಕ್ಕೆ ಕಡಿವಾಣ ಇಲ್ಲದಂತಾಗಿ ಈ ಸಂಸ್ಥೆಯ ಕಡೆ ಸಾಹಿತಿಗಳು ವಿಮುಖರಾಗುತ್ತಾರೆ. ಜೊತೆಗೆ ಕಾರ್ಯಕಾರಿ ಸಮಿತಿಯ ಅಧಿಕಾರಾವಧಿಯನ್ನು 3ರಿಂದ 5 ವರ್ಷಕ್ಕೆ ಏರಿಕೆ ಮಾಡಿರುವುದು ಸೂಕ್ತವಲ್ಲ. ಅದನ್ನು ಮತ್ತೆ 3 ವರ್ಷಕ್ಕೆ ನಿಗದಿಪಡಿಸುವುದು ಒಳ್ಳೆಯದು.

ಸಿ.ಸಿದ್ದರಾಜು ಆಲಕೆರೆ, ಮಂಡ್ಯ

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete. © All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಕಚ್ಚಾ ತೈಲ ತುರ್ತು ಬಳಕೆ ಮೀಸಲಿನಿಂದಲೇ ಮಾರುಕಟ್ಟೆಗೆ ಪೂರೈಕೆ

ತೈಲ ದೊರೆಗಳಿಗೆ ಬಿಸಿ ತಾಗಿಸುವ ತಂತ್ರ

● ಜಯಸಿಂಹ ಆರ್.

ಅಮೆರಿಕದ ನೇತೃತ್ವದಲ್ಲಿ ಭಾರತ, ಬ್ರಿಟನ್, ಚೀನಾ, ಜಪಾನ್ ಮತ್ತು ದಕ್ಷಿಣ ಕೊರಿಯಾ ದೇಶಗಳು ತಮ್ಮ ರಾಷ್ಟ್ರೀಯ ತೈಲ ತುರ್ತು ಬಳಕೆ ಮೀಸಲಿನಿಂದ 7–8 ಕೋಟಿ ಬ್ಯಾರೆಲ್ ಕಚ್ಚಾತೈಲವನ್ನು ಎರಡು ತಿಂಗಳ ಅವಧಿಯಲ್ಲಿ, ಮಾರುಕಟ್ಟೆಗೆ ಪೂರೈಸಲು ನಿರ್ಧರಿಸಿವೆ. ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಕಚ್ಚಾತೈಲದ ಬೆಲೆಯನ್ನು ಇಳಿಸಲು ಈ ಕ್ರಮ ತೆಗೆದುಕೊಳ್ಳಲಾಗಿದೆ ಎಂದು ಅಮೆರಿಕವು ಹೇಳಿದೆ.

2020ರಲ್ಲಿ ಜಗತ್ತಿನ ವಿವಿಧ ಭಾಗಗಳಲ್ಲಿ ಕೋವಿಡ್ ಲಾಕ್‌ಡೌನ್ ಜಾರಿಯಾಗುವುದಕ್ಕೂ ಮುನ್ನ ಪೆಟ್ರೋಲಿಯಂ ರಫ್ತು ದೇಶಗಳ ಸಂಘಟನೆಯ (ಒಪೆಕ್+) ಸದಸ್ಯ ರಾಷ್ಟ್ರಗಳು ಪ್ರತಿದಿನ 3 ಕೋಟಿ ಬ್ಯಾರೆಲ್‌ಗೂ ಹೆಚ್ಚು ಕಚ್ಚಾತೈಲವನ್ನು ಉತ್ಪಾದಿಸುತ್ತಿದ್ದವು. ಲಾಕ್‌ಡೌನ್ ಅವಧಿಯಲ್ಲಿ ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಕಚ್ಚಾತೈಲಕ್ಕೆ ಬೇಡಿಕೆ ಕುಸಿಯಿತು, ಜತೆಗೆ ಕಚ್ಚಾತೈಲದ ದರವೂ ನೆಲಕಚ್ಚಿತು. ಇದರಿಂದಾಗಿ ಒಪೆಕ್+ ದೇಶಗಳು ತಮ್ಮ ದೈನಂದಿನ ಕಚ್ಚಾತೈಲ ಉತ್ಪಾದನೆಯನ್ನು ಗಣನೀಯ ಪ್ರಮಾಣದಲ್ಲಿ ಕಡಿತ ಮಾಡಿದವು. ಲಾಕ್‌ಡೌನ್ ತೆರವಾದಂತೆ ಕಚ್ಚಾತೈಲಕ್ಕೆ ಬೇಡಿಕೆ ಹೆಚ್ಚಾಯಿತು. ಆದರೆ ಒಪೆಕ್+ ದೇಶಗಳು ತಮ್ಮ ದೈನಂದಿನ ಉತ್ಪಾದನೆಯನ್ನು ಹೆಚ್ಚಿಸಲಿಲ್ಲ. ಒಪೆಕ್+ ದೇಶಗಳು ಈಗ ಪ್ರತಿದಿನ 2.7 ಕೋಟಿ ಬ್ಯಾರೆಲ್ ಕಚ್ಚಾತೈಲವನ್ನು ಮಾತ್ರ ಉತ್ಪಾದಿಸುತ್ತಿವೆ. ಇದರಿಂದ ಬೇಡಿಕೆ ಹೆಚ್ಚಾಗಿ, ಪೂರೈಕೆ ಕಡಿಮೆಯಾಯಿತು. ಪರಿಣಾಮವಾಗಿ ಕಚ್ಚಾತೈಲದ ದರ ವಿಪರೀತ ಪ್ರಮಾಣದಲ್ಲಿ ಏರಿಕೆಯಾಯಿತು.

ಕಚ್ಚಾತೈಲದ ದರವನ್ನು ಇಳಿಸಲು ಉತ್ಪಾದನೆಯನ್ನು ಹೆಚ್ಚಿಸುವಂತೆ ತೈಲ ಆಮದು ರಾಷ್ಟ್ರಗಳು, ಒಪೆಕ್+ ದೇಶಗಳನ್ನು ಕೇಳಿಕೊಂಡವು. ಈ ಬೇಡಿಕೆಯನ್ನು ಒಪೆಕ್+ ದೇಶಗಳು ಮಾನ್ಯ ಮಾಡಲಿಲ್ಲ. ಒಪೆಕ್+ ದೇಶಗಳ ಮೇಲೆ ಒತ್ತಡ ಹೇರುವ ಸಲುವಾಗಿ ಅಮೆರಿಕದ ನೇತೃತ್ವದಲ್ಲಿ ಆರು ದೇಶಗಳು ತಮ್ಮ ತುರ್ತು ಬಳಕೆ ಮೀಸಲಿನಲ್ಲಿರುವ ಕಚ್ಚಾತೈಲವನ್ನು ಮಾರುಕಟ್ಟೆಗೆ ಬಿಡುಗಡೆ ಮಾಡಲು ಮುಂದಾಗಿವೆ.

ಅನುಕೂಲ

ಅಮೆರಿಕವು ಈ ಘೋಷಣೆ ಮಾಡಿದ ನಂತರ ಜಾಗತಿಕ ಮಾರುಕಟ್ಟೆಯಲ್ಲಿ ಪ್ರತೀ ಬ್ಯಾರೆಲ್ ಬ್ರೆಂಟ್ ಕಚ್ಚಾತೈಲದ ಬೆಲೆ ಶೇ 0.4ರಷ್ಟು ಇಳಿಕೆಯಾಗಿದೆ. ಅಮೆರಿಕದ ವೆಸ್ಟ್ ಟೆಕ್ಸಾಸ್ ಇಂಟರ್‌ಮೀಡಿಯೇಟ್ ಕಚ್ಚಾತೈಲದ ಬೆಲೆ, ಪ್ರತೀ ಬ್ಯಾರೆಲ್‌ಗೆ ಶೇ 0.2ರಷ್ಟು ಇಳಿಕೆಯಾಗಿದೆ. ಆದರೆ ಈ ಬೆಲೆ ಇಳಿಕೆ ಗ್ರಾಹಕರಿಗೆ ತಕ್ಷಣವೇ ವರ್ಗವಾಗುವುದಿಲ್ಲ ಎಂದು ತಜ್ಞರು ಹೇಳಿದ್ದಾರೆ.

ಸಾಮಾನ್ಯವಾಗಿ ತೈಲ ಕಂಪನಿಗಳು ಕಚ್ಚಾತೈಲವನ್ನು ಎರಡು ತಿಂಗಳು ಮುಂಗಡವಾಗಿ ಖರೀದಿಸುತ್ತವೆ. ಮುಂದಿನ ಎರಡು ತಿಂಗಳಿಗೆ ಅಗತ್ಯವಿರುವ ಕಚ್ಚಾತೈಲವನ್ನು ಈಗಾಗಲೇ ಖರೀದಿಸಿರುವ ಕಾರಣ, ಈಗ ಇಳಿಕೆಯಾದ ಬೆಲೆಯಲ್ಲಿ ಕಚ್ಚಾತೈಲವನ್ನು ಖರೀದಿಸಿದರೂ ಅದರ ಲಾಭ ಗ್ರಾಹಕನಿಗೆ ತಲುಪಲು ಎರಡು ತಿಂಗಳು ಬೇಕಾಗುತ್ತದೆ ಎಂದು ತಜ್ಞರು ವಿವರಿಸಿದ್ದಾರೆ.

ಭಾರತದ ತುರ್ತು ಬಳಕೆ ಮೀಸಲು

ಭಾರತವು ಯುದ್ಧ, ಪೂರೈಕೆ ಸ್ಥಗಿತದಂತಹ ತುರ್ತು ಸಂದರ್ಭಗಳಲ್ಲಿ ತನ್ನ ಕಚ್ಚಾತೈಲದ ಅಗತ್ಯವನ್ನು ಪೂರೈಸಿಕೊಳ್ಳಲು ದೇಶದ ಮೂರು ಕಡೆ 'ತುರ್ತು ಬಳಕೆ ಮೀಸಲು' ಸಂಗ್ರಹಾಗಾರಗಳನ್ನು ಸ್ಥಾಪಿಸಿದೆ. ಮಂಗಳೂರು, ಉಡುಪಿ ಬಳಿಯ ಪಾದೂರು ಮತ್ತು ವಿಶಾಖಪಟ್ಟಣದ ಬಳಿ ಒಂದೊಂದು ನೆಲದಡಿಯ ಸಂಗ್ರಹಾಗಾರಗಳನ್ನು ನಿರ್ಮಿಸಿದೆ. ಅವುಗಳಲ್ಲಿ ತುರ್ತು ಬಳಕೆ ಮೀಸಲನ್ನು ಸಂಗ್ರಹಿಸಲಾಗಿದೆ. ಇಂಡಿಯನ್ ಸ್ಟ್ರಾಟೆಜಿಕ್ ಪೆಟ್ರೋಲಿಯಂ ರಿಸರ್ವ್ ಲಿಮಿಟೆಡ್ (ಐಎಸ್‌ಪಿಆರ್‌ಎಲ್) ಇವುಗಳನ್ನು ನಿರ್ವಹಿಸುತ್ತದೆ.

'3.91 ಕೋಟಿ ಬ್ಯಾರೆಲ್‌ಗಳಷ್ಟು ಕಚ್ಚಾತೈಲವನ್ನು ಸಂಗ್ರಹಿಸುವ ಸಾಮರ್ಥ್ಯ ಈ ಸಂಗ್ರಹಾಗಾರಗಳಿಗಿದೆ. ಇದರಲ್ಲಿ 50 ಲಕ್ಷ ಬ್ಯಾರೆಲ್ ಅನ್ನು ಮಾರುಕಟ್ಟೆಗೆ ಬಿಡುಗಡೆ ಮಾಡಲು ಯೋಜಿಸಲಾಗಿದೆ. ಇದು ದೇಶದ ಒಂದು ದಿನದ ಅಗತ್ಯವನ್ನಷ್ಟೇ ಪೂರೈಸಲು ಸಾಕಾಗುತ್ತದೆ' ಎಂದು ಸರ್ಕಾರದ ಮೂಲಗಳು ಹೇಳಿವೆ.

1.83 ಕೋಟಿ ಬ್ಯಾರೆಲ್
ಉಡುಪಿಯ ಪಡೂರು ತುರ್ತು ಬಳಕೆ ಮೀಸಲಿನ ಸಾಮರ್ಥ್ಯ

9.77 ಲಕ್ಷ ಬ್ಯಾರೆಲ್
ವಿಶಾಖಪಟ್ಟಣದ ತುರ್ತು ಬಳಕೆ ಮೀಸಲಿನ ಸಾಮರ್ಥ್ಯ

1.1 ಕೋಟಿ ಬ್ಯಾರೆಲ್
ಮಂಗಳೂರಿನ ತುರ್ತು ಬಳಕೆ ಮೀಸಲಿನ ಸಾಮರ್ಥ್ಯ

ಭಾರತದಲ್ಲಿನ ಈ ಮೂರೂ ತುರ್ತು ಬಳಕೆ ಮೀಸಲು ಸಂಗ್ರಹಾಗಾರಗಳನ್ನು ಸ್ಥಾಪಿಸಲು ಕಾಂಗ್ರೆಸ್ ನೇತೃತ್ವದ ಯುಪಿಎ ಸರ್ಕಾರ ಕ್ರಮ ತೆಗೆದುಕೊಂಡಿತ್ತು. ಇವುಗಳ ಕಾಮಗಾರಿ 2010ಕ್ಕೂ ಮುನ್ನ ಆರಂಭವಾಗಿತ್ತು. ಆದರೆ ಈಗ ದೇಶದ ತೈಲ ಬಳಕೆ ಹೆಚ್ಚಾಗಿದೆ. ಈಗಿರುವ ತುರ್ತು ಬಳಕೆ ಮೀಸಲಿನಲ್ಲಿ ಇರುವ ತೈಲವು ದೇಶದ ಬೇಡಿಕೆಯನ್ನು 7–8 ದಿನವಷ್ಟೇ ಪೂರೈಸಬಲ್ಲದು. ಕೇಂದ್ರದಲ್ಲಿ ಬಿಜೆಪಿ ನೇತೃತ್ವದ ಎನ್‌ಡಿಎ ಸರ್ಕಾರ ಅಧಿಕಾರಕ್ಕೆ ಬಂದ ನಂತರ, ಇಂತಹ ಸಂಗ್ರಹಾಗಾರಗಳನ್ನು ನಿರ್ಮಿಸಲು ಮುಂದಾಗಿಲ್ಲ. ಬದಲಿಗೆ ಇವುಗಳಲ್ಲಿರುವ ಸಂಗ್ರಹವನ್ನು ಮಾರಾಟ ಮಾಡಿ, ಜಾಗವನ್ನು ಬಾಡಿಗೆಗೆ ನೀಡಲು ಮುಂದಾಗಿದೆ.

'1.3 ಕೋಟಿ ಬ್ಯಾರೆಲ್‌ನಷ್ಟು ಖಾಸಗಿ ಕಂಪನಿಗಳಿಗೆ ಬಾಡಿಗೆಗೆ ನೀಡಲು ಸರ್ಕಾರ ಒಪ್ಪಂದ ಮಾಡಿಕೊಂಡಿದೆ. ಅದರಲ್ಲಿ 55 ಲಕ್ಷ ಬ್ಯಾರೆಲ್ ಜಾಗವನ್ನು ಈಗಾಗಲೇ ತೆರವು ಮಾಡಲಾಗಿದೆ. ಈಗ ಇನ್ನೂ 50 ಲಕ್ಷ ಬ್ಯಾರೆಲ್‌ನಷ್ಟು ಜಾಗ ತೆರವಾಗಲಿದೆ' ಎಂದು ಐಎಸ್‌ಪಿಆರ್‌ಎಲ್‌ನ ಅಧಿಕಾರಿಯೊಬ್ಬರು ಹೇಳಿದ್ದಾರೆ.

'ದುಷ್ಪರಿಣಾಮವೇ ಹೆಚ್ಚು'

'ಈಗ ತಮ್ಮ ತುರ್ತು ಬಳಕೆ ಮೀಸಲಿನಲ್ಲಿ ಇರುವ ಕಚ್ಚಾತೈಲವನ್ನು ಮಾರುಕಟ್ಟೆಗೆ ಪೂರೈಕೆ ಮಾಡುವುದಾಗಿ ಘೋಷಿಸಿರುವ ದೇಶಗಳೆಲ್ಲವೂ, ಕಚ್ಚಾತೈಲವನ್ನು ಆಮದು ಮಾಡಿಕೊಳ್ಳುವ ದೇಶಗಳಾಗಿವೆ. ಒಪೆಕ್+ ದೇಶಗಳ ಮೇಲೆ ಒತ್ತಡ ಹೇರಲು ಈ ಕ್ರಮ ತೆಗೆದುಕೊಳ್ಳಲಾಗಿದೆ ಎಂದು ಹೇಳಲಾಗುತ್ತಿದೆ. ಇಂದೊಂದು ರೀತಿಯಲ್ಲಿ, ದೈತ್ಯರ ವಿರುದ್ಧ ಅಸಮರ್ಥರು ಹೋರಾಟಕ್ಕೆ ಇಳಿದಂತೆ' ಎಂದು ಅಮೆರಿಕದ ರಿಸ್ಟೆಡ್ ಎನರ್ಜಿಯ ಕ್ಲಾಡೊ ಗಾಲಿಂಬರ್ಟಿ ವಿಶ್ಲೇಷಿಸಿದ್ದಾರೆ.

'ಒಪೆಕ್+ ದೇಶಗಳು ಪ್ರತಿದಿನ 2.7 ಕೋಟಿಗೂ ಹೆಚ್ಚು ಬ್ಯಾರೆಲ್ ಕಚ್ಚಾತೈಲವನ್ನು ಉತ್ಪಾದಿಸುತ್ತಿವೆ. ಅಮೆರಿಕ ಮತ್ತು ಇತರ ರಾಷ್ಟ್ರಗಳು ತಮ್ಮ ತುರ್ತು ಬಳಕೆ ಮೀಸಲಿನಿಂದ ಎರಡು ತಿಂಗಳವರೆಗೆ ಪೂರೈಕೆ ಮಾಡಲು ಯೋಜಿಸಿರುವ ಬ್ಯಾರೆಲ್‌ಗಳ ಸಂಖ್ಯೆ 7–8 ಕೋಟಿ ಮಾತ್ರ. ಇದರಿಂದ ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಯಾವುದೇ ಬದಲಾವಣೆ ಆಗುವುದಿಲ್ಲ. ಬದಲಿಗೆ ಇದು ಒಪೆಕ್+ ದೇಶಗಳನ್ನು ಕೆರಳಿಸಿದಂತೆ ಆಗುತ್ತದೆ' ಎಂದು ಅವರು ವಿವರಿಸಿದ್ದಾರೆ.

'ಡಿಸೆಂಬರ್ 2ರಂದು ಒಪೆಕ್+ ದೇಶಗಳು ಸಭೆ ನಡೆಸಲಿವೆ. ಎರಡು ತಿಂಗಳ ಅವಧಿಯಲ್ಲಿ ಮಾರುಕಟ್ಟೆಗೆ ಹೆಚ್ಚುವರಿಯಾಗಿ ಬರಲಿರುವ 7–8 ಕೋಟಿ ಬ್ಯಾರೆಲ್‌ಗಳಿಂದ ಬೆಲೆ ಕುಸಿಯುತ್ತದೆ ಎಂದು ಒಪೆಕ್ ದೇಶಗಳು ಭಾವಿಸಿದರೆ, ಅವು ಉತ್ಪಾದನೆಯನ್ನು ಮತ್ತಷ್ಟು ಕಡಿತ ಮಾಡುವ ಸಾಧ್ಯತೆ ಇದೆ. ಇದರಿಂದ ಕಚ್ಚಾತೈಲದ ಬೆಲೆ ಮತ್ತಷ್ಟು ಹೆಚ್ಚುವ ಅಪಾಯವಿದೆ' ಎಂದು ಅವರು ವಿವರಿಸಿದ್ದಾರೆ.

ಆಧಾರ: ರಾಯಿಟರ್ಸ್, ಇಂಟಯನ್ ಸ್ಟ್ರಾಟೆಜಿಕ್ ಪೆಟ್ರೋಲಿಯಂ ರಿಸರ್ವ್ ಲಿಮಿಟೆಡ್, ಒಪೆಕ್+, ಇಂಟರ್‌ನ್ಯಾಷನಲ್ ಎನರ್ಜಿ ಸೊಸೈಟಿ

ಸಂಗ್ರಹಾಗಾರದ ತೈಲ ಬಳಸಿದರೆ ಇಂಧನ ಬೆಲೆ ತಗ್ಗುತ್ತದೆಯೇ?

● ವಿಜಯ್ ಜೋಷಿ

ಕೇಂದ್ರ ಸರ್ಕಾರವು ತನ್ನ ತುರ್ತು ಬಳಕೆ ತೈಲ ಸಂಗ್ರಹಾಗಾರಗಳಲ್ಲಿ ಸಂಗ್ರಹಿಸಿ ಇರಿಸಿಕೊಂಡಿರುವ ಕಚ್ಚಾ ತೈಲವನ್ನು ದೇಶಿ ಮಾರುಕಟ್ಟೆಗೆ ಪೂರೈಕೆ ಮಾಡಿದರೆ, ದೇಶಿ ಮಾರುಕಟ್ಟೆಯಲ್ಲಿ ಪೆಟ್ರೋಲಿಯಂ ಉತ್ಪನ್ನಗಳ ಬೆಲೆ ಇಳಿಕೆ ಆಗುತ್ತದೆಯೇ? ದೇಶಿ ಮಾರುಕಟ್ಟೆಯಲ್ಲಿ ಪೆಟ್ರೋಲ್ ಮತ್ತು ಡೀಸೆಲ್ ಬೆಲೆ ಇಳಿಕೆ ಮಾಡಬೇಕು ಎಂದಾದರೆ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ತಾವು ವಿಧಿಸುತ್ತಿರುವ ತೆರಿಗೆ, ಸುಂಕವನ್ನು ಕಡಿಮೆ ಮಾಡಬೇಕೇ ಅಥವಾ ಸಂಗ್ರಹಾಗಾರಗಳಲ್ಲಿ ಇರುವ ತೈಲವನ್ನು ಮಾರುಕಟ್ಟೆಗೆ ತರಬೇಕೇ?

ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಪ್ರತಿ ಬ್ಯಾರೆಲ್‌ಗೆ 19 ಡಾಲರ್ ಇದ್ದಾಗ ಖರೀದಿಸಿದ್ದ ಕಚ್ಚಾ ತೈಲವನ್ನು ಕೇಂದ್ರ ಸರ್ಕಾರವು ಅಕ್ಟೋಬರ್ ತಿಂಗಳಿನಲ್ಲಿ ದೇಶಿ ಮಾರುಕಟ್ಟೆಗೆ ಪೂರೈಕೆ ಮಾಡಿತ್ತು. ಆಗ ಅದನ್ನು ತೈಲ ಸಂಸ್ಕರಣಾ ಕಂಪನಿಗಳಿಗೆ ಅಂದಿನ ಮಾರುಕಟ್ಟೆ ದರಕ್ಕೆ, ಅಂದರೆ ಬ್ಯಾರೆಲ್‌ಗೆ ಸರಿಸುಮಾರು 80 ಡಾಲರ್‌ನಂತೆ, ಮಾರಾಟ ಮಾಡಿದ್ದು ವರದಿಯಾಗಿತ್ತು. ಆಗ ದೇಶಿ ಮಾರುಕಟ್ಟೆಯಲ್ಲಿ ಪೆಟ್ರೋಲ್, ಡೀಸೆಲ್ ದರವು ಗರಿಷ್ಠ ಮಟ್ಟದಲ್ಲಿ ಇತ್ತು. ಕೇಂದ್ರದ ನಡೆಯ ಬಗ್ಗೆ ಒಂದು ವರ್ಗದಿಂದ ಆಕ್ರೋಶ ವ್ಯಕ್ತವಾಗಿತ್ತು. 'ಕಡಿಮೆ ಬೆಲೆಗೆ ಖರೀದಿಸಿದ್ದ ಕಚ್ಚಾ ತೈಲವನ್ನು ಬಳಸಿ, ದೇಶಿ ಮಾರುಕಟ್ಟೆಯಲ್ಲಿ ಪೆಟ್ರೋಲಿಯಂ ಉತ್ಪನ್ನಗಳ ಬೆಲೆ ಇಳಿಕೆಗೆ ಯತ್ನಿಸಬಹುದಿತ್ತು' ಎಂದು ಕೆಲವರು ಸಾಮಾಜಿಕ ಜಾಲತಾಣಗಳ ಮೂಲಕ ವಾದಿಸಿದ್ದರು.

ಉಡುಪಿ ಸಮೀಪದ ಪಾದೂರಿನಲ್ಲಿ ಇರುವ ತೈಲ ಸಂಗ್ರಹಾಗಾರ

ಆದರೆ, ಇದು ಕಾರ್ಯಸಾಧುವೇ? ದೇಶಿ ಮಾರುಕಟ್ಟೆಯಲ್ಲಿ ತೈಲೋತ್ಪನ್ನಗಳ ಬೆಲೆ ತಗ್ಗಿಸಬೇಕು ಎಂದಾದರೆ ಸುಂಕ ಹಾಗೂ ತೆರಿಗೆ ಕಡಿಮೆ ಮಾಡುವುದೇ ಅತ್ಯಂತ ಸೂಕ್ತವಾದ ಮಾರ್ಗ ಎಂದು ತಜ್ಞರು ಅಭಿಪ್ರಾಯಪಟ್ಟಿದ್ದರು.

ಅಮೆರಿಕದ ಅತ್ಯಂತ ಅಪರೂಪದ ಹಾಗೂ ಅಸಾಧಾರಣ ಮನವಿಗೆ ಸ್ಪಂದಿಸಿರುವ ಭಾರತವು ಈಗ ಮತ್ತೆ ಐವತ್ತು ಲಕ್ಷ ಬ್ಯಾರೆಲ್ ಕಚ್ಚಾ ತೈಲವನ್ನು ತನ್ನ ಸಂಗ್ರಹಾಗಾರಗಳಿಂದ ಮಾರುಕಟ್ಟೆಗೆ ಪೂರೈಕೆ ಮಾಡಲಿದೆ. ಇದು, ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿನ ಕಚ್ಚಾ ತೈಲದ ಬೆಲೆ ಸ್ಥಿರವಾಗಬೇಕು ಎಂಬ ಉದ್ದೇಶವನ್ನು ಹೊಂದಿದೆ.

'ನಮ್ಮಲ್ಲಿನ ತೈಲ ಸಂಗ್ರಹಾಗಾರಗಳಲ್ಲಿನ ಕಚ್ಚಾ ತೈಲವನ್ನು ಮಾರುಕಟ್ಟೆಗೆ ಪೂರೈಕೆ ಮಾಡಿ, ದೇಶಿ ಮಾರುಕಟ್ಟೆಯಲ್ಲಿ ತೈಲ ಬೆಲೆ ತಗ್ಗಿಸಲು ದೀರ್ಘಾವಧಿಯಲ್ಲಿ ಆಗದು. ಅಲ್ಪಾವಧಿಯಲ್ಲಿ ಆ ರೀತಿ ಮಾಡಬಹುದಾದರೂ, ಅದು ಸೂಕ್ತ ಕ್ರಮ ಆಗುವುದಿಲ್ಲ. ಸಂಗ್ರಹಾಗಾರಗಳಲ್ಲಿನ ಕಚ್ಚಾ ತೈಲವನ್ನು ಬಳಸಿ ದೇಶಿ ಮಾರುಕಟ್ಟೆಯ ಹತ್ತು ಅಥವಾ ಹದಿನೈದು ದಿನಗಳ ತೈಲ ಅಗತ್ಯವನ್ನು ಪೂರೈಸಬಹುದು. ಅಂದರೆ, ಅಷ್ಟು ದಿನಗಳವರೆಗೆ (10 ಅಥವಾ 15 ದಿನ) ದೇಶಿ ಮಾರುಕಟ್ಟೆಯಲ್ಲಿ ತೈಲೋತ್ಪನ್ನಗಳ ಬೆಲೆ ಕಡಿಮೆ ಆಗುವಂತೆ ಮಾಡಬಹುದು. ಆದರೆ, ನಂತರದಲ್ಲಿ ತೈಲೋತ್ಪನ್ನಗಳ ಬೆಲೆಯು ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿನ ಬೆಲೆಗೆ ಅನುಗುಣವಾಗಿ ಮತ್ತೆ ಹೆಚ್ಚು (ಅಥವಾ ಕಡಿಮೆ) ಆಗಲೇಬೇಕು. ತೈಲೋತ್ಪನ್ನಗಳನ್ನು 10–15 ದಿನ ಕಡಿಮೆ ಬೆಲೆಗೆ ಕೊಟ್ಟರೂ, ನಂತರದಲ್ಲಿ ಅವುಗಳ ಬೆಲೆಯನ್ನು ದಿಢೀರ್ ಹೆಚ್ಚಿಸಬೇಕಾಗುತ್ತದೆ. ಹಾಗಾಗಿ, ಸಂಗ್ರಹಾಗಾರಗಳಲ್ಲಿನ ಕಚ್ಚಾ ತೈಲವನ್ನು ನೆಚ್ಚಿಕೊಂಡು ದೇಶಿ ಮಾರುಕಟ್ಟೆಯಲ್ಲಿ ಬೆಲೆ ನಿಯಂತ್ರಣ ಆಗದ ಕೆಲಸ' ಎಂದು ಕರ್ನಾಟಕ ವಾಣಿಜ್ಯ ಮತ್ತು ಕೈಗಾರಿಕಾ ಮಹಾಸಂಸ್ಥೆಯ (ಎಫ್‌ಕೆಸಿಸಿಐ) ಪದಾಧಿಕಾರಿಯೊಬ್ಬರು 'ಪ್ರಜಾವಾಣಿ'ಗೆ ಹೇಳಿದ್ದಾರೆ.

ತೈಲೋತ್ಪನ್ನಗಳ ಬೆಲೆಯನ್ನು ತಗ್ಗಿಸಲು ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ತೆರಿಗೆ ಪ್ರಮಾಣವನ್ನು ಕಡಿಮೆ ಮಾಡುವುದು ಸೂಕ್ತ ಕ್ರಮ ಎಂಬುದು ಬ್ರಿಕ್‌ವರ್ಕ್ ರೇಟಿಂಗ್ಸ್ ಸಂಸ್ಥೆಯ ಮುಖ್ಯ ಆರ್ಥಿಕ ಸಲಹೆಗಾರ ಡಾ.ಎಂ. ಗೋವಿಂದ ರಾವ್ ಅವರ ಅಭಿಪ್ರಾಯ. ಕೇಂದ್ರ ಸರ್ಕಾರವು ಪೆಟ್ರೋಲ್ ಮತ್ತು ಡೀಸೆಲ್ ಮೇಲಿನ ಎಕ್ಸೈಸ್ ಸುಂಕವನ್ನು, ರಾಜ್ಯ ಸರ್ಕಾರಗಳು ಮೌಲ್ಯವರ್ಧಿತ ತೆರಿಗೆಯನ್ನು ಈಚೆಗೆ ತಗ್ಗಿಸಿವೆ.

ದೇಶಿ ಮಾರುಕಟ್ಟೆಯಲ್ಲಿ ತೈಲೋತ್ಪನ್ನಗಳ ಬೆಲೆ ಇಳಿಕೆ ಆಗಬೇಕು ಎಂದಾದಲ್ಲಿ, ತೆರಿಗೆ ಹಾಗೂ ಸುಂಕವನ್ನು ತಗ್ಗಿಸುವುದೇ ಸರಿಯಾದ ಮಾರ್ಗ ಎಂದು ರೇಟಿಂಗ್ಸ್ ಸಂಸ್ಥೆ ಕ್ರಿಸಿಲ್ ಕೂಡ ಹೇಳಿದೆ. 'ಕಚ್ಚಾ ತೈಲ ಬೆಲೆ ಏರಿಕೆಯ ಪರಿಣಾಮವು ಜನಸಾಮಾನ್ಯರ ಮೇಲೆ ಹೆಚ್ಚಿನ ಮಟ್ಟದಲ್ಲಿ ಆಗದಂತೆ ನೋಡಿಕೊಳ್ಳುವ ಮಾರ್ಗವೆಂದರೆ ತೆರಿಗೆ, ಸುಂಕವನ್ನು ತಗ್ಗಿಸುವುದು' ಎಂದು ಕ್ರಿಸಿಲ್‌ನ ಪ್ರಧಾನ ಅರ್ಥಶಾಸ್ತ್ರಜ್ಞೆ ದೀಪ್ತಿ ದೇಶಪಾಂಡೆ ಅವರು 'ಪ್ರಜಾವಾಣಿ' ಜೊತೆ ಈ ಹಿಂದೆ ಅಭಿಪ್ರಾಯ ಹಂಚಿಕೊಂಡಿದ್ದರು.

ವೇದವ್ಯಾಸರ ಶಿವಪುರಾಣದ ಕುಮಾರಖಂಡಸಾರ 14

ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ

ಗಣಪತಿ ಆಕ್ರಮಣಕ್ಕೆ ತಲ್ಲಣಿಸಿದ ಗಣಗಳು

ಶಿವನ ಆಜ್ಞೆಯಂತೆ ಬಾಲ ಗಣಪನ ಬಳಿ ಬಂದ ಶಿವಗಣಗಳು 'ಬಾಲಕ ನೀನಾರು? ಏಕೆ ಇಲ್ಲಿಗೆ ಬಂದಿರುವೆ? ಇಲ್ಲಿ ನಿನಗೇನು ಕೆಲಸ? ನಿನಗೆ ಜೀವದ ಮೇಲೆ ಆಸೆಯಿದ್ದರೆ ಇಲ್ಲಿಂದ ದೂರ ಹೋಗು' ಎಂದರು. ಶಿವಗಣಗಳ ಮಾತನ್ನು ಕೇಳಿ ಗಣಪತಿಯು ಹೆದರಲಿಲ್ಲ. ತಾನು ಪಾರ್ವತಿಯ ಪುತ್ರ. ಅಮ್ಮನ ಅಪ್ಪಣೆ ಇಲ್ಲದೆ ಯಾರನ್ನೂ ಒಳಗೆ ಬಿಡುವುದಿಲ್ಲ ಅಂತ ಶಿವಗಣಗಳನ್ನು ನಿಂದಿಸಿ ಕದವನ್ನು ಮುಚ್ಚಿದ. ನಿರಾಸೆಯಿಂದ ಶಿವನ ಗಣಗಳೆಲ್ಲಾ ಶಿವನ ಬಳಿ ಬಂದು ನಡೆದ ವೃತ್ತಾಂತವನ್ನೆಲ್ಲಾ ತಿಳಿಸಿದರು. ಗಣಗಳ ಮಾತು ಕೇಳಿ ಶಿವ ಕೋಪಗೊಂಡ, 'ಆ ಹೊಸ ಹುಡುಗನನ್ನು ಹೆದರಿಸಿ ದೂರ ಕಳುಹಿಸದೆ ಹೇಡಿಗಳಂತೆ ಬಂದು ನನ್ನೆದುರು ನಿಂತಿದ್ದೀರ' ಅಂತ ಗದರಿದ. ಆಗ ಶಿವನ ಗಣಗಳೆಲ್ಲ ಪುನಃ ಗಣಪತಿ ಬಳಿ ಬಂದು ಬಾಗಿಲು ತೆರೆದು ಶಿವನು ಒಳ ಹೋಗಲು ಅವಕಾಶ ಕೊಡಬೇಕೆಂದು ಎಚ್ಚರಿಸಿದವು. ಈ ಮಾತನ್ನು ಕೇಳಿ ಗಣಪತಿಯು ಅತ್ಯಂತ ಸಿಟ್ಟಿನಿಂದ ತನ್ನ ಕೈಯಲ್ಲಿರುವ ಕೋಲಿನಿಂದ ಗಣಗಳನ್ನು ಹೊಡೆಯಲು ಪ್ರಾರಂಭಿಸಿದ. ಗಣೇಶನ ಹೊಡೆತ ತಾಳಲಾರದೆ ಅಲ್ಲಿಂದ ಮತ್ತೆ ಶಿವನ ಬಳಿ ಹಿಂದಿರುಗಿ ಗಣಪತಿ ಹೊಡೆದುದನ್ನು ನಿವೇದಿಸಿದರು.

ಶಿವನು ಗಣಗಳ ಮಾತುಗಳನ್ನು ಕೇಳಿ ಅತ್ಯಂತ ಕೋಪಗೊಂಡು 'ಎಲೈ ನೀಚರೇ, ನೀವೆಲ್ಲರೂ ನಪುಂಸಕರು, ವೀರರಲ್ಲ. ಒಬ್ಬ ಸಣ್ಣ ಬಾಲಕನನ್ನು ಹೆದರಿಸಲು ಆಗಲಿಲ್ಲವೇ ನಿಮಗೆ. ಅವನನ್ನು ಹೊಡೆದು, ಈಗಲೇ ಓಡಿಸಲೇಬೇಕು' ಎಂದು ಆಜ್ಞಾಪಿಸಿದ. ಆಗ ಪ್ರಮಥಗಣಗಳೆಲ್ಲ ಮತ್ತೆ ಗಣಪತಿಯ ಬಳಿ ಹೋಗಿ 'ಬಾಲಕನೇ, ಸುಮ್ಮನೆ ದೂರ ಹೋಗು. ಇಲ್ಲದಿದ್ದರೆ ಮೃತ್ಯುವನ್ನು ಎದುರು ನೋಡುವೆ' ಎಂದು ಎಚ್ಚರಿಸಿದರು. ಗಣಗಳು ಆಡಿದ ಮಾತನ್ನು ಕೇಳಿ ಗಣಪತಿಯು ಈಗೇನು ಮಾಡಲಿ? ಅಂತ ಯೋಚಿಸುತ್ತಿರುವಾಗ ಪಾರ್ವತಿಯು 'ಬಾಗಿಲಿನಲ್ಲಿ ಜಗಳವಾಗುತ್ತಿರುವುದೇಕೆ, ನೋಡು' ಎಂದು ತನ್ನ ಸಖಿಯನ್ನು ಕಳಿಸಿದಳು. ಸಖಿಯು ಬಾಗಿಲಿಗೆ ಬಂದು ಅಲ್ಲಿ ನಡೆಯುತ್ತಿರುವ ಘಟನೆಯ ಮಾಹಿತಿಯನ್ನು ಪಾರ್ವತಿಗೆ ತಿಳಿಸಿದಳು. 'ಗಣೇಶ ಬಾಲಕನಾದರೂ ಕೆಚ್ಚೆದೆಯಿಂದ ಶಿವಗಣಗಳನ್ನೆಲ್ಲಾ ತಡೆದು ನಿಲ್ಲಿಸಿದ್ದಾನ' ಎಂದು ಕೊಂಡಾಡಿದಳು.

ಸಖಿಯ ಮಾತನ್ನು ಕೇಳಿದ ಪಾರ್ವತಿ ಮನಸ್ಸಿನಲ್ಲಿ ಯೋಚಿಸಿದಳು. ಬಾಲಕನನ್ನು ಕಾವಲಿಗೆ ಇರಿಸಿದ ಸ್ವಲ್ಪಹೊತ್ತಿನಲ್ಲೇ ಇಂಥ ಅವಾಂತರ ಸೃಷ್ಟಿಸುತ್ತಿದ್ದಾರೆಂದು ಕೋಪ ಗೊಂಡಳು. ಶಿವನ ಅನುಜ್ಞೆಯಂತೆ ನಡೆಯುವ ಪತಿವ್ರತೆಯಾದ ಪಾರ್ವತಿಗೆ ಶಿವನ ಉದ್ಧಟತನ ಇಷ್ಟವಾಗಲಿಲ್ಲ. ಸಖಿಯನ್ನು ಕರೆದು 'ನನ್ನ ಮಗ ಒಳ್ಳೆಯ ಕೆಲಸವನ್ನೇ ಮಾಡಿದ್ದಾನೆ. ಶಿವನ ಗಣಗಳು ಒಳಗೆ ಬರದಂತೆ ಮತ್ತಷ್ಟು ಬಿಗಿ ಕಾವಲು ಕಾಯುವಂತೆ' ತಿಳಿಸಿದಳು. ಸಖಿ ಗಣೇಶನಿಗೆ ಪಾರ್ವತಿ ಹೇಳಿದ ಮಾತನ್ನು ಹೇಳಿದಳು. ಇದರಿಂದ ಉತ್ತೇಜಿತನಾದ ಗಣಪತಿಯು ಸೊಂಟವನ್ನು ಕಟ್ಟಿ, ತೊಡೆಗಳನ್ನು ತಟ್ಟುತ್ತಾ ಬಲು ಪರಾಕ್ರಮದಿಂದ ನಿರ್ಭಯವಾಗಿ ಗಣಗಳಿಗೆ ಹೇಳಿದ. 'ನಾನು ಪಾರ್ವತಿಪುತ್ರ. ನೀವೂ ಶಿವನ ಗಣಗಳು. ನೀವು ಶಿವನ ಮಾತು ಪಾಲಿಸುತ್ತೀರಿ, ನಾನು ಪಾರ್ವತಿಯ ಆಜ್ಞೆಯಂತೆ ನಡೆಯುವವನು. ಅಮ್ಮನ ಅಪ್ಪಣೆ ಇಲ್ಲದೆ ನಿಮ್ಮನ್ನು ಒಳಕ್ಕೆ ಬಿಡುವುದಿಲ್ಲ' ಎಂದು ಎಚ್ಚರಿಸಿದ.

ಗಣಪತಿಯಾಡಿದ ಪೌರುಷದ ಮಾತುಗಳನ್ನು ಕೇಳಿ ಶಿವಗಣಗಳು ಅವನೊಂದಿಗೆ ಹೋರಾಡಲು ಹಿಂಜರಿದವು. ನಾಚಿಕೆಯಿಂದ ತಲೆತಗ್ಗಿಸಿಕೊಂಡು ಶಿವನ ಬಳಿ ಬಂದು ಬಾಲಕನ ಮಾತುಗಳನ್ನು ತಿಳಿಸಿದವು. ಕುಪಿತನಾದ ಶಿವ 'ಆ ಬಾಲಕನನ್ನು ಪಾರ್ವತಿಯು ಸೃಷ್ಟಿಮಾಡಿದ್ದಾಳೆ. ಅವನು ಹೀಗೆ ವರ್ತಿಸುವಂತೆ ಹೇಳಿಕೊಟ್ಟಿದ್ದಾಳೆ. ಅದರ ಫಲವನ್ನು ಜಾಗ್ರತೆಯಾಗಿ ಅನುಭವಿಸುವಳು. ಆದುದರಿಂದ ವೀರರಾದ ನೀವೆಲ್ಲರೂ ಆ ಬಾಲಕನ ವಿರುದ್ಧ ಯುದ್ಧಕ್ಕೆ ಸಿದ್ಧರಾಗಿ' ಎಂದನು.

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ 9606038256

✗ ಮಹಿಳೆಯನ್ನು ಗುಂಪೊಂದು ಥಳಿಸುತ್ತಿರುವ ವಿಡಿಯೊವನ್ನು 'ಬಿಜೆಪಿ ಉತ್ತರ ಪ್ರದೇಶ' ಟ್ವಿಟರ್ ಖಾತೆಯಲ್ಲಿ ಇದೇ 18ರಂದು ಟ್ವೀಟ್ ಮಾಡಲಾಗಿತ್ತು. ಇದು, ಕಾಂಗ್ರೆಸ್ ಆಡಳಿತ ಇರುವ ರಾಜಸ್ಥಾನದಲ್ಲಿ ನಡೆದಿದೆ ಎಂದು ಹೇಳಲಾಗಿತ್ತು. ಈ ಘಟನೆಯ ಕುರಿತು ಕಾಂಗ್ರೆಸ್ ನಾಯಕರಾದ ಪ್ರಿಯಾಂಕಾ ಗಾಂಧಿ ವಾದ್ರಾ ಮತ್ತು ರಾಹುಲ್ ಗಾಂಧಿ ಇಬ್ಬರಿಂದಲೂ ಪ್ರತಿಕ್ರಿಯೆ ಕೇಳಲಾಗಿತ್ತು. ಈ ಟ್ವೀಟ್ ಅನ್ನು ಬಿಜೆಪಿಯ ಜಮಶೆಡ್‌ಪುರ್ ಮಹಾನಗರ, ಆಗ್ರ ಮಹಾನಗರ ಟ್ವಿಟರ್ ಖಾತೆಗಳೂ ಸೇರಿ ಹಲವಾರು ಟ್ವಿಟರ್ ಖಾತೆಗಳು ಹಂಚಿಕೊಂಡಿದ್ದವು.

✓ ಇದು ರಾಜಸ್ಥಾನದ ಘಟನೆಯಲ್ಲ ಎಂದು ಆಲ್ಟ್ ನ್ಯೂಸ್ ವರದಿ ಮಾಡಿದೆ. ಉತ್ತರ ಪ್ರದೇಶದ ಅಮೇಠಿಯ ಭಾಗ್ವ ಗ್ರಾಮದಲ್ಲಿ ಈ ಘಟನೆ ನಡೆದಿರುವ ಕುರಿತು ದೈನಿಕ್ ಜಾಗರಣ್ ದಿನ ಪತ್ರಿಕೆಯ ಪತ್ರಕರ್ತರೊಬ್ಬರು 18ರಂದೇ ಟ್ವೀಟ್ ಮಾಡಿದ್ದಾರೆ. ಈ ಪ್ರಕರಣ ಇದೇ 15ರಂದು ನಡೆದಿದೆ. ಪ್ರಕರಣಕ್ಕೆ ಸಂಬಂಧಿಸಿದಂತೆ ಗೌರಿಗಂಜ್ ಪೊಲೀಸ್ ಠಾಣೆಯಲ್ಲಿ ಮೊಕದ್ದಮೆ ದಾಖಲಿಸಲಾಗಿದೆ ಎಂದು ಪೊಲೀಸರು ಈ ಟ್ವೀಟ್‌ಗೆ ಪ್ರತಿಕ್ರಿಯೆ ನೀಡಿದ್ದಾರೆ. ಭೂ ಕಲಹದ ಕಾರಣ ತಾಯಿ, ಮಗಳನ್ನು ಥಳಿಸಲಾಗಿದೆ ಎಂದು ಅವರು ತಿಳಿಸಿದ್ದಾರೆ.

ಗುಂಡಣ್ಣ



ಬೆರಗಿನ ಬೆಳಕು

ಗುರುರಾಜ ಕರಜಗಿ

ಮಾಗಿದಂತೆ ದೈವಕೃಪೆ

ದೈವಕೃಪೆಯೆನುವುದೇಂ? ಪರಸತ್ತ್ವನವವೃಷ್ಟಿ|
ಜೀವಗುಣ ಪಕ್ವಪಟ್ಟಂತದರ ವೇಗ||
ಭಾವ ಚೋದನೆಗಳಲಿ ಬಾಹ್ಯಸಾಧನೆಗಳಲಿ|
ತೀವಿ ದೊರೆಕೊಳುವುದದು – ಮಂಕುತಿಮ್ಮ
||505||

ಪದ-ಅರ್ಥ: ದೈವಕೃಪೆಯೆನುವುದೇಂ = ದೈವಕೃಪೆ + ಎನುವುದು (ಎನ್ನುವುದು) + ಏಂ (ಏನು), ಪರಸತ್ವನವವೃಷ್ಟಿ = ಪರಸತ್ವ + ನವವೃಷ್ಟಿ (ನಿತ್ಯ ನೂತನವಾದ ಕೃಪಾವರ್ಷ), ಪಕ್ವಪಟ್ಟಂತದರ = ಪಕ್ವಪಟ್ಟಂತೆ (ಪಕ್ವವಾದಂತೆ) + ಅದರ, ಚೋದನೆ = ಪ್ರೇರಣೆ, ತೀವಿ = ತುಂಬಿ

ವಾಚ್ಯಾರ್ಥ: ದೈವಕೃಪೆ ಎಂಬುದು ಏನು? ಅದು ದೈವ ಸದಾಕಾಲ ಹೊಸಹೊಸತಾಗಿ ಸುರಿಸುವ ಕೃಪಾ ವರ್ಷ. ಜೀವಿಯ ಗುಣ ಪಕ್ವವಾದಂತೆ ಕೃಪೆಯ ತೀವ್ರತೆ. ಅದು ವ್ಯಕ್ತಿಯನ್ನು ಭಾವಪ್ರಕಾಶದಲ್ಲಿ, ಲೋಕಸಾಧನೆಗಳಲ್ಲಿ ಮೈತುಂಬಿ ಬೆಳೆಸುತ್ತದೆ.

ವಿವರಣೆ: ಗುರುದೇವ ರವೀಂದ್ರನಾಥ ಠಾಕೂರರ ತಂದೆ ದೇವೇಂದ್ರನಾಥ್ ಠಾಕೂರರು ತತ್ವಜ್ಞಾನಿಯಾಗಿದ್ದವರು. ಒಂದು ದಿನ ಅವರ ಸ್ನೇಹಿತರು ರವೀಂದ್ರನಾಥರ ಮನೆಗೆ ಬಂದರು. ಬಾಗಿಲನ್ನು ತೆಗೆದು ಹೊರಬಂದ ರವೀಂದ್ರನಾಥರನ್ನೇ ದಿಟ್ಟಿಸಿ ನೋಡಿ, 'ನೀವು ಭಗವಂತನ ಬಗ್ಗೆ, ಅವನ ಕೃಪೆಯ ಬಗ್ಗೆ ಮಾತನಾಡುತ್ತೀರಿ. ಅದಕ್ಕೇ ನಿಮ್ಮನ್ನು ನೋಡಲು ಬಂದೆ. ಈಗ ನಿಮ್ಮ ಕಣ್ಣುಗಳನ್ನು ನೋಡಿದರೆ ನಿಮಗೆ ಭಗವಂತನ ದರ್ಶನವಾದಂತಿಲ್ಲ. ಅದಕ್ಕೆ ನಿಜವಾಗಿಯೂ ಪ್ರಯತ್ನ ಮಾಡಿ' ಎಂದು ಹೇಳಿ ಹೊರಟು ಹೋದರು. ರವೀಂದ್ರರಿಗೆ ಈ ವಿಚಾರ ಕೊರೆಯತೊಡಗಿತು. ಮರುದಿನ ಬೆಳಿಗ್ಗೆ ವಾಯುವಿಹಾರಕ್ಕೆ ಕೊಳದ ಕಡೆಗೆ ಹೊರಟರು. ಹಿಂದಿನ ರಾತ್ರಿ ಚೆನ್ನಾಗಿ ಮಳೆಯಾಗಿದೆ. ರಸ್ತೆಯಲ್ಲಿದ್ದ ಪುಟ್ಟ ಪುಟ್ಟ ಹೊಂಡಗಳಲ್ಲಿ ನೀರು ತುಂಬಿದೆ. ಆ ಕ್ಷಣ ಸೂರ್ಯ ಮೇಲೆ ಬಂದ. ಅವನ ಕಿರಣಗಳು ಪ್ರತಿಯೊಂದು ಹೊಂಡದ ನೀರಿನಲ್ಲಿ ಪ್ರತಿಫಲಿಸಿ, ಫಳ್ಳನೆ ಹೊಳೆದವು. ರವೀಂದ್ರರಿಗೆ ಕಂಡದ್ದು ನೂರಾರು ಸೂರ್ಯಬಿಂಬಗಳು! ಇದ್ದದ್ದು ಒಬ್ಬ ಸೂರ್ಯ, ಕಂಡದ್ದು ನೂರಾರು. ಆ ಕ್ಷಣದಲ್ಲೇ ಅವರಿಗೆ ಈಶಾವಾಸ್ಯದ ಮಾತು, 'ಈಶಾವಾಸ್ಯಮಿದಗಂ ಸರ್ವಂ' ಎಂಬುದು ಹೊಳೆಯಿತು! ಒಬ್ಬ ಭಗವಂತ ಎಲ್ಲರ ಹೃದಯಗಳಲ್ಲಿ ಮಿಡಿಯುತ್ತಾನೆ ಎಂಬುದು ತಿಳಿದು ಮನಸ್ಸು ಅವರ್ಣನೀಯವಾದ ಶಾಂತಿಯನ್ನು ಪಡೆಯಿತು. ಇವರೇ ಮರುದಿನ ತಂದೆಯ ಸ್ನೇಹಿತರ ಮನೆಗೆ ಹೋದಾಗ ಅವರು ಇವರನ್ನು ನೋಡಿ, 'ಹೌದು, ಈಗ ನಿಮಗೆ ದರ್ಶನವಾಗಿದೆ' ಎಂದರಂತೆ!

ಅದಕ್ಕೇ ಗುರುದೇವ ಹೇಳುತ್ತಾರೆ, 'ನಮ್ಮ ಮನಸ್ಸು ಪಕ್ವವಾಗಿ, ಸಿದ್ಧವಾಗಿದ್ದಾಗ ಭಗವಂತನ ಕರುಣೆ ಹರಿದು ಬರುತ್ತದೆ' ಹಾಗಾಗಿಯೇ ತಮ್ಮ ಗೀತಾಂಜಲಿಯಲ್ಲಿ, 'ಭಗವಂತ, ನನ್ನ ಬದುಕಿನ ವೀಣೆಯ ತಂತಿಗಳನ್ನು ಹದಗೊಳಿಸಿ ಇಟ್ಟಿದ್ದೇನೆ. ನಿನ್ನ ಕೃಪೆಯ ತಂಗಾಳಿಯಿಂದ ಅವುಗಳನ್ನು ಕದಲಿಸಿ ಅಮೃತೋಪಮವಾದ ಸಂಗೀತವನ್ನು ಹೊರಡಿಸು' ಎನ್ನುತ್ತಾರೆ. ಹಾಗೆಂದರೆ, ನಮ್ಮ ಬದುಕು ಹದಗೊಂಡಷ್ಟು, ಪಾಕಗೊಂಡಷ್ಟು ಭಗವಂತನ ಕೃಪೆ ಇಳಿದುಬರುತ್ತದೆ. ಪಾತ್ರೆ ಶುದ್ಧವಾಗಿದ್ದರೆ ಒಳ್ಳೆಯ ವಸ್ತುವನ್ನು ಹಿಡಿದೀತು. ಕಗ್ಗ ಅದನ್ನು ಸುಂದರವಾಗಿ ವರ್ಣಿಸುತ್ತದೆ. ದೈವಕೃಪೆ ಎನ್ನುವುದು, ಪರಸತ್ವ ಸದಾಕಾಲ, ನಿತ್ಯ ನೂತನವಾಗಿ ಸುರಿಸುವ ಕೃಪಾಧಾರೆ. ಆ ಧಾರೆ ನಮ್ಮೆಡೆಗೆ ಹರಿದು ಬರುವ ವೇಗ ನಮ್ಮ ಬದುಕು ಪಕ್ವವಾದಂತೆ ಹೆಚ್ಚಾಗುತ್ತದೆ. ಬದುಕು ಹೆಚ್ಚು ಪರಿಶುದ್ಧವಾದಂತೆ, ಆ ದೈವ ಕೃಪೆ ನಮ್ಮ ಭಾವಚರ್ಯೆಗಳಲ್ಲಿ, ಬಾಹ್ಯ-ಚರ್ಯೆಗಳಲ್ಲಿ ತುಂಬಿಕೊಂಡು ಬೆಳೆಸುತ್ತದೆ. ❖

ದಿನ ಭವಿಷ್ಯ

ಗುರುವಾರ ನವೆಂಬರ್ 25, 2021

ಶ್ರೀಪ್ಲವ ನಾಮ ಸಂವತ್ಸರ ದಕ್ಷಿಣಾಯಣ ಶರದೃತು ಕಾರ್ತೀಕ ಮಾಸ ಕೃಷ್ಣ ಪಕ್ಷ ಮಳೆ ನಕ್ಷತ್ರ ಅನೂರಾಧಾ ಷಷ್ಠೀ ಗಂ. 42-26 (ರಾ. 11-27) ಗುರುವಾರ ನಿತ್ಯ ನಕ್ಷತ್ರ ಪುಷ್ಯ ಗಂ. 21-24 (ಹ. 3-02) ಬ್ರಹ್ಮ ನಾಮ ಯೋಗ ಗಂ. 56-24 ಗರಜ ಕರಣ ಗಂ. 11-2 ವಿಷ ಗಂ. 55-16 ಅಮೃತ ಗಂ 3-31 : ರಾಹುಕಾಲ ಮ ಗಂ. 1-30 ರಿಂದ 3-00 ಗುಳಿಕ ಕಾಲ ಬೆ ಗಂ 9-00 ರಿಂದ 10-30 ಯಮಗಂಡ ಕಾಲ ಬೆ ಗಂ 6-00 ರಿಂದ 7-30 : ಸೂರ್ಯೋದಯ: 6-25 ಸೂರ್ಯಾಸ್ತ: 5-46 ಅದೃಷ್ಟ ಸಂಖ್ಯೆ 3 8

ಮೇಷ: ಅಪರಿಚಿತ ವ್ಯಕ್ತಿಗಳಿಂದ ಮೋಸಹೋಗುವ ಸಾಧ್ಯತೆ. ಹಣಕಾಸಿನ ವಿಷಯದಲ್ಲಿ ಅತ್ಯಂತ ಜಾಗರೂಕರಾಗಿರಿ. ಮನೆಯವರ ಸಲಹೆಗೆ ಮನ್ನಣೆ ನೀಡಿ. ಕುಲದೇವತಾ ಪ್ರಾರ್ಥನೆ ಒಳಿತನ್ನುಂಟುಮಾಡುವುದು.

ವೃಷಭ: ಕೆಲಸದ ಒತ್ತಡಕ್ಕೆ ಹೆದರಿ ವಿಮುಖರಾಗದಿರಿ. ಸರ್ಕಾರಿ ಕೆಲಸದಲ್ಲಿರುವವರಿಗೆ ನೌಕರಿಗೆ ರಾಜೀನಾಮೆಯಂತಹ ಪರಿಸ್ಥಿತಿ ತಲೆದೋರಬಹುದು. ದುಡುಕದೇ ಧೈರ್ಯವಾಗಿ ಮುನ್ನುಗ್ಗಿ. ಯಶಸ್ಸು ನಿಮ್ಮದಾಗಲಿದೆ.

ಮಿಥುನ: ಕೌಟುಂಬಿಕ ಕಿರಿಕಿರಿಯ ಸಾಧ್ಯತೆ. ಸಂಗಾತಿಯೊಡನೆ ವಾದ ವಿವಾದ ಸಲ್ಲ. ಮಕ್ಕಳ ಸಹಕಾರದಿಂದ ನೆಮ್ಮದಿ ಕಂಡುಕೊಳ್ಳುವಿರಿ. ಗುರುವಿನ ಆರಾಧನೆಯಿಂದ ಉತ್ತಮ ಫಲ ದೊರೆಯುವುದು.

ಕರ್ಕಾಟಕ: ಪ್ರೀತಿ ವಾತ್ಸಲ್ಯ ತುಂಬಿದ ಮಾತಿನಿಂದಾಗಿ ಸಂಗಾತಿಯಲ್ಲಿ ಹೆಚ್ಚಿನ ವಿಶ್ವಾಸ ಹೊಂದುವಿರಿ. ದಾಂಪತ್ಯದಲ್ಲಿ ಮಧುರ ಕ್ಷಣಗಳನ್ನು ಅನುಭವಿಸುವಿರಿ. ದೂರದ ಪ್ರಯಾಣದಿಂದಾಗಿ ಬೇಸರ ಉಂಟಾಗುವ ಸಾಧ್ಯತೆ.

ಸಿಂಹ: ಧಾರ್ಮಿಕ, ಸಾಮಾಜಿಕ ಚಿಂತನೆಗಳತ್ತ ಮನಸ್ಸನ್ನು ಹರಿಯ ಬಿಡುವ ಸಾಧ್ಯತೆ. ಜೀವನದ ಅರ್ಥ, ಮರ್ಮಗಳಿಗಾಗಿ ಹುಡುಕಾಟ ಪ್ರಾರಂಭವಾಗುವುದು. ಅಧ್ಯಯನ ಶೀಲರಿಗೆ ಯಶಸ್ಸಿನ ಗರಿ.

ಕನ್ಯಾ: ಒಂಟಿತನದಿಂದ ಬೇಸತ್ತ ನಿಮಗೆ ಹೊಸ ಜಗತ್ತಿನ ಅರಿವಿನಿಂದಾಗಿ ಮುದಗೊಳ್ಳುವ ಅವಕಾಶ. ಹೊಸ ಸಂಬಂಧ, ಗೆಳೆತನಗಳು ಕೂಡಿಬರುವ ಸಾಧ್ಯತೆ. ಜೀವನಕ್ಕೊಂದು ಹೊಸ ತಿರುವು ಬರುವ ನಿರೀಕ್ಷೆ.

ತುಲಾ: ನಿಮ್ಮ ಬಗೆಗೆ ಬೇರೆಯವರ ಮನದಾಳದ ಮಾತುಗಳನ್ನು ಆಲೈಸುವ ಆತುರ. ಉತ್ತಮ ಅಭಿಪ್ರಾಯಗಳಿಂದಾಗಿ ಮನಸ್ಸಿಗೆ ಹಿತಾನುಭವ. ಸ್ನೇಹಿತರ ಬಂಧುವರ್ಗದವರ ಅನಿರೀಕ್ಷಿತ ಭೇಟಿಯ ಸಾಧ್ಯತೆ. ಶುಭಾಷಯ ವಿನಿಮಯ.

ವೃಶ್ಚಿಕ: ಸಂಕೋಚ ಸ್ವಭಾವದಿಂದ ಹೊರ ಬಂದು ಕಾರ್ಯಮಗ್ನರಾಗಿ ಯಶಸ್ಸು ಸಾಧಿಸಿ. ಮುಲಾಜಿಗೆ ಒಳಗಾಗದೇ ಪಕ್ಕಾ ವ್ಯವಹಾರಸ್ಥರಾಗಿ. ವಿದ್ಯಾರ್ಥಿಗಳಿಗೆ ಸಹಪಾಠಿಗಳಿಂದ ತಗಾದೆಯ ಸಾಧ್ಯತೆ.

ಧನು: ನೀವು ಯೋಜಿಸಿದ ಮಹತ್ತರ ಯೋಜನೆಗಳ ಬಗ್ಗೆ ಹಿತೈಷಿಗಳೆದುರು ಪ್ರಸ್ತಾಪಿಸಿ. ಉತ್ತಮ ಸಲಹೆ ಸಹಕಾರಗಳು ದೊರೆತು ಯೋಜನೆಗಳಲ್ಲಿ ಯಶಸ್ಸನ್ನು ಕಾಣುವಿರಿ. ಗಣಪತಿಯ ಧ್ಯಾನ ಮಾಡಿ ಮುಂದುವರಿಯಿರಿ.

ಮಕರ: ವೃತ್ತಿ ಕ್ಷೇತ್ರದಲ್ಲಿ ನಿಮ್ಮ ಗುರಿಯನ್ನು ನಿರಾಯಾಸವಾಗಿ ತಲುಪುವಿರಿ. ಕಾರ್ಯತತ್ಪರತೆಯಿಂದ ಹಿಂಜರಿಯದಿರಿ. ಉನ್ನತಾಧಿಕಾರಿಗಳಿಂದ ಪ್ರಶಂಸೆ. ಸಹೋದ್ಯೋಗಿಗಳಿಂದ ಕೊಂಕು ಮಾತನ್ನು ಎದುರಿಸಬೇಕಾದೀತು.

ಕುಂಭ: ಮಹತ್ವದ ವಿಷಯಗಳಲ್ಲಿ ನಿಮ್ಮ ದೃಢ ನಿಲುವು ಅಮೂಲ್ಯವಾಗಿ ಪರಿಣಮಿಸುವುದು. ಎಲ್ಲರ ಪ್ರಶಂಸೆಗೆ ಪಾತ್ರರಾಗಲಿದ್ದೀರಿ. ಬೆನ್ನು ನೋವು, ಮಂಡಿನೋವುಗಳು ಕಾಣಿಸಿಕೊಳ್ಳುವ ಸಾಧ್ಯತೆ.

ಮೀನ: ನಿಮ್ಮ ಮಾತು ಮತ್ತು ಆಕರ್ಷಕ ವ್ಯಕ್ತಿತ್ವದಿಂದಾಗಿ ಇತರರನ್ನು ಮುದಗೊಳಿಸುವಿರಿ. ನಿಮ್ಮ ನಿರ್ಧಾರಗಳು ಸಮರ್ಪಕವಾಗಿದ್ದು ಬಹುಜನರ ಪ್ರಶಂಸೆಗೆ ಪಾತ್ರವಾಗುವುದು. ಯಶಸ್ಸಿನ ಅಮಲು ಉಚಿತವಲ್ಲ.

ನಿಮ್ಮ ಜನ್ಮದಿನ 25-ನವೆಂಬರ್ ಈ ದಿನವು ಅತ್ಯಂತ ಶುಭಕರವಾಗಿದ್ದು, ವಿದ್ಯಾರ್ಥಿಗಳಿಗೆ ಅತ್ಯಂತ ಉತ್ಕೃಷ್ಟ ಭವಿಷ್ಯವನ್ನು ತರುವಂತಹದ್ದಾಗಿದೆ. ರಾಜಕೀಯದಿಂದ ಬಿಡುವು ದೊರಕುವುದರೊಂದಿಗೆ ಶುಭ ಸಮಾರಂಭಗಳಲ್ಲಿ ಭಾಗವಹಿಸುವ ಸಾಧ್ಯತೆ. ಸಾಹಿತ್ಯ ಕ್ಷೇತ್ರದಲ್ಲಿ, ಸಂಗೀತ ಹಾಗೂ ಕಲಾವಿದರುಗಳಿಗೆ ಸದಾ ಸಂತಸವನ್ನು ನೀಡಲಿದೆ.

ಪದಬಂಧ 4788

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ರಕ್ಷಿಸಲು ಆಧಾರ ಒದಗಿಸುತ್ತಿರುವಾತ! (4)
3.ದೃಷ್ಟಿಗೆ ದೂರವಾದುದು ಪಕ್ಷದೊಳಗಿದೆಯಲ್ಲಾ? (3)
4.ವಿಶದ ಪಡಿಸುತ್ತಿರುವವನು ಪಂಡಿತ (4)
6.ಪಥದಲ್ಲಿಸಾಗುತ್ತಿರುವ ತೇರು (2)
7.ಅಡಿಯಲ್ಲಿ ಈ ಆತುರವೇ? (4)
8.ಇದು ಸ್ವಭಾವಸಿದ್ಧವಾದುದು (3)
9.ಬುದ್ಧಿ ಇಟ್ಟುಕೊಂಡು ನೀಡಿದ ಒಪ್ಪಿಗೆ (4)
12. ಕೆಂಪು ಮಿಶ್ರಿತ ಕಪ್ಪು ಬಣ್ಣ (2)
13.ಕನ್ನಡಿಗನು ಧರಿಸಿರುವ ಚಾಳೀಸು (4)
15.ಇದೊಂದು ಬಗೆಯ ಅಲೋಹ ಮೂಲಧಾತು (3)
16.ಶಿವನ ಬಳಿಯಿರುವ ಚರ್ಮವಾದ್ಯ (4)

ಮೇಲಿಂದ ಕೆಳಕ್ಕೆ
1.ಓದು ಬರಹಗಳನ್ನು ತಿಳಿದಿರುವಿಕೆ (4)
2.ವಿಹಾರದಲ್ಲಿದ್ದಾಗ ಸೂರ್ಯ ಕಾಣಿಸಿದನೇ? (2)
3.ಹೂವಿನ ದಳ (3)
4.ದಡಿಯನ ಹಿಡಿದಿರುವ ಬಿಡಿಗಾಸು (3)
7.ಅನುಜನ ಹತ್ತಿರವಿರುವ ಆಡು (2)
8.ವಸತಿ ಹತ್ತಿರವಿರುವ ಪತ್ನಿ ಕಾಣುತ್ತಿದ್ದಾಳೇ? (2)
9.ಸಡಿಲವಾದುದು ಇದು (3)
10.ಚತುರರು ಆಡುವ ಒಳಾಂಗಣದ ಆಟ (4)
11.ಪಂಚಭೂತಗಳಿಗೆ ಸಂಬಂಧಿಸಿರುವುದು (3)
14.ಕಡಲ ಬಳಿ ಪಡೆದುಕೊಂಡ ಸಾಲ (2)



4787ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ: 1.ಪ್ರಣಾಳಿಕೆ 2.ಪ್ರದೇಶ 4.ಪಲ್ಲವಿ 6.ಉತ್ತರ 7.ಸಮೂಹಗಾನ 10.ಬವಣೆ 11.ಬಣ್ಣನೆ 13.ಪಗಾರ 14.ರತ್ನಪಡಿ

ಮೇಲಿಂದ ಕೆಳಕ್ಕೆ: 1.ಪ್ರತಾಪ 2.ಪ್ರಖರ 3.ಶಸ್ತ್ರಾಗಾರ 5.ವಿಲಾಸ 6.ಉದಾಹರಣೆ 8.ನವಾಬ 9.ಪಶ್ಚಾತ್ತಾಪ 10.ಬರ್ಬರ 12.ನೆಗಡಿ

ಸುಡೊಕು 5174

1		3	5		6		4	
				4			8	
7		4	9			5		3
9	1							8
		7		9			1	
	2							4
8		1		5			6	
	5		1		4	8		9
4		9		6			5	

ಆಡುವುದು ಹೇಗೆ?
ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5173 ಸುಡೊಕು

3	7	6	8	4	2	5	1	9
5	1	8	6	3	9	7	4	2
2	9	4	5	7	1	3	6	8
7	8	9	1	2	6	4	5	3
1	2	3	4	9	5	6	8	7
6	4	5	7	8	3	9	2	1
8	3	7	2	6	4	1	9	5
4	5	2	9	1	7	8	3	6
9	6	1	3	5	8	2	7	4

ಡಿ.6ಕ್ಕೆ ಪ್ರಧಾನಿ ಬೆಂಗಳೂರಿಗೆ

ಬೆಂಗಳೂರು: ಅಂಬೇಡ್ಕರ್ ಸ್ಕೂಲ್ ಆಫ್ ಎಕನಾಮಿಕ್ಸ್ ವಿಶ್ವವಿದ್ಯಾಲಯದ ನೂತನ ಕ್ಯಾಂಪಸ್ ಅನ್ನು ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು ಡಿಸೆಂಬರ್ 6 ರಂದು ಉದ್ಘಾಟಿಸಲಿದ್ದಾರೆ.

ಈ ಕಾರ್ಯಕ್ರಮದ ಪೂರ್ವ ತಯಾರಿ ಕುರಿತು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಬುಧವಾರ ಸಂಜೆ ವಿವಿಧ ಸಚಿವರು ಮತ್ತು ಅಧಿಕಾರಿಗಳ ಸಭೆ ನಡೆಸಿದರು.

ಪ್ರಧಾನ ಮಂತ್ರಿಯವರು ಡಿ.6 ಕ್ಕೆ ಉದ್ಘಾಟನೆಗೆ ಬರಲು ಒಪ್ಪಿಕೊಂಡಿರುವುದರಿಂದ ಅದಕ್ಕಾಗಿ ನಡೆಸಿರುವ ತಯಾರಿಯ ಬಗ್ಗೆ ಬೊಮ್ಮಾಯಿ ವಿವರ ಪಡೆದರು. ಸಭೆಯಲ್ಲಿ ಉನ್ನತ ಶಿಕ್ಷಣ ಸಚಿವ ಡಾ.ಸಿ. ಎನ್.ಅಶ್ವತ್ಥನಾರಾಯಣ, ವಸತಿ ಸಚಿವ ವಿ.ಸೋಮಣ್ಣ, ತೋಟಗಾರಿಕೆ ಸಚಿವ ಮುನಿರತ್ನ, ಅಧಿಕಾರಿಗಳಾದ ಕುಮಾರ್ ನಾಯಕ್, ಗೌರವ್ ಗುಪ್ತ, ಸೆಲ್ವಕುಮಾರ್, ಪಿ.ಪ್ರದೀಪ್, ವಿಶ್ವವಿದ್ಯಾಲಯದ ಕುಲಪತಿ ಡಾ.ಭಾನುಮೂರ್ತಿ ಇದ್ದರು.

‘ಹೈಕಮಾಂಡ್‌ಗೆ ಹೆದರಿಸುತ್ತಾರೋ, ಹೆದರತಾರೋ’

ಪ್ರಜಾವಾಣಿ ವಾರ್ತೆ

ಹುಕ್ಕೇರಿ (ಬೆಳಗಾವಿ): ‘ಬಿಜೆಪಿ ಶಿಸ್ತಿನ ಪಕ್ಷವಂತೆ, ಖಡಕ್ ಸಂದೇಶ ಕೊಡ್ತಾರಂತೆ. ಇಲ್ಲಿಂದ ಅಲ್ಲಿಗೆ ಹೋದವರು ಹೈಕಮಾಂಡ್‌ಗೆ ಹೆದರಸ್ತಾರೋ ಅಥವಾ ಹೈಕಮಾಂಡ್ ಇವರನ್ನು ಹೆದರಸ್ತದೋ ದೇವರೆ ಬಲ್ಲ’ ಎಂದು ಕೆಪಿಸಿಸಿ ಕಾರ್ಯಾಧ್ಯಕ್ಷ ಸತೀಶ್ ಜಾರಕಿಹೊಳಿ ಲೇವಡಿ ಮಾಡಿದರು.

ಪಟ್ಟಣದ ರವದಿ ಫಾರ್ಮ್‌ಹೌಸ್‌ನಲ್ಲಿ ಬುಧವಾರ ನಡೆದ ‘ಸ್ಥಳೀಯ ಸಂಸ್ಥೆಗಳ ಚುನಾಯಿತ ಪ್ರತಿನಿಧಿಗಳ’ ಸಭೆಯಲ್ಲಿ ಅವರು ಮಾತನಾಡಿ, ‘ಕಳೆದ ಬಾರಿ ವಿಧಾನ ಪರಿಷತ್ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷದ ಮುಖಂಡ ವೀರಕುಮಾರ ಪಾಟೀಲ ಅವರ ಅಲ್ಪ ಅಂತರದ ಸೋಲಿಗೆ ನಮ್ಮವರೇ ಕಾರಣರಾದರು. ನಮ್ಮ ಅಭ್ಯರ್ಥಿ ಸೋಲಿಸಿದವರು ಈಗ ಕಾಂಗ್ರೆಸ್ ಪಕ್ಷದಲ್ಲಿ ಇಲ್ಲ. ಅವರು ಬಿಜೆಪಿಗೆ ಹೋಗಿದ್ದಾರೆ’ ಎಂದು ಯಾರ ಹೆಸರನ್ನೂ ಪ್ರಸ್ತಾಪಿಸದೇ ಮಾರ್ಮಿಕವಾಗಿ ಹೇಳಿದರು.

‘ನಮ್ಮಲ್ಲಿಂದ ಹೋದವರಿಗೆ ಜನರ ಅಭಿವೃದ್ಧಿ ಬೇಕಿಲ್ಲ. ಅವರಿಗೆ ರಾಜಕಾರಣ ಮುಖ್ಯ. ಹೇಗಾದರೂ ಮಾಡಿ ಮಂತ್ರಿಯಾಗಬೇಕಿದೆ’ ಎಂದು ರಮೇಶ್ ಜಾರಕಿಹೊಳಿ ಹೆಸರು ಹೇಳದೇ ಕುಟುಕಿದರು.

‘ಪಕ್ಷೇತರ ಅಭ್ಯರ್ಥಿಗಳು ನಾಟಕ ಕಂಪನಿ ಇದ್ದಂಗ. ಅವರು, ಇವರೂ ಸೇರಿ ನಿಮಗೆ ಹಣ ಕೊಡಲು ಬರುವರು. ಆ ಹಣದಿಂದ ಬದುಕಲು ಆಗಲ್ಲ ಎಂಬುದನ್ನು ನೀವು ಅರಿತು, ಅವರಿಗೆ ತಕ್ಕ ಪಾಠ ಕಲಿಸಿ’ ಎಂದು ಸಲಹೆ ನೀಡಿದರು.

‘ಈ ಚುನಾವಣೆಯಲ್ಲಿ ಕಾಂಗ್ರೆಸ್ ಅಭ್ಯರ್ಥಿ ಆಯ್ಕೆ ಮಾಡಿ 2023ರ ವಿಧಾನಸಭಾ ಚುನಾವಣೆಗೆ ದಿಕ್ಸೂಚಿ ಆಗುವಂತೆ ಮಾಡಬೇಕು’ ಎಂದರು.

ಬಿಜೆಪಿ–ಜೆಡಿಎಸ್ ಒಳಒಪ್ಪಂದ

ಕೋಲಾರ: ‘ವಿಧಾನ ಪರಿಷತ್ ಚುನಾವಣೆಗೆ ಜೆಡಿಎಸ್‌ನ ಬೆಂಬಲ ಕೇಳುತ್ತೇವೆ. ಅವರು ಬೆಂಬಲಿಸುವ ವಿಶ್ವಾಸವಿದೆ ಎಂದು ಯಡಿಯೂರಪ್ಪ ಹೇಳಿದ್ದಾರೆ. ಜೆಡಿಎಸ್‌ನವರ ಜತೆ ಮಾತನಾಡದೆ ಹೇಳಿದ್ದಾರಾ. ಮೈತ್ರಿ ಬಗ್ಗೆ ಯಾವುದೇ ಮಾತುಕತೆ ಆಗಿಲ್ಲ ಎಂದು ಕುಮಾರಸ್ವಾಮಿ ಹೇಳಿರುವುದಕ್ಕೆ ಏನು ಹೇಳಬೇಕು, ಬೆಂಕಿ ಇಲ್ಲದೆ ಹೊಗೆಯಾಡುತ್ತಾ’ ಎಂದು ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಟೀಕಿಸಿದರು.

ಇಲ್ಲಿ ಬುಧವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ‘ರಾಜ್ಯ ವಿಧಾನ ಪರಿಷತ್ತಿನ 25 ಸ್ಥಾನಗಳಿಗೆ ಚುನಾವಣೆ ನಡೆಯುತ್ತಿದೆ. ಆದರೆ, ಜೆಡಿಎಸ್ 7 ಕಡೆ ಮಾತ್ರ ಅಭ್ಯರ್ಥಿಗಳನ್ನು ಹಾಕಿದೆ. ಆ ಕ್ಷೇತ್ರಗಳಲ್ಲೂ ಹೊಂದಾಣಿಕೆ ಆಗಿದೆ. ಉಳಿದ 18 ಕಡೆ ಜೆಡಿಎಸ್‌ನವರು ಏನು ಮಾಡುತ್ತಾರೆ. ಹೊಂದಾಣಿಕೆ ಮಾತುಕತೆ ನಡೆದಿದೆ. ಇಲ್ಲದಿದ್ದರೆ ಬಿಎಸ್‌ವೈ ಸುಮ್ಮನೆ ಯಾಕೆ ಹೇಳುತ್ತಾರೆ’ ಎಂದರು.

‘ಮಾಜಿ ಸಚಿವ ಎ. ಮಂಜು ನನ್ನನ್ನು ಭೇಟಿಯಾಗಿಲ್ಲ. ಅವರ ಮಗ ಮಂಥರ್‌ಗೌಡ ಬಿಜೆಪಿ ಸೇರಿಲ್ಲ ಎಂದು ಕೊಡಗಿನ ಸ್ಥಳೀಯ ಕಾಂಗ್ರೆಸ್ ಕಾರ್ಯಕರ್ತರು ಹೇಳಿದರು. ಕೊಡಗಿಗೂ ಮಂಥರ್‌ಗೌಡ ಅವರಿಗೂ ಸಂಬಂಧವಿದೆ. ಅವರ ತಾಯಿ ಕೊಡಗಿನವರು’ ಎಂದರು.

‘ಕೋಲಾರ ಮತ್ತು ಚಿಕ್ಕಬಳ್ಳಾಪುರ ಜಿಲ್ಲೆಯಲ್ಲಿ ಪಕ್ಷದೊಳಗೆ ಯಾವುದೇ ಗುಂಪುಗಾರಿಕೆಯಿಲ್ಲ. ಕೋಲಾರದಲ್ಲಿ ಪಕ್ಷದ ಅಭ್ಯರ್ಥಿ ನೂರಕ್ಕೆ ನೂರರಷ್ಟು ಗೆಲ್ಲುತ್ತಾರೆ. ಪಕ್ಷದ ತೀರ್ಮಾನದಂತೆ ನಡೆದುಕೊಳ್ಳುತ್ತೇವೆ ಎಂದು ಮಾಜಿ ಸಂಸದ ಕೆ.ಎಚ್. ಮುನಿಯಪ್ಪ ಹೇಳಿದ್ದಾರೆ. ಹಿಂದಿನ ಬಾರಿ ಪಕ್ಷ 14 ಸ್ಥಾನದಲ್ಲಿ ಗೆದ್ದಿತ್ತು. ಈ ಬಾರಿ 15 ಸ್ಥಾನದಲ್ಲಿ ಗೆಲ್ಲುತ್ತೇವೆ’ ಎಂದು ವಿಶ್ವಾಸ ವ್ಯಕ್ತಪಡಿಸಿದರು.

‘ಬಿಜೆಪಿಗೆ ಅನ್ಯ ಪಕ್ಷಗಳ ಅವಶ್ಯಕತೆ ಇಲ್ಲ’

ರಾಮನಗರ: ‘ಬಿಜೆಪಿಯು ಸ್ವಂತ ಶಕ್ತಿಯ ಮೇಲೆ ಚುನಾವಣೆ ಎದುರಿಸಲಿದ್ದು, ನಮಗೆ ಬೇರೆ ಪಕ್ಷಗಳ ಬೆಂಬಲದ ಅವಶ್ಯಕತೆ ಇಲ್ಲ’ ಎಂದು ಪಕ್ಷದ ರಾಜ್ಯ ಘಟಕದ ಉಪಾಧ್ಯಕ್ಷ ಬಿ.ವೈ. ವಿಜಯೇಂದ್ರ ಹೇಳಿದರು.

ಪರಿಷತ್ ಚುನಾವಣೆಯಲ್ಲಿ ಬಿಜೆಪಿ–ಜೆಡಿಎಸ್ ಮೈತ್ರಿ ಮಾಡಿಕೊಂಡಿವೆ ಎಂಬ ಕಾಂಗ್ರೆಸ್‌ನ ಆರೋಪ ಕುರಿತು ಮಾಗಡಿಯಲ್ಲಿ ಬುಧವಾರ ಅವರು ಪತ್ರಕರ್ತರಿಗೆ ಪ್ರತಿಕ್ರಿಯೆ ನೀಡಿದರು.

‘ನಮ್ಮಲ್ಲಿದ್ದ ಹನುಮಂತ ಈಗ ಬಿಜೆಪಿಯಲ್ಲಿ’

ಸತೀಶ ಜಾರಕಿಹೊಳಿ

ನಿಪ್ಪಾಣಿ: ‘ಹಿಂದಿನ ಚುನಾವಣೆ ಸಂದರ್ಭದಲ್ಲಿ ನಮ್ಮ ಪಕ್ಷದಲ್ಲಿ ಹನುಮಂತನಿದ್ದ. ಆತ ಲಂಕೆಯೊಳಗೆ ತನ್ನ ಬಾಲಕ್ಕೆ ಹಚ್ಚಿದ ಬೆಂಕಿಯಿಂದ ಲಂಕಾದಹನ ಮಾಡಿದಂತೆ ಈತನೂ ಕಾಂಗ್ರೆಸ್ ಪಕ್ಷ ಸುಟ್ಟು ಬೂದಿ ಮಾಡಿದ. ಅದರಿಂದ ನಮ್ಮ ಪಕ್ಷಕ್ಕೆ ಕೆಟ್ಟ ಹೆಸರು ಬಂತು. ಆದರೆ ಈಗ ಆ ಹನುಮಂತ ನಮ್ಮ ಪಕ್ಷದಲ್ಲಿಲ್ಲ; ಬಿಜೆಪಿಯ ಮರ ಹತ್ತಿ ಕುಳಿತಿದ್ದಾನೆ. ಬಿಜೆಪಿ ಗತಿ ಏನಾಗಲಿದೆಯೇನೋ? ಆತ ಮತ್ತಾರು ಅಲ್ಲ, ನನ್ನ ಸಹೋದರ ರಮೇಶ ಜಾರಕಿಹೊಳಿ’ ಎಂದು ಕೆಪಿಸಿಸಿ ಕಾರ್ಯಾಧ್ಯಕ್ಷ ಸತೀಶ ಜಾರಕಿಹೊಳಿ ಇಲ್ಲಿ ಲೇವಡಿ ಮಾಡಿದರು.

ಮರಾಠಾ ಮಂಡಳದಲ್ಲಿ ತಾಲ್ಲೂಕು ಮತಕ್ಷೇತ್ರ ವ್ಯಾಪ್ತಿಯ ಕಾಂಗ್ರೆಸ್ ಪಕ್ಷದ ಪದಾಧಿಕಾರಿಗಳ, ಕಾರ್ಯಕರ್ತರ ಹಾಗೂ ಸ್ಥಳೀಯ ಸಂಸ್ಥೆಗಳ ಸದಸ್ಯರ ಸಮಾವೇಶದಲ್ಲಿ ಅವರು ಮಾತನಾಡಿದರು. ‘ಕಳೆದ ಬಾರಿ ನಮ್ಮ ಪಕ್ಷದ ವೀರಕುಮಾರ ಪಾಟೀಲ ಅವರನ್ನು ಆತ ಸೋಲಿಸಿದಂತೆ ಈ ಬಾರಿ ಬಿಜೆಪಿಯ ಮಹಾಂತೇಶ ಕವಟಗಿಮಠರ ಪರಿಸ್ಥಿತಿ ಆಗಲಿದೆಯೇನೋ...ಕಾದು ನೋಡಬೇಕಾಗಿದೆ’ ಎಂದು ಟಾಂಗ್ ಕೊಟ್ಟರು.

ಲಖನ್ ಸ್ಪರ್ಧೆಯಿಂದ ಸಮಸ್ಯೆ ಇಲ್ಲ: ಬೊಮ್ಮಾಯಿ


ಬೊಮ್ಮಾಯಿ

ಬೆಂಗಳೂರು: ಬೆಳಗಾವಿಯಿಂದ ವಿಧಾನಪರಿಷತ್ ಚುನಾವಣೆಗೆ ಪಕ್ಷೇತರರಾಗಿ ಸ್ಪರ್ಧಿಸಿರುವ ಲಖನ್ ಜಾರಕಿಹೊಳಿಯಿಂದ ಬಿಜೆಪಿ ಅಭ್ಯರ್ಥಿಗೆ ಯಾವುದೇ ಸಮಸ್ಯೆ ಆಗುವುದಿಲ್ಲ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿದ್ದಾರೆ.

ಲಖನ್ ಬಿಜೆಪಿ ಪಕ್ಷದ ಸದಸ್ಯರಲ್ಲ. ಆದರೂ, ರಮೇಶ ಜಾರಕಿಹೊಳಿ ಮತ್ತು ಬಾಲಚಂದ್ರ ಜಾರಕಿಹೊಳಿ ಜತೆ ಈ ಬಗ್ಗೆ ಚರ್ಚಿಸುವುದಾಗಿ ಅವರು ಸುದ್ದಿಗಾರರ ಪ್ರಶ್ನೆಗೆ ಉತ್ತರಿಸಿದರು.

ರಮೇಶ ಮತ್ತು ಬಾಲಚಂದ್ರ ಅವರು ಬಿಜೆಪಿ ಅಭ್ಯರ್ಥಿ ಪರವಾಗಿ ಕೆಲಸ ಮಾಡುತ್ತಿದ್ದಾರೆ. ನಮ್ಮ ಅಭ್ಯರ್ಥಿಯೇ ಗೆಲ್ಲುವುದು ಖಚಿತ ಎಂದು ಅವರು ವಿಶ್ವಾಸ ವ್ಯಕ್ತಪಡಿಸಿದರು.

ಹಾಸನ ಜಿಲ್ಲೆಯಲ್ಲಿ ಎ. ಮಂಜು ವಿರುದ್ಧ ಕ್ರಮ ಕೈಗೊಂಡಿರುವ ಬಗ್ಗೆ ಪ್ರಶ್ನಿಸಿದಾಗ, ಆ ಪ್ರಕರಣವೇ ಬೇರೆ. ಲಖನ್ ಯಾವುದೇ ಪಕ್ಷದಲ್ಲೂ ಗುರುತಿಸಿಕೊಂಡಿಲ್ಲ ಎಂದು ಬಸವ ಬೊಮ್ಮಯಿ ಹೇಳಿದರು.

ಬಹು ಮಾಧ್ಯಮ ಪ್ರಜಾವಾಣಿ LIVE
www.prajavani.net
Prajavani.net Prajavani Prajavani
ಫೇಸ್‌ಬುಕ್, ಯೂಟ್ಯೂಬ್, ಟ್ವಿಟರ್‌ನಲ್ಲಿ ಏಕಕಾಲಕ್ಕೆ ನೇರಪ್ರಸಾರ
ಇಂದು
ಮಿಸಳ್ ಹಾಪ್ಚಾ
ಸನ್ಮಾನಕ್ಕೆ ಏಲಕ್ಕಿಯ ಕಂಪು
https://bit.ly/3cKfaoR
ಪ್ರಜಾವಾಣಿ ಕನ್ನಡ ಧ್ವನಿ
ಪಾಡ್‌ಕಾಸ್ಟ್: ದಿನದ ವಿಶೇಷ: ಸಂಜೆ 4 ಆಟ ನೋಟ
ಪ್ರತೀ ದಿನ: ಬೆಳಿಗ್ಗೆ 7 ವಚನವಾಣಿ, ಬೆಳಿಗ್ಗೆ 7.30 ದಿನದ ಸೂಕ್ತಿ, ಬೆಳಿಗ್ಗೆ 8, ಮಧ್ಯಾಹ್ನ 2, ರಾತ್ರಿ 8 ಪ್ರಜಾವಾಣಿ ವಾರ್ತೆ ಬುಲೆಟಿನ್, ಬೆಳಿಗ್ಗೆ 9 ಪ್ರಚಲಿತ, ಬೆಳಿಗ್ಗೆ 9.30 ಸಂಪಾದಕೀಯ

ಜಯಂತ್ ಚೌಧರಿ ಪಕ್ಷಕ್ಕೆ 35 ಕ್ಷೇತ್ರ ಬಿಟ್ಟುಕೊಡಲು ಅಖಿಲೇಶ್ ಯಾದವ್ ಒಪ್ಪಿಗೆ

ಉತ್ತರ ಪ್ರದೇಶ: ಎಸ್‌ಪಿ–ಆರ್‌ಎಲ್‌ಡಿ ಮೈತ್ರಿ ಅಂತಿಮ

ಪ್ರಜಾವಾಣಿ ವಾರ್ತೆ

ಲಖನೌ: ಉತ್ತರ ಪ್ರದೇಶ ವಿಧಾನಸಭೆಗೆ ಮುಂದಿನ ವರ್ಷ ನಡೆಯಲಿರುವ ಚುನಾವಣೆಗಾಗಿ ಸಣ್ಣ ಪಕ್ಷಗಳ ಜತೆಗೆ ಮೈತ್ರಿ ಮಾಡಿಕೊಳ್ಳುವ ಕಾರ್ಯತಂತ್ರವನ್ನು ಸಮಾಜವಾದಿ ಪಕ್ಷದ (ಎಸ್‌ಪಿ) ಅಖಿಲೇಶ್ ಯಾದವ್ ಅನುಸರಿಸುತ್ತಿದ್ದಾರೆ. ರಾಷ್ಟ್ರೀಯ ಲೋಕದಳದ (ಆರ್‌ಎಲ್‌ಡಿ) ಜತೆಗಿನ ಮೈತ್ರಿಯನ್ನು ಅವರು ಅಂತಿಮಗೊಳಿಸಿದ್ದಾರೆ. ಉತ್ತರ ಪ್ರದೇಶದ ಪಶ್ಚಿಮ ಭಾಗದಲ್ಲಿ ಪ್ರಭಾವಿಯಾಗಿರುವ ಜಾಟ್ ಸಮುದಾಯದ ಬೆಂಬಲವನ್ನು ಆರ್‌ಎಲ್‌ಡಿ ಹೊಂದಿದೆ.

ಆರ್‌ಎಲ್‌ಡಿ ಮುಖ್ಯಸ್ಥ ಜಯಂತ್ ಚೌಧರಿ ಅವರು ಅಖಿಲೇಶ್ ಅವರನ್ನು ಮಂಗಳವಾರ ಸಂಜೆ ಭೇಟಿಯಾಗಿದ್ದಾರೆ. ಈ ಸಭೆಯಲ್ಲಿ ಸೀಟು ಹಂಚಿಕೆಯು ಅಂತಿಮಗೊಂಡಿದೆ ಎಂದು ಎಸ್‌ಪಿ ಮೂಲಗಳು ಹೇಳಿವೆ.

ಆರ್‌ಎಲ್‌ಡಿ ಪಕ್ಷವು 35 ಕ್ಷೇತ್ರಗಳಲ್ಲಿ ಸ್ಪರ್ಧಿಸಲಿದೆ. ಈ ಎಲ್ಲವೂ ಉತ್ತರ ಪ್ರದೇಶದ ಪಶ್ಚಿಮ ಭಾಗದಲ್ಲಿರುವ ಕ್ಷೇತ್ರಗಳು. ಎಸ್‌ಪಿಯ ಕೆಲವು ಅಭ್ಯರ್ಥಿಗಳು ಕೂಡ ಆರ್‌ಎಲ್‌ಡಿ ಟಿಕೆಟ್‌ನಲ್ಲಿ ಸ್ಪರ್ಧಿಸಲಿದ್ದಾರೆ ಎಂದು ಎಸ್‌ಪಿಯ ಮುಖಂಡರೊಬ್ಬರು ಹೇಳಿದ್ದಾರೆ. 45 ಕ್ಷೇತ್ರಗಳನ್ನು ನೀಡಬೇಕು ಎಂದು ಆರ್‌ಎಲ್‌ಡಿ ಪಟ್ಟು ಹಿಡಿದ ಕಾರಣ ಮಾತುಕತೆಯು ಈ ಹಿಂದೆ ಸ್ಥಗಿತವಾಗಿತ್ತು.

ಈ ಮೈತ್ರಿಯಿಂದಾಗಿ, ಜಾಟ್ ಸಮುದಾಯದ ಪ್ರಭಾವ ಇರುವ ರಾಜ್ಯದ ಪಶ್ಚಿಮ ಭಾಗದ ರಾಜಕೀಯ ಲೆಕ್ಕಾಚಾರ ಬದಲಾಗಲಿದೆ. 2017ರಲ್ಲಿ ನಡೆದ ವಿಧಾನಸಭಾ ಚುನಾವಣೆಯಲ್ಲಿ ಈ ಪ್ರದೇಶದ ಬಹುತೇಕ ಕ್ಷೇತ್ರಗಳಲ್ಲಿ ಬಿಜೆಪಿ ಗೆದ್ದಿತ್ತು. ಎಸ್‌ಪಿ–ಆರ್‌ಎಲ್‌ಡಿ ಮೈತ್ರಿಯು ಬಿಜೆಪಿಯ ಗೆಲುವಿಗೆ ತೊಡಕಾಗಬಹುದು.

ಇತ್ತೀಚಿನ ವರ್ಷಗಳಲ್ಲಿ, ಆರ್‌ಎಲ್‌ಡಿಯ ಸಾಧನೆ ಹೇಳಿಕೊಳ್ಳುವಂತೆ ಏನೂ ಇಲ್ಲ. 2017ರ ವಿಧಾನಸಭಾ ಚುನಾವಣೆಯಲ್ಲಿ 357 ಕ್ಷೇತ್ರಗಳಿಗೆ ಪಕ್ಷವು ಸ್ಪರ್ಧಿಸಿತ್ತು. ಗೆದ್ದದ್ದು ಎರಡು ಕ್ಷೇತ್ರಗಳಲ್ಲಿ ಮಾತ್ರ. ಮೂರು ಕ್ಷೇತ್ರಗಳನ್ನು ಬಿಟ್ಟರೆ ಉಳಿದೆಡೆ ಆರ್‌ಎಲ್‌ಡಿ ಅಭ್ಯರ್ಥಿಗಳು ಠೇವಣಿ ಕಳೆದುಕೊಂಡಿದ್ದರು. ಪಕ್ಷಕ್ಕೆ ಒಟ್ಟಾರೆಯಾಗಿ ಸಿಕ್ಕಿದ್ದು ಶೇ 1.80ರಷ್ಟು ಮತಗಳು ಮಾತ್ರ.

2019ರ ಲೋಕಸಭಾ ಚುನಾವಣೆಯ ಸ್ಥಿತಿಯೂ ಭಿನ್ನವಾಗಿ ಇರಲಿಲ್ಲ. ಪಕ್ಷದ ಅಧ್ಯಕ್ಷ ಅಜಿತ್ ಸಿಂಗ್, ಅವರ ಮಗ ಜಯಂತ್ ಚೌಧರಿ ಅವರೇ ತಮ್ಮ ‘ಭದ್ರಕೋಟೆ’ಗಳಲ್ಲಿ ಸೋತರು. ಪಕ್ಷಕ್ಕೆ ಒಂದು ಸ್ಥಾನವೂ ದಕ್ಕಲಿಲ್ಲ. ಜಾಟ್–ಮುಸ್ಲಿಂ ಮತಬ್ಯಾಂಕ್‌ನಲ್ಲಿ ಉಂಟಾದ ಬಿರುಕೇ ಈ ಹೀನಾಯ ಸೋಲಿಗೆ ಕಾರಣ ಎಂದು ವಿಶ್ಲೇಷಿಸಲಾಗಿದೆ. 2013ರಲ್ಲಿ ಮುಝಫ್ಫರ್‌ನಗರದಲ್ಲಿ ನಡೆದ ಕೋಮು ಗಲಭೆಯಲ್ಲಿ 60 ಜನರು ಮೃತಪಟ್ಟಿದ್ದರು. ಸಾವಿರಾರು ಜನರು ನಿರ್ವಸಿತರಾಗಿದ್ದರು. ಇದು ಜಾಟ್–ಮುಸ್ಲಿಂ ಸಮುದಾಯಗಳ ನಡುವೆ ಅಪನಂಬಿಕೆಗೆ ಕಾರಣವಾಗಿತ್ತು.

ಈಗ, ಕೇಂದ್ರದ ಕೃಷಿ ಕಾಯ್ದೆಗಳ ವಿರುದ್ಧ ರೈತರು ನಡೆಸುತ್ತಿರುವ ಪ್ರತಿಭಟನೆಯು ಆರ್‌ಎಲ್‌ಡಿಯ ಪುನಶ್ಚೇತನಕ್ಕೆ ಕಾರಣವಾಗಿದೆ. ರಾಜ್ಯದ ಪಶ್ಚಿಮ ಭಾಗದ ರೈತರನ್ನು ಕಾಯ್ದೆಗಳ ವಿರುದ್ಧ ಸಂಘಟಿಸುವಲ್ಲಿ ಜಯಂತ್ ಚೌಧರಿ ಅವರು ಮಹತ್ವದ ಪಾತ್ರ ವಹಿಸಿದ್ದಾರೆ. ವಿವಿಧ ಜಿಲ್ಲೆಗಳಲ್ಲಿ ನಡೆದ ರೈತರ ಮಹಾಪಂಚಾಯಿತಿಗಳಲ್ಲಿಯೂ ಅವರು ಭಾಗಿಯಾಗಿದ್ದಾರೆ.

ಆರ್‌ಎಲ್‌ಡಿಯಿಂದ ನಿಷ್ಠೆ ಬದಲಾಯಿಸುವ ಮೂಲಕ ಜಾಟ್ ಸಮುದಾಯವು ಪ್ರಮಾದ ಎಸಗಿತು ಎಂದು ಭಾರತೀಯ ಕಿಸಾನ್ ಯೂನಿಯನ್ ಅಧ್ಯಕ್ಷ ನರೇಶ್ ಟಿಕಾಯತ್ ಅವರು ಇತ್ತೀಚೆಗೆ ಹೇಳಿದ್ದರು.

ಪಕ್ಷದ ಬಗ್ಗೆ ಜಾಟ್ ಜನರಲ್ಲಿ ಈಗ ಅನುಕಂಪ ಮೂಡಿದೆ. ಜಾಟ್ ಸಮುದಾಯದ ಜನರು ಹೆಚ್ಚು ಇರುವಲ್ಲಿ ದೊಡ್ಡ ಮಟ್ಟದ ಬೆಂಬಲ ಪಕ್ಷಕ್ಕೆ ಸಿಗುತ್ತಿದೆ ಎಂದು ಆರ್‌ಎಲ್‌ಡಿಯ ನಾಯಕರೊಬ್ಬರು ಹೇಳಿದ್ದಾರೆ.

ರೈತರ ಬೆಂಬಲವನ್ನು ಪಕ್ಷವು ನಿರೀಕ್ಷಿಸಬಹುದು ಎಂದು ಲಖನೌದ ರಾಜಕೀಯ ವಿಶ್ಲೇಷಕರೊಬ್ಬರು ಅಭಿಪ್ರಾಯಪಟ್ಟಿದ್ದಾರೆ.

ಜಯಂತ್ ಚೌಧರಿ ಮತ್ತು ಅಖಿಲೇಶ್ ಯಾದವ್ ಅವರು ಮಂಗಳವಾರ ಲಖನೌದಲ್ಲಿ ಭೇಟಿಯಾದರು ಪಿಟಿಐ ಚಿತ್ರ

> **ಮುಂಬರುವ ವಿಧಾನಸಭಾ ಚುನಾವಣೆಯಲ್ಲಿ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ ಅವರು ಗೆದ್ದರೆ ಉತ್ತರ ಪ್ರದೇಶವು ದೇಶದ ಅತ್ಯಂತ ದೊಡ್ಡ ಅರ್ಥ ವ್ಯವಸ್ಥೆ ಆಗಲಿದೆ**
> **ಸುಧಾಂಶು ತ್ರಿವೇದಿ**
> ಬಿಜೆಪಿ ರಾಷ್ಟ್ರೀಯ ವಕ್ತಾರ

‘ಮೃತ ರೈತರ ಕುಟುಂಬಕ್ಕೆ ₹25 ಲಕ್ಷ ಪರಿಹಾರ’

ಲಖನೌ (ಪಿಟಿಐ): ಉತ್ತರ ಪ್ರದೇಶ ವಿಧಾನಸಭೆಗೆ 2022ರಲ್ಲಿ ನಡೆಯಲಿರುವ ಚುನಾವಣೆಯಲ್ಲಿ ತಮ್ಮ ಪಕ್ಷವು ಗೆದ್ದರೆ, ಕೇಂದ್ರದ ಕೃಷಿ ಕಾಯ್ದೆಗಳ ವಿರುದ್ಧದ ಪ್ರತಿಭಟನೆ ಸಂದರ್ಭದಲ್ಲಿ ಜೀವ ತೆತ್ತ ರೈತರ ಕುಟುಂಬಗಳಿಗೆ ತಲಾ ₹25 ಲಕ್ಷ ಪರಿಹಾರ ನೀಡಲಾಗುವುದು ಎಂದು ಸಮಾಜವಾದಿ ಪಕ್ಷದ (ಎಸ್‌ಪಿ) ಅಧ್ಯಕ್ಷ ಅಖಿಲೇಶ್ ಯಾದವ್ ಬುಧವಾರ ಹೇಳಿದ್ದಾರೆ.

‘ರೈತರ ಜೀವವು ಅಮೂಲ್ಯ. ಏಕೆಂದರೆ, ಅವರು ಇತರರಿಗಾಗಿ ಆಹಾರ ಧಾನ್ಯ ಬೆಳೆಯುವವರು’ ಎಂದು ಹಿಂದಿಯಲ್ಲಿ ಮಾಡಿದ ಟ್ವೀಟ್‌ನಲ್ಲಿ ಅಖಿಲೇಶ್ ಅಭಿಪ್ರಾಯಪಟ್ಟಿದ್ದಾರೆ.

ಕೇಂದ್ರದ ಕೃಷಿ ಕಾಯ್ದೆಗಳ ವಿರುದ್ಧ ಪ್ರತಿಭಟನೆ ನಡೆಸುತ್ತಿದ್ದ ರೈತರಿಗೆ ಎಸ್‌ಪಿ ಬೆಂಬಲ ನೀಡಿದೆ.

ಎಎಪಿ, ಅಪ್ನಾದಳ ಜತೆಗೂ ಮಾತುಕತೆ

ಲಖನೌ (ಪಿಟಿಐ): ಆಮ್ ಆದ್ಮಿ ಪಕ್ಷದ ನಾಯಕ ಸಂಜಯ್ ಸಿಂಗ್ ಮತ್ತು ಅಪ್ನಾ ದಳ (ಕೆ) ಮುಖ್ಯಸ್ಥೆ ಕೃಷ್ಣಾ ಪಟೇಲ್ ಜೊತೆ ಅಖಿಲೇಶ್ ಯಾದವ್ ಅವರು ಬುಧವಾರ ಮಾತುಕತೆ ನಡೆಸಿದರು.

ಈ ಕುರಿತು ಪ್ರತಿಕ್ರಿಯೆ ನೀಡಿರುವ ಕೃಷ್ಣಾ ಪಟೇಲ್, ‘ಎಸ್‌ಪಿ ಜೊತೆ ಮೈತ್ರಿ ಮಾಡಿಕೊಳ್ಳುವುದು ಖಚಿತ. ನಾವು ಸಮಾನ ಸಿದ್ಧಾಂತ ಹೊಂದಿರುವ ಪಕ್ಷಗಳ ಜೊತೆ ಮೈತ್ರಿ ಮಾಡಿಕೊಳ್ಳುತ್ತಿದ್ದೇವೆ’ ಎಂದಿದ್ದಾರೆ.

‘ಉತ್ತರ ಪ್ರದೇಶವನ್ನು ಭ್ರಷ್ಟಾಚಾರ ಮುಕ್ತಗೊಳಿಸುವುದು ಮತ್ತು ಕಾನೂನು ಸುವ್ಯವಸ್ಥೆ ಹಾಳು ಮಾಡುತ್ತಿರುವ ಸರ್ಕಾರದಿಂದ ಮುಕ್ತಿ ಪಡೆಯುವುದು ಹೇಗೆ ಎಂಬ ವಿಷಯದ ಬಗ್ಗೆ ಚರ್ಚೆ ನಡೆಸಲಾಯಿತು. ಎಸ್‌ಪಿ ಜೊತೆ ಮೈತ್ರಿ ಮಾಡಿಕೊಳ್ಳುವ ಕುರಿತು ಈಗಷ್ಟೇ ಚರ್ಚೆಗಳು ಆರಂಭವಾಗಿವೆ’ ಎಂದು ಸಂಜಯ್ ಸಿಂಗ್ ಹೇಳಿದ್ದಾರೆ.

ಬಿಜೆಪಿ ಎಸ್‌ಸಿ ಮೋರ್ಚಾದಿಂದ 20 ಬೃಹತ್ ಕಾರ್ಯಕ್ರಮ

ನವದೆಹಲಿ (ಪಿಟಿಐ): ಸಂವಿಧಾನ ದಿನದ ಅಂಗವಾಗಿ ಉತ್ತರ ಪ್ರದೇಶದ 20 ಕಡೆಗಳಲ್ಲಿ ಬೃಹತ್ ಕಾರ್ಯಕ್ರಮಗಳನ್ನು ಬಿಜೆಪಿಯ ಎಸ್‌ಸಿ ಮೋರ್ಚಾ ಆಯೋಜಿಸಲಿದೆ.

‘ಇದೇ 26ರಂದು ದೇಶದಾದ್ಯಂತ ಸಂವಿಧಾನ ಗೌರವ ಯಾತ್ರೆಯನ್ನು ನಮ್ಮ ಪಕ್ಷದ ಕಾರ್ಯಕರ್ತರು ಆಯೋಜಿಸಲಿದ್ದಾರೆ. ಉತ್ತರ ಪ್ರದೇಶದಲ್ಲಿ 20 ಬೃಹತ್ ಕಾರ್ಯಕ್ರಮಗಳನ್ನು ಆಯೋಜಿಸಲಾಗುವುದು. ಉತ್ತರ ಪ್ರದೇಶ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ ಅವರು ಹೆಚ್ಚಿನ ಕಾರ್ಯಕ್ರಮಗಳಲ್ಲಿ ಭಾಷಣ ಮಾಡಲಿದ್ದಾರೆ’ ಎಂದು ಬಿಜೆಪಿ ಎಸ್‌ಸಿ ಘಟಕದ ಅಧ್ಯಕ್ಷ ಲಾಲ್ ಸಿಂಗ್ ಆರ್ಯ ಹೇಳಿದ್ದಾರೆ.

ಅಂಬೇಡ್ಕರ್ ಪುಣ್ಯತಿಥಿ ದಿನವಾದ ಡಿಸೆಂಬರ್ 6ರಂದು ಸಮಾರೋಪ ನಡೆಯಲಿದೆ.

ಚಳಿಗಾಲದ ಅಧಿವೇಶನ ಕಾಂಗ್ರೆಸ್ ಸಭೆ ಇಂದು

ಪ್ರಜಾವಾಣಿ ವಾರ್ತೆ

ನವದೆಹಲಿ: ಸಂಸತ್ತಿನ ಚಳಿಗಾಲದ ಅಧಿವೇಶನದಲ್ಲಿ ಯಾವ ಕಾರ್ಯತಂತ್ರ ಅನುಸರಿಸಬೇಕು ಎಂಬುದನ್ನು ಚರ್ಚಿಸಲು ಮತ್ತು ವಿರೋಧ ಪಕ್ಷಗಳಲ್ಲಿ ಒಮ್ಮತ ಮೂಡಿಸುವ ಪ್ರಯತ್ನಗಳನ್ನು ಅಂತಿಮಗೊಳಿಸಲು ಕಾಂಗ್ರೆಸ್ ಪಕ್ಷವು ಗುರುವಾರ ಸಂಜೆ ಸಭೆ ಸೇರಲಿದೆ.

ಪಕ್ಷದ ಮುಖ್ಯಸ್ಥೆ ಸೋನಿಯಾ ಗಾಂಧಿ ಅಧ್ಯಕ್ಷತೆಯಲ್ಲಿ ನಡೆಯುವ ಈ ಸಭೆಯಲ್ಲಿ ರಾಜ್ಯಸಭೆಯಲ್ಲಿ ವಿರೋಧ ಪಕ್ಷದ ನಾಯಕ ಮಲ್ಲಿಕಾರ್ಜುನ ಖರ್ಗೆ, ಲೋಕಸಭೆಯಲ್ಲಿ ಕಾಂಗ್ರೆಸ್ ಪಕ್ಷದ ನಾಯಕ ಅಧಿರ್ ರಂಜನ್ ಚೌಧರಿ, ಪಕ್ಷದ ಪ್ರಧಾನ ಕಾರ್ಯದರ್ಶಿ (ಸಂಘಟನೆ) ಕೆ.ಸಿ.ವೇಣುಗೋಪಾಲ್ ಸೇರಿದಂತೆ ಮುಖಂಡರು ಭಾಗವಹಿಸಲಿದ್ದಾರೆ.

ಸದನದ ನಿರ್ವಹಣೆ, ಇತರ ವಿರೋಧ ಪಕ್ಷಗಳೊಂದಿಗೆ ಸಮನ್ವಯ ಸಾಧಿಸುವುದು ಸೇರಿದಂತೆ ಹಲವು ವಿಷಯಗಳನ್ನು ಸಭೆ ಚರ್ಚಿಸಲಿದೆ.

ಕಾಂಗ್ರೆಸ್ ನಾಯಕರನ್ನು ಸೆಳೆದುಕೊಳ್ಳುತ್ತಿರುವ ತೃಣಮೂಲ ಕಾಂಗ್ರೆಸ್‌ನೊಂದಿಗೆ ಸದನದಲ್ಲಿ ಸಮನ್ವಯ ಬೇಡ ಎಂದು ಪಕ್ಷದ ಒಂದಿಷ್ಟು ನಾಯಕರು ಹೇಳಿದ್ದಾರೆ. ಸದನದ ನಿರ್ವಹಣೆಗಾಗಿ ಮಾತ್ರ ಆ ಪಕ್ಷದೊಂದಿಗೆ ಸಮನ್ವಯ ಇದ್ದು, ಅದು ಮಾತ್ರ ಮುಂದುವರಿಯುತ್ತದೆಯೇ ಹೊರತು ಮಮತಾ ಬ್ಯಾನರ್ಜಿ ನೇತೃತ್ವದ ಪಕ್ಷದೊಂದಿಗೆ ಎಂದೂ ಮೈತ್ರಿ ಮಾಡಿಕೊಳ್ಳಬಾರದು ಎಂದು ಇನ್ನುಳಿದವರು ಹೇಳಿದ್ದಾರೆ.


ಕಾಂಗ್ರೆಸ್ ಅಭ್ಯರ್ಥಿ ಗಾಯತ್ರಿ ಶಾಂತೇಗೌಡ ಪರವಾಗಿ ಅವರ ಪುತ್ರ, ಅಬಕಾರಿ ಇಲಾಖೆ ಅಧಿಕಾರಿ ಬಿ.ಎಂ.ಸುನೀಲ್ ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಅವರಿಂದ ಬಿ ಫಾರಂ ಪಡೆದರು.

ಬಿ ಫಾರಂ ಪಡೆದ ಅಧಿಕಾರಿ: ಬಿಜೆಪಿ ಆಕ್ರೋಶ

ಬೆಂಗಳೂರು: ಚಿಕ್ಕಮಗಳೂರು ಸ್ಥಳೀಯ ಸಂಸ್ಥೆಗಳಿಂದ ವಿಧಾನಪರಿಷತ್ತಿಗೆ ಸ್ಪರ್ಧಿಸಿರುವ ಕಾಂಗ್ರೆಸ್‌ನ ಗಾಯತ್ರಿ ಶಾಂತೇಗೌಡ ಪರವಾಗಿ ಅವರ ಪುತ್ರ ಅಬಕಾರಿ ಇಲಾಖೆಯ ಜಾರಿ ಅಧಿಕಾರಿ ಬಿ.ಎಂ.ಸುನೀಲ್ ಅವರು ಕಾಂಗ್ರೆಸ್ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಅವರಿಂದ ‘ಬಿ’ ಫಾರಂ ಪಡೆದಿರುವುದಕ್ಕೆ ಬಿಜೆಪಿ ಆಕ್ರೋಶ ವ್ಯಕ್ತಪಡಿಸಿದೆ.

ಈ ಬಗ್ಗೆ ಆಕ್ರೋಶ ವ್ಯಕ್ತಪಡಿಸಿರುವ ಬಿಜೆಪಿ ಪ್ರಮುಖ ಪ್ರಕಾಶ್ ಶೇಷರಾಘವಚಾರ್, ‘ಸರ್ಕಾರಿ ಅಧಿಕಾರಿಯೊಬ್ಬರು ರಾಜಕೀಯ ಪಕ್ಷವೊಂದರ ಅಧ್ಯಕ್ಷರಿಂದ ಬಿ ಫಾರಂ ಪಡೆದಿರುವುದು ಸರ್ಕಾರದ ನಿಯಮಾವಳಿಗಳ ಉಲ್ಲಂಘನೆಯಾಗಿದೆ. ಆದ್ದರಿಂದ ಅವರನ್ನು ಸರ್ಕಾರಿ ಸೇವೆಯಿಂದ ಕಿತ್ತೊಗೆಯಬೇಕು’ ಎಂದು ಆಗ್ರಹಿಸಿದ್ದಾರೆ.

‘ಸರ್ಕಾರ ಮತ್ತು ಚುನಾವಣಾ ಆಯೋಗವು ಈ ವಿಷಯವನ್ನು ಗಂಭೀರವಾಗಿ ಪರಿಗಣಿಸಬೇಕು. ನಿಯಮಾವಳಿ ಪ್ರಕಾರ ತಕ್ಷಣವೇ ಕ್ರಮ ಜರುಗಿಸಬೇಕು. ಇದು ಎಲ್ಲರಿಗೂ ಪಾಠವಾಗಬೇಕು’ ಎಂದೂ ಅವರು ಹೇಳಿದ್ದಾರೆ.

ಕಾಂಗ್ರೆಸ್ ಅಭ್ಯರ್ಥಿ ನಾಮಪತ್ರ ಕ್ರಮಬದ್ಧತೆ– ಇಂದು ನಿರ್ಧಾರ

ಪ್ರಜಾವಾಣಿ ವಾರ್ತೆ

ಮೈಸೂರು: ಸ್ಥಳೀಯ ಸಂಸ್ಥೆಗಳಿಂದ ವಿಧಾನ ಪರಿಷತ್‌ಗೆ ನಡೆಯುವ ಮೈಸೂರು–ಚಾಮರಾಜನಗರ ದ್ವಿಸದಸ್ಯ ಕ್ಷೇತ್ರದ ಚುನಾವಣೆಗೆ ಸಂಬಂಧಿಸಿದಂತೆ ಜೆಡಿಎಸ್ ಹಾಗೂ ಬಿಜೆಪಿ ಅಭ್ಯರ್ಥಿಗಳ ನಾಮಪತ್ರ ಪುರಸ್ಕೃತಗೊಂಡಿದ್ದು, ಕಾಂಗ್ರೆಸ್ ಅಭ್ಯರ್ಥಿ ಡಾ.ಡಿ.ತಿಮ್ಮಯ್ಯ ಅವರ ನಾಮಪತ್ರ ಕ್ರಮಬದ್ಧತೆಯ ಬಗ್ಗೆ ಗುರುವಾರ ನಿರ್ಧಾರ ಹೊರಬೀಳಲಿದೆ.

ಜೆಡಿಎಸ್ ಹಾಗೂ ಕಾಂಗ್ರೆಸ್ ಅಭ್ಯರ್ಥಿಗಳು ಸಲ್ಲಿಸಿರುವ ಪ್ರಮಾಣಪತ್ರದಲ್ಲಿ ದೋಷವಿದೆ ಎಂದು ಬಿಜೆಪಿ ಅಭ್ಯರ್ಥಿ ಆರ್.ರಘು (ಕೌಟಿಲ್ಯ) ಆಕ್ಷೇಪಣೆ ಸಲ್ಲಿಸಿದ್ದು, ಎರಡೂ ಪಕ್ಷಗಳಲ್ಲಿ ಆತಂಕಕ್ಕೆ ಕಾರಣವಾಯಿತು. ಹೀಗಾಗಿ, ದಿನವಿಡೀ ಅಭ್ಯರ್ಥಿಗಳು ತಮ್ಮ ವಕೀಲರ ಮೂಲಕ ದಾಖಲೆ ಕ್ರೋಡೀಕರಣದಲ್ಲಿ ತೊಡಗಿದ್ದರು.

ಕೇಂದ್ರ ಹಣ ಕೊಡದಿದ್ದರೆ ರಾಜ್ಯ ನಡೆಸುವುದು ಹೇಗೆ?: ಮಮತಾ

‘ಬಿಎಸ್‌ಎಫ್‌ಗೆ ಅಧಿಕಾರ ಕೊಟ್ಟು ಒಕ್ಕೂಟ ವ್ಯವಸ್ಥೆ ಹಾಳುಗೆಡವದಿರಿ’

ನವದೆಹಲಿ (ಪಿಟಿಐ): ಬಿಎಸ್‌ಎಫ್‌ಗೆ ಹೆಚ್ಚಿನ ಅಧಿಕಾರ ನೀಡಿದರೆ ಕಾನೂನು ಸುವ್ಯವಸ್ಥೆ ಕಾಪಾಡುವಲ್ಲಿ ಪೊಲೀಸರೊಂದಿಗೆ ಘರ್ಷಣೆ ಹೆಚ್ಚುತ್ತದೆ. ದೇಶದಲ್ಲಿನ ಒಕ್ಕೂಟ ವ್ಯವಸ್ಥೆಯನ್ನು ಯಾವುದೇ ಕಾರಣಕ್ಕೂ ಹಾಳು ಮಾಡಬಾರದು ಎಂದು ಪಶ್ಚಿಮ ಬಂಗಾಳ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಅವರು ಪ್ರಧಾನಿ ನರೇಂದ್ರ ಮೋದಿ ಅವರಿಗೆ ಹೇಳಿದ್ದಾರೆ.

ಮಮತಾ ಅವರು ಪ್ರಧಾನಿ ಮೋದಿ ಅವರನ್ನು ಸೋಮವಾರ ಭೇಟಿ ಮಾಡಿದರು. ರಾಜ್ಯದಲ್ಲಿ ಗಡಿ ಭದ್ರತಾ ಪಡೆಯ ಕಾರ್ಯವ್ಯಾಪ್ತಿಗೆ ಸಂಬಂಧಿಸಿದಂತೆ ಇರುವ ಸಮಸ್ಯೆಗಳ ಬಗ್ಗೆ ಅವರು ಪ್ರಧಾನಿ ಜತೆ ಮಾತುಕತೆ ನಡೆಸಿದ್ದಾರೆ. ಅಲ್ಲದೆ ರಾಜ್ಯದಲ್ಲಿ ಮುಂದಿನ ವರ್ಷ ನಡೆಯಲಿರುವ ಜಾಗತಿಕ ವಾಣಿಜ್ಯ ಸಮ್ಮೇಳನದ ಉದ್ಘಾಟನೆಗೆ ಪ್ರಧಾನಿಯನ್ನು ಅವರು ಆಹ್ವಾನಿಸಿದ್ದಾರೆ.

‘ಕೇಂದ್ರ ಸರ್ಕಾರದಿಂದ ಪಶ್ಚಿಮ ಬಂಗಾಳ ಸರ್ಕಾರಕ್ಕೆ ₹96,655 ಕೋಟಿ ಬರಬೇಕಿದೆ. ಕೇಂದ್ರದಿಂದ ಬರಬೇಕಿರುವ ಹಣ ಬರದಿದ್ದರೆ, ರಾಜ್ಯವನ್ನು ನಡೆಸುವುದಾದರೂ ಹೇಗೆ ಎಂದು ಪ್ರಧಾನಿಯನ್ನು ಪ್ರಶ್ನಿಸಿದ್ದೇನೆ. ನಮ್ಮ ಸಿದ್ಧಾಂತಗಳು ಬೇರೆ ಇರಬಹುದು, ಆದರೆ ಅದು ರಾಜ್ಯ ಮತ್ತು ಕೇಂದ್ರ ಸರ್ಕಾರಗಳ ಸಂಬಂಧವನ್ನು ಬಾಧಿಸಬಾರದು. ರಾಜ್ಯಗಳು ಅಭಿವೃದ್ಧಿಯಾದರಷ್ಟೇ ದೇಶ ಅಭಿವೃದ್ಧಿಯಾಗುತ್ತದೆ’ ಎಂದು ಅವರು ಪ್ರಧಾನಿ ಭೇಟಿಯ ನಂತರ ಮಾಧ್ಯಮ ಪ್ರತಿನಿಧಿಗಳಿಗೆ ಮಾಹಿತಿ ನೀಡಿದರು.

‘ಸೋನಿಯಾರನ್ನು ಭೇಟಿಯಾಗುವುದು ಕಡ್ಡಾಯವೇ?’: ‘ಇಲ್ಲಿಗೆ ಬಂದಾಗಲೆಲ್ಲಾ ಸೋನಿಯಾ ಅವರನ್ನು ಭೇಟಿಯಾಗಲೇಬೇಕೆ? ಸಂವಿಧಾನದಲ್ಲಿ ಅದನ್ನು ಕಡ್ಡಾಯ ಮಾಡಲಾಗಿದೆಯೇ’ ಎಂದು ಮಮತಾ ಪ್ರಶ್ನಿಸಿದ್ದಾರೆ. ದೆಹಲಿಗೆ ಬಂದಾಗ ಕಾಂಗ್ರೆಸ್ ಅಧ್ಯಕ್ಷೆ ಸೋನಿಯಾ ಗಾಂಧಿ ಅವರನ್ನು ಏಕೆ ಭೇಟಿ ಮಾಡಲಿಲ್ಲ ಎಂದು ಮಾಧ್ಯಮ ಪ್ರತಿನಿಧಿಗಳು ಕೇಳಿದ ಪ್ರಶ್ನೆಗೆ ಮಮತಾ ಹೀಗೆ ಪ್ರತಿಕ್ರಿಯಿಸಿದ್ದಾರೆ.

ಮಮತಾ ಬ್ಯಾನರ್ಜಿ ಅವರು ಪ್ರಧಾನಿ ನರೇಂದ್ರ ಮೋದಿ ಅವರನ್ನು ದೆಹಲಿಯಲ್ಲಿ ಬುಧವಾರ ಭೇಟಿಯಾದರು –ಪಿಟಿಐ ಚಿತ್ರ

ಮಮತಾ– ಸುಬ್ರಮಣಿಯನ್ ಸ್ವಾಮಿ ಭೇಟಿ

ಪ್ರಜಾವಾಣಿ ವಾರ್ತೆ

ಸುಬ್ರಮಣಿಯನ್ ಸ್ವಾಮಿ

ನವದೆಹಲಿ: ಬಿಜೆಪಿ ಮುಖಂಡ ಸುಬ್ರಮಣಿಯನ್ ಸ್ವಾಮಿ ಅವರು ಬುಧವಾರ ದೆಹಲಿಯಲ್ಲಿ ಪಶ್ಚಿಮ ಬಂಗಾಳ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಅವರನ್ನು ಭೇಟಿ ಮಾಡಿದ್ದಾರೆ.

ಆಡಳಿತಾರೂಢ ಬಿಜೆಪಿಯಲ್ಲಿ ಇದ್ದುಕೊಂಡೇ, ಪ್ರಧಾನಿ ನರೇಂದ್ರ ಮೋದಿ ಅವರನ್ನು ಬಹಿರಂಗವಾಗಿಯೇ ಟೀಕಿಸುವ ಸ್ವಾಮಿ, ತೃಣಮೂಲ ಕಾಂಗ್ರೆಸ್ ಪಕ್ಷದ ಮುಖ್ಯಸ್ಥೆಯನ್ನು ಭೇಟಿ ಮಾಡಿರುವುದು ರಾಜಕೀಯ ವಲಯದಲ್ಲಿ ಕುತೂಹಲಕ್ಕೆ ಕಾರಣವಾಗಿದೆ.

ಮಮತಾ-ಪ್ರಧಾನಿ ಭೇಟಿಗೆ ಕೆಲವು ಗಂಟೆ ಮೊದಲು, ಮಮತಾ ಅವರನ್ನು ಸ್ವಾಮಿ ಭೇಟಿಯಾಗಿದ್ದಾರೆ.

ಪಕ್ಷದ ಪ್ರಧಾನ ಕಾರ್ಯದರ್ಶಿಯೂ ಆಗಿರುವ ಮಮತಾ ಸೋದರಳಿಯ ಅಭಿಷೇಕ್ ಬ್ಯಾನರ್ಜಿ ಅವರ ದೆಹಲಿಯ ನಿವಾಸದಲ್ಲಿ ತಮ್ಮನ್ನು ಮಮತಾ ಬರಮಾಡಿಕೊಂಡಿದ್ದಾಗಿ ಸ್ವಾಮಿ ಹೇಳಿದ್ದಾರೆ.

ತೃಣಮೂಲ ಕಾಂಗ್ರೆಸ್ ಸೇರ್ಪಡೆಯಾಗಲಿದ್ದೀರಾ ಎಂಬ ಸುದ್ದಿಗಾರರ ಪ್ರಶ್ನೆಯೊಂದಕ್ಕೆ ಪ್ರತಿಕ್ರಿಯಿಸಿದ ಸ್ವಾಮಿ, ‘ಅದರ ಅಗತ್ಯವಿಲ್ಲ. ನಾನು ಈಗಾಗಲೇ ಅವರೊಂದಿಗೆ (ಮಮತಾ ಬ್ಯಾನರ್ಜಿ) ಇದ್ದೇನೆ’ ಎಂದರು.

ಡೆಲ್ಟಾಗೆ ಕೋವ್ಯಾಕ್ಸಿನ್ ಶೇ 50ರಷ್ಟು ಪರಿಣಾಮಕಾರಿ

ನವದೆಹಲಿ (ಪಿಟಿಐ): ಕೊರೊನಾ ವೈರಸ್‌ನ ಡೆಲ್ಟಾ ರೂಪಾಂತರದ ವಿರುದ್ಧ ಕೋವ್ಯಾಕ್ಸಿನ್ ಲಸಿಕೆಯ ಎರಡು ಡೋಸ್‌ಗಳು ಶೇ 50ರಷ್ಟು ಪರಿಣಾಮಕಾರಿ ಎಂದು ಅಧ್ಯಯನ ವರದಿ ತಿಳಿಸಿದೆ. ವರದಿಯು 'ದಿ ಲ್ಯಾನ್ಸೆಟ್ ಇನ್‌ಫೆಕ್ಷಿಯಸ್ ಡಿಸೀಸ್ ಜರ್ನಲ್'ನಲ್ಲಿ ಪ್ರಕಟಗೊಂಡಿದೆ.

ಲಕ್ಷಣರಹಿತ ಮಂಡಳಿಗಳ ಸಹಯೋಗದೊಂದಿಗೆ ಕೋವ್ಯಾಕ್ಸಿನ್ ಲಸಿಕೆ ಅಭಿವೃದ್ಧಿಪಡಿಸಿತ್ತು. ಜನವರಿಯಲ್ಲಿ ಕೋವ್ಯಾಕ್ಸಿನ್ ಲಸಿಕೆಯ ತುರ್ತು ಬಳಕೆಗೆ ಕೇಂದ್ರ ಸರ್ಕಾರ ಅನುಮತಿ ನೀಡಿತ್ತು. ಇತ್ತೀಚೆಗಷ್ಟೇ ವಿಶ್ವ ಆರೋಗ್ಯ ಸಂಸ್ಥೆ (ಡಬ್ಲ್ಯುಎಚ್‌ಒ) ಕೂಡ ಕೋವ್ಯಾಕ್ಸಿನ್ ಲಸಿಕೆಯ ತುರ್ತು ಬಳಕೆಗೆ ಅನುಮೋದನೆ ನೀಡಿತ್ತು. ಇದರೊಂದಿಗೆ, ಲಸಿಕೆಗೆ ಜಾಗತಿಕ ಮಾನ್ಯತೆ ದೊರೆತಿತ್ತು.

ಅಂತರರಾಷ್ಟ್ರೀಯ ವಿಮಾನ ಸೇವೆ ಶೀಘ್ರದಲ್ಲೇ ಸಹಜ ಸ್ಥಿತಿಗೆ

'ಈ ವರ್ಷದ ಅಂತ್ಯದ ವೇಳೆಗೆ ಅಂತರರಾಷ್ಟ್ರೀಯ ಪ್ರಯಾಣಿಕ ವಿಮಾನಗಳ ಸೇವೆ ಸಹಜಸ್ಥಿತಿಗೆ ಬರುವ ನಿರೀಕ್ಷೆ ಇದೆ' ಎಂದು ಕೇಂದ್ರ ನಾಗರಿಕ ವಿಮಾನಯಾನ ಸಚಿವಾಲಯದ ಕಾರ್ಯದರ್ಶಿ ರಾಜೀವ್ ಬನ್ಸಲ್ ಬುಧವಾರ ಹೇಳಿದ್ದಾರೆ.

ಕೋವಿಡ್ ಸಾಂಕ್ರಾಮಿಕ ರೋಗದ ಕಾರಣದಿಂದಾಗಿ ಅಂತರರಾಷ್ಟ್ರೀಯ ವಿಮಾನಗಳ ಸಂಚಾರದ ಮೇಲೆ ಕಳೆದ ವರ್ಷದ ಮಾರ್ಚ್‌ನಲ್ಲಿ ವಿಧಿಸಿರುವ ನಿರ್ಬಂಧವನ್ನು ಈ ತಿಂಗಳ 30ರವರೆಗೆ ಮುಂದುವರಿಸಲಾಗಿದೆ. ಆದರೆ, ಕೆಲವು ಸೀಮಿತ ರಾಷ್ಟ್ರಗಳೊಂದಿಗೆ ಭಾರತ ಕೆಲವು ವಿಮಾನಗಳ ಸಂಚಾರವನ್ನು ಈಗಾಗಲೇ ಆರಂಭಿಸಿದೆ.

ಕೋವಿಡ್ ಪರೀಕ್ಷಾ ಸಂಖ್ಯೆ ಇಳಿಕೆ: ಕಳವಳ

ಬೇರೆ ಬೇರೆ ದೇಶಗಳಲ್ಲಿ ಕೋವಿಡ್ ಪ್ರಕರಣಗಳ ಸಂಖ್ಯೆ ಹೆಚ್ಚುತ್ತಿರುವ ಹಿನ್ನೆಲೆಯಲ್ಲಿ 13 ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳಿಗೆ ಪತ್ರ ಬರೆದಿರುವ ಕೇಂದ್ರ ಆರೋಗ್ಯ ಸಚಿವಾಲಯವು, ಕೆಲವು ಜಿಲ್ಲೆಗಳಲ್ಲಿ ಕೋವಿಡ್ ಸೋಂಕು ಪತ್ತೆ ಪರೀಕ್ಷೆಗಳನ್ನು ಕಡಿಮೆ ಮಾಡಿರುವುದಕ್ಕೆ ಕಳವಳ ವ್ಯಕ್ತಪಡಿಸಿದೆ.

ವಿವಾಹ ಸಮಾರಂಭಗಳು, ಹಬ್ಬಗಳು ಮತ್ತು ರಜಾದಿನಗಳಲ್ಲಿನ ಪ್ರಯಾಣದ ವಿವರಗಳನ್ನು ಗಮನದಲ್ಲಿಟ್ಟುಕೊಂಡು ಕೋವಿಡ್ ಪರೀಕ್ಷಾ ಸಂಖ್ಯೆಗಳನ್ನು ಹೆಚ್ಚಿಸುವಂತೆ ಕೇರಳ, ಮಹಾರಾಷ್ಟ್ರ, ಗೋವಾ ಸೇರಿದಂತೆ ವಿವಿಧ ರಾಜ್ಯಗಳಿಗೆ ಆರೋಗ್ಯ ಸಚಿವಾಲಯದ ಕಾರ್ಯದರ್ಶಿ ರಾಜೇಶ್ ಭೂಷಣ್ ಪತ್ರ ಬರೆದಿದ್ದಾರೆ.

'ಪರೀಕ್ಷಾ ಸಂಖ್ಯೆ ಇಳಿಕೆಯಾಗುತ್ತಿರುವುದರಿಂದ ಸೋಂಕಿನ ಹರಡುವಿಕೆಯನ್ನು ನಿರ್ಧರಿಸುವುದು ಕಷ್ಟವಾಗುತ್ತದೆ. ಅಭಿವೃದ್ಧಿ ಹೊಂದಿರುವ ಕೆಲವು ದೇಶಗಳು ಕೋವಿಡ್‌ನ ನಾಲ್ಕನೇ ಮತ್ತು ಐದನೇ ಅಲೆಯನ್ನು ಎದುರಿಸುತ್ತಿವೆ. ಸಾಂಕ್ರಾಮಿಕ ರೋಗದ ಈ ಅನಿರೀಕ್ಷಿತ ಮತ್ತು ಸಾಂಕ್ರಾಮಿಕ ಸ್ವರೂಪವನ್ನು ಗಮನಿಸಿದರೆ ನಿರಂತರ ಜಾಗರೂಕತೆಯ ಅವಶ್ಯಕತೆ ಇದೆ' ಎಂದು ಅವರು ಪತ್ರದಲ್ಲಿ ಒತ್ತಿ ಹೇಳಿದ್ದಾರೆ.

ಎಂಎಸ್‌ಪಿ ಏಕೆ ಬೇಕು: ರೈತರ ವಿವರಣೆ

ಪ್ರಜಾವಾಣಿ ವಾರ್ತೆ

ನವದೆಹಲಿ: ಕೇಂದ್ರದ ಮೂರು ಕೃಷಿ ಕಾಯ್ದೆಗಳ ವಿರುದ್ಧ ಹೋರಾಡುತ್ತಿದ್ದ ರೈತರು ಈಗ ಕನಿಷ್ಠ ಬೆಂಬಲ ಬೆಲೆಯ (ಎಂಎಸ್‌ಪಿ) ಮೇಲೆ ಗಮನ ಕೇಂದ್ರೀಕರಿಸಿದ್ದಾರೆ. ಎಂಎಸ್‌ಪಿ ಏಕೆ ಅಗತ್ಯ ಮತ್ತು ಎಂಎಸ್‌ಪಿ ಲೆಕ್ಕಾಚಾರ ಹೇಗಿರಬೇಕು ಎಂಬುದನ್ನು ವಿವರಿಸುವ ಬರಹವನ್ನು ಸಂಯುಕ್ತ ಕಿಸಾನ್ ಮೋರ್ಚಾ ಬುಧವಾರ ಬಿಡುಗಡೆ ಮಾಡಿದೆ.

ಕೃಷಿ ಕಾಯ್ದೆಗಳನ್ನು ತೆಗೆದುಹಾಕಲು, ಮಸೂದೆ ಮಂಡಿಸಲು ಕೇಂದ್ರ ಸಚಿವ ಸಂಪುಟವು ಒಪ್ಪಿಗೆ ನೀಡಿದ ದಿನವೇ ಕಿಸಾನ್ ಸಂಯುಕ್ತ ಮೋರ್ಚಾ ಎಂಎಸ್‌ಪಿಯ ಅಗತ್ಯವನ್ನು ಪ್ರತಿಪಾದಿಸಿದೆ.

'ಈ ಪ್ರತಿಭಟನೆ ಕೊನೆಯಾಗಿಲ್ಲ. ಮುಂದೆ ಏನು ಮಾಡಬೇಕು ಎಂಬುದನ್ನು ನಿರ್ಧರಿಸಲು ನಾವು ಇದೇ 27ಕ್ಕೆ ಸಭೆ ನಡೆಸಲಿದ್ದೇವೆ' ಎಂದು ಭಾರತೀಯ ಕಿಸಾನ್ ಯೂನಿಯನ್‌ನ ನಾಯಕ ರಾಕೇಶ್ ಟಿಕಾಯತ್ ಬುಧವಾರ ಟ್ವೀಟ್ ಮಾಡಿದ್ದಾರೆ.

ಜನವರಿ 1ರ ನಂತರ ರೈತರ ಆದಾಯವನ್ನು ದುಪ್ಪಟ್ಟು ಮಾಡುತ್ತೇವೆ ಎಂದು ಮೋದಿ ಹೇಳಿದ್ದಾರೆ. ಆದಾಯ ದುಪ್ಪಟ್ಟು ಹೇಗೆ ಮಾಡುತ್ತಾರೆ ಎಂಬುದನ್ನು ವಿವರಿಸಲಿ

ರಾಕೇಶ್ ಟಿಕಾಯತ್, ಭಾರತೀಯ ಕಿಸಾನ್ ಯೂನಿಯನ್ ನಾಯಕ

'ಕೃಷಿ ವೆಚ್ಚ ಮತ್ತು ಬೆಲೆ ಆಯೋಗವು (ಸಿಎಸಿಪಿ) ಎಲ್ಲಾ ಬೆಳೆಗಳಿಗೆ ರೈತ ಮಾಡಿದ ವೆಚ್ಚ ಮತ್ತು ಕುಟುಂಬದ ಸದಸ್ಯರ ದುಡಿಮೆಯನ್ನು ಸೇರಿಸಿ ಎಂಎಸ್‌ಪಿ ನಿಗದಿ ಮಾಡುತ್ತದೆ. ಆದರೆ ಸ್ವಾಮಿನಾಥನ್ ಆಯೋಗದ ವರದಿಯಲ್ಲಿ ಶಿಫಾರಸು ಮಾಡಲಾದ ಎಂಎಸ್‌ಪಿಯು ರೈತ ಮಾಡಿದ ವೆಚ್ಚ, ಕುಟುಂಬದ ಸದಸ್ಯರ ದುಡಿಮೆ, ಜಮೀನು ಮತ್ತು ಬಂಡವಾಳ ಹೂಡಿಕೆ ಮೇಲಿನ ಗಳಿಕೆಯನ್ನು ಒಳಗೊಂಡಿದೆ. ಸಿಎಸಿಪಿ ನಿಗದಿ ಮಾಡುವ ಎಂಎಸ್‌ಪಿಯು, ಸ್ವಾಮಿನಾಥನ್ ಆಯೋಗದಲ್ಲಿ ವಿವರಿಸಲಾದ ಎಂಎಸ್‌ಪಿಗಿಂತ ಕಡಿಮೆ' ಎಂದು ಸಂಯುಕ್ತ ಕಿಸಾನ್ ಮೋರ್ಚಾ (ಎಸ್‌ಕೆಎಂ) ವಿವರಿಸಿದೆ.

'ಬೇರೆ–ಬೇರೆ ರಾಜ್ಯಗಳು ಎಂಎಸ್‌ಪಿಯನ್ನು ಬೇರೆ–ಬೇರೆ ರೀತಿಯಲ್ಲಿ ಲೆಕ್ಕಹಾಕುತ್ತವೆ. ಹೀಗಾಗಿ ಒಂದೇ ಬೆಳೆಗೆ ಹಲವು ರಾಜ್ಯಗಳಲ್ಲಿ ಭಿನ್ನ ಎಂಎಸ್‌ಪಿ ಇದೆ. ಈ ಕಾರಣದಿಂದಲೇ ರೈತರು ಸರಿಯಾದ ಎಂಎಸ್‌ಪಿ ಇರಬೇಕು ಎಂದು ಒತ್ತಾಯಿಸುತ್ತಿದ್ದಾರೆ' ಎಂದು ಎಸ್‌ಕೆಎಂ ಹೇಳಿದೆ.

'ಕೃಷಿ ಕಾಯ್ದೆಗಳಿಂದ ಬರಬಹುದಾಗಿದ್ದ ಸಮಸ್ಯೆಗಳು ಮಾತ್ರ ಈಗ ಬಗೆಹರಿದಿವೆ. ಆದರೆ ಕಡಿಮೆ ಬೆಲೆ, ಬೆಳೆನಾಶ, ಅತೀವ ಸಾಲದ ಸಮಸ್ಯೆಗಳು ಹಾಗೇ ಇವೆ. ಎಂಎಸ್‌ಪಿಯಲ್ಲಿ ಸರ್ಕಾರವು ಕೃಷಿ ಉತ್ಪನ್ನಗಳನ್ನು ಖರೀದಿಸುತ್ತದೆ ಎಂಬ ಖಾತರಿ ಸಹ ಇಲ್ಲ. ಈ ಸಮಸ್ಯೆಗಳು ಬಗೆಹರಿಯಬೇಕು ಎಂದರೆ ಸರ್ಕಾರವು ಸರಿಯಾದ ರೀತಿಯಲ್ಲಿ ಎಂಎಸ್‌ಪಿ ನೀಡಬೇಕು' ಎಂದು ಎಸ್‌ಕೆಎಂ ಪ್ರತಿಪಾದಿಸಿದೆ.

ಗೌತಮ್ ಗಂಭೀರ್‌ಗೆ ಕೊಲೆ ಬೆದರಿಕೆ: ಭದ್ರತೆ ಹೆಚ್ಚಳ

ನವದೆಹಲಿ (ಪಿಟಿಐ): ಭಯೋತ್ಪಾದಕ ಸಂಘಟನೆ 'ಐಎಸ್‌ಐಎಸ್ ಕಾಶ್ಮೀರ'ದಿಂದ ಕೊಲೆ ಬೆದರಿಕೆ ಬಂದಿರುವುದರಿಂದ ಬಿಜೆಪಿ ಸಂಸದ, ಮಾಜಿ ಕ್ರಿಕೆಟಿಗ ಗೌತಮ್ ಗಂಭೀರ್ ನಿವಾಸಕ್ಕೆ ಭದ್ರತೆ ಹೆಚ್ಚಿಸಲಾಗಿದ್ದು, ಈ ಬಗ್ಗೆ ತನಿಖೆ ನಡೆಸಲಾಗುತ್ತಿದೆ.

'ಗೌತಮ್ ಅವರಿಗೆ ಮಂಗಳವಾರ ರಾತ್ರಿ ಇ–ಮೇಲ್ ಬಂದಿದ್ದು, ಅದರಲ್ಲಿ ನಿಮ್ಮ, ನಿಮ್ಮ ಕುಟುಂಬದವರನ್ನು ಕೊಲೆ ಮಾಡಲಾಗುವುದು ಎಂದು ತಿಳಿಸಲಾಗಿದೆ. ಈ ಬಗ್ಗೆ ದೂರು ದಾಖಲಾಗಿದೆ.

ಗೌತಮ್ ಗಂಭೀರ್

'700 ರೈತರ ಸಾವು ತಪ್ಪಿಸಬಹುದಿತ್ತು'

ಬಲ್ಲಿಯಾ, ಉತ್ತರ ಪ್ರದೇಶ (ಪಿಟಿಐ): ಮೂವತ್ತು ದಿನಗಳಲ್ಲೇ ವಿವಾದಾತ್ಮಕ ಮೂರು ಕೃಷಿ ಕಾಯ್ದೆಗಳನ್ನು ಹಿಂಪಡೆದಿದ್ದರೆ 700ಕ್ಕೂ ಹೆಚ್ಚು ರೈತರ ಸಾವನ್ನು ತಪ್ಪಿಸಬಹುದಿತ್ತು ಎಂದು ಬಿಜೆಪಿಯ ಮಾಜಿ ಶಾಸಕ ರಾಮ್ ಇಕ್ಬಾಲ್ ಸಿಂಗ್ ತಮ್ಮ ಪಕ್ಷದ ವಿರುದ್ಧವೇ ವಾಗ್ದಾಳಿ ನಡೆಸಿದ್ದಾರೆ.

'ಕಾಯ್ದೆಗಳನ್ನು ಹಿಂಪಡೆದಿರುವುದು ಸಂತೋಷ. ಆದರೆ, ಈ ನಿರ್ಧಾರ ತಡವಾಯಿತು' ಎಂದರು.

ಪಿಎಂಎವೈಯು: 3.6 ಲಕ್ಷ ಮನೆಗಳ ನಿರ್ಮಾಣಕ್ಕೆ ಅನುಮೋದನೆ

ನವದೆಹಲಿ (ಪಿಟಿಐ): ಪ್ರಧಾನ್ ಮಂತ್ರಿ ಆವಾಸ್ ಯೋಜನೆ–ನಗರ (ಪಿಎಂಎವೈಯು) ಅಡಿ 17 ರಾಜ್ಯಗಳು ಹಾಗೂ ಕೇಂದ್ರಾಡಳಿತ ಪ್ರದೇಶಗಳಲ್ಲಿ 3.61 ಲಕ್ಷ ಮನೆಗಳ ನಿರ್ಮಾಣಕ್ಕೆ ಕೇಂದ್ರ ಸರ್ಕಾರ ಅನುಮೋದನೆ ನೀಡಿದೆ.

ಇದರೊಂದಿಗೆ ಅನುಮೋದನೆ ನೀಡಲಾದ ಮನೆಗಳ ಒಟ್ಟು ಸಂಖ್ಯೆ 1.14 ಕೋಟಿ ಆಗಲಿದೆ ಎಂದು ಕೇಂದ್ರ ವಸತಿ, ನಗರ ವ್ಯವಹಾರಗಳ ಸಚಿವಾಲಯ ಬುಧವಾರ ತಿಳಿಸಿದೆ.

'ಸಚಿವಾಲಯದ ಕಾರ್ಯದರ್ಶಿ ದುರ್ಗಾಶಂಕರ್ ಮಿಶ್ರಾ ಅವರ ಅಧ್ಯಕ್ಷತೆಯಲ್ಲಿ ನಡೆದ ಕೇಂದ್ರೀಯ ಮಂಜೂರಾತಿ ಮತ್ತು ಮೇಲ್ವಿಚಾರಣಾ ಸಮಿತಿ (ಸಿಎಸ್‌ಎಂಸಿ) ಸಭೆಯಲ್ಲಿ ಈ ಅನುಮೋದನೆ ನೀಡಲಾಯಿತು' ಎಂದು ಸಚಿವಾಲಯದ ಪ್ರಕಟಣೆಯಲ್ಲಿ ತಿಳಿಸಲಾಗಿದೆ.

'ಅನುಮೋದಿತ ಮನೆಗಳ ಪೈಕಿ 89 ಲಕ್ಷ ಮನೆಗಳ ನಿರ್ಮಾಣ ಕಾರ್ಯ ಪ್ರಗತಿಯಲ್ಲಿದ್ದು, 52.5 ಲಕ್ಷ ಮನೆಗಳು ಪೂರ್ಣಗೊಂಡಿದ್ದು ಹಸ್ತಾಂತರಿಸಲಾಗಿದೆ' ಎಂದು ತಿಳಿಸಿದೆ.

'₹ 7.52 ಲಕ್ಷ ಕೋಟಿ ವೆಚ್ಚದಲ್ಲಿ ಯೋಜನೆಯನ್ನು ಅನುಷ್ಠಾನಗೊಳಿಸಲಾಗುತ್ತಿದ್ದು, ಕೇಂದ್ರ ಸರ್ಕಾರದ ಪಾಲು ₹ 1.85 ಲಕ್ಷ ಕೋಟಿ. ಈ ವರೆಗೆ ಕೇಂದ್ರ ಸರ್ಕಾರ ₹ 1.13 ಲಕ್ಷ ಕೋಟಿ ಬಿಡುಗಡೆ ಮಾಡಿದೆ' ಎಂದೂ ಸಚಿವಾಲಯ ತಿಳಿಸಿದೆ.

ಜಯಲಲಿತಾ ನಿವಾಸ ಸ್ಮಾರಕ ರದ್ದು: ವಾರಸುದಾರರಿಗೆ ಆಸ್ತಿಯ ಹಕ್ಕು

ಚೆನ್ನೈ (ಪಿಟಿಐ): ತಮಿಳುನಾಡಿನ ಮಾಜಿ ಮುಖ್ಯಮಂತ್ರಿ, ದಿವಂಗತ ಜೆ. ಜಯಲಲಿತಾ ಅವರ 'ವೇದ ನಿಲಯಂ' ಅನ್ನು ಸ್ಮಾರಕವನ್ನಾಗಿ ಪರಿವರ್ತಿಸಿದ್ದ ಹಿಂದಿನ ಎಐಎಡಿಎಂಕೆ ಸರ್ಕಾರದ ಆದೇಶವನ್ನು ಬುಧವಾರ ರದ್ದುಗೊಳಿಸಿರುವ ಮದ್ರಾಸ್ ಹೈಕೋರ್ಟ್, ಆಸ್ತಿಯನ್ನು ಸಂಬಂಧಿಸಿದ ವಾರಸುದಾರರಿಗೆ ನೀಡುವಂತೆ ಸೂಚನೆ ನೀಡಿದೆ.

ಜಯಲಲಿತಾ

ಸ್ಮಾರಕವನ್ನಾಗಿ ಪರಿವರ್ತಿಸಿದ್ದ ರಾಜ್ಯ ಸರ್ಕಾರದ ಆದೇಶವನ್ನು ಪ್ರಶ್ನಿಸಿ ಜಯಲಲಿತಾ ಅವರ ಸೋದರ ಸೊಸೆ ಜೆ. ದೀಪಾ ಜಯಕುಮಾರ್ ಮತ್ತು ಅವರ ಸಹೋದರ ಜೆ. ದೀಪಕ್ ಅವರು ಸಲ್ಲಿಸಿದ್ದ ರಿಟ್ ಅರ್ಜಿಗಳನ್ನು ಪರಿಗಣಿಸಿದ ನ್ಯಾಯಮೂರ್ತಿ ಎನ್. ಶೇಷಸಾಯಿ ಅವರು ಈ ತೀರ್ಪು ನೀಡಿದ್ದಾರೆ.

ಭೂಸ್ವಾಧೀನ, ಪುನರ್ವಸತಿ ಮತ್ತು ಪುನರ್ವಸತಿ ಕಾಯಿದೆ, 2013ರ ನ್ಯಾಯಯುತ ಪರಿಹಾರ ಮತ್ತು ಪಾರದರ್ಶಕತೆಯ ಹಕ್ಕುಗಳ ಅಡಿಯಲ್ಲಿ ಭೂಸ್ವಾಧೀನಾಧಿಕಾರಿಯ 2020ರ ಜುಲೈ 22ರ ಪರಿವರ್ತಿತ ಆದೇಶವನ್ನು ರದ್ದುಗೊಳಿಸಿದ ನ್ಯಾಯಮೂರ್ತಿಗಳು, ಆಸ್ತಿಯ ಕೀಗಳನ್ನು ವಾರಸುದಾರರಿಗೆ ಹಸ್ತಾಂತರಿಸುವಂತೆ ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಚಿಸಿದರು.

ಅರ್ಜಿದಾರರಿಂದ ಹಲವು ಕೋಟಿ ರೂಪಾಯಿಗಳ ಬಾಕಿ ವಸೂಲಿ ಮಾಡಲು ಆದಾಯ ತೆರಿಗೆ ಇಲಾಖೆಗೆ ನ್ಯಾಯಾಲಯವು ಅನುಮತಿ ನೀಡಿದೆ.

'ವೇದನಿಲಯಂ' ಚೆನ್ನೈನ ಪ್ರತಿಷ್ಠಿತ ಪೋಯಸ್ ಗಾರ್ಡನ್ ಪ್ರದೇಶದಲ್ಲಿದೆ. ನಿಲಯವು ಕಚೇರಿ, ಗ್ರಂಥಾಲಯ, ಅತಿಥಿಗಳ ಕೊಠಡಿ ಮತ್ತು ಕಾನ್ಫರೆನ್ಸ್ ಹಾಲ್ ಅನ್ನು ಒಳಗೊಂಡಿದೆ.

1960ರ ದಶಕದ ಉತ್ತರಾರ್ಧದಲ್ಲಿ ಜಯಲಲಿತಾ ಅವರ ತಾಯಿ ಸಂಧ್ಯಾ ಅವರು ಈ ನಿವಾಸವನ್ನು ಖರೀದಿಸಿದ್ದರು. ಸುಮಾರು ಮೂರು ದಶಕಗಳ ಕಾಲ ಈ ನಿವಾಸವು ಜಯಲಲಿತಾ ಅವರ ನೆಲೆಯಾಗಿತ್ತು. ಪ್ರಧಾನಿ ನರೇಂದ್ರ ಮೋದಿ ಸೇರಿದಂತೆ ಹಲವು ನಾಯಕರು, ಗಣ್ಯರು ಅವರನ್ನು ಇಲ್ಲಿಯೇ ಭೇಟಿ ಮಾಡಿದ್ದರು.

THE FEDERAL BANK LIMITED
Regd. Office: Aluva, Kerala.

ZONAL OFFICE: 1st Floor, Halcyon Complex, No.9, St Marks Road, Bangalore-560 001.
e-mail: bgrr-cpc@federalbank.co.in Phone: 080-22074610/604/613/624/625

BGRR/PvtSale/21-22 NOTICE FOR PRIVATE SALE OF GOLD 23/11/2021

Notice is hereby given for the information of all concerned that Gold Ornaments pledged in the following Gold Loan accounts, with the under mentioned Branches of the Bank, which are overdue for redemption and which have not been regularized so far in spite of repeated notices, will be put for Private sale, in the respective Branches on any date after 15-12-2021 as shown below:

Br. B.C.Road: Ground floor, Hindusthan Towers, Oppo LIC office, Santhi Angadi Kaikamba, BC Road, Dakshina Kannada- 574219,:-
20716400035355, 20716400041585, 20716400032832, 20716400032980, 20716400042708, 20716100019667, 20716400042625, 20716400036908, 20716400032436, 20716400011869, 20716400042591,

11756400019281,11756400020057,11756400020529,11756400019638,11756400020578,11756400020636,11756400020560,11756400016964,11756400015495,11756400020644,11756400016246,
11756400017152,11756400020677,11756400020651,11756400016162,11756400017046,11756400020685,11756400020669,11756400016170,11756400020537,11756400013409,11756400013581,
11756400013623,11756400020586,11756400013383,11756400019646,11756400020628,11756400020438,11756400018051,11756400020149,11756400020602,11756400020446,11756400019752,
11756400020123,11756400020610,11756400020453,11756400019760,11756400020115,11756400019844,11756400016121,11756400019778,11756400020131,11756400019836,11756400020800,
11756400019786,11756400018887,11756400020420,11756400020826,11756400019976,11756400020107,11756400020412,11756400020701,11756400015297,11756400019505,11756400020693,
11756400020719,11756400015305,11756400018879,11756400019125,11756400011874,11756400015313,11756400020727,11756400020362,11756400020479,11756400020099,11756400020735,
11756400020370,11756400020495,11756400020024,11756400020396,11756400013672,11756400019547,11756400011114,11756400020081,11756400013458,11756400019992,11756400020172,
11756400020164,11756400013961, **Br.Mangalore/Kankanady:The Vintage, Kankanady, DakshinaKannad, Mangalore, DakshinKannad, Karnataka, 575002:-** 17706400009455,17706400010420,
17706400010685,17706400005040,17706400010990,17706400009786,17706400010586,17706400010339,17706400005099,17706400009687,17706400010594,17706400010206,17706400009513,
17706400010149,17706400010545,17706400004142,17706400009877,17706400010156,17706400010487,17706400010255,17706400010529,17706400010578,17706400010784,17706400010834,
17706400010222,17706400010735,17706400008770,17706400010842,17706400009521,17706400010743,17706400010941,17706400010495,17706400010511,17706400010719,17706400010602,
17706400004779,17706400010610,17706400010768,17706400010727,17706400010073,17706400010305,17706400010792,17706400009695,17706400010925,17706400010776,17706400010453,
17706400010560,17706400010909,17706400009810,17706400010974,17706400009851,17706400010479,17706400010917,17706400011089,17706400010404,17706400010438,17706400010503,
17706400010057,17706400010396,17706400010248,17706400009802,17706400009794,17706400010412,17706400009562,17706400010750,17706400007913,17706400009760,17706400011014,
17706400010693,17706400005735,17706400009778,17706400010289,17706400010859,17706400009752,17706400011139,17706400010271,17706400010297,17706400007772.
Br.Narasimharajapura:Assessment No.794, Dayasagar Complex, Near IOC Petrol Pump, Nagalapura, B H Kaimara, Chikmagalur, Karnataka, Chikmagalur, Karnataka, 577134:- 18956400015569,18956400015650.

Bangalore 23-11-2021 Vice President & Zonal Head

ಕರ್ನಾಟಕ ಸರಕಾರ

ಜಿಲ್ಲಾಧಿಕಾರಿಗಳ ಕಛೇರಿ, ಜಿಲ್ಲಾನಗರಾಭಿವೃದ್ಧಿ ಕೋಶ,
ದಕ್ಷಿಣ ಕನ್ನಡ ಜಿಲ್ಲೆ, ಮಂಗಳೂರು
Phone: 0824-2984593 Email : dudc_dkd@yahoo.co.in

ಮುನ್(3)/ಇಎಸ್ ಟಿ/ಸಿಆರ್ 45/2021/E–137733 ದಿನಾಂಕ: 23–11–2021

ತಿದ್ದುಪಡಿ ಪ್ರಕಟಣೆ

ವಿಷಯ : ಮಂಗಳೂರು ಮಹಾನಗರಪಾಲಿಕೆ ಪೌರಕಾರ್ಮಿಕರ ವಿಶೇಷ ನೇಮಕಾತಿ ಅರ್ಜಿ ಸ್ವೀಕರಿಸಲು ಕೊನೆಯ ದಿನಾಂಕವನ್ನು ವಿಸ್ತರಿಸುವ ಬಗ್ಗೆ.
ಉಲ್ಲೇಖ : ನೇಮಕಾತಿ ಅಧಿಸೂಚನೆ ಸಂಖ್ಯೆ: ಮುನ್(3)/ಇಎಸ್ ಟಿ/ಸಿಆರ್45/2021/E–137733 ದಿನಾಂಕ: 28–09–2021

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ, ಮಂಗಳೂರು ಮಹಾನಗರ ಪಾಲಿಕೆಗಳ ಪೌರಕಾರ್ಮಿಕರ ವಿಶೇಷ ನೇಮಕಾತಿಗೆ ಸಂಬಂಧಿಸಿದಂತೆ ಉಲ್ಲೇಖ (1)ರ ಅಧಿಸೂಚನೆಯಲ್ಲಿ ಪೌರಕಾರ್ಮಿಕ ಹುದ್ದೆಗೆ ಅರ್ಜಿ ಸಲ್ಲಿಸಲು ತಿಳಿಸಿರುವ ಕೊನೆಯ ದಿನಾಂಕವನ್ನು 23.11.2021 ರಿಂದ 15.12.2021 ರ ವರೆಗೆ ವಿಸ್ತರಿಸಲಾಗಿದೆ ಎಂದು ಈ ಮೂಲಕ ಸಾರ್ವಜನಿಕ ತಿದ್ದುಪಡಿ ಪ್ರಕಟಣೆ ನೀಡಲಾಗಿದೆ.

ಸಹಿ/– ಅಧ್ಯಕ್ಷರು,
ಆಯ್ಕೆ ಮತ್ತು ನೇರ ನೇಮಕಾತಿ ಪ್ರಾಧಿಕಾರ ಹಾಗೂ
ಜಿಲ್ಲಾಧಿಕಾರಿ, ದಕ್ಷಿಣ ಕನ್ನಡ ಜಿಲ್ಲೆ

DIPR / MNG / 655 / MPL / 21-22



Sale of 100% Water Soluble Mixture of Fertilisers with specifications as laid down under the Fertiliser (Control) Order,1985

It is brought to the notice of general public that
GUJARAT STATE FERTILIZERS & CHEMICALS LIMITED intends to Sell 100% water soluble mixture "SARDAR" brand fertilizers with following specifications in the State of Karnataka

Generic Specification

Sr. No.	Parameters	NPK 13:40:13	NPK 19:19:19
1	Total Nitrogen percent by weight, minimum	13.0	19.0
2	Water Soluble Phosphate as P_2O_5 percent by weight, minimum	40.0	19.0
3	Water Soluble Potash as K_2O percent by weight, minimum	13.0	19.0
4	Sodium as NaCl percent by weight, maximum	0.5	0.5
5	Total Chloride as Cl percent by weight, maximum	1.5	1.5
6	Matter Insoluble percent by weight, maximum	0.5	0.5
7	Moisture percent by weight, maximum	0.5	0.5
8	Lead (as Pb) percent by weight, maximum	0.003	0.003
9	Cadmium (as Cd) percent by weight, maximum	0.0025	0.0025
10	Arsenic (as As) percent by weight, maximum	0.01	0.01

This notice is issued in pursuance of the notification of the Ministry of Agriculture and Farmers Welfare (Department of Agriculture, Co-Operation and Farmers Welfare) vide S.O. No.2900 (E) dated 24.10.2015 issued under the Fertiliser (Control) Order,1985, Please contact sales team for any query or further details.

GUJARAT STATE FERTILIZERS & CHEMICALS LIMITED
Fertilizernagar-391750, Dist: Vadodara, Gujarat, India Tel : (0265) 2242451/651/751
www.gsfclimited.com

ಐದು ವರ್ಷಗಳಲ್ಲಿ ₹ 90 ಸಾವಿರ ಕೋಟಿ ಹೂಡಿಕೆ: ರಾಜೀವ್ ಬನ್ಸಲ್

ವಿಮಾನ ನಿಲ್ದಾಣ: ಭಾರಿ ಹೂಡಿಕೆ

ನವದೆಹಲಿ (ಪಿಟಿಐ): ದೇಶದ ವಿಮಾನ ನಿಲ್ದಾಣಗಳಲ್ಲಿ ಮುಂದಿನ ಐದು ವರ್ಷಗಳ ಅವಧಿಯಲ್ಲಿ ಒಟ್ಟು ₹ 90 ಸಾವಿರ ಕೋಟಿ ಹೂಡಿಕೆ ಆಗುವ ನಿರೀಕ್ಷೆ ಇದೆ ಎಂದು ಕೇಂದ್ರ ನಾಗರಿಕ ವಿಮಾನಯಾನ ಸಚಿವಾಲಯದ ಕಾರ್ಯದರ್ಶಿ ರಾಜೀವ್ ಬನ್ಸಲ್ ಅವರು ಹೇಳಿದ್ದಾರೆ.

₹ 90 ಸಾವಿರ ಕೋಟಿ ಹೂಡಿಕೆಯಲ್ಲಿ ಖಾಸಗಿ ವಲಯದ ಪಾಲು ₹ 68 ಸಾವಿರ ಕೋಟಿ ಆಗಲಿದೆ ಎಂದು ಅಂದಾಜು ಮಾಡಲಾಗಿದೆ ಎಂದೂ ಅವರು ತಿಳಿಸಿದ್ದಾರೆ. ಕೋವಿಡ್–19 ಸಾಂಕ್ರಾಮಿಕದ ಕಾರಣದಿಂದಾಗಿ ತೀವ್ರ ತೊಂದರೆಗೆ ಸಿಲುಕಿದ್ದ ನಾಗರಿಕ ವಿಮಾನಯಾನ ವಲಯವು ನಿಧಾನವಾಗಿ ಚೇತರಿಸಿಕೊಳ್ಳುತ್ತಿದೆ. ದೇಶಿ ವಿಮಾನ ಸಂಚಾರ ಪ್ರಮಾಣವು ಕೋವಿಡ್‌ಗೂ ಮೊದಲಿನ ಹಂತಕ್ಕೆ ಬರುತ್ತಿದೆ.

ವಿಮಾನ ನಿಲ್ದಾಣಗಳಲ್ಲಿ ಆಗಲಿರುವ ಒಟ್ಟು ಹೂಡಿಕೆಯಲ್ಲಿ ₹ 20 ಸಾವಿರ ಕೋಟಿಯಿಂದ ₹ 22 ಸಾವಿರ ಕೋಟಿವರೆಗಿನ ಮೊತ್ತವನ್ನು ಭಾರತೀಯ ವಿಮಾನ ನಿಲ್ದಾಣ ಪ್ರಾಧಿಕಾರವು ಹೂಡಿಕೆ ಮಾಡಲಿದೆ. ಇನ್ನುಳಿದ ಮೊತ್ತವನ್ನು ಖಾಸಗಿ ಕಂಪನಿಗಳು ಹೂಡಿಕೆ ರೂಪದಲ್ಲಿ ವಿನಿಯೋಗಿಸಲಿವೆ.

ಮುಂದಿನ ಐದು ವರ್ಷಗಳಲ್ಲಿ ದೇಶದಲ್ಲಿ ಒಟ್ಟು 220 ವಿಮಾನ ನಿಲ್ದಾಣಗಳು, ಹೆಲಿಕಾಪ್ಟರ್ ನಿಲ್ದಾಣಗಳು ಕಾರ್ಯಾಚರಿಸುವಂತೆ ಆಗಬೇಕು ಎಂಬ ನಿರೀಕ್ಷೆಯನ್ನು ಕೇಂದ್ರ ಸರ್ಕಾರ ಹೊಂದಿದೆ. ಈಗ ದೇಶದಲ್ಲಿ ಒಟ್ಟು 136 ವಿಮಾನ ನಿಲ್ದಾಣಗಳು ಕಾರ್ಯಾಚರಿಸುತ್ತ ಇವೆ. ಹಲವೆಡೆ ಸಣ್ಣ ವಿಮಾನ ನಿಲ್ದಾಣಗಳನ್ನು ನಿರ್ಮಿಸುವ ಕಾರ್ಯ ಪ್ರಗತಿಯಲ್ಲಿ ಇದೆ.

ಉತ್ತರ ಪ್ರದೇಶದ ಜೇವರ್‌ನಲ್ಲಿ ಹೊಸ ವಿಮಾನ ನಿಲ್ದಾಣ ನಿರ್ಮಾಣಕ್ಕೆ ಪ್ರಧಾನಿ ನರೇಂದ್ರ ಮೋದಿ ಅವರು ಗುರುವಾರ ಶಿಲಾನ್ಯಾಸ ನೆರವೇರಿಸಲಿದ್ದಾರೆ. ಗೋವಾದ ಮೋಪಾದಲ್ಲಿ ಹೊಸ ವಿಮಾನ ನಿಲ್ದಾಣವೊಂದು ಮುಂದಿನ ವರ್ಷ ಸಿದ್ಧವಾಗುವ ಸಾಧ್ಯತೆ ಇದೆ. ಮಹಾರಾಷ್ಟ್ರದ ನವಿ ಮುಂಬೈನಲ್ಲಿ ಸಣ್ಣ ವಿಮಾನ ನಿಲ್ದಾಣವೊಂದು ತಲೆ ಎತ್ತುತ್ತಿದೆ. ದೆಹಲಿ, ಬೆಂಗಳೂರು ಮತ್ತು ಹೈದರಾಬಾದ್ ವಿಮಾನ ನಿಲ್ದಾಣಗಳಲ್ಲಿ ವಿಸ್ತರಣಾ ಕಾರ್ಯಗಳು ನಡೆಯುತ್ತಿವೆ.

ಹೂಡಿಕೆ ವಿವರ

₹22,000 ಕೋಟಿ ಭಾರತೀಯ ವಿಮಾನ ನಿಲ್ದಾಣ ಪ್ರಾಧಿಕಾರದಿಂದ ಹೂಡಿಕೆ

₹68,000 ಕೋಟಿ ಖಾಸಗಿ ಕಂಪನಿಗಳಿಂದ ಆಗಲಿರುವ ಹೂಡಿಕೆ

136 ದೇಶದಲ್ಲಿ ಈಗಿರುವ ವಿಮಾನ ನಿಲ್ದಾಣಗಳು

ಪ್ರಜಾವಾಣಿ ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು | Log on to : https://homages.deccanherald.com or Scan QR code to access booking form

ಪ್ರಜಾವಾಣಿ ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು

ನಿಮ್ಮ ಪ್ರೀತಿಪಾತ್ರರ ಅಗಲಿಕೆಯನ್ನು ಶ್ರದ್ಧಾಂಜಲಿ ಜಾಹೀರಾತು ಮೂಲಕ ಪ್ರಕಟಿಸಲು ಅಥವಾ ನಿಮ್ಮ ಪ್ರೀತಿಪಾತ್ರರ ಸವಿನೆನಪಿಗೆ ಸಂತಾಪ ಸೂಚನೆ ಪ್ರಕಟಿಸಲು ಬಯಸುವಿರಾದರೆ, ನಮ್ಮ

ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ

ಪತ್ರಿಕೆಗಳಲ್ಲಿ ನಿಮ್ಮ ಜಾಹೀರಾತುಗಳನ್ನು ಪ್ರಕಟಿಸಲು ಅಗತ್ಯವಿರುವ ಎಲ್ಲ ಮಾರ್ಗದರ್ಶನ ನೀಡುತ್ತೇವೆ.

ದಯವಿಟ್ಟು ಸಂಪರ್ಕಿಸಿ:

Santhosh Kumar : 9880856233
Jerry : 9731810277 | Ravichandra : 9901641752
Vishal : 9845114560 | Anitha R: 9900428036

ನಿಮ್ಮ ಮಾರ್ಗದರ್ಶನಕ್ಕಾಗಿ ಕೆಲವು ಅನುಕೂಲಕರ ಫಾರ್ಮಾಟ್ಸ್ ಹಾಗೂ ಟೆಕ್ಸ್ಟ್ ಆಯ್ಕೆಗಳನ್ನು ಹೊಂದಿರುವ ಒಂದು ವೆಬ್‌ಸೈಟ್‌ನ್ನು ಕೂಡ ನಾವು ಆರಂಭಿಸಿದ್ದೇವೆ. ದಯವಿಟ್ಟು ಲಾಗಾನ್ ಮಾಡಿರಿ
https://homages.deccanherald.com
ಅಥವಾ QR code ಸ್ಕ್ಯಾನ್ ಮಾಡಿ
ನಮ್ಮ ಆನ್‌ಲೈನ್ ಬುಕ್ಕಿಂಗ್ ಫಾರಂ ಪಡೆಯಿರಿ.

ಶ್ರದ್ಧಾಂಜಲಿ



ಶ್ರೀ ಹೆಚ್. ಸಿ. ಜಯಣ್ಣ
ನಿವೃತ್ತ ಅಧೀನ ಕಾರ್ಯದರ್ಶಿ
ದೇವಾಲಯದ ಹಿರಿಯ ಧರ್ಮದರ್ಶಿಗಳಾದ ಶ್ರೀಯುತರು ದಿನಾಂಕ 21-11-2021 ರಂದು ದೈವಾಧೀನರಾಗಿರುತ್ತಾರೆ. ಕೈಲಾಸ ಸಮಾರಾಧನೆಯನ್ನು ದಿನಾಂಕ 25-11-2021 ರಂದು ಅವರ ಸ್ವಗೃಹದಲ್ಲಿ ಏರ್ಪಡಿಸಲಾಗಿದೆ. ನಮ್ಮ ಗೌರವಪೂರ್ವಕ ಶ್ರದ್ಧಾಂಜಲಿಗಳನ್ನು ಅವರಿಗೆ ಅರ್ಪಿಸುತ್ತೇವೆ.
ಶ್ರೀ ಗಣೇಶ ದೇವಾಲಯ ಧರ್ಮದರ್ಶಿ ಮಂಡಳಿ
8ನೇ ಮುಖ್ಯ ರಸ್ತೆ, ಎಂ. ಸಿ. ಬಡಾವಣೆ, ವಿಜಯನಗರ, ಬೆಂಗಳೂರು.

NAME CHANGE ANNOUNCEMENT
Log on to : dhclassifieds.com

ಪ್ರಜಾವಾಣಿ ಕ್ಲಾಸಿಫೈಡ್ಸ್ ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಉದ್ಯೋಗಾವಕಾಶ

Part-Time Jobs

ಕನ್ನಡ ಮತ್ತು ಇಂಗ್ಲೀಷ್ ಓದಲು, ಬರೆಯಲು ಬರುವ ಯುವಕ/ಯುವತಿಯರಿಗೆ, ಗೃಹಿಣಿಯರಿಗೆ ವಯಸ್ಸಾದವರು ಮನೆಯಲ್ಲೇ ಕುಳಿತು ನಾವು ಕೊಡುವ ಬುಕ್ ಬರೆಯುವ ಮೂಲಕ ತಿಂಗಳಿಗೆ 12,000-15,000 ವರೆಗೆ ಸಂಪಾದಿಸಿ. ಕೊರಿಯರ್ ಸೌಲಭ್ಯವಿದೆ. 8884777502, 8884777503

General

ತಕ್ಷಣ ಬೇಕಾಗಿದ್ದಾರೆ MNC ಕಂಪನಿಗಳಿಗೆ SSLC,PUC,ITI Diploma ದವರು ಕೆಲಸಕ್ಕೆ ಬೇಕಾಗಿದ್ದಾರೆ ಉಚಿತ ವಸತಿಯೂಟದೊಂದಿಗೆ: 15,800/- 45000/-. ಕೀರ್ತನ. 8884512156, 8884517968

ನಮ್ಮ ಕಂಪನಿಯ ಆಯುರ್ವೇದಿಕ್ ಉತ್ಪನ್ನಗಳನ್ನು ನಮ್ಮ ಕಾರುಗಳಲ್ಲಿ ತೆರಳಿ ಪ್ರಮೋಟ್ ಮಾಡಿ. ಉಚಿತ ವಸತಿಯೊಂದಿಗೆ ದಿನಕ್ಕೆ 800-1200 ಸಂಪಾದಿಸಲು ಸಂಪರ್ಕಿಸಿ: 8904379634 / 9513670249

AIR INDIA sats
ಏರ್‌ಪೋರ್ಟ್ ಕೆಲಸಕ್ಕೆ ಬೇಕಾಗಿದ್ದಾರೆ
(ನೇರ ಸಂದರ್ಶನ)
ವಯೋಮಿತಿ: 18–35 ವರ್ಷ
ಲೋಡಿಂಗ್ & ಕ್ಯಾಬಿನ್ ಕ್ಲೀನಿಂಗ್
ದಿನಾಂಕ ಮತ್ತು ಸಮಯ: 29, 30ನೇ ನವೆಂಬರ್ ಮತ್ತು 1ನೇ ಡಿಸೆಂಬರ್ 2021 (ಸೋಮವಾರ, ಮಂಗಳವಾರ ಮತ್ತು ಬುಧವಾರ) ಬೆಳಿಗ್ಗೆ 9 ಗಂಟೆಯಿಂದ ಸಂಜೆ 5 ಗಂಟೆಯವರೆಗೆ.
ವಿಳಾಸ: ಏರ್ ಇಂಡಿಯಾ ಸ್ಯಾಟ್ಸ್, ಕಾರ್ಗೋ ಬಿಲ್ಡಿಂಗ್, ಕೆಂಪೇಗೌಡ, ಇಂಟರ್ನ್ಯಾಷನಲ್ ಏರ್‌ಪೋರ್ಟ್, ದೇವನಹಳ್ಳಿ, ಬೆಂಗಳೂರು. ಸಂಪರ್ಕಿಸಿ: 080-66783411
ROUNAQH

WORK FROM HOME ಮನೆಯಿಂದಲೆ ಬುಕ್ ಬರೆಯುವ ಮೂಲಕ ತಿಂಗಳಿಗೆ 12,000- 15,000 ವರೆಗೆ ಸಂಪಾದಿಸಿ. ಕನ್ನಡ/ ಇಂಗ್ಲೀಷ್ ಓದಲು, ಬರೆಯಲು ಬರುವ ಎಲ್ಲರಿಗೂ ಅವಕಾಶ. ಕೊರಿಯರ್ ಸೌಲಭ್ಯವಿದೆ. 8095377333/ 8095377444

ಬೇಕಾಗಿದ್ದಾರೆ ಟಯೋಟಾ, ಟಾಟಾ ಮೋಟರ್ಸ್, ಹೊಂಡ ಆನ್‌ಲೈನ್ ಕಂಪನಿಗಳಿಗೆ 10ನೇ, ಪಿಯುಸಿ, ಡಿಗ್ರಿ, ಐಟಿಐ, ಡಿಪ್ಲೊ ಮಾದವರು 16,600-62000/- (ಮನೆಯಲ್ಲಿಯೇ ಕೆಲಸ) ವಸತಿಯೂಟದೊಂದಿಗೆ 8123884588, 8123884788

TATA ಮೋಟರ್ಸ್, TOYOTA, ಬ್ರಿಟಾನಿಯಾ ಆನ್‌ಲೈನ್ ಕಂಪೆನಿಗಳಿಗೆ SSLC, PUC, Degree, ITI ನವರು (ವಿದ್ಯಾರ್ಹತೆಯಿಲ್ಲದವರಿಗೂ) ನೇರನೇಮಕಾತಿ 18,000-56,000/- ವಸತಿಯೂಟವಿದೆ. 7204853296, 7204396011

ವ್ಯಾಪಾರ

Business to Business

Business

★ಮನೆಯಿಂದಲೇ ಮೆಣದಬತ್ತಿ★ ತಯಾರಿಸಿ ನಮಗೆ ಮರಳಿಸಿ, ಪ್ರತಿದಿನ 500 ರಿಂದ 1000 ಸಂಪಾದಿಸಿ. ತರಬೇತಿಗಾಗಿ: ಬೆಂಗಳೂರು. 8792252077, ಶಿವಮೊಗ್ಗ. 9008013895

ಭವಿಷ್ಯ

Astrology

★॥ಶ್ರೀಕಬ್ಬಾಳಮ್ಮ ದೇವಿ॥★ ಜ್ಯೋತಿಷ್ಯಾಲಯ ಪ್ರೀತಿಪ್ರೇಮ, ದಾಂಪತ್ಯಕಿರಿಕಿರಿ, ಸಾಲದಬಾದೆ, ವ್ಯಾಪಾರ, ಶತ್ರುಕಾಟ, ಇನ್ಯಾವುದೇ ಕಠಿಣ ಸಮಸ್ಯೆಗಳಿಗೆ ಕೇವಲ 30 ನಿಮಿಷದಲ್ಲಿ ಶಾಶ್ವತಪರಿಹಾರ. "ಸ್ತ್ರೀಯರಿಗೆ ಕಡಿಮೆ ಖರ್ಚಿನಲ್ಲಿ ವಿಶೇಷ ಪರಿಹಾರ" ನಂ.1. ವಶೀಕರಣ ಸ್ಪೆಷಲಿಸ್ಟ್ ಸಹದೇವ್‌ಭಟ್. 9900222591

ಒಂದೇ ಕರೆಯಲ್ಲಿ ಶಾಶ್ವತ ಪರಿಹಾರ ಸ್ತ್ರೀಪುರುಷ ವಶೀಕರಣ ಸ್ಪೆಷಲಿಸ್ಟ್ 100% ಗ್ಯಾರಂಟಿ ಪರಿಹಾರ ಪಂಡಿತ್. ಕೃಷ್ಣಪ್ರಸಾದ್. ಉಚಿತ ಭವಿಷ್ಯ ಖಚಿತ ಪರಿಹಾರ ಶ್ರೀಕ್ಷೇತ್ರ ಧರ್ಮಸ್ಥಳ. 7022443071

★॥ವಶೀಕರಣ ಸ್ಪೆಷಲಿಸ್ಟ್॥★ ಇಷ್ಟಪಟ್ಟವರು ನಿಮ್ಮಂತೆ ಆಗಲು ನೋಡುವ ಮೂಲಕ ಮಾತನಾಡುವ ಮೂಲಕ ಹೆಸರಿನ ಮೂಲಕ ಸ್ತ್ರೀವಶೀಕರಣ 27ನಿಮಿಷಗಳಲ್ಲಿ ಪರಿಹಾರ. 9900511008

★॥ಕೆಲಸ ಆದ ನಂತರ ಕಾಣಿಕೆ॥* ವಶೀಕರಣ ಆಗಬೇಕಾದವರಿಗೆ ಹಚ್ಚುವುದಾಗಲಿ, ತಿನ್ನಿಸುವುದಾಗಲಿ, ಬಟ್ಟೆ, ಫೋಟೋ, ಕೂದಲು ಇಲ್ಲದಿದ್ದರೂ ಸ್ತ್ರೀಪುರುಷ ಲೈಂಗಿಕ ವಶೀಕರಣ, 7ಗಂಟೆಗಳಲ್ಲಿ ಪರಿಹಾರ. 9482529984

ಉಚಿತ ಜ್ಯೋತಿಷ್ಯವಾಣಿ. ರಾಘವೇಂದ್ರ ಕುಲಕರ್ಣಿ. ಜನವಶ, ಧನವಶ, ಶತ್ರುಬಾಧೆ, ವಶೀಕರಣ, ಇನ್ನಿತರ ಸಮಸ್ಯೆಗಳಿಗೆ ಫೋನಿನ ಮೂಲಕ ಶೀಘ್ರದಲ್ಲಿ ಪರಿಹಾರ. 9535759222.

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯ ಆಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ಪ್ರವಾಸ

Travel

19.01.2022 ಶ್ರೀಲಂಕಾ 8 ದಿನಗಳು. 10.12.2021, 05.01.2022 ಗುಜರಾತ್ 8 ದಿನಗಳು. 02.12.2021, 14.12.2021 ಕಾಶಿ, ಗಯಾ, ಅಯೋಧ್ಯ 7 ದಿನಗಳು. 14.12.2021, 11.01.2022 ದೆಹಲಿ, ಆಗ್ರಾ, ಜೈಪುರ್ 6 ದಿನಗಳು. 24.11.2021, 25.12.2021 ರಾಮೇಶ್ವರ, ಕನ್ಯಾಕುಮಾರಿ 5 ದಿನಗಳು. ಇತರ ಫ್ಯಾಮಿಲಿ ಪ್ರವಾಸಗಳಿಗಾಗಿ ವಿಚಾರಿಸಿ: ಜೈನ್ ಟ್ರಾವಲ್ಸ್ ಬೆಂಗಳೂರು-3. 9448402248, 7022547922, 9342483417

24-12-21 ಶಿರಡಿ, ಮಹಾರಾಷ್ಟ್ರ ಜ್ಯೋತಿರ್ಲಿಂಗಗಳು, ಕೇರಳ, ತಮಿಳುನಾಡು ಪ್ರವಾಸಗಳು, ಜನವರಿಯಿಂದ ಜೂನ್‌ವರೆಗೆ ಆಗ್ರಾ, ದೆಹಲಿ, ಅಮೃತಸರ್, ವೈಷ್ಣೋದೇವಿ, ಹರಿದ್ವಾರ, ಕಾಶಿ, ಗಯಾ, ನೇಪಾಳ, ಮಧ್ಯಪ್ರದೇಶ, ಗುಜರಾತ್, ರಾಜಸ್ಥಾನ, ಚಾರ್ ಧಾಮ್, ಅಮರನಾಥ, ಪ್ರವಾಸಗಳಿಗೆ ಸಂಪರ್ಕಿಸಿ : ಕರ್ನಾಟಕ ಹೆರಿಟೇಜ್ ಟೂರ್ಸ್ (ಹನುಮಂತನಗರ) 9845035349, 9482435755

29/12/2021, 21/1/2022ರಿಂದ 9ದಿನಗಳ ನವಗ್ರಹಸಮೇತ ರಾಮೇಶ್ವರಂ, ಕನ್ಯಾಕುಮಾರಿ, ತ್ರಿವೇಂದ್ರಂ. 13ದಿನಗಳ ಪಂಚರಾಮಕ್ಷೇತ್ರ ಸಮೇತ ಶ್ರೀಶೈಲಂ, ಅನ್ನವರಮ್, ವಿಶಾಖಪಟ್ಟಣ ಇತ್ಯಾದಿ ವಿವರಗಳಿಗೆ: ಏಷ್ಯನ್ ಟ್ರಾವೆಲ್ ಲೈನ್ಸ್(S) #164/3, ಆರ್.ವಿ.ರಸ್ತೆ, ಬೆಂಗಳೂರು.4 08026565085, 9480182865, 8105657052

ಶ್ರೀರಾಜರಾಜೇಶ್ವರಿ ಟೂರ್ಸ್. 9743895346, 9739618243. 08.12.2021, 3 ದಿನಗಳು ಗೋವಾ, ದೂದ್‌ಸಾಗರ್. 15.01.2022, 9 ದಿನಗಳು 5 ಜ್ಯೋತಿರ್ಲಿಂಗಗಳು, ಶಿರಡಿ. 14.02.2022, 11 ದಿನಗಳು ಕಾಶಿ, ನೇಪಾಳ.

★ವಿಮಾನದಲ್ಲಿ 10.12.2021★ 11ದಿನಗಳು ರಾಜಸ್ಥಾನ್., 22.02.2022 13 ದಿನಗಳು ಕಾಶಿ ಪ್ರವಾಸ., ಆರ್.ಗಾಂಧಿ ಟೂರ್ಸ್ (ರಿ) 9945445809/ 9902433500

ಪ್ರಜಾವಾಣಿ
BOOK YOUR CLASSIFIEDS ADVERTISEMENT
PRAJAVANI ALL KARNATAKA CLASSIFIEDS PACKAGE RATES

Per word	Ordinary	Bold	Ordinary Semi Display	Bold Semi Display
	60	85	70	115

CD Per Sqcm	Single Col	Double Col	Multi Col
	430	450	475

SPECIAL OFFER

PAY	2	And	GET	1	Free
PAY	3	And	GET	2	Free
PAY	5	And	GET	5	Free

For More Details Contact:
Ph:080- 45557160 | 163 | 164 | M: 9880856233
9731810277 | 9901641752 | 9845114560 | 9886213331
condition apply*
dhclassifieds@deccanherald.co.in www.dhclassifieds.com

ಷೇರುಪೇಟೆ ವಹಿವಾಟು 323



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	17,503
ಇಂದಿನ ಅಂತ್ಯ	17,415
▼	88
ದಿನದ ಕನಿಷ್ಠ	17,354

ವಿನಿಮಯ ದರ

$ ಡಾಲರ್	74.40
£ ಪೌಂಡ್	99.33
€ ಯುರೊ	83.36
¥ ಯೆನ್ (100ಕ್ಕೆ)	65

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100 ಮೊಟ್ಟೆಗೆ	₹460
12 ಮೊಟ್ಟೆಗೆ	₹62
ಮೈಸೂರು	
100 ಮೊಟ್ಟೆಗೆ	₹457

ನ. 30ರಿಂದ ಸ್ಟಾರ್ ಹೆಲ್ತ್ ಐಪಿಒ

ನವದೆಹಲಿ (ಪಿಟಿಐ): ಸ್ಟಾರ್ ಹೆಲ್ತ್ ಆ್ಯಂಡ್ ಅಲೈಡ್ ಇನ್ಶುರೆನ್ಸ್ ಕಂಪನಿಯ ಆರಂಭಿಕ ಸಾರ್ವಜನಿಕ ಕೊಡುಗೆಯು (ಐಪಿಒ) ನವೆಂಬರ್ 30ರಂದು ಆರಂಭ ಆಗಲಿದ್ದು, ಪ್ರತಿ ಷೇರಿನ ಬೆಲೆಯನ್ನು ₹ 870–₹ 900ರಂತೆ ನಿಗದಿ ಮಾಡಿರುವುದಾಗಿ ಕಂಪನಿ ಬುಧವಾರ ಹೇಳಿದೆ.

ಐಪಿಒ ಮೂಲಕ ₹ 7,249 ಕೋಟಿ ಬಂಡವಾಳ ಸಂಗ್ರಹಿಸುವ ಗುರಿಯನ್ನು ಕಂಪನಿ ಹೊಂದಿದೆ. ನವೆಂಬರ್ 30ರಂದು ಐಪಿಒ ಆರಂಭ ಆಗಲಿದ್ದು ಡಿಸೆಂಬರ್ 2ರಂದು ಮುಕ್ತಾಯವಾಗಲಿದೆ. ಆರಂಭಿಕ ಹೂಡಿಕೆದಾರರಿಗೆ (ಆ್ಯಂಕರ್ ಇನ್‌ವೆಸ್ಟರ್ಸ್) ನವೆಂಬರ್ 29ರಂದು ಬಿಡ್ ಸಲ್ಲಿಸಲು ಅವಕಾಶ ಇರಲಿದೆ ಎಂದು ಕಂಪನಿಯು ತಿಳಿಸಿದೆ.

ಶೇಕಡ 75ರಷ್ಟು ಷೇರುಗಳನ್ನು ಅರ್ಹ ಸಾಂಸ್ಥಿಕ ಖರೀದಿದಾರರಿಗೆ (ಕ್ಯುಐಬಿ), ಶೇ 15ರಷ್ಟು ಷೇರುಗಳನ್ನು ಸಾಂಸ್ಥಿಕೇತರ ಹೂಡಿಕೆದಾರರಿಗೆ ಹಾಗೂ ಉಳಿದ ಶೇ 10ರಷ್ಟು ಷೇರುಗಳನ್ನು ಸಣ್ಣ ಹೂಡಿಕೆದಾರರಿಗೆ ಕಾಯ್ದಿರಿಸಲಾಗಿದೆ ಎಂದು ಕಂಪನಿ ಮಾಹಿತಿ ನೀಡಿದೆ.

₹ 156 ಕೋಟಿ ಬಂಡವಾಳ ಸಂಗ್ರಹಿಸಿದ ಸಿಂಪಲ್ ಎನರ್ಜಿ

ಮುಂಬೈ (ಪಿಟಿಐ): ವಿದ್ಯುತ್ ಚಾಲಿತ ಸ್ಕೂಟರ್ ತಯಾರಿಸುವ ಬೆಂಗಳೂರಿನ ಸಿಂಪಲ್ ಎನರ್ಜಿ ಕಂಪನಿಯು ಆರಂಭಿಕ ಹಂತದಲ್ಲಿ ₹ 156 ಕೋಟಿ ಬಂಡವಾಳ ಸಂಗ್ರಹಿಸಿರುವುದಾಗಿ ಬುಧವಾರ ಹೇಳಿದೆ.

₹ 110 ಕೋಟಿ ಬಂಡವಾಳ ಸಂಗ್ರಹಿಸುವ ಗುರಿ ಇಟ್ಟುಕೊಳ್ಳಲಾಗಿತ್ತು. ಆದರೆ ಹೂಡಿಕೆದಾರರರಿಂದ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗಿದ್ದರಿಂದ ಹೆಚ್ಚಿನ ಬಂಡವಾಳ ಸಂಗ್ರಹ ಆಗಿದೆ ಎಂದು ಪ್ರಕಟಣೆಯಲ್ಲಿ ತಿಳಿಸಿದೆ.

ತಯಾರಿಕಾ ಸಾಮರ್ಥ್ಯ ಹೆಚ್ಚಿಸಲು, ಹೊಸ ಉತ್ಪನ್ನ ಅಭಿವೃದ್ಧಿಪಡಿಸಲು ಮತ್ತು ಎಕ್ಸ್‌ಪೀರಿಯನ್ಸ್ ಕೇಂದ್ರಗಳ ವಿಸ್ತರಣೆ ಹಾಗೂ ಕಂಪನಿಯ ವಹಿವಾಟು ವಿಸ್ತರಣೆಯ ಉದ್ದೇಶಗಳಿಗಾಗಿ ಈ ಬಂಡವಾಳವನ್ನು ಬಳಸಿಕೊಳ್ಳಲಾಗುವುದು ಎಂದು ಅದು ಹೇಳಿದೆ.

2019ರಲ್ಲಿ ಸ್ಥಾಪನೆ ಆದ ಸಿಂಪಲ್ ಎನರ್ಜಿ ಕಂಪನಿಯು ಈ ವರ್ಷದ ಆಗಸ್ಟ್ 15ರಂದು ಸಿಂಪಲ್ ಒನ್ ಎನ್ನುವ ವಿದ್ಯುತ್ ಚಾಲಿತ ಸ್ಕೂಟರ್ ಅನ್ನು ಬಿಡುಗಡೆ ಮಾಡಿದೆ.

ರಷ್ಯಾ–ಉಕ್ರೇನ್ ಸಮರಾಭ್ಯಾಸ

ಮಾಸ್ಕೊ (ರಾಯಿಟರ್ಸ್): ರಷ್ಯಾ ಮತ್ತು ಉಕ್ರೇನ್ ನಡುವೆ ಸಂಘರ್ಷಮಯ ವಾತಾವರಣ ತೀವ್ರಗೊಳ್ಳುತ್ತಿರುವಂತೆಯೇ ಉಭಯ ದೇಶಗಳು ಸಮರಾಭ್ಯಾಸದಲ್ಲಿ ತೊಡಗಿವೆ.

ರಷ್ಯಾದ ಯುದ್ಧವಿಮಾನಗಳು ಮತ್ತು ಹಡಗುಗಳು ನೌಕಾ ನೆಲೆಗಳಲ್ಲಿ ಬುಧವಾರ ಸಮರಾಭ್ಯಾಸ ನಡೆಸಿದವು. ಉಕ್ರೇನ್ ಮೇಲೆ ರಷ್ಯಾ ವೈಮಾನಿಕ ದಾಳಿ ನಡೆಸುವ ಸಾಧ್ಯತೆ ಇದೆ ಎಂದು ಉಕ್ರೇನ್ ಮತ್ತು ಅಮೆರಿಕದ ಅಧಿಕಾರಿಗಳು ಎಚ್ಚರಿಕೆ ನೀಡುವುದರೊಂದಿಗೆ ಸಮರಾಭ್ಯಾಸಗಳೂ ಚುರುಕುಗೊಂಡಿವೆ.

‘ಉಕ್ರೇನ್ ಮೇಲೆ ದಾಳಿ ನಡೆಸುವ ಉದ್ದೇಶದಿಂದ ಸಮರಾಭ್ಯಾಸ ನಡೆಸುತ್ತಿಲ್ಲ. 10ಕ್ಕೂ ಹೆಚ್ಚು ಯುದ್ಧವಿಮಾನ ಹಾಗೂ ಹಡಗುಗಳ ಸಿಬ್ಬಂದಿ ಅಭ್ಯಾಸ ನಡೆಸುತ್ತಿರುವುದು ನಿಜ. ತರಬೇತಿಯ ಭಾಗವಾಗಿ ಅಭ್ಯಾಸ ನಡೆಸುತ್ತಿದ್ದೇವೆಯೇ ವಿನಾ ದಾಳಿ ನಡೆಸುವ ಉದ್ದೇಶದಿಂದಲ್ಲ’ ಎಂದು ರಷ್ಯಾ ಸ್ಪಷ್ಟಪಡಿಸಿದೆ.

ಸ್ವೀಡನ್: ಮೊದಲ ಮಹಿಳಾ ಪ್ರಧಾನಿ ನೇಮಕಕ್ಕೆ ಒಪ್ಪಿಗೆ

ಮ್ಯಾಗ್ಡಲೇನಾ

ಕೋಪನ್‌ಹೇಗನ್ (ಎಪಿ): ಸೋಷಿಯಲ್ ಡೆಮಾಕ್ರಟಿಕ್ ಪಕ್ಷದ ನಾಯಕಿ, ಹಣಕಾಸು ಸಚಿವೆ ಮ್ಯಾಗ್ಡಲೇನಾ ಆ್ಯಂಡರ್ಸನ್ ಅವರನ್ನು ಸ್ವೀಡನ್‌ನ ಮೊದಲ ಮಹಿಳಾ ಪ್ರಧಾನಿಯಾಗಿ ನೇಮಕ ಮಾಡಲು ಅಲ್ಲಿನ ಸಂಸತ್ತು ಬುಧವಾರ ಅನುಮೋದನೆ ನೀಡಿದೆ.

ಸ್ಲೋವಾಕಿಯಾ: ಲಾಕ್‌ಡೌನ್ ಸಾಧ್ಯತೆ

ಪ್ರಾಗ್ (ರಾಯಿಟರ್ಸ್): ಸ್ಲೋವಾಕಿಯಾದಲ್ಲಿ ಬುಧವಾರ ಅತಿ ಹೆಚ್ಚು ದೈನಂದಿನ ಕೋವಿಡ್ ಪ್ರಕರಣಗಳು ವರದಿಯಾಗಿವೆ. ಈ ಹಿನ್ನೆಲೆಯಲ್ಲಿ ಸರ್ಕಾರವು ಲಾಕ್‌ಡೌನ್ ಹೇರಲು ಸಿದ್ಧತೆ ನಡೆಸುತ್ತಿದೆ.

ಈ ಬಗ್ಗೆ ಪ್ರತಿಕ್ರಿಯಿಸಿರುವ ರಕ್ಷಣಾ ಸಚಿವ ಜರೊಸ್ಲಾವ ನಾಡ್, ನಾವು ಜವಾಬ್ದಾರರಾಗಬೇಕಿದ್ದರೆ, ಇದುವೇ (ಲಾಕ್‌ಡೌನ್) ನಮ್ಮ ಬಳಿಯಿರುವ ಏಕಮಾತ್ರ ಆಯ್ಕೆ ಎಂದಿದ್ದಾರೆ.

ಮುಂಬೈ ಧಾರಣೆ

ಶೇಂಗಾ

24-11-2021

ಜಾವಾ 70/80(ಹೊಸ)	10350-10400
ಜಾವಾ 80/90(ಹೊಸ)	10050-10100
ದಪ್ಪ ಮಧ್ಯಪ್ರದೇಶ(ಹೊಸ)	9900-9950
ದಪ್ಪ ಗುಜರಾತ್(ಹೊಸ)	9400-9450

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1365 (1380)
ಒಂದು ವಾರದ ಡೆಲಿವರಿ	1360 (1375)
ಸೋಯಾ ಕಚ್ಚಾ	1200 (1205)
ಪಾಮ್ ವಾರದ ಡೆಲಿವರಿ	1198 (1198)
ಸೂರ್ಯಕಾಂತಿ ಎಣ್ಣೆ ಕಚ್ಚಾ	1215 (1215)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ	47,300 (47,600)
ಬೆಳ್ಳಿ ಕೆ.ಜಿ	62,900 (63,700)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ಕಾರ್ಮಿಕರ ರಾಜ್ಯ ವಿಮಾ ಯೋಜನೆ ವೈದ್ಯಕೀಯ ಸೇವೆಗಳ ನಿರ್ದೇಶನಾಲಯ
GOVERNMENT OF KARNATAKA | E.S.I.S(M) SERVICES KARNATAKA
ಎಸ್. ನಿಜಲಿಂಗಪ್ಪ ರಸ್ತೆ, ರಾಜಾಜಿನಗರ 2ನೇ ಬ್ಲಾಕ್, ಬೆಂಗಳೂರು – 560010.
ಟೆಲಿಫ್ಯಾಕ್ಸ್ : 080–23324216 / 23328105, ವೆಬ್‌ಸೈಟ್:https://www.esisms.karnataka.gov.in
ಸಂಖ್ಯೆ : ಹೊ.ಗು./03/2020–21 ದಿನಾಂಕ : 23.11.2021

ಈ ಇಲಾಖೆಯಲ್ಲಿ ಖಾಲಿ ಇರುವ ಫಾರ್ಮಸಿಸ್ಟ್ ಹುದ್ದೆಗಳನ್ನು ಹೊರಗುತ್ತಿಗೆ ಆಧಾರದ ಮೇಲೆ ನೇಮಕಾತಿ ಮಾಡಲು ಟೆಂಡರ್ ಪ್ರಕಟಣೆ
ಒಟ್ಟು ಹುದ್ದೆಗಳು : 200

ಪ್ರಕಟಣೆ ಸಂಖ್ಯೆ ಮತ್ತು ದಿನಾಂಕ	Outsource/03/2020-21 ದಿ: 23.11.2021
ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ	24.12.2021 ಸಂಜೆ 4.30 ಗಂಟೆಯವರೆಗೆ
ತಾಂತ್ರಿಕ ಬಿಡ್‌ಗಳನ್ನು ತೆರೆಯುವ ದಿನಾಂಕ	28.12.2021 ಬೆಳಗ್ಗೆ 11.30 ಗಂಟೆಗೆ
ಪೂರ್ವಭಾವಿ ಸಭೆ ದಿನಾಂಕ	15.12.2021 ಬೆಳಗ್ಗೆ 11.00 ಗಂಟೆಗೆ ನಿರ್ದೇಶನಾಲಯದ ಕಛೇರಿ, ಕಾರ್ಮಿಕರ ರಾಜ್ಯ ವಿಮಾ ಯೋಜನೆ ವೈದ್ಯಕೀಯ ಸೇವೆಗಳು
ಟೆಂಡರ್ ತೆರೆಯುವ ಸ್ಥಳ	ಕಾರ್ಮಿಕರ ರಾಜ್ಯ ವಿಮಾ ಯೋಜನೆ ವೈದ್ಯಕೀಯ ಸೇವೆಗಳ ನಿರ್ದೇಶನಾಲಯ
ಟೆಂಡರ್‌ನ ಹೆಚ್ಚಿನ ಮಾಹಿತಿಗಾಗಿ ಇ–ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್ ನೋಡಿ	www.eproc.karnataka.gov.in & https://www.esisms.karnataka.gov.in

ಹೆಚ್ಚಿನ ಮಾಹಿತಿಗಾಗಿ ಕೆಳಸಹಿದಾರರ ಕಛೇರಿಯನ್ನು ಸಂಪರ್ಕಿಸಬಹುದು.
ಸಹಿ/– ನಿರ್ದೇಶಕರು
ಕಾರ್ಮಿಕರ ರಾಜ್ಯ ವಿಮಾ ಯೋಜನೆ ವೈದ್ಯಕೀಯ ಸೇವೆಗಳು
ವಾಸಾಸಂಇ/ಬೆಂನ/ಜಿಎ/2206/2021–22
ಕೋವಿಡ್-19 - ಗಾಳಿಸುದ್ದಿ ಹರಡಬೇಡಿ, ಜವಾಬ್ದಾರಿಯಿಂದ ವರ್ತಿಸಿ, ಸೋಂಕನ್ನು ದೂರವಿಡಿ-ಸೋಂಕಿತರನ್ನಲ್ಲ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಸುದ್ದಿ 2 ನಿಮಿಷ

ಇಳಿಕೆ ಕಂಡ ಸೆನ್ಸೆಕ್ಸ್, ನಿಫ್ಟಿ

ಮುಂಬೈ (ಪಿಟಿಐ): ರಿಲಯನ್ಸ್, ಇನ್ಫೊಸಿಸ್ ಮತ್ತು ಎಚ್‌ಡಿಎಫ್‌ಸಿ ಬ್ಯಾಂಕ್ ಷೇರುಗಳು ಮಾರಾಟದ ಒತ್ತಡಕ್ಕೆ ಒಳಗಾಗಿದ್ದರಿಂದ ದೇಶದ ಷೇರುಪೇಟೆ ಸೂಚ್ಯಂಕಗಳು ಬುಧವಾರ ಇಳಿಕೆ ಕಾಣುವಂತಾಯಿತು.

ದಿನದ ವಹಿವಾಟಿನ ಬಹುತೇಕ ಅವಧಿಯಲ್ಲಿ ಸಕಾರಾತ್ಮಕ ಚಲನೆ ಕಂಡುಬಂದಿತ್ತು. ಆದರೆ, ಅಂತಿಮವಾಗಿ ಮುಂಬೈ ಷೇರುಪೇಟೆ ಸಂವೇದಿ ಸೂಚ್ಯಂಕ ಸೆನ್ಸೆಕ್ಸ್ 323 ಅಂಶ ಇಳಿಕೆ ಕಂಡು 58,341 ಅಂಶಗಳಿಗೆ ತಲುಪಿತು. ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ ನಿಫ್ಟಿ 88 ಅಂಶ ಇಳಿಕೆ ಕಂಡು 17,415ಕ್ಕೆ ತಲುಪಿತು.

ಮಾರುತಿ, ಟೆಕ್ ಮಹೀಂದ್ರ, ಐಟಿಸಿ, ರಿಲಯನ್ಸ್ ಇಂಡಸ್ಟ್ರೀಸ್, ಎಲ್‌ಆ್ಯಂಡ್‌ಟಿ, ಅಲ್ಟ್ರಾ ಟೆಕ್ ಸಿಮೆಂಟ್ ಮತ್ತು ಎಚ್‌ಡಿಎಫ್‌ಸಿ ಷೇರುಗಳ ಮೌಲ್ಯವು ಶೇಕಡ 2.62ರವರೆಗೆ ಇಳಿಕೆ ಆಗಿದೆ.

ತೈಲ ಮತ್ತು ಅನಿಲ ಹಾಗೂ ವಾಹನ ವಲಯದ ಷೇರುಗಳ ಮೌಲ್ಯ ಇಳಿಕೆಯು ಬ್ಯಾಂಕಿಂಗ್ ಮತ್ತು ಹಣಕಾಸು ವಲಯದ ಷೇರುಗಳ ಗಳಿಕೆಯನ್ನು ಮರೆಮಾಚಿದವು. ಚಳಿಗಾಲದ ಅಧಿವೇಶನದಲ್ಲಿ ಬ್ಯಾಂಕಿಂಗ್ ಕಾಯ್ದೆಗೆ ತಿದ್ದುಪಡಿ ತಂದು, ಸರ್ಕಾರಿ ವಲಯದ ಎರಡು ಬ್ಯಾಂಕ್‌ಗಳನ್ನು ಖಾಸಗೀಕರಣಗೊಳಿಸುವ ಕೇಂದ್ರ ಸರ್ಕಾರದ ನಡೆಯಿಂದಾಗಿ ಬ್ಯಾಂಕಿಂಗ್ ವಲಯವು ಹೆಚ್ಚು ಗಮನ ಸೆಳೆಯಿತು ಎಂದು ಜಿಯೋಜಿತ್ ಫೈನಾನ್ಶಿಯಲ್ ಸರ್ವಿಸಸ್‌ನ ಸಂಶೋಧನಾ ವಿಭಾಗದ ಮುಖ್ಯಸ್ಥ ವಿನೋದ್ ನಾಯರ್ ಹೇಳಿದ್ದಾರೆ.

₹ 1 ಲಕ್ಷ ಕೋಟಿ ದಾಟಿದ ಪೇಟಿಎಂ ಮಾರುಕಟ್ಟೆ ಬಂಡವಾಳ ಮೌಲ್ಯ

ನವದೆಹಲಿ (ಪಿಟಿಐ): ಪೇಟಿಎಂನ ಮಾತೃ ಸಂಸ್ಥೆ ಒನ್97 ಕಮ್ಯುನಿಕೇಷನ್ಸ್ ಷೇರುಗಳ ಮೌಲ್ಯವು ಸತತ ಎರಡನೇ ದಿನವೂ ಹೆಚ್ಚಳ ಆಗಿದೆ. ಬುಧವಾರ ಶೇ 17ಕ್ಕೂ ಹೆಚ್ಚಿನ ಏರಿಕೆ ಆಯಿತು. ಷೇರುಗಳ ಮೌಲ್ಯ ಹೆಚ್ಚಳದಿಂದಾಗಿ ಕಂಪನಿಯ ಮಾರುಕಟ್ಟೆ ಬಂಡವಾಳ ಮೌಲ್ಯವು ₹ 1.13 ಲಕ್ಷ ಕೋಟಿಗೆ ತಲುಪಿದೆ.

ಬಿಎಸ್‌ಇನಲ್ಲಿ ಕಂಪನಿಯ ಷೇರು ಮೌಲ್ಯವು ಶೇ 17.27ರಷ್ಟು ಹೆಚ್ಚಾಗಿ ಪ್ರತಿ ಷೇರಿನ ಬೆಲೆ ₹ 1,753ಕ್ಕೆ ತಲುಪಿತು. ಎನ್‌ಎಸ್‌ಇನಲ್ಲಿ ಶೇ 17.28ರಷ್ಟು ಹೆಚ್ಚಾಗಿ ₹ 1,753ಕ್ಕೆ ತಲುಪಿತು.

ಕನ್ನಡದಲ್ಲಿ ತೆರಿಗೆ ಪದಕೋಶ

ಪ್ರಜಾವಾಣಿ ವಾರ್ತೆ

ಸುಬ್ರಾಯ ಎಂ. ಹೆಗಡೆ

ಶಿವಣ್ಣ ಡಿ.

ಬೆಂಗಳೂರು: ವಾಣಿಜ್ಯ ತೆರಿಗೆ ಇಲಾಖೆಯಲ್ಲಿ ಅಧಿಕಾರಿಗಳಾಗಿ ಕರ್ತವ್ಯ ನಿರ್ವಹಿಸಿದ್ದ ಸುಬ್ರಾಯ ಎಂ. ಹೆಗಡೆ ಮತ್ತು ಡಿ. ಶಿವಣ್ಣ ಅವರು ಜೊತೆಯಾಗಿ, ಇಂಗ್ಲಿಷ್–ಕನ್ನಡ ತೆರಿಗೆ ಪದಕೋಶ ರಚಿಸಿದ್ದಾರೆ.

220 ಪುಟಗಳು ಇರುವ ಈ ಸಂಕ್ಷಿಪ್ತ ಪದಕೋಶವು ಶುಕ್ರವಾರ ಬಿಡುಗಡೆ ಆಗುತ್ತಿದೆ. ‘ವಾಣಿಜ್ಯ ತೆರಿಗೆ ವಿಷಯದಲ್ಲಿ ಕನ್ನಡದ ಪದಗಳನ್ನು ಬಳಸುವಾಗ ಏಕರೂಪತೆ ಇರಬೇಕು ಎಂಬ ಉದ್ದೇಶದಿಂದ ಈ ಶಬ್ದಕೋಶ ರಚಿಸಿದ್ದೇವೆ. ಇಲ್ಲಿ ಇಂಗ್ಲಿಷ್, ಲ್ಯಾಟಿನ್, ಗ್ರೀಕ್ ಮೂಲದ ಪದಗಳಿಗೆ ವಾಣಿಜ್ಯ ತೆರಿಗೆಯ ಚೌಕಟ್ಟಿನಲ್ಲಿ ಇರುವ ಕನ್ನಡದ ಅರ್ಥ ವಿವರಣೆಯನ್ನು ನೀಡಲಾಗಿದೆ’ ಎಂದು ಹೆಗಡೆ ಅವರು ‘ಪ್ರಜಾವಾಣಿ’ಗೆ ತಿಳಿಸಿದರು. ಇಂತಹ ಪ್ರಯತ್ನ ಕನ್ನಡದಲ್ಲಿ ಈ ಮೊದಲು ಆದಂತಿಲ್ಲ ಎಂದು ಅವರು ಹೇಳಿದರು.

‘ಇಡೀ ದೇಶಕ್ಕೆ ಅನ್ವಯ ಆಗುವಂತೆ ಸರಕು ಮತ್ತು ಸೇವಾ ತೆರಿಗೆ (ಜಿಎಸ್‌ಟಿ) ವ್ಯವಸ್ಥೆ 2017ರಲ್ಲಿ ಜಾರಿಗೆ ಬಂತು. ಇದಾದ ನಂತರದಲ್ಲಿ, ತೆರಿಗೆಗೆ ಸಂಬಂಧಿಸಿದ ಬರವಣಿಗೆಗಳಲ್ಲಿ ಏಕರೂಪತೆ ಹಾಗೂ ಖಚಿತತೆ ಬರಬೇಕಾದರೆ ಕನ್ನಡದಲ್ಲಿ ಒಂದು ಪ್ರತ್ಯೇಕ ಪದಕೋಶದ ಅಗತ್ಯ ಇದೆ ಎಂದು ಅನ್ನಿಸಿತು. ಹಾಗಾಗಿ ನಾವಿಬ್ಬರೂ ಈ ಪದಕೋಶದ ರಚನೆಯಲ್ಲಿ ತೊಡಗಿಸಿಕೊಂಡೆವು’ ಎಂದು ಶಿವಣ್ಣ ಅವರು ಹೇಳಿದರು.

ಈ ಕೃತಿಯನ್ನು ವಿಧಾನಸಭೆಯ ಸ್ಪೀಕರ್ ವಿಶ್ವೇಶ್ವರ ಹೆಗಡೆ ಕಾಗೇರಿ ಅವರು ಬೆಂಗಳೂರಿನಲ್ಲಿ ಬಿಡುಗಡೆ ಮಾಡಲಿದ್ದಾರೆ. ಐದು ಸಾವಿರಕ್ಕೂ ಹೆಚ್ಚಿನ ಪದಗಳಿಗೆ ಕನ್ನಡದಲ್ಲಿ ಅರ್ಥ ವಿವರಣೆ ಈ ಕೃತಿಯಲ್ಲಿ ಇದೆ.

ವೈಮಾನಿಕ ದಾಳಿ: ಇಬ್ಬರು ನಾಗರಿಕರ ಸಾವು

ಡಮಾಸ್ಕಸ್ (ಎಪಿ): ‘ದೇಶದ ಮಧ್ಯ ಭಾಗದಲ್ಲಿರುವ ಮಿಲಿಟರಿ ನೆಲೆಗಳನ್ನು ಗುರಿಯಾಗಿಸಿ ಇಸ್ರೇಲ್‌ನ ಯುದ್ಧ ವಿಮಾನಗಳು ಬುಧವಾರ ದಾಳಿ ನಡೆಸಿವೆ. ದಾಳಿಯಲ್ಲಿ ಇಬ್ಬರು ನಾಗರಿಕರು ಮೃತಪಟ್ಟಿದ್ದು, 7 ಜನರು ಗಾಯಗೊಂಡಿದ್ದಾರೆ’ ಎಂದು ಸಿರಿಯಾ ಹೇಳಿದೆ.

ಗಾಯಗೊಂಡವರ ಪೈಕಿ ಆರು ಜನ ಯೋಧರಿದ್ದಾರೆ ಎಂದು ಸೇನಾಧಿಕಾರಿಯೊಬ್ಬರ ಹೇಳಿಕೆ ಉಲ್ಲೇಖಿಸಿ ಸರ್ಕಾರಿ ಒಡೆತನದ ಮಾಧ್ಯಮ ಸಂಸ್ಥೆ ಎಸ್‌ಎಎನ್‌ಎ ವರದಿ ಮಾಡಿದೆ.

ಖಾದ್ಯ ತೈಲ ಮುಂಬೈ

(10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1355 (1370)
ಸೋಯಾ (ರಿಫೈನ್ಡ್)	₹1270 (1245)
ಸೂರ್ಯಕಾಂತಿ (ರಿಫೈನ್ಡ್)	₹1310 (1310)
ಪಾಮೋಲಿನ್	₹1200 (1200)

ಲಾಹೋರ್‌ಗೆ ‘ಅತ್ಯಂತ ಮಲಿನ ನಗರ’ ಹಣೆಪಟ್ಟಿ

ಲಾಹೋರ್ (ಎಪಿ): ಪಾಕಿಸ್ತಾನದ ಸಾಂಸ್ಕೃತಿಕ ರಾಜಧಾನಿ ಎಂದೇ ಕರೆಯಲಾಗುವ ಲಾಹೋರ್‌ಗೆ, ಈಗ ಜಗತ್ತಿನಲ್ಲೇ ಅತಿಹೆಚ್ಚು ಮಲಿನಕ್ಕೆ ಒಳಗಾದ ನಗರ ಎಂಬ ಕಳಂಕ ಅಂಟಿದೆ.

ಸ್ವಿಟ್ಜರ್‌ಲೆಂಡ್ ಮೂಲದ ‘ಪ್ಲಾಟ್‌ಫಾರ್ಮ್ ಐಕ್ಯೂಏರ್’ ಎಂಬ ವಾಯು ಗುಣಮಟ್ಟದ ಮೇಲೆ ನಿಗಾ ಇಡುವ ಕಂಪನಿ ಈ ಕುರಿತು ಮಾಹಿತಿ ಬಿಡುಗಡೆ ಮಾಡಿದೆ.

‘ವಿಶ್ವದ ಅತ್ಯಂತ ಮಲಿನ ನಗರಗಳ ಪಟ್ಟಿಯಲ್ಲಿ ಲಾಹೋರ್ ಅಗ್ರ ಸ್ಥಾನ ಪಡೆದಿದೆ. ನಗರಗಳ ವಾಯು ಗುಣಮಟ್ಟ ಅಳೆಯುವ ಅಮೆರಿಕದ ಎಕ್ಯೂಐ ಎಂಬ ಅಳತೆಗೋಲಿನ ಪ್ರಕಾರ, ಬುಧವಾರ ಬೆಳಿಗ್ಗೆ 9.49ಕ್ಕೆ ಲಾಹೋರ್‌ನ ವಾಯು ಗುಣಮಟ್ಟ ಸೂಚ್ಯಂಕ 203 ದಾಖಲಾಗಿದೆ. ನಂತರದ ಸ್ಥಾನದಲ್ಲಿರುವ ದೆಹಲಿಯ ವಾಯು ಗುಣಮಟ್ಟ ಸೂಚ್ಯಂಕ 183’ ಎಂದು ಕಂಪನಿ ವಿವರಿಸಿದೆ.

‘ನಗರದಲ್ಲಿ ಹೊಗೆಮಂಜಿನ ಪ್ರಮಾಣ ಹೆಚ್ಚುತ್ತಿದೆ. ಗಾಳಿಯಲ್ಲಿ ಮಾಲಿನ್ಯಕಾರಕ ಕಣಗಳ ಪ್ರಮಾಣವೂ ಅಧಿಕಗೊಂಡಿದ್ದರಿಂದ ಸಾವಿರಾರು ಜನರು ಉಸಿರಾಟದ ತೊಂದರೆ ಹಾಗೂ ಇತರ ಆರೋಗ್ಯ ಸಮಸ್ಯೆಗಳಿಂದ ಬಳಲುವಂತಾಗಿದೆ. ಜನರು ಮನೆಯಲ್ಲಿಯೇ ಉಳಿಯಬೇಕಾದ ಅನಿವಾರ್ಯ ಸ್ಥಿತಿ ನಿರ್ಮಾಣವಾಗಿದೆ’ ಎಂದೂ ಕಂಪನಿ ಹೇಳಿದೆ.

ವಾಯು ಗುಣಮಟ್ಟ ಸೂಚ್ಯಂಕ 169 ಹೊಂದಿರುವ ಢಾಕಾ ಮೂರನೇ ಸ್ಥಾನದಲ್ಲಿದ್ದರೆ, ಸೂಚ್ಯಂಕ 168 ದಾಖಲಾಗಿರುವ ಕೋಲ್ಕತ್ತ ನಾಲ್ಕನೇ ಸ್ಥಾನದಲ್ಲಿದೆ.

ಲಸಿಕೆ ಪಡೆದವರಿಗೆ ಸಿಂಗಪುರ, ಮಲೇಷ್ಯಾ ರಸ್ತೆ ಮಾರ್ಗ

ಸಿಂಗಪುರ (ರಾಯಿಟರ್ಸ್): ಕೋವಿಡ್ ಲಸಿಕೆಯ ಎರಡೂ ಡೋಸ್‌ಗಳನ್ನು ಹಾಕಿಸಿಕೊಂಡವರಿಗೆರಸ್ತೆ ಮಾರ್ಗ ತೆರೆಯಲು ಸಿಂಗಪುರ ಮತ್ತು ಮಲೇಷ್ಯಾ ಸರ್ಕಾರ ನಿರ್ಧರಿಸಿದೆ. ನ. 29ರಿಂದ ಇದು ಜಾರಿಗೆ ಬರಲಿದ್ದು, ಚಂಗಿ ವಿಮಾನ ನಿಲ್ದಾಣ ಮತ್ತು ಕ್ವಾಲಾಲಂಪುರ ಅಂತರರಾಷ್ಟ್ರೀಯ ವಿಮಾನ ನಿಲ್ದಾಣಕ್ಕೂ ವಿಸ್ತರಿಸಲಾಗುವುದು ಎಂದು ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಏಲಕ್ಕಿ ಧಾರಣೆ	
ಸಕಲೇಶಪುರ	
ಕೂಳೆ	600-650
ನಡುಗೋಲು	700-750
ರಾಶಿ	800-850
ರಾಶಿ ಉತ್ತಮ	900-950
ಜರಡಿ	1000-1050
ಹೆರಕಿದ್ದು	1200-1300
ಹಸಿರು ಸಾಧಾರಣ	800-850
ಹಸಿರು ಉತ್ತಮ	1000-1050
ಹಸಿರು ಅತಿ ಉತ್ತಮ	1300-1400
ಕಾಳು ಮೆಣಸು	540
ಅಡಿಕೆ	
ಬಂಟ್ವಾಳ	
ಕೋಕ	12500-25000
ಹೊಸತು	27500-42500
ಕುಮಟ	
ಚಿಪ್ಪು	25109-41689
ಕೋಕ	21069-35099
ಫ್ಯಾಕ್ಟರಿ	12009-18699
ಹಳೆಚಾಲಿ	44899-49099
ಹೊಸಚಾಲಿ	36079-40288
ಪುತ್ತೂರು	
ಕೋಕ	10500-26000
ಹೊಸತು	27500-42500
ಶಿರಸಿ	
ಬೆಟ್ಟೆ	26099-45099
ಬಿಳಿಗೋಟು	18018-44999
ಚಾಲಿ	44299-49808
ರಾಶಿ	39699-49309
ರಾಮನಗರ ರೇಷ್ಮೆ	
ಮಿಶ್ರತಳಿ	208-499
ದ್ವಿತಳಿ	322-676

ಕಾಫಿ (50 ಕೆ.ಜಿಗೆ ₹ ಗಳಲ್ಲಿ)

	ಮೂಡಿಗೆರೆ	ಹಾಸನ		
	ಮುದ್ರೆಮನೆ	ಪ್ಲಾಂಟರ್ಸ್	ಅಲ್ಲಾನಾ	ನ್ಯೂಯಾರ್ಕ್
ಎಪಿ	---	14250	---	242.55 ಸೆಂಟ್ಸ್
ಎಸಿ	---	5800	---	
ಆರ್‌ಪಿ	---	---	6400	ಲಂಡನ್
ಆರ್‌ಸಿ	---	3250	3725	2297 ಡಾಲರ್ಸ್

ಕ್ರಿಕೆಟ್: ಕಾನ್ಪುರದಲ್ಲಿ ಇಂದು ಭಾರತ–ನ್ಯೂಜಿಲೆಂಡ್ ಹಣಾಹಣಿ

ದ್ರಾವಿಡ್‌ಗೆ ಮೊದಲ 'ಟೆಸ್ಟ್'



ಬಲಾಬಲ

60 ಪಂದ್ಯಗಳು | 26 ಡ್ರಾ
21 ಭಾರತ ಜಯ | 13 ನ್ಯೂಜಿಲೆಂಡ್ ಜಯ

ಪಂದ್ಯ ಆರಂಭ ಬೆಳಿಗ್ಗೆ 9.30
ನೇರಪ್ರಸಾರ ಸ್ಟಾರ್ ಸ್ಪೋರ್ಟ್ಸ್ ನೆಟ್‌ವರ್ಕ್

ಅಭ್ಯಾಸದ ಸಂದರ್ಭದಲ್ಲಿ ಮುಖ್ಯ ಕೋಚ್ ರಾಹುಲ್ ದ್ರಾವಿಡ್ ಮತ್ತು ಬ್ಯಾಟರ್ ಶ್ರೇಯಸ್ ಅಯ್ಯರ್ –ಪಿಟಿಐ ಚಿತ್ರ

ಕಾನ್ಪುರ: ರಾಹುಲ್ ದ್ರಾವಿಡ್ ಮಾರ್ಗದರ್ಶನದಲ್ಲಿ ಮೊಟ್ಟಮೊದಲ ಟೆಸ್ಟ್ ಪಂದ್ಯ ಆಡಲು ಭಾರತ ತಂಡ ಸಿದ್ಧವಾಗಿದೆ.

ಗ್ರೀನ್ ಪಾರ್ಕ್ ಕ್ರೀಡಾಂಗಣದಲ್ಲಿ ಗುರುವಾರ ಆರಂಭವಾಗಲಿರುವ ಟೆಸ್ಟ್‌ನಲ್ಲಿ ಅಜಿಂಕ್ಯ ರಹಾನೆ ನಾಯಕತ್ವದ ಭಾರತ ತಂಡವು 'ವಿಶ್ವ ಟೆಸ್ಟ್ ಚಾಂಪಿಯನ್' ನ್ಯೂಜಿಲೆಂಡ್ ಸವಾಲು ಎದುರಿಸಲಿದೆ. ಕಿವೀಸ್ ವಿರುದ್ಧದ ಟಿ20 ಸರಣಿಯಲ್ಲಿ ಭಾರತ ಕ್ಲೀನ್‌ಸ್ವೀಪ್ ಮಾಡಲು ಮಾರ್ಗದರ್ಶನ ಮಾಡಿ ಯಶಸ್ವಿಯಾಗಿರುವ ದ್ರಾವಿಡ್, ಈಗ 'ಟೆಸ್ಟ್'ಗೆ ಸಿದ್ಧವಾಗಿದ್ದಾರೆ.

ರೋಹಿತ್ ಶರ್ಮಾ, ವಿರಾಟ್ ಕೊಹ್ಲಿ ಮತ್ತು ಗಾಯಗೊಂಡಿರುವ ಕೆ.ಎಲ್. ರಾಹುಲ್ ಅವರಿಲ್ಲದೇ ಕಣ ಕ್ಕಿಳಿಯುತ್ತಿರುವ ತಂಡದಲ್ಲಿ ಯುವ ಆಟಗಾರರಿಗೆ ಮಿಂಚಲು ಅವಕಾಶ ಲಭಿಸಿದೆ. ಕನ್ನಡಿಗ ಮಯಂಕ್ ಅಗರವಾಲ್ ಇನಿಂಗ್ಸ್ ಆರಂಭಿಸಲಿದ್ದು, ಅವರೊಂದಿಗೆ ಪಂಜಾಬಿ ಹುಡುಗ ಶುಭಮನ್ ಗಿಲ್ ಇನಿಂಗ್ಸ್ ಆರಂಭಿಸುವರು. ಕೊಹ್ಲಿ ಬ್ಯಾಟಿಂಗ್ ಕ್ರಮಾಂಕದಲ್ಲಿ ಶ್ರೇಯಸ್ ಅಯ್ಯರ್ ಆಡಲಿದ್ದಾರೆ. ಮೂರನೇ ಕ್ರಮಾಂಕದಲ್ಲಿ ಚೇತೇಶ್ವರ್ ಪೂಜಾರ ಕ್ರೀಸ್‌ಗೆ ಬರುವುದು ಖಚಿತ. ಸುಮಾರು ಒಂದು ವರ್ಷದಿಂದ ಶತಕದ ಬರ ಎದುರಿಸುತ್ತಿರುವ ಪೂಜಾರ ಇಲ್ಲಿ ಮತ್ತೆ ಲಯಕ್ಕೆ ಮರಳುವ ನಿರೀಕ್ಷೆ ಇದೆ.

ಅನುಭವಿ ವಿಕೆಟ್ ಕೀಪರ್ ವೃದ್ಧಿಮಾನ್ ಸಹಾ ಮತ್ತು ಯುವ ಆಟಗಾರ ಕೆ.ಎಸ್. ಭರತ್ ತಂಡದಲ್ಲಿದ್ದಾರೆ. ಸಹಾ ಅವರೇ ಕೀಪಿಂಗ್ ಹೊಣೆ ನಿಭಾಯಿಸುವುದು ಬಹುತೇಕ ಖಚಿತ. ಗ್ರೀನ್ ಪಾರ್ಕ್ ಕ್ರೀಡಾಂಗಣದ ಹೊರಾಂಗಣ ಮತ್ತು ಪಿಚ್ ಬಸವಳಿದಂತೆ ಕಾಣುತ್ತಿವೆ. ಈ ಬಗ್ಗೆ ಕಿವೀಸ್ ತಂಡದ ಕೋಚ್ ಗ್ಯಾರಿ ಸ್ಟೆಡ್ ಕೂಡ ಮೈದಾನದ ಗುಣಮಟ್ಟದ ಬಗ್ಗೆ ಅಸಮಾಧಾನ ವ್ಯಕ್ತಪಡಿಸಿದ್ದಾರೆ.

ಪಿಚ್‌ನಲ್ಲಿ ಸ್ಪಿನ್ನರ್‌ಗಳಿಗೆ ಭರಪೂರ ನೆರವು ಸಿಗುವ ಸಾಧ್ಯತೆ ಹೆಚ್ಚಿದೆ. ಅನುಭವಿ ಆರ್. ಅಶ್ವಿನ್, ರವೀಂದ್ರ ಜಡೇಜ ಮತ್ತು ಅಕ್ಷರ್ ಪಟೇಲ್ ಮೋಡಿ ರಂಗೇರಲು ಎಲ್ಲ ಅವಕಾಶಗಳೂ ಇಲ್ಲಿವೆ. 2016ರಲ್ಲಿ ಇಲ್ಲಿ ಭಾರತ ತಂಡದ ಎದುರು ಟೆಸ್ಟ್ ಆಡಿದ್ದ ಕೇನ್ ವಿಲಿಯಮ್ಸನ್ ಬಳಗವು ಸೋಲನುಭವಿಸಿತ್ತು. ಆದರೆ ಕಳೆದೈದು ವರ್ಷಗಳಲ್ಲಿ ಪರಿಸ್ಥಿತಿ ಬದಲಾಗಿದೆ. 2019ರಲ್ಲಿ ಏಕದಿನ ಕ್ರಿಕೆಟ್ ವಿಶ್ವಕಪ್ ಟೂರ್ನಿಯಲ್ಲಿ ರನ್ನರ್ ಅಪ್ ಆಗಿದ್ದ ಕಿವೀಸ್, ಹೋದ ಜೂನ್‌ನಲ್ಲಿ ವಿಶ್ವ ಚಾಂಪಿಯನ್‌ಷಿಪ್ ಫೈನಲ್‌ನಲ್ಲಿ ಭಾರತ ತಂಡವನ್ನು ಸೋಲಿಸಿ ಪ್ರಶಸ್ತಿಗೆ ಮುತ್ತಿಕ್ಕಿತ್ತು. ಅಷ್ಟೇ ಅಲ್ಲ. ಈಚೆಗಷ್ಟೇ ಯುಎಇಯಲ್ಲಿ ನಡೆದ ಟಿ20 ವಿಶ್ವಕಪ್ ಟೂರ್ನಿಯಲ್ಲಿಯೂ ರನ್ನರ್ಸ್ ಅಪ್ ಆಗಿತ್ತು. ನಾಲ್ಕು ದಿನಗಳ ಹಿಂದೆ ಮುಕ್ತಾಯವಾದ ಟಿ20 ಸರಣಿಯಲ್ಲಿ ಭಾರತವು 3–0ಯಿಂದ ನ್ಯೂಜಿಲೆಂಡ್ ವಿರುದ್ಧ ಗೆದ್ದಿದೆ. ಆದರೆ, ಚುಟುಕು ಕ್ರಿಕೆಟ್ ಸರಣಿಯಲ್ಲಿ ಕೇನ್ ವಿಶ್ರಾಂತಿ ಪಡೆದಿದ್ದರು. ಕೇನ್, ಟಾಮ್ ಲಥಾಮ್, ಡೆರಿಲ್ ಮಿಚೆಲ್, ಗ್ಲೆನ್ ಫಿಲಿಪ್ಸ್ ಮತ್ತು ಟಾಮ್ ಬ್ಲಂಡೆಲ್ ತಂಡದ ಬ್ಯಾಟಿಂಗ್ ಶಕ್ತಿಯಾಗಿದ್ದಾರೆ. ಗ್ರೀನ್ ಪಾರ್ಕ್ ಪಿಚ್ ಅವಲೋಕಿಸಿರುವ ಕೋಚ್ ಗ್ಯಾರಿ, ಸ್ಪಿನ್ನರ್‌ಗಳಾದ ಮಿಚೆಲ್ ಸ್ಯಾಂಟನರ್, ಎಜಾಜ್ ಪಟೇಲ್ ಮತ್ತು ವಿಲ್ ಸೋಮರ್ ವಿಲ್ ಅವರನ್ನು ಕಣಕ್ಕಿಳಿಸುವ ಸಾಧ್ಯತೆ ಇದೆ.

ನ್ಯೂಜಿಲೆಂಡ್ ತಂಡದ ಎಜಾಜ್ ಪಟೇಲ್ –ಪಿಟಿಐ ಚಿತ್ರ

ಸ್ಪರ್ಧಾತ್ಮಕ ಪಿಚ್: ಕ್ಯೂರೇಟರ್

ಕಾನ್ಪುರ (ಪಿಟಿಐ): ಮೊದಲ ಟೆಸ್ಟ್‌ಗೆ ಬಳಸಲಾಗುತ್ತಿರುವ ಪಿಚ್ ಸಿದ್ಧಗೊಳಿಸುವ ಕುರಿತು ಬಿಸಿಸಿಐ ಅಥವಾ ಭಾರತ ತಂಡದ ಮ್ಯಾನೇಜ್‌ಮೆಂಟ್‌ನಿಂದ ಯಾವುದೇ ಸೂಚನೆ ಬಂದಿಲ್ಲ. ತಂಡದ ಕೋಚ್ ರಾಹುಲ್ ದ್ರಾವಿಡ್ ಅಥವಾ ನಾಯಕ ಅಜಿಂಕ್ಯ ರಹಾನೆ ಅವರಲ್ಲಿ ಯಾರೂ ಸೂಚನೆಗಳನ್ನು ಕೊಟ್ಟಿಲ್ಲ. ನಿಯಮಾನುಸಾರವಾಗಿ ಉತ್ತಮ ಆಟದಂಕಣ ಸಿದ್ಧವಾಗಿದೆ ಎಂದು ಪಿಚ್ ಕ್ಯೂರೇಟರ್ ಶಿವಕುಮಾರ್ ತಿಳಿಸಿದ್ದಾರೆ.

'ನವೆಂಬರ್ ತಿಂಗಳಲ್ಲಿ ಸಹಜವಾಗಿಯೇ ಹೆಚ್ಚಾಗಿರುವ ತೇವಾಂಶ ಇಲ್ಲಿದೆ. ಈ ಪಿಚ್ ಸಮತೋಲನದಿಂದ ಕೂಡಿದೆ. ಅಷ್ಟು ಬೇಗ ಬಿರುಕುಗಳಾಗುವುದಿಲ್ಲ' ಎಂದು ಹೇಳಿದ್ದಾರೆ.

2016ರಲ್ಲಿ ಭಾರತ ಮತ್ತು ನ್ಯೂಜಿಲೆಂಡ್ ಇಲ್ಲಿ ಆಡಿದ್ದ ಟೆಸ್ಟ್ ಪಂದ್ಯವು ಐದು ದಿನಗಳವರೆಗೆ ನಡೆದಿತ್ತು. ಆತಿಥೇಯರು ಜಯಿಸಿದ್ದರು.

ಮುಖ್ಯಾಂಶಗಳು

- ಐದು ವರ್ಷಗಳ ನಂತರ ಕಾನ್ಪುರದಲ್ಲಿ ಟೆಸ್ಟ್
- ರೋಹಿತ್, ವಿರಾಟ್ ಕೊಹ್ಲಿಗೆ ವಿಶ್ರಾಂತಿ, ಅಜಿಂಕ್ಯ ನಾಯಕತ್ವ
- ಟೆಸ್ಟ್ ಕ್ರಿಕೆಟ್‌ಗೆ ಪದಾರ್ಪಣೆ ಮಾಡಲಿರುವ ಬ್ಯಾಟರ್ ಶ್ರೇಯಸ್ ಅಯ್ಯರ್

ಪ್ರತಿ ಪಂದ್ಯದಲ್ಲಿಯೂ ಶತಕ ಬಾರಿಸಲು ಸಾಧ್ಯವಿಲ್ಲ. ಅಗತ್ಯವಿರುವಾಗ ಯಾವ ರೀತಿಯಲ್ಲಿ ಮಹತ್ವದ ಕಾಣಿಕೆ ನೀಡಬಲ್ಲೆ ಎನ್ನುವುದಷ್ಟೇ ಗುರಿ.

ಅಜಿಂಕ್ಯ ರಹಾನೆ ಭಾರತ ತಂಡದ ನಾಯಕ

ಫ್ರಾನ್ಸ್‌ಗೆ ಮಣಿದ ಭಾರತ ತಂಡ

ಜೂನಿಯರ್ ಹಾಕಿ ವಿಶ್ವಕಪ್: ಸಂಜಯ್ ಹ್ಯಾಟ್ರಿಕ್ ಗೋಲು

ಭುವನೇಶ್ವರ್ (ಪಿಟಿಐ): ಆತಿಥೇಯ ಭಾರತ ತಂಡವು ಬುಧವಾರ ಇಲ್ಲಿ ಆರಂಭವಾದ ಜೂನಿಯರ್ ಹಾಕಿ ವಿಶ್ವಕಪ್ ಟೂರ್ನಿಯ ಮೊದಲ ಪಂದ್ಯದಲ್ಲಿಯೇ ನಿರಾಶೆ ಅನುಭವಿಸಿತು.

ಬಿ ಗುಂಪಿನ ಪಂದ್ಯದಲ್ಲಿ ಹಾಲಿ ಚಾಂಪಿಯನ್ ಭಾರತ ತಂಡವು ಉಪನಾಯಕ ಸಂಜಯ್ ಹ್ಯಾಟ್ರಿಕ್ ಗೋಲು ಗಳಿಕೆಯ ಹೊರತಾಗಿಯೂ 4–5ರಿಂದ ಫ್ರಾನ್ಸ್ ಎದುರು ಸೋತಿತು.

ಫ್ರಾನ್ಸ್ ತಂಡದ ನಾಯಕ ತಿಮೊತಿ ಕ್ಲೆಮೆಂಟ್ (1ನಿ,23ನೇ ನಿ ಮತ್ತು 32ನೇ ನಿ) ಹ್ಯಾಟ್ರಿಕ್ ಸಾಧಿಸಿದರು. ಬೆಂಜಮಿನ್ ಮರ್ಕ್ಯೂ (7ನೇ ನಿ) ಮತ್ತು ಕೊರೆಂಟಿನ್ ಸೆಲ್ಲೀರ್ (48ನೇ ನಿ) ಗೋಲು ಗಳಿಸಿ ತಂಡದ ಗೆಲುವಿಗೆ ಮಹತ್ವದ ಕಾಣಿಕೆ ನೀಡಿದರು.

ಸಂಜಯ್ (15ನೇನಿ, 57ನಿ, 58ನಿ) ಮೂರು ಪೆನಾಲ್ಟಿ ಕಾರ್ನರ್‌ಗಳನ್ನು ಗೋಲಿನಲ್ಲಿ ಪರಿವರ್ತಿಸಿದರು. ಉತ್ತಮ್ ಸಿಂಗ್ ಹತ್ತನೇ ನಿಮಿಷದಲ್ಲಿ ಗೋಲು ಹೊಡೆದರು.

ಪಂದ್ಯದ ಮೊದಲ ನಿಮಿಷದಲ್ಲಿಯೇ ಫ್ರಾನ್ಸ್ ತಂಡದ ನಾಯಕ ಗೋಲು ಗಳಿಸುವ ಮೂಲಕ ಆತಿಥೇಯರಿಗೆ ಆಘಾತ ಮೂಡಿಸಿದರು. ವಿಶ್ವ ರ‍್ಯಾಂಕಿಂಗ್‌ನಲ್ಲಿ 26ನೇ ಸ್ಥಾನದಲ್ಲಿರುವ ಫ್ರಾನ್ಸ್ ತನಗಿಂತಲೂ ಬಲಿಷ್ಠವಾದ ಭಾರತಕ್ಕೆ ಕಠಿಣ ಸವಾಲೊಡ್ಡಿತು.

ಮೊದಲ ದಿನ ನಡೆದ ಇನ್ನುಳಿದ ಪಂದ್ಯಗಳಲ್ಲಿ ಬೆಲ್ಜಿಯಂ 5–1ರಿಂದ ದಕ್ಷಿಣ ಆಫ್ರಿಕಾ ಎದುರು ಗೆಲುವು ಸಾಧಿಸಿತು.

ಜರ್ಮನಿ ತಂಡ 5–2ರಲ್ಲಿ ಪಾಕಿಸ್ತಾನವನ್ನು ಮಣಿಸಿತು. ಪೋಲೆಂಡ್ 1–0ಯಿಂದ ಕೆನಡಾ ಎದುರು, ಮಲೇಷ್ಯಾ 2–1ರಿಂದ ಚಿಲಿ ವಿರುದ್ಧವೂ ಜಯಗಳಿಸಿದವು. ಕಳಿಂಗ ಕ್ರೀಡಾಂಗಣದಲ್ಲಿ ಟೂರ್ನಿ ಯನ್ನು ಉದ್ಘಾಟಿಸಲಾಯಿತು ಕಾರ್ಯಕ್ರಮದಲ್ಲಿ ಒಡಿಶಾ ಮುಖ್ಯಮಂತ್ರಿ ನವೀನ್ ಪಟ್ನಾಯಕ್, ಎಫ್‌ಐಎಚ್ ಮುಖ್ಯಸ್ಥ ನರೀಂದರ್ ಬಾತ್ರಾ ಇದ್ದರು.

ಗೋಲು ಗಳಿಸಿದ ಭಾರತ ತಂಡದ ಆಟಗಾರರ ಸಂಭ್ರಮ –ಪಿಟಿಐ ಚಿತ್ರ

ಇಂದಿನ ಪಂದ್ಯಗಳು

ಅರ್ಜೆಂಟೀನಾ–ಈಜಿಪ್ಟ್	ಬೆ 9.30
ನೆದರ್ಲೆಂಡ್ಸ್–ದಕ್ಷಿಣ ಕೊರಿಯಾ	ಮ 12.00
ಸ್ಪೇನ್–ಅಮೆರಿಕ	ಮ 2.30
ಫ್ರಾನ್ಸ್–ಪೋಲೆಂಡ್	ಸಂಜೆ 5.00
ಭಾರತ–ಕೆನಡಾ	ರಾ 7.30

ಎಮಿರೇಟ್ಸ್‌ನಲ್ಲಿ ರಿಲಯನ್ಸ್ ಕ್ರಿಕೆಟ್ ತಂಡ ಖರೀದಿ

ಮುಂಬೈ (ಪಿಟಿಐ):ಯುನೈಟೆಡ್ ಅರಬ್ ಎಮಿರೇಟ್ಸ್‌ನಲ್ಲಿ ನಡೆಯಲಿರುವ 'ಯುಎಇ ಟಿ20 ಲೀಗ್' ಟೂರ್ನಿಯಲ್ಲಿ ತಂಡವೊಂದನ್ನು ಖರೀದಿಸಲು ಭಾರತದ ರಿಲಯನ್ಸ್ ಇಂಡಸ್ಟ್ರೀಸ್ ಲಿಮಿಟೆಡ್ ಉದ್ದೇಶಿಸಿದೆ.

'ರಿಲಯನ್ಸ್ ಸಂಸ್ಥೆಯು ಹೊರದೇಶದ ಕ್ರೀಡಾಕ್ಷೇತ್ರದಲ್ಲಿ ತನ್ನ ವ್ಯಾಪ್ತಿಯನ್ನು ವಿಸ್ತರಿಸುವ ಮೊದಲ ಹೆಜ್ಜೆ ಇದಾಗಿದೆ' ಎಂದು ಪ್ರಕಟಣೆಯಲ್ಲಿ ತಿಳಿಸಲಾಗಿದೆ.

'ಜಾಗತಿಕ ಮಟ್ಟದಲ್ಲಿ ತಮ್ಮ ಅಭಿಮಾನಿ ಬಳಗ ವೃದ್ಧಿಸಲು ಇದು ಸಹಕಾರಿಯಾಗಲಿದೆ. ಹೊಸ ಲೀಗ್ ಮೂಲಕ ದೀರ್ಘ ಕಾಲದವರೆಗೆ ಮುಂದುವರಿಯುವ ಉದ್ದೇಶವಿದೆ' ಎಂದು ಮುಂಬೈ ಇಂಡಿಯನ್ಸ್ ತಂಡದ ಸಹ ಮಾಲೀಕರಾದ ನೀತಾ ಅಂಬಾನಿ ಹೇಳಿದ್ದಾರೆ.

ಮುಖೇಶ್ ಮತ್ತು ನೀತಾ ಅಂಬಾನಿ

ಕ್ರಿಕೆಟ್: ಜಯದ ಸನಿಹ ಲಂಕಾ

ಗಾಲ್ (ಎಎಫ್‌ಪಿ): ಆತಿಥೇಯ ಶ್ರೀಲಂಕಾ ತಂಡವು ವೆಸ್ಟ್ ಇಂಡೀಸ್ ಎದುರಿನ ಟೆಸ್ಟ್ ಪಂದ್ಯದಲ್ಲಿ ಗೆಲುವಿನ ಸನಿಹ ಇದೆ. ಇನ್ನೂ ನಾಲ್ಕು ವಿಕೆಟ್ ಗಳಿಸಿದರೆ ಜಯ ಖಚಿತವಾಗಲಿದೆ.

ಬುಧವಾರ ನಾಲ್ಕನೇ ದಿನದಾಟದಲ್ಲಿ ಶ್ರೀಲಂಕಾ ತಂಡವು ವೆಸ್ಟ್ ಇಂಡೀಸ್‌ಗೆ ಗೆಲುವಿಗಾಗಿ 348 ರನ್‌ಗಳ ಗುರಿ ನೀಡಿತು. ವಿಂಡೀಸ್ ತಂಡವು ಎರಡನೇ ಇನಿಂಗ್ಸ್‌ನಲ್ಲಿ 25.3 ಓವರ್‌ಗಳಲ್ಲಿ 6 ವಿಕೆಟ್‌ಗಳಿಗೆ 52 ರನ್ ಗಳಿಸಿತು. ರಮೇಶ್ ಮೆಂಡಿಸ್ (17ಕ್ಕೆ4) ವಿಂಡೀಸ್‌ನ ಪ್ರಮುಖ ವಿಕೆಟ್‌ಗಳನ್ನು ಗಳಿಸಿದರು.

ಸಂಕ್ಷಿಪ್ತ ಸ್ಕೋರು: ಮೊದಲ ಇನಿಂಗ್ಸ್: ಶ್ರೀಲಂಕಾ 386 ಮತ್ತು **ವೆಸ್ಟ್ ಇಂಡೀಸ್:** 230. **ಎರಡನೇ ಇನಿಂಗ್ಸ್: ಶ್ರೀಲಂಕಾ:** 40.5 ಓವರ್‌ಗಳಲ್ಲಿ 4ಕ್ಕೆ191 ಡಿಕ್ಲೇರ್ಡ್ (ಕರುಣಾರತ್ನೆ 83, ಏಂಜೆಲೊ ಮ್ಯಾಥ್ಯೂಸ್ ಔಟಾಗದೆ 69, ರಹಕೀಮ್ ಕಾರ್ನವಾಲ್ 60ಕ್ಕೆ2, ಜಾಮೆಲ್ **ವಾರಿಕನ್ 42ಕ್ಕೆ2),** ವೆಸ್ಟ್ ಇಂಡೀಸ್: 25.3 ಓವರ್‌ಗಳಲ್ಲಿ 6ಕ್ಕೆ52 (ಎನ್‌ಕುರ್ಮಾ ಬೊನೆರ್ ಬ್ಯಾಟಿಂಗ್ 18, ಜೊಶುವಾ ಡಿಸಿಲ್ವಾ ಬ್ಯಾಟಿಂಗ್ 15, ಲಸಿತ್ ಎಂಬುಲ್ಡೆನಿಯಾ 18ಕ್ಕೆ2, ರಮೇಶ್ ಮೆಂಡಿಸ್ 17ಕ್ಕೆ4).

ಎರಡನೇ ಸುತ್ತಿಗೆ ಸತ್ಯನ್, ಐಹಿಕಾ

ವಿಶ್ವ ಟಿಟಿ ಚಾಂಪಿಯನ್‌ಷಿಪ್: ಮಣಿಕಾ, ಶರತ್‌ಗೆ ನಿರಾಶೆ

ಹ್ಯೂಸ್ಟನ್, ಅಮೆರಿಕ (ಪಿಟಿಐ): ಭಾರತದ ಸತ್ಯನ್ ಜ್ಞಾನಶೇಖರನ್ ಮತ್ತು ಐಹಿಕಾ ಮುಖರ್ಜಿ ಇಲ್ಲಿ ನಡೆಯುತ್ತಿರುವ ವಿಶ್ವ ಟೇಬಲ್ ಟೆನಿಸ್ ಚಾಂಪಿಯನ್‌ಷಿಪ್ ಫೈನಲ್ಸ್‌ನಲ್ಲಿ ಕ್ರಮವಾಗಿ ಪುರುಷರ ಮತ್ತು ಮಹಿಳೆಯರ ಮೊದಲ ಸುತ್ತಿನಲ್ಲಿ ಗೆದ್ದರು.

ಆದರೆ, ಒಲಿಂಪಿಯನ್ ಮಣಿಕಾ ಬಾತ್ರಾ ಮತ್ತು ಅಗ್ರಶ್ರೇಯಾಂಕಿತ ಆಟಗಾರ ಶರತ್ ಕಮಲ್ ಅವರು ಕ್ರಮವಾಗಿ ಮಹಿಳೆಯರ ಮತ್ತು ಪುರುಷರ ಸಿಂಗಲ್ಸ್ ವಿಭಾಗದಲ್ಲಿ ಸೋತು ಹೊರಬಿದ್ದರು.

ಪುರುಷರ ಸಿಂಗಲ್ಸ್ ಪಂದ್ಯದಲ್ಲಿ ಸತ್ಯನ್ 11-2, 11-9, 11-4, 11-3ರಿಂದ ಉಕ್ರೇನ್‌ನ ಯರೊಸ್ಲೇವ್ ಝುಮುದೆನಕೊ ವಿರುದ್ಧ ಗೆದ್ದು ಎರಡನೇ ಸುತ್ತಿಗೆ ಪ್ರವೇಶಿಸಿದರು.

ಇನ್ನೊಂದು ಪಂದ್ಯದಲ್ಲಿ ಶರತ್ ಕಮಲ್ 11-9, 5-11, 6-11, 7-11, 9-11ರಿಂದ ಬೆಲ್ಜಿಯಂನ ಸೆಡ್ರಿಕ್ ನ್ಯೂಟಿಂಕ್ ವಿರುದ್ಧ ಸೋತರು.

ಸಿಂಗಲ್ಸ್‌ನಲ್ಲಿ ಭಾರತದ ಅಂತೋಣಿ ಅಮಲರಾಜ್ ಮತ್ತು ಹರ್ಮಿತ್ ದೇಸಾಯಿ ಕೂಡ ನಿರಾಶೆ ಅನುಭವಿಸಿದರು. ಮಹಿಳೆಯರ ಸಿಂಗಲ್ಸ್‌ನಲ್ಲಿ ಐಹಿಕಾ ಮುಖರ್ಜಿ 11-7, 14-16, 8-11, 11-6, 11-9, 11-6 ರಿಂದ ಈಜಿಪ್ಟ್‌ನ ಫರಾ ಅಬ್ದೆಲ್ ಅಜೀಜ್ ವಿರುದ್ಧ ಗೆಲುವು ಸಾಧಿಸಿದರು. ಎರಡನೇ ಸುತ್ತಿನಲ್ಲಿ ಅವರು ಜಪಾನಿನ ಹಿನಾ ಹಯಾತಾ ವಿರುದ್ಧ ಆಡಲಿದ್ದಾರೆ.

ಇದೇ ಸುತ್ತಿನಲ್ಲಿ ನಡೆದ ಇನ್ನೊಂದು ರೋಚಕ ಹೋರಾಟದಲ್ಲಿ ಭರವಸೆಯ ಆಟಗಾರ್ತಿ ಮಣಿಕಾ 11-5, 15-13, 8-11, 4-11, 6-11, 11-4, 7-11ರಿಂದ ಬ್ರೆಜಿಲ್‌ನ ಬ್ರುನಾ ತಕಾಶಿ ವಿರುದ್ಧ ಸೋತರು. ಮಣಿಕಾ ಮತ್ತು ಸತ್ಯನ್ ಅವರು ಮಿಶ್ರ ಡಬಲ್ಸ್‌ನಲ್ಲಿ ಆಡುತ್ತಿದ್ದಾರೆ. ಅವರಿಗೆ 64ರ ಘಟ್ಟದ ಪಂದ್ಯದಲ್ಲಿ ಬೈ ದೊರೆತಿದೆ.

ಮಹಿಳೆಯರ ಡಬಲ್ಸ್‌ನಲ್ಲಿ ಕನ್ನಡತಿ ಅರ್ಚನಾ ಕಾಮತ್ ಜೋಡಿಯೂ ಬೈ ಪಡೆದು ಮುಂದಿನ ಹಂತಕ್ಕೆ ಸಾಗಿದೆ. ಪುರುಷರ ಡಬಲ್ಸ್‌ನಲ್ಲಿ ಶರತ್ ಕಮಲ್ ಮತ್ತು ಸತ್ಯನ್ ಜೋಡಿಗೆ ಮೊದಲ ಸುತ್ತಿನಲ್ಲಿ ಬೈ ಲಭಿಸಿದೆ.

ಜಿ. ಸತ್ಯನ್

ಸಿಂಧು ಮುನ್ನಡೆ

ಬಾಲಿ (ಪಿಟಿಐ): ಪಿ.ವಿ. ಸಿಂಧು, ಕೆ. ಶ್ರೀಕಾಂತ್ ಮತ್ತು ಬಿ. ಸಾಯಿಪ್ರಣೀತ್ ಇಂಡೊನೇಷ್ಯಾ ಓಪನ್ ಸೂಪರ್ 1000 ಬ್ಯಾಡ್ಮಿಂಟನ್ ಚಾಂಪಿಯನ್‌ಷಿಪ್ ಎರಡನೇ ಸುತ್ತಿಗೆ ಪ್ರವೇಶಿಸಿದರು.

ಬುಧವಾರ ನಡೆದ ಮಹಿಳೆಯರ ಸಿಂಗಲ್ಸ್‌ನ ಮೊದಲ ಸುತ್ತಿನಲ್ಲಿ ಸಿಂಧು 17-21, 21-17, 21-17 ರಿಂದ ಜಪಾನಿನ ಯಾಯಾ ಒಹೊರಿ ವಿರುದ್ಧ ಗೆದ್ದರು.

ಪುರುಷರ ಸಿಂಗಲ್ಸ್‌ನಲ್ಲಿ ಬಿ. ಸಾಯಿ ಪ್ರಣೀತ್ 21–19, 21–18ರಿಂದ ಫ್ರಾನ್ಸ್‌ನ ತೊಮಾ ಜೂನಿಯರ್ ಪೊಪೊವ್ ಗೆದ್ದರು. ಇನ್ನೊಂದು ಪಂದ್ಯದಲ್ಲಿ ಕಿದಂಬಿ ಶ್ರೀಕಾಂತ್ 21–15, 19–21, 21–12ರಿಂದ ಪ್ರಣಯ್ ವಿರುದ್ಧ ಜಯಿಸಿದರು. 56 ನಿಮಿಷಗಳ ಪಂದ್ಯವು ರೋಚಕವಾಗಿತ್ತು.

ಮಿಶ್ರ ಡಬಲ್ಸ್‌ನಲ್ಲಿ ಭಾರತದ ಎನ್. ಸಿಕ್ಕಿರೆಡ್ಡಿ ಮತ್ತು ಧ್ರುವ ಕಪಿಲ ಮೊದಲ ಸುತ್ತಿನಲ್ಲಿ 7–21, 12–21ರಿಂದ ಜಪಾನ್‌ನ ಕಿಯೊಹಿ ಯಮಾಶಿತಾ ಮತ್ತು ನಾರು ಶಿನೊಯಾ ವಿರುದ್ಧ ಸೋತರು.

ಮಹಿಳೆಯರ ಡಬಲ್ಸ್‌ನಲ್ಲಿ ಸಿಕ್ಕಿರೆಡ್ಡಿ ಮತ್ತು ಅಶ್ವಿನಿ ಪೊನ್ನಪ್ಪ 27–29, 18–21 ರಿಂದ ಬಲ್ಗೇರಿಯಾದ ಜೋಡಿ ಗ್ಯಾಬ್ರಿಲಾ ಸ್ಟೊವಾ ಮತ್ತು ಸ್ಟಿಫಾನಿ ಸ್ಟೊವಾ ವಿರುದ್ಧ ವಿರೋಚಿತ ಸೋಲನುಭವಿಸಿದರು.

ಬೆಂಗಳೂರಿನಲ್ಲಿ ಐಟಿಎಫ್ ಮಹಿಳಾ ಟೆನಿಸ್ ಟೂರ್

ಬೆಂಗಳೂರು: ಅಂತರರಾಷ್ಟ್ರೀಯ ಟೆನಿಸ್ ಟೂರ್ನಿಗೆ ಉದ್ಯಾನ ನಗರಿ ಸಜ್ಜಾಗಿದೆ. ಇದೇ 28ರಿಂದ ಡಿಸೆಂಬರ್ ಐದರ ವರೆಗೆ ನಡೆಯಲಿರುವ ಐಟಿಎಫ್ ವಿಶ್ವ ಮಹಿಳಾ ಟೂರ್‌ಗೆ ಬೆಂಗಳೂರು ಆತಿಥ್ಯ ವಹಿಸಲಿದೆ.

ಅಂತರರಾಷ್ಟ್ರೀಯ ಟೆನಿಸ್ ಫೆಡರೇಷನ್‌ನ ಕ್ಯಾಲೆಂಡರ್ ಅಂಗವಾಗಿ ರಾಜ್ಯ ಟೆನಿಸ್ ಸಂಸ್ಥೆಯ (ಕೆಎಸ್‌ಎಲ್‌ಟಿಎ) ಆಶ್ರಯದಲ್ಲಿ ಟೂರ್ ನಡೆಯಲಿದ್ದು ಬೆಸ್ಕಾಂ, ಜುವಾರಿ ಗಾರ್ಡನ್ ಸಿಟಿ, ಹಟ್ಟಿ ಚಿನ್ನದ ಗಣಿ ಮತ್ತು ನವೀಕರಿಸಬಲ್ಲ ಇಂಧನ ನಿಗಮ ಪ್ರಾಯೋಜಕತ್ವ ವಹಿಸಿದೆ.

ಅರ್ಹತಾ ಸುತ್ತಿನ ಪಂದ್ಯಗಳು 28 ಮತ್ತು 29ರಂದು ನಡೆಯಲಿದ್ದು ಮುಖ್ಯ ಸುತ್ತಿನ ಹಣಾಹಣಿ 30ರಿಂದ ನಡೆಯಲಿದೆ. 24 ಮಂದಿಯ ಕಣದಲ್ಲಿ ನಾಲ್ವರು ವೈಲ್ಡ್ ಕಾರ್ಡ್ ಮೂಲಕ ಪ್ರವೇಶ ಪಡೆದಿದ್ದು ಎಂಟು ಮಂದಿ ಅರ್ಹತಾ ಸುತ್ತಿನ ಮೂಲಕ ಬರಲಿದ್ದಾರೆ.

ಯುವರಾಣಿ ಬ್ಯಾನರ್ಜಿ ಮತ್ತು ಜಗಮೀತ್ ಕೌರ್ ಅವರ ವೈಲ್ಡ್ ಕಾರ್ಡ್ ಪ್ರವೇಶವನ್ನು ಈಗಾಗಲೇ ಘೋಷಿಸಲಾಗಿದೆ. ಉಳಿದ ಇಬ್ಬರ ಹೆಸರನ್ನು ಎಐಟಿಎಗುರುವಾರ ಪ್ರಕಟಿಸಲಿದೆ.

ಭಾರತದ ಪ್ರಮುಖ ಆಟಗಾರ್ತಿಯರಾದ ಋತುಜಾ ಭೋಸ್ಲೆ, ಸೌಜನ್ಯಾ ಬಾವಿಶೆಟ್ಟಿ, ಜೀಲ್ ದೇಸಾಯಿ ಮತ್ತು ವೈದೇಹಿ ಚೌಧರಿ ಕಣದಲ್ಲಿದ್ದು ದಕ್ಷಿಣ ಕೊರಿಯಾದ ಸೊ ರಾ ಲೀ ಮತ್ತು ಡೆನ್ಮಾರ್ಕ್‌ನ ಎಲಿನಾ ಜಮ್ಮಿದಿ ಅವರು ಕೂಡ ಸವಾಲಿಗೆ ಸಜ್ಜಾಗಿದ್ದಾರೆ.

'ಕೋವಿಡ್‌ನಿಂದಾಗಿ ಕ್ರೀಡಾ ಚಟುವಟಿಕೆಗೆ ಪೆಟ್ಟು ಬಿದ್ದಿತ್ತು. ಈಗ ಅಂತರರಾಷ್ಟ್ರೀಯ ಟೂರ್ನಿಗೆ ಆತಿಥ್ಯ ನೀಡುವ ಅವಕಾಶ ಲಭಿಸಿರುವುದು ಖುಷಿ ತಂದಿದೆ. ಭಾರತದ ಅದರಲ್ಲೂ ವಿಶೇಷವಾಗಿ ಕರ್ನಾಟಕದ ಟೆನಿಸ್ ಪಟುಗಳಿಗೆ ಸ್ಥಳೀಯ ವಾತಾವರಣದಲ್ಲಿ ಆಡಲು ಈ ಟೂರ್ನಿ ಅನುಕೂಲವಾಗಲಿದೆ. ಇದರಿಂದ ನಮ್ಮಲ್ಲಿ ಟೆನಿಸ್ ಬೆಳವಣಿಗೆಗೆ ಉಪಯೋಗವಾಗಲಿದೆ' ಎಂದು ಕೆಎಸ್‌ಎಲ್‌ಟಿಎ ಗೌರವ ಕಾರ್ಯದರ್ಶಿ ಮಹೇಶ್ವರ ರಾವ್ ಅವರು ಅಭಿಪ್ರಾಯಪಟ್ಟರು.

ಯಾಜಿನಿಗೆ ಜಯ

ಬೆಂಗಳೂರು: ನಾಲ್ಕನೇ ಶ್ರೇಯಾಂಕದ ಸಿರಿ ಪಾಟೀಲ್‌ಗೆ ಆಘಾತ ನೀಡಿದ ತಮಿಳುನಾಡಿನ ಯಾಜಿನಿ ಆರ್ ಅವರು ಸ್ಪೋರ್ಟಲ್ ಟಾಪ್‌ಸ್ಪಿನ್ ಎಐಟಿಎ ಎಸ್‌ಎಸ್7 ಸರಣಿಯ 18 ವರ್ಷದೊಳಗಿನವರ ಟೆನಿಸ್ ಟೂರ್ನಿಯ ಸೆಮಿಫೈನಲ್ ಪ್ರವೇಶಿಸಿದರು.

ಎಂಟರ ಘಟ್ಟದಲ್ಲಿ ಯಾಜಿಸಿ 6-2, 6-2ರಲ್ಲಿ ಜಯ ಸಾಧಿಸಿದರು.

ಬಾಲಕ ಮತ್ತು ಬಾಲಕಿಯರ ಇತರ ಕ್ವಾರ್ಟರ್ ಫೈನಲ್ ಪಂದ್ಯಗಳಲ್ಲಿ ಪ್ರಮುಖರು ನಿರಾಯಾಸವಾಗಿ ಗೆದ್ದು ನಾಲ್ಕರ ಘಟ್ಟ ಪ್ರವೇಶಿಸಿದರು. ಅಗ್ರ ಶ್ರೇಯಾಂಕದ ಚಾರ್ಮಿ ಗೋಪಿನಾಥ್ ಅವರಿಗೆ ಮಂಗಳವಾರ ಸೋಲುಣಿಸಿದ್ದ ಹೃದಯೇಶಿ ಪಿ ಅವರು ಬುಧವಾರ ಎಂಟನೇ ಶ್ರೇಯಾಂಕದ ನಿಧಿ ಬುವಿಲಾ ಎದುರು 6-3, 6-4ರಲ್ಲಿ ಗೆದ್ದರು.

ಶ್ರೀನಿಧಿ ಬಾಲಾಜಿ 6-3, 6-3ರಲ್ಲಿ ಪ್ರೇಶಾ ಎಸ್ ವಿರುದ್ಧ ಗೆದ್ದರು. ಗಗನಾ ಮೋಹನ್ 6-1, 6-0ಯಿಂದ ಕಾರ್ತಿಕಾ ಅವರನ್ನು ಮಣಿಸಿದರು. ಬಾಲಕರ ವಿಭಾಗದಲ್ಲಿ ಒಂದನೇ ಶ್ರೇಯಾಂಕದ ಅದಿತ್ ಅಮರನಾಥ್ 6-2, 6-2ರಲ್ಲಿ ವೇದ್ ಸುಬೋಧ್ ವಿರುದ್ಧ ಜಯ ಗಳಿಸಿದರು. ಮನದೀಪ್ ರೆಡ್ಡಿ 6-3, 7-6 (3)ರಲ್ಲಿ ಕಂದವೇಲ್ ವಿರುದ್ಧ, ಸುಚಿರ್ ಚೇತನ್ 6-3, 7-6 (5)ರಲ್ಲಿ ಸುಶಾಂಕ್ ವಿರುದ್ಧ, ಆಕರ್ಷ್ ಜಿ 7-5, 6-4ರಲ್ಲಿ ಪ್ರಿಯಾಂಶ್ ಎದುರು ಗೆದ್ದರು.

ಮರಡೋನಾ ವರ್ಷದ ನೆನಪು

ಬ್ಯೂನೋಸ್ ಐರಿಸ್: ಫುಟ್‌ಬಾಲ್ ದಿಗ್ಗಜ ಡಿಯೆಗೊ ಮರಡೋನಾ ಮರೆಯಾಗಿ ವರ್ಷ ಕಳೆದರೂ ಅಭಿಮಾನಿಗಳಲ್ಲಿ ಅವರ ನೆನಪು ಹಸಿರಾಗಿಯೇ ಉಳಿದಿದೆ. ಫುಟ್‌ಬಾಲ್‌ನ 'ದೇವರು' ಎಂದೇ ಹೆಸರುವಾಸಿಯಾಗಿದ್ದ ಮರಡೋನಾ ಹೃದಯ ಸ್ತಂಭನದಿಂದ ಸಾವಿಗೀಡಾಗಿ ಗುರುವಾರಕ್ಕೆ ಒಂದು ವರ್ಷ ಆಗಲಿದ್ದು ಅವರ ನೆನಪಿನಲ್ಲಿ ಸಾವಿರಾರು ಮಂದಿ ಜೊತೆಗೂಡಲು ನಿರ್ಧರಿಸಿದ್ದಾರೆ. ಅವರ ಸಾವಿನ ಹಿನ್ನೆಲೆಯ ಬಗ್ಗೆ ಚರ್ಚೆ ನಡೆಯುತ್ತಿದ್ದು ಹಿಂದಿನ ಸಂಬಂಧಗಳ ಬಗ್ಗೆಯೂ ಮಾತುಗಳು ಕೇಳಿಬರುತ್ತಿವೆ.

ಬೆಂಗಳೂರು ರೇಸ್

ಲಗಾರ್ಡ್ ಗೆಲ್ಲುವ ನಿರೀಕ್ಷೆ

ಅಶೋಕ ಚಕ್ರ ಕಪ್ ಗುರುವಾರದ ಬೆಂಗಳೂರು ರೇಸ್‌ಗಳ ಪ್ರಧಾನ ಆಕರ್ಷಣೆಯಾಗಿದ್ದು ಲಗಾರ್ಡ್ ಈ ರೇಸ್‌ನಲ್ಲಿ ಗೆಲ್ಲುವ ನಿರೀಕ್ಷೆ ಇದೆ. ಮಧ್ಯಾಹ್ನ 1.30ಕ್ಕೆ ಪ್ರಾರಂಭವಾಗಲಿರುವ ದಿನದ ಎಂಟು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿದೆ:

1ನೇ ರೇಸ್: ರೈಟ್ಲಿ ನೋಬಲ್ 2, ಹೀಈಸ್ ದಿ ಒನ್ 7, ಫಿಯರ್ಸ್ ಫೈಟರ್ 11
2ನೇ ರೇಸ್: ಸ್ಪೆಕ್ಟಾಕ್ಯುಲರ್ 9, ಫನ್ ಅಂಡ್ ಲಾಫ್ಟರ್ 2, ಮಿಸ್ಟಿಕ್ ಮೌಂಟೇನ್ 7
3ನೇ ರೇಸ್: ಸರ್ ಜೆರ್ಸಿ 2, ಸಿಲ್ವೆರಿಟಾ 6, ಒಜಾರ್ಕ್ 4
4ನೇ ರೇಸ್: ಮಟೇರಾ 4, ಸನ್‌ಶೈನ್ ಪ್ರಿನ್ಸ್ 5, ಟ್ಯಾಕ್ಟಿಕಲ್ ಕಮಾಂಡ್ 6
5ನೇ ರೇಸ್: ಲೇಕ್ ತಾಹೋ 2, ಸ್ಪೀಡ್‌ಸ್ಟರ್ 7, ಗ್ರೀನ್ ಚಾನೆಲ್ 1
6ನೇ ರೇಸ್: ಲಗಾರ್ಡ್ 1, ಸಲಜಾರ್ 2, ಸಾವರಿನ್ ಲೆಜೆಂಡ್ 5
7ನೇ ರೇಸ್: ಕಟಾನ 1, ಅಮೇಜಿಂಗ್ ಬ್ಲೇಜ್ 5, ಅಲ್ಮಾನಾಕ್ 6
8ನೇ ರೇಸ್: ಲೈಟ್ನಿಂಗ್ ಚಾರ್ಲಿ 9, ನಾಸ್ಟ್ರಡಮಾಸ್ 1, ಜೆರ್ಸಿ ಲೆಜೆಂಡ್ 4

ಉತ್ತಮ ಬೆಟ್: ಲೇಕ್ ತಾಹೋ

ಜಾಕ್‌ಪಾಟ್	1ನೇ ಟ್ರಿಬಲ್	2ನೇ ಟ್ರಿಬಲ್
4,5,6,7,8	3,4,5	6,7,8

ಐಎಸ್‌ಎಲ್: ಎರಡು ಗೋಲು ಗಳಿಸಿದ ಜೇವಿಯರ್ ಹೆರ್ನಾಂಡಜ್; ಚೆಟ್ರಿ ಬಳಗಕ್ಕೆ ಸೋಲು

ಒಡಿಶಾಗೆ ಮಣಿದ ಬೆಂಗಳೂರು ಎಫ್‌ಸಿ

ವಾಸ್ಕೊ (ಪಿಟಿಐ): ಮೊದಲ ಪಂದ್ಯದಲ್ಲಿ ಅಮೋಘ ಆಟವಾಡಿದ ಬೆಂಗಳೂರು ಫುಟ್‌ಬಾಲ್ ಕ್ಲಬ್ (ಬಿಎಫ್‌ಸಿ) ಇಂಡಿಯನ್ ಸೂಪರ್ ಲೀಗ್ (ಐಎಸ್‌ಎಲ್) ಫುಟ್‌ಬಾಲ್ ಟೂರ್ನಿಯ ಎರಡನೇ ಪಂದ್ಯದಲ್ಲಿ ಮುಗ್ಗರಿಸಿತು.

ತಿಲಕ್ ಮೈದಾನ್ ಕ್ರೀಡಾಂಗಣದಲ್ಲಿ ಬುಧವಾರ ರಾತ್ರಿ ನಡೆದ ಪಂದ್ಯದಲ್ಲಿ ಸುನಿಲ್ ಚೆಟ್ರಿ ಬಳಗ ಒಡಿಶಾ ಎಫ್‌ಸಿಗೆ 3–1ರಲ್ಲಿ ಮಣಿಯಿತು. 3 ಮತ್ತು 51ನೇ ನಿಮಿಷಗಳಲ್ಲಿ ಜೇವಿಯರ್ ಹೆರ್ನಾಂಡಜ್, 90ನೇ ನಿಮಿಷದಲ್ಲಿ ಅರಿದಾಯಿ ಸೌರೇಜ್ ತಂದುಕೊಟ್ಟ ಗೋಲುಗಳು ಒಡಿಶಾದ ಕೈ ಹಿಡಿದವು.

ಭರವಸೆಯಿಂದ ಕಣಕ್ಕೆ ಇಳಿದ ಬೆಂಗಳೂರು ಎಫ್‌ಸಿ ಎರಡನೇ ನಿಮಿಷದಲ್ಲೇ ಒಡಿಶಾಗೆ ಕಾರ್ನರ್ ಕಿಕ್ ಅವಕಾಶ ನೀಡಿತ್ತು.

ಆದರೆ ಗೋಲು ಗಳಿಸಲು ಅವಕಾಶ ನೀಡಲಿಲ್ಲ. ಆಕ್ರಮಣಕಾರಿ ಆಟದೊಂದಿಗೆ ಕಣಕ್ಕೆ ಇಳಿದ ಒಡಿಶಾ ಎದುರು ಮೂರನೇ ನಿಮಿಷದಲ್ಲಿ ಬಿಎಫ್‌ಸಿಯ ರಕ್ಷಣಾ ವಿಭಾಗ ಮತ್ತು ಗೋಲ್ ಕೀಪರ್ ವೈಫಲ್ಯ ಕಂಡರು. ದೂರದಿಂದ ತೇಲಿ ಬಂದ ಚೆಂಡನ್ನು ಮುಂದೆ ನುಗ್ಗಿ ತಡೆದ ಗೋಲ್‌ಕೀಪರ್ ಗುರುಪ್ರೀತ್ ಸಿಂಗ್ ಸಂಧು ವಾಪಸ್ ಕಳುಹಿಸುವಷ್ಟರಲ್ಲಿ ಚೆಂಡು ಜೇವಿಯರ್ ಹೆರ್ನಾಂಡಜ್ ಬಳಿಗೆ ಸಾಗಿತು. ಅವರು ಮೋಹಕವಾಗಿ ಅದನ್ನು ಗುರಿಯತ್ತ ತಳ್ಳಿದರು.

21ನೇ ನಿಮಿಷದಲ್ಲಿ ಬಿಎಫ್‌ಸಿ ತಿರುಗೇಟು ನೀಡಿತು. ಅಲೆನ್ ಕೋಸ್ಟಾ ಅವರು ಹೆಡರ್ ಮೂಲಕ ಗೋಲು ಗಳಿಸಿ ಸಂಭ್ರಮಿಸಿದರು. ರೋಷನ್ ನೌರೆಮ್ ಎಡಗಾಲಿನಿಂದ ಒದ್ದು ಕಾರ್ನರ್‌ನಿಂದ ನೀಡಿದ ಚೆಂಡಿಗೆ ಅಲೆನ್ ನಿಖರವಾಗಿ ತಲೆಯೊಡ್ಡಿದ್ದರು.

ವಿರಾಮದ ನಂತರ ಒಡಿಶಾ ಮತ್ತಷ್ಟು ಆಕ್ರಮಣಕಾರಿ ಆಟವಾಡಿತು. 51ನೇ ನಿಮಿಷದಲ್ಲಿ ಜೇವಿಯರ್ ಹೆರ್ನಾಂಡಜ್ ಮತ್ತೊಮ್ಮೆ ಮಿಂಚಿದರು. ಫ್ರೀ ಕಿಕ್ ಅವಕಾಶದಲ್ಲಿ ಚೆಂಡನ್ನು ಮಿಂಚಿನ ವೇಗದಲ್ಲಿ ಗುರಿಯತ್ತ ಒದ್ದರು. ಗುರುಪ್ರೀತ್ ಸಿಂಗ್ ಸಂಧು ಅವರಿಗೆ ಅದನ್ನು ತಡೆಯಲು ಸಾಧ್ಯವಾಗಲೇ ಇಲ್ಲ. ಪಂದ್ಯ ಮುಕ್ತಾಯದ ಹಂತದಲ್ಲಿದ್ದಾಗ ಲಾಲ್‌ರೆನ್ಸುವಾಲ ನೀಡಿದ ಪಾಸ್‌ನಲ್ಲಿ ಅರಿದಾಯಿ ಚೆಂಡನ್ನು ಗುರಿಮುಟ್ಟಿಸಿ ತಂಡದ ಗೆಲುವಿನ ಅಂತರ ಹೆಚ್ಚಿಸಿದರು.

ಜೇವಿಯರ್ ಹೆರ್ನಾಂಡಜ್ ಮುನ್ನುಗ್ಗಿದ ಪರಿ –ಐಎಸ್‌ಎಲ್ ಚಿತ್ರ

ಜಯದ ನಿರೀಕ್ಷೆಯಲ್ಲಿ ನಾರ್ತ್ ಈಸ್ಟ್ ಯುನೈಟೆಡ್, ಕೇರಳ ಬ್ಲಾಸ್ಟರ್ಸ್

ಮಡಗಾಂವ್‌ನಲ್ಲಿ ಗುರುವಾರ ನಡೆಯಲಿರುವ ಪಂದ್ಯದಲ್ಲಿ ನಾರ್ತ್ ಈಸ್ಟ್ ಯುನೈಟೆಡ್ ಎಫ್‌ಸಿ ಮತ್ತು ಕೇರಳ ಬ್ಲಾಸ್ಟರ್ಸ್ ತಂಡಗಳು ಮುಖಾಮುಖಿಯಾಗಲಿವೆ. ಎರಡೂ ತಂಡಗಳು ಮೊದಲ ಪಾಯಿಂಟ್ ಮೇಲೆ ಕಣ್ಣಿಟ್ಟು ಕಣಕ್ಕೆ ಇಳಿಯಲಿವೆ.

ಖಲೀದ್ ಜಮೈಲ್ ಮಾರ್ಗದರ್ಶನದ ನಾರ್ತ್ ಈಸ್ಟ್ ಯುನೈಟೆಡ್ ತಂಡ ಮೊದಲ ಪಂದ್ಯದಲ್ಲಿ ಬೆಂಗಳೂರು ಎಫ್‌ಸಿಗೆ ನಾಲ್ಕು ಗೋಲುಗಳನ್ನು ಬಿಟ್ಟುಕೊಟ್ಟಿತ್ತು. ಕೇರಳ ಬ್ಲಾಸ್ಟರ್ಸ್ ಕೂಡ 2–4ಲ್ಲಿ ಸೋತಿತ್ತು. ಹಾಲಿ ಚಾಂಪಿಯನ್ ಎಟಿಕೆ ಮೋಹನ್ ಬಾಗನ್‌ಗೆ ಅದು ಮಣಿದಿತ್ತು.

ಈ ಋತುವಿನ ಆರಂಭದಲ್ಲಿ ಕೇರಳ ಬ್ಲಾಸ್ಟರ್ಸ್ ಉತ್ತಮ ಸಾಮರ್ಥ್ಯ ತೋರಿ ಭರವಸೆ ಮೂಡಿಸಿತ್ತು. ಆದರೆ ವೃತ್ತಿಪರ ಆಟವಾಡಿದ ಎಟಿಕೆ ಮೋಹನ್ ಬಾಗನ್ ಎದುರು ನಿರುತ್ತರವಾಗಿತ್ತು. ಲೋಪಗಳನ್ನು ಸರಿಪಡಿಸಿಕೊಂಡು ಚೇತರಿಸಿಕೊಳ್ಳಲು ಗುರುವಾರದ ಪಂದ್ಯ ತಂಡಕ್ಕೆ ನೆರವಾಗಲಿದೆ. ನಾರ್ತ್ ಈಸ್ಟ್ ಬಳಗ ಬೆಂಗಳೂರು ಎಫ್‌ಸಿ ವಿರುದ್ಧ ಅತ್ಯುತ್ತಮ ಆಟ ಪ್ರದರ್ಶಿಸಿ ಸೋಲಿಗೆ ಶರಣಾಗಿತ್ತು. ಮೊದಲಾರ್ಧದಲ್ಲಿ ಎರಡು ಬಾರಿ ತಿರುಗೇಟು ನೀಡುವ ಮೂಲಕ ಸಮಬಲ ಸಾಧಿಸಿ ಮುನ್ನುಗ್ಗಿತ್ತು. ಆದರೆ ಅನುಭವದ ಕೊರತೆಯಿಂದಾಗಿ ದ್ವಿತೀಯಾರ್ಧದಲ್ಲಿ ಹಿಡಿತ ಬಿಗಿಮಾಡಲು ಆಗಲಿಲ್ಲ.

14	ಮುಖಾಮುಖಿ ಪಂದ್ಯ
5	ಕೇರಳ ಬ್ಲಾಸ್ಟರ್ಸ್ ಜಯ
4	ನಾರ್ತ್ ಈಸ್ಟ್ ಜಯ
5	ಡ್ರಾ

ಮುಖಾಮುಖಿಯಲ್ಲಿ ಗೋಲುಗಳು

ಭಾರತ	27
ಕೆನಡಾ	13

ಕರ್ನಾಟಕ ಆಂಧ್ರ ಹಣಾಹಣಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕ ತಂಡ ಸಂತೋಷ್ ಟ್ರೋಫಿ ಫುಟ್‌ಬಾಲ್ ಟೂರ್ನಿಯ ಅರ್ಹತಾ ಸುತ್ತಿನ ಪಂದ್ಯದಲ್ಲಿ ಗುರುವಾರ ಆಂಧ್ರವನ್ನು ಎದುರಿಸಲಿದೆ. ತೆಲಂಗಾಣ ತಂಡ ತಮಿಳುನಾಡು ವಿರುದ್ಧ ಸೆಣಸಲಿದ್ದು ಎರಡೂ ತಂಡಗಳು ಗೆಲುವಿನ ಓಟ ಮುಂದುವರಿಸಲು ಪ್ರಯತ್ನಿಸಲಿವೆ.

ಮೊದಲ ಪಂದ್ಯದಲ್ಲಿ ಕರ್ನಾಟಕ ಮತ್ತು ತೆಲಂಗಾಣ ತಂಡಗಳು ತಲಾ 4–0 ಅಂತರದ ಗೆಲುವು ಸಾಧಿಸಿದ್ದವು. ಎದುರಾಳಿ ತಂಡಕ್ಕೆ ಗೋಲು ಬಿಟ್ಟುಕೊಡದೇ ಇದ್ದರೂ ಕರ್ನಾಟಕದ ಮಿಡ್‌ಫೀಲ್ಡರ್‌ಗಳಿಗೆ ಲಯ ಕಂಡುಕೊಳ್ಳಲು ಸಾಧ್ಯವಾಗಲಿಲ್ಲ. ಈ ಸಮಸ್ಯೆಗೆ ಪರಿಹಾರ ಕಂಡುಕೊಂಡರೆ ತಂಡ ಆಂಧ್ರದ ವಿರುದ್ಧ ಸುಲಭವಾಗಿ ಗೆಲ್ಲಬಹುದು.

ಯುವ ಆಟಗಾರರನ್ನೇ ಹೊಂದಿರುವ ಆಂಧ್ರ ಆತಿಥೇಯರಿಗೆ ಯಾವ ರೀತಿ ಉತ್ತರ ನೀಡುತ್ತದೆ ಎಂಬುದು ಕುತೂಹಲ ಕೆರಳಿಸಿದೆ. ಈ ಪಂದ್ಯ ಬೆಳಿಗ್ಗೆ 11.30ಕ್ಕೆ ನಡೆಯಲಿದೆ. ತೆಲಂಗಾಣ ಮತ್ತು ತಮಿಳುನಾಡು ನಡುವಿನ ಪಂದ್ಯ ಮಧ್ಯಾಹ್ನ 3.30ಕ್ಕೆ ನಡೆಯಲಿದೆ.

ಪ್ರಸ್ತುತ ಪಡಿಸುವ

EXAM DH ಪ್ರಜಾವಾಣಿ MASTERMIND™

ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ ವತಿಯಿಂದ

ಯು.ಪಿ.ಎಸ್.ಸಿ, ಕೆ.ಪಿ.ಎಸ್.ಸಿ, ಪಿ.ಎಸ್.ಐ, ಎಫ್.ಡಿ.ಎ, ಬ್ಯಾಂಕಿಂಗ್ ಪಿ.ಒ ಇತ್ಯಾದಿ

ಸ್ಪರ್ಧಾತ್ಮಕ ಪರೀಕ್ಷೆಗಳ ತಯಾರಿಗಾಗಿ ನಿಮ್ಮ ಇ–ಮಿತ್ರ

ವಿಶೇಷ ಆರಂಭಿಕ ಕೊಡುಗೆ*

₹599/- ₹399/-

ಒಂದು ವರ್ಷದ ಅವಧಿಗೆ

ಚಂದಾದಾರರಾಗಲು QR ಕೋಡ್ ಸ್ಕ್ಯಾನ್ ಮಾಡಿ ಅಥವಾ WWW.EXAMMASTERMIND.COMಗೆ ಭೇಟಿ ಕೊಡಿ

ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ: 080-4555 7225 (ಸೋಮವಾರ – ಶುಕ್ರವಾರ ಬೆಳಿಗ್ಗೆ 10 – ಸಂಜೆ 5 ವರೆಗೆ) ಅಥವಾ support.mastermind@printersmysore.co.inಗೆ ಇಮೇಲ್ ಮಾಡಿ

*ಷರತ್ತುಗಳು ಅನ್ವಯ.



‘ಕೂ’ನಲ್ಲಿ ಬೆಂಗಳೂರು ಬುಲ್ಸ್

ಬೆಂಗಳೂರು: ಪ್ರೊ ಕಬಡ್ಡಿ ಲೀಗ್‌ನಲ್ಲಿ ಆಡುವ ಬೆಂಗಳೂರು ಬುಲ್ಸ್ ತಂಡ ಬಹುಭಾಷಾ ಮೈಕ್ರೊ ಬ್ಲಾಗಿಂಗ್ ಪ್ಲಾಟ್‌ಫಾರ್ಮ್ ‘ಕೂ’ನಲ್ಲಿ ಖಾತೆ ತೆರೆದಿದೆ. ಅಭಿಮಾನಿಗಳಿಗಾಗಿ ಮೊದಲ ಪೋಸ್ಟ್‌ನಲ್ಲಿ ತಂಡದ ಪ್ರಮುಖ ಆಟಗಾರರು ಭಾರ ಎತ್ತುವ ವಿಡಿಯೊವನ್ನು ಹಾಕಿದೆ.

@bengalurubullsofficial ತಂಡದ ಅಧಿಕೃತ ಹ್ಯಾಂಡಲ್ ಆಗಿದ್ದು ಸ್ಥಳೀಯ ಭಾಷೆ ಕನ್ನಡದಲ್ಲೇ ಅಭಿಮಾನಿಗಳ ಜೊತೆ ಸಂವಹನ ನಡೆಸುವುದಾಗಿ ಫ್ರಾಂಚೈಸ್ ಪತ್ರಿಕಾ ಪ್ರಕಟಣೆಯಲ್ಲಿ ಭರವಸೆ ನೀಡಿದೆ.